ಬೈಗುಳ: ಹೆಣ್ಣು ಸಂಕಥನಗಳು ಸಮಾಜೋಭಾಷಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಸುಮಲತ

ಮಾರ್ಗದರ್ಶಕರು
ಡಾ. ಡಿ. ಪಾಂಡುರಂಗಬಾಬು
ಪ್ರಾಧ್ಯಾಪಕರು

ಭಾಷಾನಿಕಾಯ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೮

ಬೈಗುಳ: ಹೆಣ್ಣು ಸಂಕಥನಗಳು
ಸಮಾಜೋಭಾಷಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.
ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಸುಮಲತ

ಮಾರ್ಗದರ್ಶಕರು
ಡಾ. ಡಿ. ಪಾಂಡುರಂಗಬಾಬು
ಪ್ರಾಧ್ಯಾಪಕರು

ಮಾತೆಂಬುದು ಜ್ಯೋತಿರ್ಲಿಂಗ

ಭಾಷಾನಿಕಾಯ
ಕನ್ನಡ ಭಾಷ್ಯಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩೨೭೬
೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

* * *

ಶ್ರೀಮತಿ ಸುಮಲತ ಅವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಬೈಗುಳ: ಹೆಣ್ಣು ಸಂಕಥನಗಳು ಸಮಾಜೋಭಾಷಿಕ ಅಧ್ಯಯನ"** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಡಿ. ಪಾಂಡುರಂಗಬಾಬು
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ದಿನಾಂಕ: 03/09/18
ಸ್ಥಳ: ವಿದ್ಯಾರಣ್ಯ

ಸಂಶೋಧಕರ ಘೋಷಣ ಪತ್ರ

* * *

"ಬೈಗುಳ: ಹೆಣ್ಣು ಸಂಕಥನಗಳು ಸಮಾಜೋಭಾಷಿಕ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗದ ಡಾ. ಡಿ. ಪಾಂಡುರಂಗಬಾಬು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧವು ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸಂಶೋಧಕರು

(ಸುಮಲತ)

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

ದಿನಾಂಕ: 03/09/18

ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ – ವ್ಯಾಪ್ತಿ – ವಿಧಾನ – ಮಹತ್ವ

ಅಧ್ಯಾಯ: ೧

ಅಧ್ಯಯನದ ಉದ್ದೇಶ – ವ್ಯಾಪ್ತಿ – ವಿಧಾನ – ಮಹತ್ವ

ಭಾಷೆ ಮಾನವರ ಸಾಮಾಜಿಕ ವರ್ತನೆಯನ್ನು ಪ್ರಭಾವಿಸುತ್ತದೆ ಎನ್ನುವುದಕ್ಕಿಂತ ಮನುಷ್ಯರ ಸಾಮಾಜಿಕ ವರ್ತನೆಗಳನ್ನು ಅಭಿವ್ಯಕ್ತಿಸುವಲ್ಲಿ ಭಾಷೆ ಬಳಕೆಯಾಗುತ್ತದೆ ಎನ್ನುವುದು ಮುಖ್ಯ. ಭಾಷೆ ತನ್ನಷ್ಟಕ್ಕೆ ತಾನೇ ಲಿಂಗ ಸಂಬಂಧಿ, ವರ್ಗ ಸಂಬಂಧಿ ರಚನೆಗಳನ್ನು ರೂಪಿಸಿಕೊಳ್ಳುವುದಿಲ್ಲ. ಭಾಷೆಯಲ್ಲಿ ಭಾಷಿಕ ಘಟಕ/ಭಾಷಾರೂಪಗಳಿಗೆ ಲಿಂಗ, ವರ್ಗದಂತಹ ವಿಶಿಷ್ಟ ಆಯಾಮಗಳನ್ನು ಆರೋಪಿಸಲು ಆ ಭಾಷೆಯನ್ನು ಬಳಸುವ ಸಮಾಜದ ಸಾಮಾಜಿಕ ವ್ಯವಹಾರದ ಸ್ವರೂಪ ಕಾರಣವಾಗಿರುತ್ತದೆ.

ಭಾರತೀಯ ಸಂದರ್ಭದಲ್ಲಿ ಸಮುದಾಯಗಳಿಗೆ ವಿಶಿಷ್ಟವಾದ ಸಾಂಸ್ಕೃತಿಕ, ಭಾಷಿಕ, ಗುರುತುಗಳಿದ್ದರೂ ಒಂದು ಭೌಗೋಳಿಕ ಆವರಣದಲ್ಲಿ ವ್ಯಾವಹಾರಿಕವಾಗಿ ಶತಮಾನಗಳ ಕಾಲ ಒಟ್ಟಾಗಿ ಇರುವ ಕಾರಣಕ್ಕೆ ಬಹುತ್ವ ಮತ್ತು ವೈವಿಧ್ಯತೆಯ ಜತೆಗೆ ಕೆಲವು ಸಾಮಾನ್ಯೀಕರಿಸಿದ ಲಕ್ಷಣಗಳು ಎಲ್ಲಾ ಸಮುದಾಯಗಳಿಗೂ ಇದೆ. ಅಥವಾ ಚಾರಿತ್ರಿಕವಾಗಿ ಪರಂಪರೆಯಲ್ಲಿ ಭಿನ್ನವಾಗಿದ್ದು ಪ್ರಸ್ತುತ ಸಂದರ್ಭದಲ್ಲಿ ಕೆಲವು ಸಾಮಾನ್ಯ ಲಕ್ಷಣಗಳನ್ನು ಆರೋಪಿಸಿಕೊಂಡ ಭಾರತೀಯ ಸಮಾಜ ಎನ್ನುವುದು ರೂಪುಗೊಂಡಿದೆ.

ಈ ಸಾಮಾನ್ಯ ಲಕ್ಷಣಗಳು ಕುಟುಂಬ ರಚನೆ, ವೃತ್ತಿ ಸ್ವರೂಪ, ಉತ್ಪಾದನೆ, ಶ್ರಮವಿಭಜನೆ, ಸಾಮಾಜಿಕ ಸ್ಥಾನಮಾನಗಳ ಲಕ್ಷಣಗಳು ಮತ್ತು ಅಧಿಕಾರ ಹಂಚಿಕೆ ಮುಂತಾದ ವಿಚಾರಗಳಿಗೆ ವ್ಯಾಪಿಸಿವೆ. ಈ ಮೇಲಿನ ಎಲ್ಲಾ ವಿಷಯಗಳ ಹಿನ್ನೆಲೆಯಲ್ಲಿ ಸ್ತ್ರೀಪುರುಷರಿಗೆ ಲಿಂಗಸಂಬಂಧದ ಸ್ಥಾನಮಾನಗಳು ಆಧುನಿಕ ಭಾರತೀಯ ಸಮಾಜದಲ್ಲಿ ಬಹುಪಾಲು ಏಕರೂಪದಲ್ಲಿವೆ. ಸ್ತ್ರೀಯರು ಸಾಮಾನ್ಯವಾಗಿ ಅಧೀನ ನೆಲೆಯಲ್ಲಿದ್ದು ಕುಟುಂಬದ ನೆಲೆಯಿಂದ ಹಿಡಿದು ವೃತ್ತಿ, ಶಿಕ್ಷಣ, ಮತ್ತಿತರ ಸಾಮಾಜಿಕ ವ್ಯವಹಾರಗಳ ಹೊರಜಗತ್ತಿನವರೆಗೆ ಇವರ ಸಾಮಾಜಿಕ ವರ್ತನೆ, ಭಾಷಿಕ ವರ್ತನೆಗಳನ್ನು ನಿರ್ದಿಷ್ಟಗೊಳಿಸಿ ಅಂತಹ ವರ್ತನೆಗಳನ್ನು ನಿರ್ದೇಷಿಸಲಾಗುತ್ತದೆ. ಒಂದು ವೇಳೆ ಈ ನಿರ್ದೀಷ್ಟಗೊಳಿಸಿದ ಆಶಯಗಳಿಗೆ ವ್ಯತಿರಿಕ್ತ

ವರ್ತನೆ ಕಂಡುಬಂದಲ್ಲಿ ಅದನ್ನು ಒಟ್ಟು ಸಮಾಜವೇ ಪ್ರತ್ಯೇಕಿಸಿ ಅಸಹಜ ವರ್ತನೆ ಎಂಬಂತೆ ಕಾಣುತ್ತದೆ.

ಸ್ತ್ರೀಯನ್ನು ಸಂಪತ್ತಿನ/ಅಧೀನದ ವಸ್ತುವಿನಂತೆಯೇ ಭಾವಿಸಿದ್ದ ಪುರುಷ ಪರಂಪರೆ ಇನ್ನೊಬ್ಬ ಪುರುಷನನ್ನು ಹೀಯಾಳಿಸಲು, ಎದುರಿಸಲು ಅವಲಂಬಿತ ಸ್ತ್ರೀಯರನ್ನು ಲೈಂಗಿಕ ಸಂಬಂಧಗಳಿಗೆ ಆರೋಪಿಸಿ ಅಂತಹ ಕ್ರಿಯೆಯ ಅವಯವಗಳ ಶಬ್ದಗಳನ್ನು ಪ್ರಯೋಗಿಸುತ್ತಾರೆ.

ಭಾರತದ ಸಂದರ್ಭದಲ್ಲಿ ಲೈಂಗಿಕ ಕ್ರಿಯೆ ಮತ್ತು ಲೈಂಗಿಕ ವರ್ತನೆ, ಲೈಂಗಿಕ ಅವಯವಗಳಿಗೆ ಸಂಬಂಧಿಸಿದಂತೆ ಪರಂಪರೆಯಿಂದಲೂ ನಿರ್ಬಂಧವೂ, ನಿರ್ದಿಷ್ಟ ಆವರಣಗಳಲ್ಲಿ ನಿಷೇಧವೂ ಇದೆ. ಹಾಗೆಯೇ ಸಾಮಾಜಿಕವಾಗಿ ಸ್ತ್ರೀಯರ ಲೈಂಗಿಕ ವರ್ತನೆ ಖಚಿತವಾಗಿ ವೈವಾಹಿಕ ಸಂಬಂಧದ ನಂತರ ಮದುವೆಯಾದ ಗಂಡನೊಂದಿಗೆ ಖಾಸಗಿಯಾಗಿ ಮಾತ್ರ ಇರಬೇಕು. ಅದು ಸ್ತ್ರೀಯಿರಲಿ ಪುರುಷನಿರಲಿ ಒಟ್ಟು ಸಮಾಜದ ನಿರೀಕ್ಷೆ ಮತ್ತು ಅಪೇಕ್ಷೆ. ಪುರುಷರನ್ನು ಅವಹೇಳನ ಮಾಡಲು ಅವಲಂಬಿತ ಸ್ತ್ರೀಯರನ್ನು ಹಾಗೂ ಹಾಗೇ ಕ್ರಮವಲ್ಲದ ಸಂಬಂಧಗಳನ್ನು ಆಕ್ಷೇಪಿಸುವ ಮಾತುಗಳನ್ನು ಆಡುವುದು ಬೈಗುಳವಾಗಿ ಪರಿವರ್ತನೆಯಾಗುತ್ತದೆ.

ಒಟ್ಟು ಭಾರತೀಯ ಸಾಮಾಜಿಕ ಆವರಣದಲ್ಲಿ ಸ್ತ್ರೀಯರ ಸ್ಥಾನಮಾನ ಆಧಾರಿತವಾಗಿ ಭಾಷಿಕ ಮಾದರಿಗಳು ರೂಪುಗೊಂಡಿವೆ. ಅಂತಹ ಮಾದರಿಗಳಲ್ಲಿ ಬೈಗುಳಗಳು ಪ್ರಮುಖವಾಗಿ ಕಾಣುತ್ತವೆ. ಬೈಗುಳಗಳು ಸಾಮಾನ್ಯವಾಗಿ ಕ್ರಿಯಾತ್ಮಕ/ಸೃಜನಶೀಲ ರಚನೆಗಳಲ್ಲ ಇವುಗಳ ಭಾಷಿಕ ರೂಪಕ್ಕೂ ಇವುಗಳ ಪ್ರಯೋಗದ ಸಂದರ್ಭಕ್ಕೂ ಅವು ಹೊರಡಿಸುವ ಅರ್ಥಗಳಿಗೂ ಖಚಿತವಾದ ಸಂಬಂಧವಿರಬೇಕಾಗಿಯೂ ಇಲ್ಲ. ಇವು ಒಂದು ಬಗೆಯಲ್ಲಿ ಅಸಕ್ರಿಯ ರಚನೆಗಳು, ಅಸಕ್ರಿಯ ರಚನೆಗಳೆಂದರೆ ಬಳಕೆಯ ಸಂದರ್ಭದಲ್ಲಿ ಭಾಷಿಕ ರೂಪದಲ್ಲಿರುವ ಅರ್ಥಗಳನ್ನು ಉದ್ದೇಶಿಸಿದ ಕ್ರಿಯಾತ್ಮಕತೆಯಲ್ಲದಿರುವುದಾದರೂ ಅವು ಪರಂಪರೆ ಚರಿತ್ರೆಯ ಭಾಷಿಕ ದಾಖಲೆಗಳೂ ಹೌದು, ಸಾಮಾಜಿಕ ನಡವಳಿಕೆಯ ಫಲಿತಗಳೂ ಹೌದು ಆದ್ದರಿಂದ ಬೈಗುಳಗಳ ಅಧ್ಯಯನವು ವಿಶೇಷವಾಗಿ ತನ್ನದಲ್ಲದ ಅಭಿವ್ಯಕ್ತಿಯ ಮಾದರಿಗಳನ್ನು ಹುಡುಕಿಕೊಳ್ಳುವುದು.

'ಬೈಗುಳಗಳು ಒಂದು ಕಾಲಮಾನದ ಸಾಮಾಜಿಕ, ಸಾಂಸ್ಕೃತಿಕ, ನಂಬಿಕೆ, ಮೌಲ್ಯಗಳನ್ನು ದಾಖಲಿಸಿಕೊಂಡಿರುತ್ತವೆ. ಈಗಾಗಲೇ ಹೇಳಿದಂತೆ ಪ್ರಸ್ತುತ ಅವುಗಳ ಭಾಷಿಕ ರೂಪಗಳು ಚಲನೆಯಿಲ್ಲದಿದ್ದರೂ ಒಂದು ಕಾಲದ ಪರಂಪರೆಯನ್ನು ಅದರ ಮೌಲ್ಯವನ್ನು ಪ್ರತಿಗಳಿಸುವ ಆಕರವಾಗಿಯೂ ಪರಿಗಣಿಸಲು ಸಾಧ್ಯವಿದೆ. ಹಾಗೆಯೇ ಹೆಣ್ಣು ಸಂಕಥನಗಳನ್ನು ಈ ಅಧ್ಯಯನದಲ್ಲಿ ಪರಿಗಣಿಸಿರುವ ಉದ್ದೇಶ ಪರಂಪರೆಯ ತಾರತಮ್ಯದ ಮಾದರಿಗಳು

ಕಾಲಘಟ್ಟದಲ್ಲಿ ರೂಪಬದಲಾವಣೆಯೊಂದಿಗೆ ಸಾಗುತ್ತಿವೆಯೇ ಹೊರತು ಅಮೂಲಾಗ್ರವಾಗಿ ಬದಲಾಗಿಲ್ಲ. ಭಾಷಾಭಿವ್ಯಕ್ತಿಯ ಮುಕ್ತ ನೆಲೆಯಾದ ಬೈಗಳುಗಳ ಸಂದರ್ಭ ಕನ್ನಡ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನಕ್ಕೆ ಆಕರ ಒದಗಿಸಬಹುದು.

ಭಾಷೆಯನ್ನು ಸಾಮಾಜಿಕ ಸಂಬಂಧಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಕೇವಲ ಅಭಿವ್ಯಕ್ತಿ ಮತ್ತು ಸಂವಹನ ಮಾಧ್ಯಮವಾಗಿ ಮಾತ್ರ ಕಾರ್ಯನಿರ್ವಹಿಸುದಿಲ್ಲ. ಭಾಷಾ ಭಿನ್ನತೆ ಪ್ರಾದೇಶಿಕವಾಗಿ, ಲಿಂಗಾಧಾರಿತವಾಗಿ, ವರ್ಗಾಧಾರಿತವಾಗಿ, ಜಾತಿಯಾಧಾರಿತವಾಗಿ ಬದಲಾಗುತ್ತಿರುತ್ತದೆ. ಭಾಷೆಯ ಬಳಕೆಯಲ್ಲಿ ಈ ವ್ಯತ್ಯಾಸಗಳು ಕಂಡು ಬಂದರೂ ಸಹ ಭಾಷೆಗೆ ಈ ಬೇಧಗಳು ಇರುವುದಿಲ್ಲ. ಸಾಮಾಜಿಕ ಆಯಾಮಗಳನ್ನು ಸೂಕ್ಷ್ಮವಾಗಿ ಗುರುತಿಸುವುದಕ್ಕಾಗಿ ನಾವು ಭಾಷೆಯಲ್ಲಿ ಈ ರೀತಿಯ ವರ್ಗೀಕರಣ ಮಾಡಿಕೊಂಡಿದ್ದೇವೆ.

ಸಾಮಾಜಿಕ ಪರಿಸರದಲ್ಲಿ ಬಳಕೆಯಾಗುತ್ತಿರುವ ಭಾಷೆಯಲ್ಲಿ ಲಿಂಗಸಂಬಂಧಿ ಆಯಾಮಗಳನ್ನು ಗುರುತಿಸಬಹುದು. ಗಂಡು ಎಂದ ಕೂಡಲೇ ಅವನು ಧೈರ್ಯವಾಗಿ ಗಡುಸಾಗಿರಬೇಕು. ಒಂದು ವೇಳೆ ಅವನು ಮೃದುವಾಗಿದ್ದಾರೆ ಅವನನ್ನು 'ಹೆಣ್ಣಿಗ' ಎಂದು ಸಮಾಜ ಅಪಹಾಸ್ಯಕ್ಕೆ ಗುರಿಮಾಡುತ್ತದೆ. ಹೆಣ್ಣು ಅಂದರೆ ಸಮಾಜದಲ್ಲಿ ಹೀಗೆ ಬದುಕಬೇಕು ಎಂದು ಸಮಾಜ ಅಪೇಕ್ಷಿಸುತ್ತದೆ. ಒಂದು ವೇಳೆ ಅವಳು ಗಡುಸಾಗಿ ನಡೆದುಕೊಂಡರೆ ಅವಳನ್ನು 'ಗಂಡುಬೀರಿ' ಎಂದು ದೂಷಿಸಲು ಸಮಾಜ ಮುಂದಾಗುತ್ತದೆ. ಇದು ಸಮಾಜದಲ್ಲಿನ ಲಿಂಗಸಂಬಂಧಿ ನೆಲೆಯ ಒಂದು ಮಾದರಿ. ಈ ಹಿನ್ನೆಲೆಯಲ್ಲಿ ಬೈಗುಳಗಳಲ್ಲಿ ಹೆಣ್ಣು ಸಂಕಥನಗಳ ಅಧ್ಯಯನ ನಡೆಯಬೇಕಾಗಿದೆ.

ಸಾಮಾಜಿಕ ಸಂಬಂಧಗಳಲ್ಲಿ ಲಿಂಗಾತಾರತಮ್ಯದ ಪರಿಕಲ್ಪನೆ ತುಂಬಾ ವ್ಯಾಪಕವಾಗಿದೆ. ಹೆಣ್ಣು-ಗಂಡು ಬೇರೆ ಬೇರೆ. ಗಂಡಿಗಿರುವ ಸ್ಥಾನಮಾನಗಳು ಹೆಣ್ಣಿಗಿಲ್ಲ. ಎಲ್ಲಾ ವಲಯಗಳಲ್ಲಿ ಅಂದರೆ ಸಾಮಾಜಿಕ ವಲಯದಲ್ಲಿ ಆಗಿರಬಹುದು, ಶೈಕ್ಷಣಿಕ ವಲಯದಲ್ಲಿ ಆಗಿರಬಹುದು ಹೆಣ್ಣಿಗೆ ಯಾವುದೇ ಪ್ರಾಮುಖ್ಯತೆಯಿಲ್ಲ. ಭಾಷೆಯ ಒಂದು ಪ್ರಮುಖ ಅಂಗವಾಗಿ ಬೈಗುಳವನ್ನು ಕಾಣಬಹುದು. ಸಮಾಜದಲ್ಲಿ ಬಳಕೆಯಾಗುತ್ತಿರುವ ಬೈಗುಳವನ್ನು ಗಮನಿಸಿದಾಗ ಅವುಗಳಲ್ಲಿ ಹೆಚ್ಚಾಗಿ ಹೆಣ್ಣನ್ನು ಕೇಂದ್ರವಾಗಿಸಿಕೊಂಡು ಬೈಯುವುದು ಒಂದು ನಿಯಮದಂತೆ ಜಾರಿಯಲ್ಲಿದೆ ಎಂದು ಹೇಳಬಹುದು.

ಬೈಗುಳ ಎಂದರೆ ಕೋಪ ಮತ್ತು ಆವೇಶದ ಪ್ರತಿರೂಪ. ಮನಸ್ಸಿಗೆ ಅಗಾಧವಾದ ನೋವುಂಟು ಮಾಡುವ ಪದಗಳೇ ಬೈಗುಳಗಳು. ಬೈದ ವ್ಯಕ್ತಿಯನ್ನು ಜೀವನ ಪರ್ಯಂತ ನೆನಪಿಟ್ಟುಕೊಳ್ಳುವಂತೆ ಮಾಡುವ ಶಕ್ತಿ ಬೈಗುಳಗಳಿಗೆ ಇದೆ. ಬೈಗುಳದ ಭಾಷೆ ತುಂಬಾ ಸೂಕ್ಷ್ಮವಾದದ್ದು ಮತ್ತು ಈ ಭಾಷೆಯು ಇಡೀ ಸ್ತ್ರೀ ಕುಲವನ್ನೇ ಅವಮಾನಕ್ಕೆ ಈಡು

ಮಾಡಿಕೊಡುತ್ತದೆ. ಹೆಣ್ಣಿಗೆ ಮಾನಸಿಕ ನೋವು, ಹೊಡೆಯುವುದು, ಲೈಗಿಂಕ ಕಿರುಕುಳ ನೀಡಿ ಹೆಣ್ಣನ್ನು ಹತ್ತಿಕ್ಕುವುದರ ಮೂಲಕ ಪುರುಷ ಪ್ರಧಾನ ವ್ಯವಸ್ಥೆ ಪ್ರಾಬಲ್ಯ ಕಾಣಬಹುದು.

ವ್ಯಕ್ತಿಯು ರೌದ್ರವಾತಾರವನ್ನು ತಾಳಿ ಅತ್ಯಂತ ತುತ್ತ ತುದಿಯ ಹಂತಕ್ಕೆ ತಲುಪಿದಾಗ ಕೋಪದ ಕಿಡಿಯನ್ನು ತನ್ನ ಬಾಯಿಯ ಮುಖಾಂತರ ವ್ಯಕ್ತಪಡಿಸುವ ಅವಾಚ್ಯ ಶಬ್ದಗಳೆ ಬೈಗುಳವಾದವು ಎಂದು ಹೇಳಬಹುದು. ಬೈಗುಳ ಇಂದಿನದಲ್ಲ ಪುರಾಣ, ಇತಿಹಾಸಗಳ ಕಾಲದಲ್ಲೂ ಕಂಡುಬಂದಿವೆ. ಉದಾಹರಣೆಗೆ ಪುರಾಣಗಳಲ್ಲಿ ಬರುವ ಶಕುನಿ, ನಾರದ, ಬಕಾಸುರ, ಕುಂಬಕರ್ಣ, ಹಿಡಂಬಿ ಇವರ ಆಕಾರ ಮತ್ತು ಗುಣ ಸ್ವಭಾವಗಳಿಗೆ ಅನುಗುಣವಾಗಿ ಅವರನ್ನು ಇಂದಿಗೂ ಬೈಗುಳಗಳಲ್ಲಿ ಬಳಕೆ ಮಾಡುತ್ತಿರುವುದನ್ನು ನೋಡಬಹುದು. ತಲಾ-ತಲಾಂತರದಿಂದಲೂ ಈ ಬೈಗುಳಗಳು ಬಳಕೆಯಲ್ಲಿವೆ. ಹಾಗೂ ಇಂದಿಗೂ ಬಳಕೆಯಾಗುತ್ತಲೇ ಇವೆ. ಪುರಾಣಗಳಲ್ಲಿ ಋಷಿಗಳು ತಮಗೆ ಕೇಡಿನಿಸಿದಾಗ ಶಾಪ ಹಾಕುವುದು ರೂಢಿಯಲ್ಲಿತ್ತು. ಈ ಶಾಪಗಳು ಒಂದು ರೀತಿಯ ಬೈಗುಳಗಳಾಗಿವೆ. ಈ ಶಾಪರೂಪದ ಬೈಗುಳಗಳು ತಮ್ಮ ಎದುರಾಳಿಗೆ ತಟ್ಟುತ್ತವೆ ಎಂಬುದು ಅವರ ನಂಬಿಕೆಯಾಗಿತ್ತು.

ಜನಸಾಮಾನ್ಯರಲ್ಲಿ ನಾವು ದಿನನಿತ್ಯ ಬೈಗುಳಗಳನ್ನು ಕಾಣುತ್ತೇವೆ. ಬಸ್ಸಿನಲ್ಲಿ, ರೈಲುಗಳಲ್ಲಿ ಸೀಟಿಗಾಗಿ ಜಗಳ, ನೀರಿಗಾಗಿ ಕೆಲವೊಂದು ಓಣಿಗಳಲ್ಲಿ ಜಗಳ ಹಾಗೂ ಕಸ ಚೆಲ್ಲುವ ಸಂದರ್ಭದಲ್ಲಿ ಜಗಳ, ಮಕ್ಕಳು ಆಟ ಆಡುವಾಗ ಜಗಳ ಈ ರೀತಿಯ ಅನೇಕ ಸಂದರ್ಭಗಳಲ್ಲಿ ನಾವು ಕೆಲವು ಬೈಗುಳಗಳನ್ನು ಕಾಣಬಹುದು. ಗಂಡ - ಹೆಂಡತಿ, ಅತ್ತೆ-ಸೊಸೆ, ಅಣ್ಣ-ತಮ್ಮ, ಸಂಬಂಧಿಕ-ಸಂಬಂಧಿಕರ ನಡುವಿನ ಜಗಳದಲ್ಲಿ ಹಾಗೂ ಇನ್ನೂ ಹಲವಾರು ರೀತಿಯ ಜಗಳದಲ್ಲಿ ಬೈಗುಳಗಳನ್ನು ಕಾಣಬಹುದು. ಆದರೆ ಇವುಗಳು ಒಂದಕ್ಕೊಂದು ಭಿನ್ನವಾಗಿರುತ್ತವೆ.

ಭಾಷಿಕ ರಚನೆಯಲ್ಲಿ ಬೈಗುಳಗಳ ಸ್ವರೂಪವನ್ನು ನೋಡಿದಾಗ ಬುದ್ಧಿವಾದ ಹೇಳುವಾಗ, ಇನ್ನೊಬ್ಬರನ್ನು ಸರಿ ದಾರಿಯಲ್ಲಿ ತರುವಾಗ, ಇದು ತಪ್ಪು ಇದು ಸರಿ ಎಂದು ಹೇಳುವ ಸಂದರ್ಭಗಳಲ್ಲಿ ಸಾಮಾನ್ಯವಾಗಿ ನಾವು ಕೆಲವು ಬೈಗುಳಗಳನ್ನು, ಗಾದೆಗಳನ್ನು ಬಳಸುತ್ತೇವೆ. ಹೆಣ್ಣನ್ನು ಕೇಂದ್ರಿಕರಿಸಿಕೊಂಡು ರಚನೆಯಾಗಿರುವ ಬೈಗುಳಗಳು ನಮಗೆ ಸಾಕಷ್ಟು ದೊರಕುತ್ತವೆ ಹಾಗಾಗಿ ಇಲ್ಲಿ ಹೆಣ್ಣು ಸಂಕಥನವನ್ನು ಕಾಣಬಹುದು. ಬೈಗುಳಗಳ ಸಾಮಾಜಿಕ ಸಂದರ್ಭದಲ್ಲಿ ಹೆಣ್ಣು - ಗಂಡುಗಳು ಹೇಗೆ ಪ್ರತಿನಿಧಿಕರಣಗೊಂಡಿದ್ದಾರೆ ಎಂಬುದನ್ನು ಅವರು ಬಳಸುವ ಭಾಷೆಯ ಸ್ವರೂಪದಿಂದ ತಿಳಿಯಬಹುದು.

ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗದ ಜನರಲ್ಲಿ ಗಂಡಸರಿಗಿಂತಲೂ ಹೆಚ್ಚಾಗಿ ಹೆಂಗಸರು ಬೈಗುಳಗಳನ್ನು ಅಧಿಕವಾಗಿ ಬಳಸುವುದು ಸಹಜ.

ಹಾಗೆ ಬೈಗುಳದ ಕ್ರಿಯೆಯಲ್ಲಿ ಹೆಂಗಸರು ಹೆಚ್ಚಾಗಿ ತೊಡಗಲು ದೈಹಿಕವಾದ ಮತ್ತು ಮಾನಸಿಕವಾದ ಕಾರಣಗಳು ಪ್ರಮುಖವಾಗಿವೆ. ಅವರು ತಮ್ಮ ಸಾಮರ್ಥ್ಯವನ್ನು ಬೈಗುಳಗಳ ಮೂಲಕ ವ್ಯಕ್ತಪಡಿಸಲು ಪ್ರಯತ್ನಿಸುತ್ತಾರೆ. ಗಂಡಸಿಗಿಂತ ಹೆಂಗಸಿನಲ್ಲಿ ದೈಹಿಕ ಆಕ್ರಮಣಶೀಲತೆಯ ಪ್ರವೃತ್ತಿ ಕಡಿಮೆಯಾಗಿರುತ್ತದೆ. ಬೈಗುಳವು ಕೂಡ ಅವರ ಮಾತಿನ ಶೈಲಿಯ ಒಂದು ಭಾಗವಾಗಿದೆ. ಅವರು ಯಾರೇ ಆಗಿರಲಿ, ಅಂದರೆ ನಾಗರೀಕರಾಗಿರಲಿ ಅಥವಾ ಅನಾಗರಿಕರಾಗಿರಲಿ, ಹಳ್ಳಿಯವರಾಗಿರಲಿ ಅಥಾವ ಪಟ್ಟಣದವರಾಗಿರಲಿ, ಬಡವರಾಗಿರಲಿ – ಶ್ರೀಮಂತರಾಗಿರಲಿ, ಶಿಕ್ಷಿತರಾಗಿರಲಿ–ಅಶಿಕ್ಷಿತರಾಗಿರಲಿ ಸಮಾಜದ ಯಾವುದೇ ವರ್ಗಕ್ಕೆ ಸೇರಿದವರಾಗಿರಲಿ ತಮ್ಮ ಜೀವನದ ಅನೇಕ ಸಂದರ್ಭಗಳಲ್ಲಿ ಹಲವಾರು ಬಗೆಯ ಬೈಗುಳಗಳನ್ನು ಬಳಸುವುದನ್ನು ನೋಡುತ್ತೇವೆ. ಬೈಗುಳಗಳು ಭಾಷೆಯ ಒಂದು ಪ್ರಮುಖ ಅಂಗವಾಗಿ ಕಂಡುಬರುತ್ತವೆ. ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ನಡವಳಿಕೆಗಳು, ಕಟ್ಟುಪಾಡುಗಳು ಮತ್ತು ಅವರ ಜೀವನದ ಮೌಲ್ಯಗಳನ್ನು ತಿಳಿಯಲು ಬೈಗುಳಗಳು ಸಹಾಯಕವಾಗಿವೆ.

ಸಂಕಥನ ಎಂದರೆ ಯಾವುದೇ ನಿರ್ದಿಷ್ಟ ವಿಷಯ, ಸಂಗತಿಯನ್ನು ಕುರಿತು ಹೆಚ್ಚು ಜನರು ನಿರ್ದಿಷ್ಟ ಉದ್ದೇಶಕ್ಕಾಗಿ ನಡೆಸುವ ಮಾತುಕತೆಯನ್ನು ಸಂಕಥನ ಎಂದು ಕರೆಯುತ್ತಾರೆ. ಹಾಗೂ ಏನನ್ನಾದರೂ ತಿಳಿ ಹೇಳಲು ಅಥವಾ ವಿವರಿಸಲು ಬಳಸುವ ಗಂಭೀರವಾದ ಮಾತು ಅಥವಾ ಬರವಣಿಗೆಯ ಘಟಕವೇ ಸಂಕಥನವಾಗಿದೆ. ಸಂಕಥನಗಳ ಹಿನ್ನೆಲೆಯಲ್ಲಿ ಬರುವ ಬೈಗುಳ, ಗಾದೆ, ನುಡಿಗಟ್ಟು, ಒಗಟು ಇವುಗಳಲ್ಲಿ ಹೆಣ್ಣಿನ ಪ್ರತಿನಿಧೀಕರಣ ಹೇಗಿದೆ ಎಂಬುವುದನ್ನು ತಿಳಿಯಬಹುದು. ಉದಾಹರಣೆಗೆ ಸಮಾಜದಲ್ಲಿ ಗಂಡ ಸತ್ತು ಹೋದ ಹೆಣ್ಣಿಗೆ 'ಮುಂಡೆ' ಎಂಬ ಪದ ಬಳಕೆಯಲ್ಲಿದೆ. ಆದರೆ ಆ ಪದವನ್ನು ಬೈಗುಳವಾಗಿ ಬಳಕೆ ಮಾಡುತ್ತಾರೆ. ಹಾಗೆಯೇ ಹೆಂಡತಿ ಸತ್ತು ಹೋದ ಗಂಡಿಗೆ 'ವಿದುರ' ಎಂಬ ಪದ ಬಳಕೆಯಲ್ಲಿದ್ದರೂ ಆ ಪದವನ್ನು ಬೈಗುಳವಾಗಿ ಬಳಕೆ ಮಾಡುವುದಿಲ್ಲ. ಹೀಗೆಯೇ ಬೈಗುಳಗಳಲ್ಲಿ ಹೆಣ್ಣು ಗುರುತಿಸಿಕೊಳ್ಳಬೇಕೆಂಬ ಅನಿವಾರ್ಯತೆ ಸೃಷ್ಟಿಸಿರುವುದು ಸಮಾಜ. ಈ ರೀತಿಯಲ್ಲಿ ಹೆಣ್ಣು ಸಂಕಥನವನ್ನು ವಿಶ್ಲೇಷಿಸುವ ಸಾಧ್ಯತೆ ಇದೆ.

ಶ್ರೇಣೀಕೃತ ಸಮಾಜದಲ್ಲಿ ಪ್ರತಿಯೊಬ್ಬರು ಒಂದಲ್ಲಾ ಒಂದು ವಿಧವಾದ ಮೇಲರಿಮೆಯಿಂದಲೋ ಅಥವಾ ಕೀಳರಿಮೆಯಿಂದಲೋ ಕೂಡಿರುತ್ತಾರೆ. ಈ ಬಗೆಯ ಸಾಮಾಜಿಕ ಮತ್ತು ಆರ್ಥಿಕ ಏರುಪೇರುಗಳಿಂದ ಕೂಡಿರುವ ಇಲ್ಲಿನ ವ್ಯಕ್ತಿಗಳ ಮನಸ್ಸು ನಾನಾ ಬಗೆಯ ಒತ್ತಡಗಳ ನಡುವೆ ಸಿಲುಕಿಕೊಂಡಿದೆ. ಇಂತಹ ಒತ್ತಡಗಳಿಗೆ ಗುರಿಯಾಗಿರುವ ವ್ಯಕ್ತಿಗಳು ವಿವಿಧ ಸನ್ನಿವೇಶಗಳಲ್ಲಿ ಆಡಿರುವ ಬೈಗುಳದ ನುಡಿಗಳು ನಮ್ಮ ಸಾಮಾಜಿಕ ಜೀವನದ ವಿವಿಧ ಮುಖಗಳನ್ನು ತೆರೆದು ತೋರಿಸುತ್ತವೆ.

ಅಧ್ಯಯನದ ಉದ್ದೇಶಗಳು:

ಸಮಾಜದಲ್ಲಿ ಜನರು ಆಡುವ ಮಾತುಕತೆಗಳಲ್ಲಿ ಗಾದೆಗಳು, ಒಗಟುಗಳು, ನುಡಿಗಟ್ಟುಗಳು, ಪ್ರಯೋಗವಾಗುವುದಕ್ಕಿಂತಲೂ ಹೆಚ್ಚಾಗಿ ಬೈಗುಳಗಳು ಪ್ರಯೋಗವಾಗುತ್ತವೆ. ಇವುಗಳಲ್ಲಿ ಹೆಣ್ಣು ಹೆಚ್ಚಾಗಿ ಬಳಕೆಯಾಗಿರುವುದ್ದರಿಂದ ಹೆಣ್ಣು ಸಂಕಥನಗಳ ಹಿನ್ನೆಲೆಯಲ್ಲಿ ಬೈಗುಳಗಳನ್ನು ಕುರಿತು ಅಧ್ಯಯನ ನಡೆಯಬೇಕಾಗಿದೆ. ಸಮಾಜದ ಸಮುದಾಯಗಳಲ್ಲಿ ಬಳಕೆಯಾಗುವ ಬೈಗುಳಗಳನ್ನು ಭಾಷೆ ಮತ್ತು ಹೆಣ್ಣು ಸಂಕಥನಗಳ ನೆಲೆಯಲ್ಲಿ ಅಧ್ಯಯನ ಮಾಡಬೇಕಾಗಿವೆ. ಈ ಹಿನ್ನೆಲೆಯಲ್ಲಿ ಬೈಗುಳ: ಹೆಣ್ಣು ಸಂಕಥನಗಳು ಎಂಬ ಶೀರ್ಷಿಕೆಯಡಿಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಸಾಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ಬೈಗುಳಗಳನ್ನು ಜನರು ಯಾವ ರೀತಿಯಲ್ಲಿ ಬಳಸುತ್ತಿದ್ದಾರೆ. ಈ ಬೈಗುಳಗಳು ಜನರ ಮೇಲೆ ಹೇಗೆ ಪರಿಣಾಮ ಬೀರಿವೆ ಎಂಬ ವಿಚಾರವನ್ನು ಮೌಖಿಕ ಆಕರಗಳಿಂದ ಸ್ಪಷ್ಟಪಡಿಸುವುದು, ಆಧುನಿಕ ನೆಲೆಯಲ್ಲಿ ಬೈಗುಳಗಳ ಸ್ವರೂಪ ಯಾವ ರೀತಿಯಲ್ಲಿ ಬಳಕೆಯಾಗುತ್ತಿದೆ ಎಂಬುವುದನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಭಾಷಿಕ ರಚನೆಯೊಳಗಡೆ ಬೈಗುಳಗಳು ರೂಪಪಡೆದ ಸಂದರ್ಭವನ್ನು ಕೌಟುಂಬಿಕ ವಲಯ ಹಾಗೂ ಸಾಮಾಜಿಕ ವಲಯಗಳಲ್ಲಿ ಗುರುತಿಸುವುದು. ಹಾಗೂ ಅಲ್ಲಿ ಅವುಗಳು ನಿರ್ವಹಿಸುವ ಪಾತ್ರಗಳನ್ನು ವಿವರಿಸುವುದು. ಬೈಗುಳಗಳ ಸಂದರ್ಭ ಯಾವುದು ? ಯಾವ ಕಾರಣಕ್ಕಾಗಿ ಬೈಗುಳಗಳು ಬಳಕೆಗೊಳ್ಳುತ್ತವೆ, ಹೆಂಗಸು-ಗಂಡಸಿಗೆ ಬಳಸುವ ಬೈಗುಳ, ಗಂಡಸು-ಹೆಂಗಸಿಗೆ ಬಳಸುವ ಬೈಗುಳ ಮತ್ತು ವರ್ಗಾಧಾರಿತ, ಜಾತಿಯಧಾರಿತ ನೆಲೆಯಲ್ಲಿ ರೂಪ ಪಡೆದ ಬೈಗುಳ ಮತ್ತು ಬೈಗುಳದ ಹಿಂದಿನ ತಾತ್ವಿಕತೆಯ ಸ್ವರೂಪವನ್ನು ಗುರುತಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಬೈಗುಳಗಳ ಬಳಕೆಯ ಸಾಮಾಜಿಕ ವಿನ್ಯಾಸ ಏನಾಗಿದೆ ಎಂಬುದನ್ನು ಗುರುತಿಸುವುದು, ಬೈಗುಳಗಳಲ್ಲಿ ಹೆಣ್ಣಿನ ಪ್ರತಿನಿಧೀಕರಣವನ್ನು ವಿಶ್ಲೇಷಣೆ ಮಾಡುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಮತ್ತು ಭಾಷಿಕ ಸಂಕಥನಗಳಲ್ಲಿ ಉದಾಹರಣೆಗೆ ಅಪ್ಪನಿಗೆ ಹುಟ್ಟಿದ ಮಾತಾಡು ಎಂದು ಸಮಾಜದಲ್ಲಿ ಸಾಮಾನ್ಯವಾಗಿ ಗಂಡಸರು ಬೈಯುವಾಗ ಬಳಕೆ ಮಾಡುತ್ತಾರೆ. ಇದು ಹೆಣ್ಣಿನ ಅನೈತಿಕತೆಯನ್ನು ಎತ್ತಿ ತೋರಿಸುತ್ತದೆ. ಹಾಗೆಯೆ ಅಮ್ಮನಿಗೆ ಹುಟ್ಟಿದ ಮಾತಾಡು ಎಂಬ ಪ್ರಯೋಗ ಸಮಾಜದಲ್ಲಿ ಬಳಕೆಯಲ್ಲಿ ಇಲ್ಲ. ಮತ್ತು ಯಾರು ಈ ಪದವನ್ನು ಬೈಗುಳವಾಗಿ ಬಳಸುವುದಿಲ್ಲ. ಈ ರೀತಿಯ ಭಾಷಿಕ ಸಂಕಥನಗಳಲ್ಲಿ ಬೈಗುಳಗಳ ನಿರೂಪಣೆ ಹೇಗಿದೆ, ಸಂಕಥನಗಳಲ್ಲಿ ಬೈಗುಳಗಳು ಯಾವ ರೀತಿಯಲ್ಲಿ

ಬಳಕೆಯಾಗುತ್ತವೆ, ಅದರ ಉದ್ದೇಶ ಏನಾಗಿದೆ ಎಂಬುದನ್ನು ಗುರುತಿಸುವುದು. ಹಾಗೂ ಸಾಮಾಜಿಕ ಸಂಗತಿಗಳ ಮೂಲಕ ಭಾಷಿಕ ರಚನೆಗಳು ಹೇಗೆ ಉಂಟಾಗುತ್ತವೆ ಎಂಬುದನ್ನು ಬೈಗುಳಗಳಲ್ಲಿ ಬಳಕೆಯಾಗುವ ಭಾಷೆಯ ಮುಖಾಂತರ ಲಿಂಗಾತಾರತಮ್ಯವನ್ನು ಗುರುತಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಅಧ್ಯಯನವು ಸಮಾಜೋಭಾಷಿಕ ಅಧ್ಯಯನ ವಿಧಾನವನ್ನು ಹೊಂದಿದೆ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಗುರುತಿಸಿಕೊಂಡಿರುವ ಅಧ್ಯಯನದ ವ್ಯಾಪ್ತಿ ಬಳ್ಳಾರಿ ಜಿಲ್ಲೆಗೆ ಸೀಮೀತವಾಗಿದ್ದು ಈ ಜಿಲ್ಲೆಯಲ್ಲಿ ಬಳಸುವ ಬೈಗುಳಗಳನ್ನು ಸಾಮಾಜಿಕ ನೆಲೆಯಲ್ಲಿ, ಧಾರ್ಮಿಕ ನೆಲೆಯಲ್ಲಿ, ಆಧುನಿಕ ನೆಲೆಯಲ್ಲಿ, ಶೈಕ್ಷಣಿಕ ನೆಲೆಯಲ್ಲಿ ಮತ್ತು ಸಂಕಥನಗಳ ನೆಲೆಯಲ್ಲಿ ಎಂದು ವಿವಿಧ ರೀತಿಯಲ್ಲಿ ವರ್ಗೀಕರಣ ಮಾಡಿಕೊಂಡು ಅಧ್ಯಯನಕ್ಕೆ ಬೇಕಾದಷ್ಟು ಆಕರಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ.

ಬೈಗುಳಗಳ ಸಮಾಜೋಭಾಷಿಕ ಅಧ್ಯಯನಕ್ಕೆ ಆಕರ ಸಾಮಗ್ರಿಯನ್ನು, ಸಂಶೋಧನೆಯ ವ್ಯಾಪ್ತಿಯನ್ನು ಬಳ್ಳಾರಿ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಲಾಗಿದ್ದು, ಇಲ್ಲಿ ಹಲವು ಜಾತಿ, ಧರ್ಮ, ವರ್ಗ ಹಾಗೂ ಹಲವಾರು ಭಾಷೆಗೆ ಸೇರಿರುವ ಜನರು ನೆಲೆಸಿದ್ದಾರೆ. ಈ ಜಿಲ್ಲೆಯಲ್ಲಿ ಅಧ್ಯಯನಕ್ಕೆ ಅವಶ್ಯವಿರುವಷ್ಟು ಬೈಗುಳಗಳನ್ನು ಬಳಸಿಕೊಳ್ಳಲಾಗಿದೆ. ಶಾಪರೂಪದ ಬೈಗುಳಗಳು, ವೃತ್ತಿಗೆ ಸಂಬಂಧಿಸಿದ ಬೈಗುಳ, ಗಾದೆಗಳಲ್ಲಿರುವ ಬೈಗುಳಗಳು, ನುಡಿಗಟ್ಟುಗಳಲ್ಲಿ ಇರುವ ಬೈಗುಳಗಳು, ಜಾತಿಗೆ ಸಂಬಂಧಿಸಿದ ಬೈಗುಳಗಳು ಈ ಎಲ್ಲ ನೆಲೆಯ ಬೈಗುಳಗಳನ್ನು ಅಧ್ಯಯನಕ್ಕೆ ಒಳಗು ಮಾಡಿಕೊಳ್ಳಲಾಗಿದೆ. ಹಾಗೂ ಪ್ರಸ್ತುತ ಅಧ್ಯಯನವನ್ನು ಭಾಷಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ಮಿತಿಗಳು:

ಕನ್ನಡದಲ್ಲಿ ಬೈಗುಳಗಳ ಮೇಲೆ ಅದರಲ್ಲೂ ಹೆಣ್ಣು ಸಂಕಥನಗಳ ಅಧ್ಯಯನದ ಮೇಲೆ ಎಂ.ಫಿಲ್, ಪಿಎಚ್.ಡಿ ಮತ್ತು ಇತರೆ ಸಂಶೋಧನಾ ಅಧ್ಯಯನಗಳು ಹೆಚ್ಚಾಗಿ ನಡೆದಿರುವುದಿಲ್ಲ. ಬೈಗುಳ: ಹೆಣ್ಣು ಸಂಕಥನಗಳು ಸಮಾಜೋ ಭಾಷಿಕ ಅಧ್ಯಯನ ಎಂಬ ಈ ಪ್ರಬಂಧ ಕನ್ನಡದ ಸಂದರ್ಭದಲ್ಲಿ ಸಾಮಾಜಿಕವಾಗಿ ಬೈಗುಳಗಳ ಬಗೆಗೆ ಕೈಗೊಂಡಿರುವ ಮೊದಲ ಅಧ್ಯಯನ ಪ್ರಬಂಧವಾಗಿದೆ. ಈ ಪ್ರಬಂಧದಲ್ಲಿ ಬೈಗುಳಗಳ ರಚನೆ, ಸಾಮಾಜಿಕ, ಪ್ರಾದೇಶಿಕ, ಆಧುನಿಕ, ಧಾರ್ಮಿಕ, ಶೈಕ್ಷಣಿಕ ಈ ಮೊದಲಾದವು ಅಧ್ಯಯನದ ಪ್ರಮುಖ ಅಂಶಗಳೆಂದು ತಿಳಿದು ಅಧ್ಯಾಯ ಹಾಗೂ ಉಪಶೀರ್ಷಿಕೆಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಸಮಯ ಮತ್ತು ಸಾಮಾಜಿಕ ವಲಯದ ಅತಿ ವ್ಯಾಪ್ತಿಯಿಂದಾಗಿ ಅಧ್ಯಯನವನ್ನು ಬಳ್ಳಾರಿ ಜಿಲ್ಲೆಗೆ

ಸೀಮಿತಗೊಳಿಸಿಕೊಳ್ಳಲಾಗಿದೆ. ಈ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಶಾಪರೂಪದ ಬೈಗುಳಗಳು, ಪ್ರಾಣಿ-ಪಕ್ಷಿಗಳಿಗೆ ಸಂಬಂಧಿಸಿದ ಬೈಗುಳಗಳು, ಗಾದೆಗಳು, ನುಡಿಗಟ್ಟುಗಳು, ಹೆಂಗಸರು - ಗಂಡಸರಿಗೆ ಬೈಯುವ ಬೈಗುಳ, ಗಂಡಸರು-ಹೆಂಗಸರಿಗೆ ಬೈಯುವ ಬೈಗುಳ ಹಾಗೂ ಇತರೆ ಪೂರಕ ಆಕರ ಸಾಮಗ್ರಿಗಳನ್ನು ಆಯ್ದುಕೊಳ್ಳಲಾಗಿದೆ. ಇದು ಅಧ್ಯಯನದ ಮಿತಿಯಾಗಿದೆ.

ಅಧ್ಯಯನದ ವಿಧಾನ:

ಈ ಅಧ್ಯಯನವು ಸಮಾಜೋಭಾಷಿಕ ಅಧ್ಯಯನ ವಿಧಾನವನ್ನು ಹೊಂದಿದೆ. ಸಂಶೋಧನೆಗೆ ಅಧ್ಯಯನ ಕ್ರಮ ಅತಿಮುಖ್ಯವಾದುದು. ಪ್ರಸ್ತುತ ಸಂಶೋಧನೆಗೆ ಪೂರಕ ಆಕರಗಳಿಂದ ದೊರೆತ ಮಾಹಿತಿಯು ಪ್ರಮುಖವಾಗಿರುತ್ತದೆ. ಬೈಗುಳಗಳ ಮೇಲೆ ಕನ್ನಡದಲ್ಲಿ ಇದುವರೆಗೂ ರಚಿತವಾಗಿರುವ ಕೃತಿಗಳು, ಲೇಖನಗಳು, ಪಿಎಚ್.ಡಿ ಮಹಾಪ್ರಬಂಧಗಳನ್ನು ಒಳಗೊಂಡಂತೆ ಬಳ್ಳಾರಿ ಜಿಲ್ಲೆಯ ಕ್ಷೇತ್ರ ಮಾಹಿತಿಯು ಪ್ರಮುಖ ಆಕರಗಳಾಗಿವೆ. ಬೈಗುಳಗಳ ಸಮಾಜೋಭಾಷಿಕ ಅಧ್ಯಯನವನ್ನು ಕ್ಷೇತ್ರಕಾರ್ಯದ ಆಧಾರದ ಮೇಲೆ ಸಾಮಾಜಿಕ ಹಿನ್ನೆಲೆಯಲ್ಲಿ ವಿವರಣಾತ್ಮಕ ವಿಧಾನದಲ್ಲಿ ಅಧ್ಯಯನವನ್ನು ಮಾಡಲಾಗಿದೆ. ಅಧ್ಯಯನಕ್ಕೆ ಅಗತ್ಯವಾದ ಪ್ರಶ್ನಾವಳಿಗಳ ಪಟ್ಟಿಯನ್ನು ತಯಾರಿಸಿಕೊಂಡು ಆಯ್ದ ಕೆಲವು ವಕ್ತೃಗಳ ಸಂದರ್ಶನ ಮಾಡುವುದರ ಮೂಲಕ ಮಾಹಿತಿಯನ್ನು ದಾಖಲಿಸಿಕೊಳ್ಳಲಾಗಿದೆ.

ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಭಾಷಿಕವಾಗಿ ಮತ್ತು ಪ್ರಾದೇಶಿಕವಾಗಿ ಬೈಗುಳಗಳ ಸ್ವರೂಪದ ವಿವಿಧ ಆಯಾಮಗಳನ್ನು ವಿವರಿಸಲು ಸಾಮಾಜಿಕ ಭಾಷಾಧ್ಯಯನದ ಶಿಸ್ತಿಗೆ ಅಧ್ಯಯನದ ಚೌಕಟ್ಟನ್ನು ಅಳವಡಿಸಲಾಗಿದೆ. ಬೈಗಳುಗಳ ವಿಭಿನ್ನ ಸಂಸ್ಕೃತಿಯನ್ನು ಮತ್ತು ಭಾಷಿಕ ಚಹರೆಗಳನ್ನು ಗುರುತಿಸಲಾಗಿದೆ. ಆಧುನಿಕ ಸಂದರ್ಭದಲ್ಲಿ ಬೈಗುಳಗಳ ಬದಲಾವಣೆಯನ್ನು ಗುರುತಿಸುವುದು ಮತ್ತು ಪೂರಕ ಆಕರಗಳಿಂದ ದೊರೆತ ಮಾಹಿತಿಯನ್ನು ಸಮಾಜೋಭಾಷಿಕ ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಯನದ ಸ್ವರೂಪ:

ಸಮಾಜೋಭಾಷಿಕ ಅಧ್ಯಯನ ವಿಧಾನದ ಮುಖಾಂತರ ಅಧ್ಯಯನದ ಉದ್ದೇಶ, ವ್ಯಾಪ್ತಿಗಳ ಹಿನ್ನೆಲೆಯಲ್ಲಿ ಬೈಗುಳಗಳ ಸ್ವರೂಪವನ್ನು ವಿಶ್ಲೇಷಿಸಲು ಈ ಸಂಶೋಧನಾ ಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ ಅವುಗಳೆಂದರೆ,

ಅಧ್ಯಾಯ ಒಂದು : ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ, ಸ್ವರೂಪ

ಅಧ್ಯಾಯ ಎರಡು : ಈವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಮೂರು: ಬೈಗುಳ ಮತ್ತು ಹೆಣ್ಣು - ಭಾಷಿಕ ರಚನೆ

ಅಧ್ಯಾಯ ನಾಲ್ಕು : ಬೈಗುಳ ಮತ್ತು ಹೆಣ್ಣು - ವಸ್ತು ವಿಷಯ

ಅಧ್ಯಾಯ ಐದು : ಹೆಣ್ಣು ಮತ್ತು ಬೈಗುಳ - ಸಂದರ್ಭ ಮತ್ತು ಅಭಿವ್ಯಕ್ತಿ ವಿಧಾನಗಳು

ಅಧ್ಯಾಯ ಆರು : ಬೈಗುಳ ಸಾಮಾಜಿಕ, ಸಾಂಸ್ಕೃತಿಕ ವಿನ್ಯಾಸಗಳು-ಹೆಣ್ಣು ಸಂಕಥನಗಳ ಹಿನ್ನೆಲೆಯಲ್ಲಿ

ಅಧ್ಯಾಯ ಏಳು : ಸಮಾರೋಪ.

ಮೊದಲನೆಯ ಅಧ್ಯಾಯದ ಪ್ರಸ್ತಾವನೆ ಭಾಗದಲ್ಲಿ ಪ್ರಮುಖವಾಗಿ ಬೈಗುಳ ಎಂದರೇನು, ಬೈಗುಳದ ಉದ್ದೇಶ ಏನಾಗಿದೆ, ಬೈಗುಳಗಳು ಹೆಚ್ಚಾಗಿ ಯಾರನ್ನು ಕೇಂದ್ರವಾಗಿರಿಸಿಕೊಂಡು ಬಳಕೆಯಲ್ಲಿವೆ. ಎಂಬುದನ್ನು ಚರ್ಚಿಸಲಾಗಿದೆ. ಅಧ್ಯಯನದ ಉದ್ದೇಶಗಳು ಯಾವುವು, ಅಧ್ಯಯನದ ಪ್ರಮುಖ ಅಂಶಗಳಾವುವು ಯಾವ ಕಾರಣಕ್ಕೆ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ, ಈ ಅಧ್ಯಯನದಿಂದಾಗುವ ಉಪಯೋಗಗಳೇನು ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ. ಅಧ್ಯಯನದ ವ್ಯಾಪ್ತಿ ಎಷ್ಟು, ಅಧ್ಯಯನದ ವ್ಯಾಪ್ತಿಯನ್ನು ಒಂದು ನಿರ್ದಿಷ್ಟ ಚೌಕಟ್ಟಿಗೆ ಸೀಮಿತಗೊಳಿಸಲು ಕಾರಣಗಳೇನು ಎಂಬುದನ್ನು ತಿಳಿಸಲಾಗಿದೆ. ಹಾಗೆಯೇ ಅಧ್ಯಯನದ ವಿಧಾನ ಯಾವುದು, ಏಕೆ ಈ ವಿಧಾನವನ್ನು ಬಳಸಿಕೊಳ್ಳಲಾಗಿದೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ಎರಡನೆಯ ಅಧ್ಯಾಯವಾದ ಸಮೀಕ್ಷೆಯಲ್ಲಿ ಬೈಗುಳಗಳನ್ನು ಕುರಿತಾಗಿ ನಡೆದಿರುವ ಅಧ್ಯಯನಗಳು ಮತ್ತು ಇವುಗಳ ಮೇಲೆ ರಚಿತವಾಗಿರುವ ಕೃತಿಗಳು, ಲೇಖನಗಳು ಎಂ.ಫಿಲ್, ಪಿಎಚ್.ಡಿ ಮಹಾಪ್ರಬಂಧಗಳು ಮುಂತಾದ ಆಕಾರ ಸಾಮಗ್ರಿಗಳಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ಕುರಿತು ಸಂಕ್ಷಿಪ್ತವಾಗಿ ಸಮೀಕ್ಷೆ ಮಾಡಲಾಗಿದೆ.

ಮೂರನೆಯ ಅಧ್ಯಾಯವಾದ ಬೈಗುಳ ಮತ್ತು ಹೆಣ್ಣು - ಭಾಷಿಕ ರಚನೆ ಎಂಬಲ್ಲಿ ಪದ, ಪದಪುಂಜ, ವಾಕ್ಯ, ಪ್ರಾಸ, ರೂಪದಲ್ಲಿರುವ ಬೈಗುಳಗಳ ಭಾಷಿಕ ರಚನೆಗಳನ್ನು, ನುಡಿಗಟ್ಟು ರೂಪದಲ್ಲಿರುವ ಬೈಗುಳಗಳನ್ನು ಹಾಗೂ ಹೇಳಿಕೆ ರೂಪದಲ್ಲಿರುವ ಬೈಗುಳಗಳನ್ನು ಅವುಗಳ ರಚನೆಯ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯವಾದ ಬೈಗುಳ ಮತ್ತು ಹೆಣ್ಣು - ವಸ್ತು ವಿಷಯ ಎಂಬಲ್ಲಿ ವೃತ್ತಿಯನ್ನು ಆಧರಿಸಿ ಬೈಯುವಂತಹ ಬೈಗಳಗಳನ್ನು ಗುರುತಿಸಿ ವಿಶ್ಲೇಷಿಸುವುದು ಮತ್ತು ಆರೋಪಿಸಿ ಬೈಯುವಂತಹ ಬೈಗುಳಗಳು, ಶಾಪರೂಪದ ಬೈಗುಳಗಳನ್ನು ಹೆಚ್ಚಾಗಿ ಯಾರು

ಬಳಸುತ್ತಾರೆ, ಯಾರಿಗೆ ಬಳಸುತ್ತಾರೆ ಅದರ ಹಿಂದಿನ ಉದ್ದೇಶ ಏನಾಗಿದೆ, ಹೆಚ್ಚಿನ ರೀತಿಯಲ್ಲಿ ಯಾರು ಶಾಪಗಳನ್ನು ಹಾಕುತ್ತಾರೆ ಅದರ ಪರಿಣಾಮ ಏನಾಗುತ್ತದೆ ಎಂಬುವುದನ್ನು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯವಾದ ಹೆಣ್ಣು ಮತ್ತು ಬೈಗುಳ – ಸಂದರ್ಭ ಮತ್ತು ಅಭಿವ್ಯಕ್ತಿ ವಿಧಾನಗಳು ಯಾವುವು, ಯಾರು – ಯಾರಿಗೆ, ಯಾವ – ಯಾವ ರೀತಿಯಲ್ಲಿ ಬೈಯುತ್ತಾರೆ, ಅದರ ಅಭಿವ್ಯಕ್ತಿ ವಿಧಾನ ಯಾವುದು ಎಂಬುದನ್ನು ಅರಿಯುವುದು ಬೈಗುಳಗಳಿಗೆ ಕಾರಣವಾಗುವ ಅಂಶಗಳು ಯಾವುವು, ಅವುಗಳ ಉದ್ದೇಶ ಏನಾಗಿದೆ, ಬೈಗುಳಗಳ ಸಾಮಾಜಿಕ ಸಂದರ್ಭಗಳು ಯಾವುದು, ಬೈಗುಳಗಳನ್ನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಬಳಸುವ ವಿಧಾನಗಳು ಯಾವುವು, ಅದು ಹೆಣ್ಣು –ಗಂಡಿಗೆ, ಗಂಡು – ಹೆಣ್ಣಿಗೆ, ಹೆಣ್ಣು – ಸಮುದಾಯ, ಸಮುದಾಯ – ಹೆಣ್ಣಿಗೆ ಯಾವ ರೀತಿಯಲ್ಲಿ ಬೈಗುಳಗಳನ್ನು ಬಳಕೆ ಮಾಡುತ್ತಾರೆ, ಅವುಗಳ ಸಂದರ್ಭ ಯಾವುದು, ಅವುಗಳ ಅಭಿವ್ಯಕ್ತಿ ವಿಧಾನಗಳು ಯಾವ ರೀತಿಯಲ್ಲಿ ಬಳಕೆಯಾಗುತ್ತವೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಆರರಲ್ಲಿ ಬೈಗುಳ ಸಾಮಾಜಿಕ ಸಾಂಸ್ಕೃತಿಕ ವಿನ್ಯಾಸಗಳು ಇವುಗಳನ್ನು ಹೆಣ್ಣು ಸಂಕಥನಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಧಾರ್ಮಿಕ ನೆಲೆಯಲ್ಲಿ ಬಳಕೆಗೊಳ್ಳುತ್ತಿರುವ ಬೈಗುಳಗಳ ವಿನ್ಯಾಸಗಳನ್ನು ಗುರುತಿಸುವುದು ಮತ್ತು ಬೈಗುಳಗಳ ಆರ್ಥಿಕ ಸ್ಥಾನ ಪಲ್ಲಟಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳು, ಅಧ್ಯಯನದ ಮಿತಿಗಳು, ಮುಂದಿನ ಅಧ್ಯಯನದ ಸಾಧ್ಯತೆಗಳು, ಅಧ್ಯಯನದ ಸಂದರ್ಭದಲ್ಲಿ ಎದುರಾದ ಸಮಸ್ಯೆಗಳು, ಹಾಗೂ ಅಧ್ಯಯನದ ಒಟ್ಟಾರೆ ರೂಪರೇಷೆಯನ್ನು ತಿಳಿಸಲಾಗಿದೆ.

* * *

ಅಧ್ಯಾಯ : ೨

ಈವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ - ೨

ಈವರೆಗಿನ ಅಧ್ಯಯನಗಳ ಸಮೀಕ್ಷೆ

ಬೈಗುಳಗಳನ್ನು ಅನೇಕ ನೆಲೆಗಳಲ್ಲಿ ಅಧ್ಯಯನಕ್ಕೆ ಒಳಪಡಿಸಿರುವುದು ಬೈಗುಳಗಳನ್ನು ಸಾಂಸ್ಕೃತಿಕ ನಿರ್ವಚನದ ಪರೋಕ್ಷ ಮಾದರಿಗಳಲ್ಲಿ ಪರಿಭಾವಿಸಿದ ಫಲವಾಗಿದೆ. ಸಮಾಜಶಾಸ್ತ್ರೀಯ, ಭಾಷಿಕ, ಸಾಂಸ್ಕೃತಿಕ ನೆಲೆಗಳಿಂದ ಬೈಗುಳಗಳನ್ನು ಕುರಿತುವಿವರಣೆ ವಿಶ್ಲೇಷಣೆಗಳನ್ನು ಅನೇಕ ವಿದ್ವಾಂಸರು ತಮ್ಮ ಅಧ್ಯಯನದ ಪ್ರಬಂಧ ಲೇಖನಗಳಲ್ಲಿ ಮಂಡಿಸಿದ್ದಾರೆ. ಬೈಗುಳಗಳ ವ್ಯಾವಹಾರಿಕ ಉದ್ದೇಶಗಳು ಏನೇ ಇದ್ದರೂ ಅವುಗಳು ಭಾಷಿಕ ಸಮುದಾಯವೊಂದರ/ ಸಂಸ್ಕೃತಿ ವಿವರಗಳ ಆಕರಗವಾಗಿ ಪರಿಭಾವಿಸಲು ಅಧ್ಯಯನಕಾರರಿಗೆ ಹೇಗೆ ಉಪಯುಕ್ತವಾಗಿದೆ ಎಂಬುದನ್ನು ಪರಿಶೀಲಿಸಲು ಕನ್ನಡದಲ್ಲಿ ಬೈಗುಳ ಕುರಿತು ಇದುವರೆಗೆ ಬಂದಿರುವ ಲೇಖನ, ಪುಸ್ತಕ, ಎಂಫಿಲ್, ಪಿಎಚ್.ಡಿ ಅಧ್ಯಯನದಲ್ಲಿನ ವಿಷಯಗಳನ್ನು ಈ ಅಧ್ಯಾಯದಲ್ಲಿ ಮಂಡಿಸಲಾಗಿದೆ. ಬೈಗುಳ: ಹೆಣ್ಣು ಸಂಕಥನಗಳು ಸಮಾಜೋಭಾಷಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಕೆಲವು ಅಧ್ಯಯನಗಳು ಮತ್ತು ಹಲವು ಬಿಡಿ ಬಿಡಿ ಲೇಖನಗಳು ಪ್ರಕಟಗೊಂಡಿವೆ. ಕೆಲವು ಅಧ್ಯಯನಗಳು ಬೈಗುಳಗಳನ್ನು ಕುರಿತು ನಡೆದಿವೆಯೇ ಹೊರತು ಹೆಣ್ಣು ಸಂಕಥನಗಳ ಹಿನ್ನೆಲೆಯಲ್ಲಿ ವಿರಳವೆಂದೇ ಹೇಳಬಹುದು. ಇದುವರೆಗೂ ನಡೆದಿರುವ ಬೈಗುಳ ಸಂಬಂಧಿ ಅಧ್ಯಯನಗಳಲ್ಲಿ ಚರ್ಚೆಗೊಂಡಿರುವ ವಿಷಯಗಳನ್ನು ಈ ಕೆಳಕಂಡಂತೆ ನೋಡಬಹುದಾಗಿದೆ.

ಶಂಕರನಾರಾಯಣ ತೀ.ನ. (ಸಂ), ಜನಪದ ಸಾಹಿತ್ಯ ಪ್ರಕಾರಗಳು, (೨೦೦೪)

ಜನಪದ ಸಾಹಿತ್ಯ ಪ್ರಕಾರಗಳು ಎಂಬ ಕೃತಿಯಲ್ಲಿರುವ ಚಿದಾನಂದಮೂರ್ತಿ ಎಂ. ಲೇಖನದಲ್ಲಿ ಅವರ 'ಬೈಗುಳ' ಎಂಬ ಲೇಖನದಲ್ಲಿ ಗಮನಿಸುವುದಾದರೆ, ಬೈಗುಳಗಳನ್ನು ಕುರಿತು ಶಾಸ್ತ್ರೀಯವಾಗಿ ವಿಶ್ಲೇಷಣೆ ಮಾಡಿದ್ದಾರೆ. ಶಬ್ದ ಭಂಡಾರದ ನಿಗಿ ನಿಗಿ ಭಾಗವೇ ಬೈಗುಳಗಳು ಎಂದು ಹೇಳುತ್ತಾರೆ. ಇಬ್ಬರು ಸೇರಿ ಕುಶಲ ಪ್ರಶ್ನೆಯ ಮಾತುಗಳನ್ನಾಡುತ್ತಿದ್ದರೆ ಅದನ್ನು ನಿಂತು ಯಾರು ಕೇಳಲು ಬಯಸುವುದಿಲ್ಲ. ಆದರೆ ಇಬ್ಬರೂ ಜಗಳವಾಡುತ್ತಾ

ಪರಸ್ಪರ ಬೈಯುತ್ತಿದ್ದರೆ ಅಲ್ಲಿ ಜನ ಸೇರುತ್ತಾರೆ. ಕೆಲವರಿಗಾದರೂ ಅದು ಮನರಂಜನೆಯ ವಿಷಯವಾಗುತ್ತದೆ. ಬೈಗುಳಗಳಿಗೆ ಹೀಗೆ ಜನರ ಗಮನ ತನ್ನ ಕಡೆಗೆ ಸೆಳೆದುಕೊಳ್ಳುವ ಶಕ್ತಿಯಿದೆ ಎಂದು ವಿಶ್ಲೇಷಿಸುತ್ತಾರೆ. 'ಬೈಗುಳ' ಎನ್ನುವುದು ಬರಿಯ ಕೆಟ್ಟ ಮಾತಲ್ಲ. ಬೈಗುಳಗಳು ಕೆಟ್ಟ ಮಾತುಗಳು ನಿಜ. ಆದರೆ ಕೆಟ್ಟ ಮಾತೆಲ್ಲವೂ ಬೈಗುಳಗಳಲ್ಲ. ಸ್ತ್ರೀ – ಪುರುಷರ ಗುಪ್ತಾಂಗಗಳನ್ನು ಅನೇಕ ಸಮಾಜಗಳು 'ಅಶ್ಲೀಲ' ವೆಂದು, 'ಹೊಲಸು' ಎಂದು, ಕೆಟ್ಟ ಮಾತೆಂದು ಭಾವಿಸುತ್ತವೆ. ಅವುಗಳನ್ನು ಸಹಜ ಸಂಭಾಷಣೆಗಳಲ್ಲಿ ಬಳಸುವ ಬಗ್ಗೆ ಸಮಾಜಿಕ ನಿಷೇದಗಳಿರುತ್ತವೆ ಎಂದು ಚರ್ಚಿಸುತ್ತಾರೆ.

ವ್ಯಕ್ತಿಗೆ ಆಗಿರುವ ಮಾನಸಿಕ ಆಘಾತದಿಂದ ಸೃಷ್ಟಿಗೊಳ್ಳುವ ಬೈಗುಳಗಳ ನಿಯೋಗಗಳಲ್ಲಿ ಮುಖ್ಯವಾದ ಮೂರು ಅಂಶಗಳನ್ನು ಹೆಸರಿಸಿದ್ದಾರೆ.

೧.ಉಪಶಮನ

೨.ಸಮತೋಲನ

೩.ಸ್ವರಕ್ಷಣೆ

ಬೈಗುಳಗಳನ್ನು ಶಾಬ್ದಿಕ ಹೊಡತವೆಂದು ಕರೆದು ಈ ಶಾಬ್ದಿಕ ಹೊಡೆತದಿಂದ ಉಂಟಾಗುವ ದ್ವಿಮುಖವಾದ ಪರಿಣಾಮಗಳನ್ನು ವಿವರಿಸುತ್ತಾರೆ. ಬೈಗುಳಗಳಲ್ಲಿ ಸರಳ ಮತ್ತು ಸಂಕೀರ್ಣವೆಂದು ಎರಡು ಪ್ರಬೇಧಗಳನ್ನು ಗುರುತಿಸುತ್ತಾರೆ. ಕಾಮಕ್ಕೆ ಸಂಬಂಧಪಟ್ಟ ಬೈಗುಳಗಳೇ ಹೆಚ್ಚಾಗಿರುವುದನ್ನು ಗಮನಿಸುತ್ತಾ ಕಾಮ ಒಂದು ಬಗೆಯ ನಿಷಿದ್ಧ ಆಗಿರುವುದೇ ಇದಕ್ಕೆ ಕಾರಣವೆಂದು ಹೇಳುತ್ತಾರೆ

ಕೆಳವರ್ಗದ ಜನರಲ್ಲಿ ಬೈಗುಳವು ದ್ವೇಷದ ಸಂಕೇತವಾಗಿರುವಂತೆ ಸ್ನೇಹ ಸಲಿಗೆಗಳ ಸಂಕೇತವೂ ಆಗಬಹುದು ಹಾಗೆ ಬಳಕೆಯಾದಾಗ ಬೈದ ವ್ಯಕ್ತಿ ಬೈಯಿಸಿಕೊಂಡ ವ್ಯಕ್ತಿಗಳಿಬ್ಬರೂ ಸಂತೋಷ ಪಡುವುದನ್ನು ಗುರುತಿಸಬಹುದು. ಬೈಗುಳಕ್ಕೆ ತಿದ್ದುವಿಕೆಯ ಮೌಲ್ಯವು ಇದೆ. ಸಮಾಜ ತನ್ನ ನೀತಿ ಪ್ರಜ್ಞೆಯನ್ನು ಕಾಪಾಡಿಕೊಳ್ಳುವುದರಲ್ಲಿ ಬೈಗುಳದ್ದೂ ಒಂದು ಪಾತ್ರ ಇದೆ. ಬೈಗುಳವು ಇಡೀ ಸಮಾಜದ ಮಾನಸಿಕ ಅಸ್ವಸ್ಥತೆಗೆ ಒಂದು ಪರಿಣಾಮಕಾರಿ ಔಷಧವೂ ಆಗಬಲ್ಲದೆಂಬುದನ್ನು ಹೇಳುತ್ತಾ ಇತರೆ ಶಬ್ದಗಳಂತೆಯೇ ಬೈಗುಳವೂ ಒಂದು ಮೂಲಭೂತವಾದ ಸಾಮಾಜಿಕೆ ಅಗತ್ಯವನ್ನು ಪೂರೈಸುತ್ತದೆಯೆಂದು ಚರ್ಚಿಸಿದ್ದಾರೆ. ಈ ಲೇಖನದ ಮುಖ್ಯ ಅಂಶವೆಂದರೆ ಎಲ್ಲಿಯೂ ಒಂದು ಬೈಗುಳವನ್ನು ಉದಾಹರಣೆಯಾಗಿ ನೀಡಿ ಚರ್ಚಿಸಲಾಗಿಲ್ಲ.

ಪಾಂಡುರಂಗಬಾಬು ಡಿ, ನುಡಿನೋಟ, (೨೦೦೫) ಎಂಬ ಪುಸ್ತಕದಲ್ಲಿರುವ ಬೈಗುಳ ಸಾಮಾಜಿಕ ಸಾಂಸ್ಕೃತಿಕ ವಿನ್ಯಾಸ ಎಂಬ ಲೇಖನವನ್ನು ಗಮನಿಸುವುದಾದರೆ, ಬೈಗುಳಗಳನ್ನು ಸಾಮಾಜಿಕ, ಸಾಂಸ್ಕೃತಿಕ ವಿನ್ಯಾಸದಿಂದ ವಿಶ್ಲೇಷಿಸಿದ್ದಾರೆ. ಬೈಗುಳ ವಿಶಿಷ್ಟ ಭಾಷಾಂಶಗಳು.

ಬೈಗುಳನ್ನು ಔಪಚಾರಿಕವಾಗಿ ಯಾರು ಕಲಿಯುವುದಿಲ್ಲ ಮತ್ತು ಕಲಿಸುವುದಿಲ್ಲವಾದರೂ ಭಾಷೆಯಲ್ಲಿ ಕ್ರಿಯಾಶೀಲವಾಗಿರುತ್ತವೆ. ಬೈಗುಳನ್ನು ವ್ಯಕ್ತಿಗಳು ಪರಿಸರದಿಂದ ಕಲಿಯುತ್ತಾರೆ ಎಂದು ಹೇಳಿದ್ದಾರೆ. ಬೈಗುಳಗಳೂ ನಮ್ಮ ಸಮಾಜ ಸಂಸ್ಕೃತಿಯ ಆಚರಣೆ, ನಂಬಿಕೆ, ನಿರ್ಬಂಧಗಳ ಸ್ವರೂಪವನ್ನು ಅನಾವರಣಗೊಳಿಸುತ್ತವೆ ಎಂದು ಸೂಚಿಸಿದ್ದಾರೆ. ಬೈಗುಳಗಳು ಭಾಷಿಕವಾಗಿ ಸ್ಥಿರ ಘಟಕಗಳು. ಪರಿಣಾಮಗಳಲ್ಲಿ ಕ್ರಿಯಾತ್ಮಕತೆ ಇದ್ದರೂ ರಚನಾತ್ಮಕವಾಗಿ ಕ್ರಿಯಾಶೀಲವಾಗಿರುವುದಿಲ್ಲ. ಅಂದರೆ ಬೈಗುಳ ಪದ, ಪದಮುಂಜ, ವಾಕ್ಯ ಮಾದರಿಗಳಲ್ಲಿದ್ದರೂ ಇವೊಂದು ಬಗೆಯ ಸಿದ್ಧಮಾದರಿಗಳೇ ಎಂದು ಚರ್ಚಿಸಿದ್ದಾರೆ.

ಕೆಲವು ಬೈಗುಳಗಳನ್ನು ಸಾಮಾಜಿಕವಾಗಿ ಮೇಲುಸ್ತರದ ಬ್ರಾಹ್ಮಣರು ಮಾತ್ರ ಬಳಸುತ್ತಾರೆ ಈ ಬೈಗುಳಗಳನ್ನು ಬೇರೆ ಸಮುದಾಯದವರು ಬಳಸಿದರೆ ಅದು ಕೇವಲ ಅನುಕರಣೆಯಿಂದ ಬಂದಿರುತ್ತದೆ ಎಂದು ಕೆಲವು ಉದಾಹರಣೆಗಳ ಮೂಲಕ ವಿವರಿಸಿದ್ದಾರೆ. ಇದನ್ನು ಗಮನಿಸಿದಾಗ ಮೇಲ್ವರ್ಗ ಮತ್ತು ಕೆಳವರ್ಗದವರು ಬಳಸುವ ಬೈಗುಳಗಳು ಬೇರೆ - ಬೇರೆಯಾಗಿರುತ್ತವೆ ಎಂದು ತಿಳಿಯುತ್ತದೆ.

ಕೆಲವು ಬೈಗುಳಗಳು ಕನ್ನಡದಲ್ಲಿ ಸ್ನೇಹಿತರ ನಡುವೆ ಸಂಬೋಧನಾ ರೂಪಗಳಾಗಿ ಬಳಕೆಯಲ್ಲಿವೆ. ಬಳಕೆಯಾಗಿರುವ ಬೈಗುಳ ರೂಪಗಳಿಗೆ ಮೂಲಾರ್ಥದ ಕ್ರಿಯಾತ್ಮಕತೆಯಿಲ್ಲದಿರುವುದನ್ನು ಕೆಲವು ಪ್ರಯೋಗಗಳ ಮೂಲಕ ವಿವರಿಸಿದ್ದಾರೆ.

೧. ವಸ್ತುವಾಚಕ ರೂಪದ ಬೈಗುಳ

೨. ಶಾಪರೂಪದ ಬೈಗುಳ

೩. ಸ್ವೀಕೃತ ಬೈಗುಳ

ಈ ಮೂರು ರೀತಿಯ ಬೈಗುಳಗಳನ್ನು ಉದಾಹರಣೆಯ ಸಹಿತ ಚರ್ಚಿಸಿದ್ದಾರೆ. ಹಾಗೂ ಕನ್ನಡದಲ್ಲಿ ಬೈಗುಳ ಬಳಕೆಯಲ್ಲಿರುವ ಕೆಲವು ಕನ್ನಡೇತರ ರೂಪಗಳು ಇವೆ ಎಂಬುವುದನ್ನು ಚರ್ಚಿಸಿದ್ದಾರೆ.

ಹಂದ್ರಾಳ ಗವಿಸಿದ್ದಪ್ಪ ಅವರ ಬೈಗುಳಗಳಲ್ಲಿ ಮಹಿಳೆ (೨೦೧೦)

ಎಂಬ ಕೃತಿಯಲ್ಲಿ ಭಾಷಿಕ ರಚನೆಯೊಳಗಡೆ ಬೈಗುಳಗಳು ರೂಪಪಡೆದ ಸಂದರ್ಭವನ್ನು ಕೌಟುಂಬಿಕ ವಲಯ, ಸಮಾಜಿಕ ವಲಯಗಳಲ್ಲಿ ಅವುಗಳ ಪಾತ್ರವನ್ನು ಗಮನಿಸಿ ವಿವರಿಸಿದ್ದಾರೆ. ಬೈಗುಳಗಳ ಸಂದರ್ಭ ಯಾವುದು? ಯಾವ ಕಾರಣಕ್ಕಾಗಿ ಬೈಯಲಾಗುತ್ತದೆ? ಅದರ ಹಿಂದಿನ ಮನೋಧರ್ಮವೇನು? ಹಾಗೇಯೇ ಹೆಂಗಸು ಹೆಂಗಸಿಗೆ ಬೈಯುವ ಬೈಗುಳ, ಹೆಂಗಸು ಗಂಡಸಿಗೆ ಬೈಯುವ ಬೈಗುಳ, ಮತ, ವರ್ಗಾಧಾರಿತ ನೆಲೆಯಲ್ಲಿ ರೂಪ ಪಡೆದ ಬೈಗುಳ ಮತ್ತು ಆದರ್ಶದ ಪರಿಕಲ್ಪನೆಯಡಿಯಲ್ಲಿ ಮೈದಾಳಿದ ಬೈಗುಳಗಳ ಹಿಂದಿನ

ತಾತ್ವಿಕತೆಯ ಸ್ವರೂಪ ಏನಾಗಿದೆ ಎಂಬ ವಿಚಾರವನ್ನು ವಿವರಿಸಿ ಸಮಾಜದಲ್ಲಿ ಮಹಿಳೆಯನ್ನು ಈ ಬೈಗುಳಗಳು ಹೇಗೆ ನಿಯಂತ್ರಿಸಿವೆ ಎನ್ನುವುದನ್ನು ಕೆಲವು ಉದಾಹರಣೆಗಳ ಮೂಲಕ ಚರ್ಚಿಸಿದ್ದಾರೆ.

ಬೈಗುಳಗಳಲ್ಲಿ ಮಹಿಳೆಯನ್ನು ಕೇಂದ್ರವಾಗಿರಿಸಿಕೊಂಡ ಬೈಗುಳಗಳು ನಮಗೆ ಸಾಕಷ್ಟು ಸಿಗುತ್ತವೆ. ಅವು ಗಂಡಸರಿಗೆ ಗಂಡಸರು ಬೈಯುವುದಾಗಿರಬಹುದು, ಹೆಂಗಸರು ಹೆಂಗಸರಿಗೆ ಬೈಯುವುದಾಗಿರಬಹುದು, ಹೆಂಗಸರು ಗಂಡಸರಿಗೆ, ಗಂಡಸರು ಹೆಂಗಸರಿಗೆ ಬೈಯುವುದಾಗಿರಬಹುದು ವರ್ಗಾಧಾರಿತ ನೆಲೆಯಲ್ಲಿ ಬೈಯುವುದಾಗಿರಬಹುದು. ಇಲ್ಲಿ ಸೂಕ್ಷ್ಮವಾಗಿ ನೋಡಿದಾಗ ಹೆಣ್ಣನ್ನು ಮುಖ್ಯವಾಗಿಟ್ಟುಕೊಂಡು ಬೈಯುವ ಬೈಗುಳಗಳು ಹೆಚ್ಚಾಗಿ ಸಿಗುತ್ತವೆ. ಮಹಿಳೆ ತನಗೆ ಅರಿವಿಲ್ಲದಂತೆ ತನ್ನನ್ನೆ ತಾನು ಬೈದುಕೊಳ್ಳುವ ನೆಲೆಯಲ್ಲಿಯೇ ಈ ಪುರುಷ ಪ್ರಧಾನ ವ್ಯವಸ್ಥೆ ವ್ಯವಸ್ಥಿತವಾಗಿ ಭಾಷಿಕ ರಚನೆಯನ್ನು ರೂಪಿಸಿದ ನೆಲೆಯನ್ನು ವಿವರಿಸಿದ್ದಾರೆ.

ಬೈಗುಳಗಳಲ್ಲಿ ಶೀಲ, ಅಶ್ಲೀಲ, ಅನೈತಿಕತೆ, ಲೈಂಗಿಕತೆ, ಬೈಗುಳಗಳಲ್ಲಿ ಆದರ್ಶ, ಬೈಗುಳಗಳಲ್ಲಿ ಲಿಂಗತಾರತಮ್ಯದ ನೆಲೆಗಳು ಎಂದು ವಿಂಗಡಿಸಿ ಚರ್ಚಿಸುತ್ತಾರೆ.

ಬಸವರಾಜ ನೆಲ್ಲಿಸರ ಅವರ ಜಾನಪದ ಜಿಜ್ಞಾಸೆ ಎಂಬ ಕೃತಿಯಲ್ಲಿರುವ ಗ್ರಾಮ ಜೀವನದಲ್ಲಿ ಬೈಗುಳಗಳು (೧೯೭೯)

ಎಂಬ ಲೇಖನದಲ್ಲಿ ಬೈಗುಳ ಪದಕ್ಕೆ ಕಿಟ್ಟಲ್ ಕೋಶದಲ್ಲಿ ನೀಡಿದ ಅರ್ಥಗಳನ್ನು ಕೊಟ್ಟಿದ್ದಾರೆ. ತಿರಸ್ಕಾರದ ಉಸಿರೇ ಬೈಗುಳ. ವಿರೋಧಿಗಳನ್ನು ತೆಗಳಿ ಕಟುವಾಗಿ ನುಡಿದು ನೋವುಂಟು ಮಾಡುವುದೇ ಬೈಗುಳ. ಸಮಾಜದಲ್ಲಿ ಯಾವುದು ನಿಷಿದ್ಧವಾಗಿರುತ್ತದೆಯೋ ಅದನ್ನು ಬಹಿರಂಗಪಡಿಸಿ ಶಾಬ್ದಿಕವಾಗಿ ಆಡುವುದೇ ಬೈಗುಳ. ಹೀಗೆ ನಾನಾ ರೀತಿಯ ಬೈಗುಳದ ಅರ್ಥವನ್ನು ಕೊಡುವುದರ ಮೂಲಕ ಇದೇ ಬೈಗುಳದ ನಿಖರವಾದ ಅರ್ಥವೆಂದು ಹೇಳಲಾಗುವುದಿಲ್ಲ ಎಂದು ಹೇಳುತ್ತಾರೆ.

ಬಯ್ಯುವುದು ಒಂದು ಕಲೆ ಅದು ಎಲ್ಲರಿಗೂ ಬರುವಂತಹದ್ದಲ್ಲ ಎನ್ನುತ್ತಾರೆ. ಬೈಗುಳದ ಮೂಲಕವೂ ಸಂಭಾಷಣೆ ನಡೆಯುತ್ತದೆ ಎಂದು ಸೂಚಿಸುತ್ತಾರೆ. ಬಯ್ಯುವುದರ ಮುಖಾಂತರವೂ ರೇಗಿಸಬಹುದು ಎಂಬುದನ್ನು ಇಲ್ಲಿ ವಿಶ್ಲೇಷಿಸುತ್ತಾರೆ. ಮಾತು ಸಾರ್ಥಕವಾಗಿ ಬಳಕೆಗೊಂಡಾಗ ಕಾವ್ಯವಾಗುತ್ತದೆ. ವ್ಯರ್ಥವಾಗಿ ಬಳಕೆಗೊಂಡರೆ ಹರಟೆಯಾಗುತ್ತದೆ. ದುರುಪಯೋಗಕ್ಕೀಡಾದಾಗ ಬೈಗುಳವಾಗುತ್ತದೆ ಎನ್ನುತ್ತಾರೆ.

ಗ್ರಾಮ ಜೀವನದಲ್ಲಿ ಬೈಗುಳಗಳು ಯಾವ ರೀತಿಯಲ್ಲಿವೆ ಎಂಬುವುದನ್ನು ಉದಾಹರಣೆಯ ಮೂಲಕ ಈ ಲೇಖನದಲ್ಲಿ ಚರ್ಚಿಸುತ್ತಾರೆ. ಬೈಗುಳಗಳು ಪಂಡಿತ ಪಾಮರ ಬಡವಬಲ್ಲಿದರಲ್ಲಷ್ಟೇ ಅಲ್ಲ, ಮಾತು ಬಾರದ ಮೂಗರ ಹಾವಭಾವದಲ್ಲೂ ಇರುವಂತಹುದು ಎಂಬುದನ್ನು ಸೂಚಿಸುತ್ತಾರೆ. ಪ್ರಾಣಿ ಪಕ್ಷಿಗಳ ಸ್ವಭಾವವನ್ನು ಒಳಗೊಂಡ ಬೈಗುಳಗಳು ಇರುತ್ತವೆ ಎಂಬುದನ್ನು ತಿಳಿಸಿದ್ದಾರೆ.

ಬೈಗುಳ ಗದ್ಯದಲ್ಲಷ್ಟೇ ಅಲ್ಲದೆ ಪದ್ಯ ರೂಪದಲ್ಲೂ ಇರುತ್ತದೆ. ಹೀಗೆಂದಾಗ ಸಂಪೂರ್ಣ ಕಾವ್ಯಾಂಶವನ್ನೇ ಒಳಗೊಳ್ಳಬೇಕೆಂದಿಲ್ಲ ಎಂದು ಉದಾಹರಣೆಯ ಮೂಲಕ ಚರ್ಚಿಸುತ್ತಾರೆ.

ಶಿವಲಿಂಗಮ್ಮ ಕಟ್ಟೆ ಅವರ ವೀರಶೈವ ಬೈಗುಳಗಳು (೨೦೦೪)

ಎಂಬ ಕೃತಿಯಲ್ಲಿ ಬೈಗುಳಗಳು ಎರಡು ರೀತಿಯವು ಒಂದು ಶ್ಲೀಲ ಇನ್ನೊಂದು ಅಶ್ಲೀಲ ಎಂದು ಹೇಳುತ್ತಾರೆ. ಮಹಾಭಾರತದಲ್ಲಿ, ಗದ್ಯ, ಪದ್ಯ, ವಚನ ಸಾಹಿತ್ಯ, ತತ್ವಪದಗಳು, ಜಾನಪದ ಗೀತೆಗಳಲ್ಲಿ ಬೈಗುಳಗಳು ದೊರೆಯುತ್ತವೆ ಎಂಬುವುದನ್ನು ಉದಾಹರಣೆ ಸಹಿತ ವಿಶ್ಲೇಷಿಸಲಾಗಿದೆ. ಬೈಗುಳಗಳು ಅನುಭಾವಿಗಳ ಅಣಿಮುತ್ತುಗಳು ಎನ್ನುತ್ತಾರೆ.

ಆಧ್ಯಾತ್ಮದತ್ತ ಸಾಗಿದಾಗ ಬೈಗುಳ ಸ್ವರೂಪ ಬದಲಾಗ ತೊಡಗಿತು. ಅವುಗಳನ್ನು ಹಿಂಜಿದಾಗ ಗೂಡಾರ್ಥ ತಿಳಿದಾಗ ಅಚ್ಚರಿ ಆನಂದವೆನಿಸಿತು. ತಪ್ಪು ಮಾಡಿದಾಗ, ಕೋಪ ಮುನಿಸಿನಿಂದ ಬೈಯ್ದರೂ ನಿಧಾನವಾಗಿ ವಿಚಾರಿಸಲು ಅವುಗಳ ಒಳಾರ್ಥ ಎತ್ತರ ಬಿತ್ತರವಾಗತೊಡಗಿತು. ಈ ಅರ್ಥ ವೀರಶೈವರ ಬೈಗುಳಗಳಲ್ಲಿ ಮಾತ್ರವಿದೆ. ಬೇರೆ ಧರ್ಮದವರ ಬೈಗುಳಗಳಲ್ಲಿ ಇಲ್ಲ ಎಂದು ಚರ್ಚಿಸುತ್ತಾರೆ.

ಜಾತಿ ಸೂಚಕ ಬೈಗುಳಗಳಲ್ಲಿ ವೀರಶೈವರ ಬೈಗುಳಗಳದೊಂದು ವಿಶಿಷ್ಟ ಪದ್ದತಿ ಎಂದು ಹೇಳುತ್ತಾರೆ. ೨೮ ವೀರಶೈವರ ಬೈಗುಳಗಳನ್ನು ಆಯ್ದುಕೊಂಡು ಅದರಲ್ಲಿ ಪುರುಷ ಮಹಿಳೆಯರವೆಂದು ವಿಭಾಗಿಸಿ ಅವುಗಳ ಒಳಾರ್ಥವನ್ನು ಈ ಕೃತಿಯಲ್ಲಿ ಚರ್ಚಿಸುತ್ತಾರೆ.

ಶ್ರೀಮತಿ ಎಚ್. ಎಸ್. ಅವರು ಸಂಪಾದಿಸಿರುವ 'ಹೆಣ್ಣು ಮತ್ತು ಭಾಷೆ' (೨೦೦೪)

ಎಂಬ ಕೃತಿಯಲ್ಲಿ ಭಾಷೆಯಲ್ಲಿನ ಬೈಗುಳಗಳನ್ನು ಕುರಿತು ಚರ್ಚಿಸಿರುವ ಎರಡು ಲೇಖನಗಳಿವೆ.

ಭಾಷೆಯಲ್ಲಿ ಹೆಣ್ಣಿನ ಪ್ರತಿನಿಧೀಕರಣ – ಶಿವಾನಂದ ಎಸ್, ವೀರಕ್ತ ಮಠ

ಸಾಮಾಜಿಕ – ಸಂವಹನ – ಲಿಂಗತಾರತಮ್ಯ, ಬಿನ್ನತೆ – ಡಿ. ಪಾಂಡುರಂಗಬಾಬು

೧) ಭಾಷೆಯಲ್ಲಿ ಹೆಣ್ಣಿನ ಪ್ರತಿನಿಧೀಕರಣ

ಈ ಲೇಖನದಲ್ಲಿ ಗಂಡ ಸತ್ತ ಹೆಣ್ಣಿಗೆ ರಂಡೆ, ಮುಂಡೆ, ವಿಧವೆ, ಇತ್ಯಾದಿ ಪದಗಳಿಂದ ಕರೆಯುತ್ತಾರೆ. ಈ ಪದಗಳನ್ನು ಆಧರಿಸಿ ಬೈಯುವಾಗ ರಂಡೀಮಗ, ಮುಂಡೆಮಗ ಎಂಬ ಪದಗಳು ಸೃಷ್ಟಿಯಾಗುತ್ತವೆ. ಇದಕ್ಕೆ ವಿರುದ್ಧವಾಗಿ ಹೆಂಡತಿ ಸತ್ತ ಗಂಡನಿಗೆ ಯಾವ ಭಾಷಿಕ ರಚನೆಗಳು ಸೃಷ್ಟಿಯಾಗಲಿಲ್ಲ ಎಂದು ಚರ್ಚಿಸುತ್ತಾರೆ.

ಗಾದೆ – ಒಡಪುಗಳ ಹಾಗೆಯೇ ಬೈಗುಳಗಳೂ ಕೂಡ ಲಿಂಗತಾರತಮ್ಯದ ನೆಲೆಯ ಸೂಚಕಗಳಾಗಿ ತಮ್ಮ ಅಸ್ತಿತ್ವವನ್ನು ಸಾರಿ ಹೇಳುತ್ತವೆ. ಮುಖ್ಯವಾಗಿ ಹೆಣ್ಣನ್ನು ಬೈಗುಳಗಳಲ್ಲಿ ಯಥೇಚ್ಛವಾಗಿ ಬಳಸಲಾಗುತ್ತದೆ ಎಂದು ಹೇಳುತ್ತಾರೆ. ಒಂದು ಅಧ್ಯಯನದ ಪ್ರಕಾರ

ಲಂಪಟ ಮಹಿಳೆಯನ್ನು ವರ್ಣಿಸಲು ಭಾಷೆಯಲ್ಲಿ ೨೨೦ ಪದಗಳಿವೆಯಂತೆ, ಆದರೆ ಅದೇ ಪುರಷನನ್ನು ವರ್ಣಿಸಲು ಸಿಗುವ ಪದಗಳ ಸಂಖ್ಯೆ ಕೇವಲ ೨೦ ಮಾತ್ರವೆಂದು ಹೇಳಲಾಗಿದೆ ಎನ್ನುತ್ತಾರೆ.

ನಿಂದನಾತ್ಮಕವಾಗಿ ಬೈಗುಳಗಳನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ಬೈಗುಳಗಳು ಹೆಣ್ಣನ್ನು ಕೇಂದ್ರವಾಗಿರಿಸಿಕೊಂಡು ರಚಿಸಲಾಗಿದೆ. ತಾಯಿ, ಹೆಂಡತಿ, ಅಕ್ಕತಂಗಿ ಮುಂತಾದವನ್ನು ಗಮನಿಸಿ ಬೈಗುಳಗಳನ್ನು ಸೃಷ್ಟಿಸಲಾಗುತ್ತದೆ. ಬೈಗುಳಗಳ ಬಳಕೆ ಕಾಣಿಸಿಕೊಳ್ಳುವುದು ವಿರೋಧಿಯನ್ನು ಅಪಮಾನಪಡಿಸುವ ಕಾರಣಕ್ಕಾಗಿಯೇ ಎಂದು ಚರ್ಚಿಸುತ್ತಾರೆ. ಹೆಣ್ಣಿನ ಪ್ರತಿನೀಧಿಕರಣವನ್ನು ನೋಡುವಾಗ ಮಹತ್ವದ ವಲಯವಾಗಿ ಬೈಗುಳಗಳು ಕಂಡುಬರುತ್ತವೆ. ಎಂಬುವುದನ್ನು ಕುರಿತು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

೨) ಸಾಮಾಜಿಕ ಸಂವಹನ – ಲಿಂಗತಾರತಮ್ಯ, ಭಿನ್ನತೆ

ಈ ಲೇಖನದಲ್ಲಿ ಲೇಖಕರ ಬಹಳ ಮುಖ್ಯವಾದ ಕೆಲವು ಅಭಿಪ್ರಾಯಗಳನ್ನು ಗಮನಿಸುವುದಾದರೆ ಸಂವಹನದ ವಿವಿಧ ಆಕಾರಗಳಾದ ವ್ಯಕ್ತಿನಾಮಗಳು, ಸಂಬಂಧಸೂಚಕಗಳು, ಸಂಭೋದನಾ ರೂಪಗಳು, ಉಲ್ಲೇಖಗಳು, ಬೈಗುಳಗಳಲ್ಲಿ ಲಿಂಗಭಿನ್ನತೆಯ ನೆಲೆಗಳನ್ನು ಗುರುತಿಸುತ್ತಾರೆ. ಸಾಮಾಜಿಕವಾಗಿ ರೂಪಗೊಂಡಿರುವ ಲಿಂಗತಾರತಮ್ಯಕ್ಕೆ ಸಂವಹನದ ಆಕರ ಅಥವಾ ಪರಿಕರಗಳೇ ತಾರತಮ್ಯದ ಹುಟ್ಟಿಗೆ ಮತ್ತು ಪೋಷಣೆಗೆ ಕಾರಣವಲ್ಲ ಎಂದು ಹೇಳುತ್ತಾರೆ.

ಬೈಗುಳಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರು ಶಾಪರೂಪದ ಬೈಗುಳನ್ನು ತಮ್ಮ ಆಕರವಾಗಿ ಬಳಸುತ್ತಾರೆ. ಶಾಪರೂಪದ ಬೈಗುಳಲ್ಲದೆ, ಮಹಿಳೆಯರಲ್ಲಿ ಸ್ವಶಾಪರೂಪದ ಮಾದರಿಗಳು ಬಳಕೆಯಾಗುತ್ತವೆ. ಅಂದರೆ ಈ ಮಾದರಿ ಒಂದು ಘಟನೆಗೆ ಪ್ರತಿರೋಧ ತೋರುವಾಗ ತಮ್ಮ ಅಸಹಾಯಕತೆ, ದೌರ್ಬಲ್ಯಗಳ ಪ್ರತೀಕವಾಗಿ ತಮ್ಮಿಂದ ಹೊರತುಪಡಿಸಿದ ಶಕ್ತಿಗಳು ತಮಗಾಗಿ ಎದುರಾಳಿಗೆ ತೊಂದರೆ ಕೊಡಲಿ ಎಂಬ ಸೂಚನೆಗಳಿರುತ್ತವೆ ಎಂಬುವುದನ್ನು ಗುರುತಿಸುತ್ತಾರೆ.

ಸಾಮಾಜಿಕ ಸ್ಥಿತಿ ಮತ್ತು ಸಾಮಾಜಿಕ ನಡವಳಿಕೆಗಳು ಬೈಗುಳದ ಭಾಗವಾಗಿದೆ. ಪುರುಷರಿಗೆ ಪ್ರಯೋಗವಾಗುವ ಬೈಗಳಲ್ಲಿ ಅವನು ಯಾರ ಮಗ ಎನ್ನುವ ನೆಲೆಯಿಂದಲೇ ಅಂದರೆ ಅವನ ತಾಯಿ ಎಂತಹವಳು ಎಂಬ ನೆಲೆಯಿಂದ ಬೈಗಳನ್ನು ರೂಪಿಸಲಾಗಿದೆ. ಅದೇ ಪುರುಷರಿಗೆ ಅವರ ಹುಟ್ಟು ಕೌಟುಂಬಿಕ, ಸಾಮಾಜಿಕ ಸ್ಥಾನಮಾನಗಳಿಗಿಂತ ವ್ಯಕ್ತಿತ್ವ ದೌರ್ಬಲ್ಯದ ಚಹರೆಗಳಿಂದ ಬೈಗಳು ರೂಪಗೊಂಡಿವೆ ಎಂಬುವುದನ್ನು ಉದಾಹರಣೆ ಸಹಿತ ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಗಾಯಿತ್ರಿ ನಾವಡರವರ ಸ್ತ್ರೀವಾದಿ ಜಾನಪದ (೨೦೦೧)

ಎಂಬ ಕೃತಿಯಲ್ಲಿ ಬೈಗುಳಗಳು ಸಾಮಾನ್ಯವಾಗಿ ಲಿಂಗ ಮತ್ತು ಲಿಂಗಪ್ರಭೇದದ ಸುತ್ತ ಇದ್ದು ಹೆಣ್ಣು ಗಂಡಿನ ಚಿತ್ರಣವನ್ನು ನೀಡುತ್ತವೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಲಿಂಗಪ್ರಭೇದದ ಅಧ್ಯಯನದಲ್ಲಿ ಬೈಗುಳಗಳ ಬಳಕೆ ಮುಖ್ಯವಾಗುತ್ತವೆ. ಶೋಷಕ ಸ್ಥಾನದಲ್ಲಿರುವ ಗಂಡು ಇದರ ಉತ್ಪಾದಕನಾಗಿರುವುದನ್ನು ಬೈಗುಳಗಳ ರೂಪಗಳು ಹೇಳುತ್ತವೆ. ಗಂಡನ್ನು ಬಯ್ಯುವ ಸಂದರ್ಭದಲ್ಲಿ ಅದು ಹೆಣ್ಣಿನ ಮೂಲಕವೇ ವ್ಯಕ್ತವಾಗುತ್ತದೆ ಎಂಬುವುದನ್ನು ವಿಶ್ಲೇಷಿಸಲಾಗಿದೆ.

ನಮ್ಮ ಕನ್ನಡ ಸಂಚಿಕೆ ೬೭

ಇದರಲ್ಲಿ ಪ್ರಕಟವಾದ ಭಾಷಾ ಬಳಕೆಯ ಲಿಂಗಸಂಬಂಧಿ ಆಯಾಮಗಳು: ಅನೌಪಚಾರಿಕ ನೆಲೆಯಲ್ಲಿ ಎಂಬ ಸಾಂಬಮೂರ್ತಿಯವರ ಲೇಖನವನ್ನು ಗಮನಿಸುವುದಾದರೆ, ಬೈಗುಳಗಳಲ್ಲಿ ಹೆಣ್ಣನ್ನು ಸೂಚಿಸಿ ಬಯ್ಯುವ ಪದಗಳೇ ಹೆಚ್ಚಾಗಿವೆ. ಹೆಣ್ಣನ್ನು ಸೂಚಿಸಿ ಬಯ್ಯುವ ಪದಗಳು ಇರುವಂತೆ ಗಂಡಸನ್ನು ಸೂಚಿಸಿ ಬಯ್ಯುವ ಪದಗಳಿಲ್ಲ. ಬೈಗುಳಗಳಲ್ಲಿನ ಹೆಣ್ಣಿನ ಬಳಕೆಯನ್ನು ನೋಡಿದಾಗ ಸಮಾಜದಲ್ಲಿ ಹೆಣ್ಣನ್ನು ಕುರಿತು ಇರುವ ಕೀಳು ಮನೋಭಾವ ವ್ಯಕ್ತವಾಗುತ್ತದೆ. ಎಂದು ಈ ಲೇಖನದಲ್ಲಿ ಬೈಗುಳಗಳಲ್ಲಿ ಲಿಂಗ ತಾರತಮ್ಯವನ್ನು ಗುರುತಿಸಿದ್ದಾರೆ. ಇಂಗ್ಲಿಷಿನಲ್ಲಿರುವ ಕೆಲವು ಬೈಗುಳದ ಪದಗಳು ಹೆಂಗಸಿಗೆ ಮಾತ್ರ ಅನ್ವಯವಾಗುತ್ತದೆ ಎಂದು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ನಾಗರಾಜ ಸಿ. ಪಿ. ಅವರ 'ಕನ್ನಡ ಬಯ್ಗುಳಗಳ ಅಧ್ಯಯನ' ಎಂಬ ಎಂ, ಫಿಲ್ ಸಂಪ್ರಬಂಧದಲ್ಲಿ (೧೯೫೭)

ಸಮಾಜದ ಎಲ್ಲಾ ಕಡೆಗಳಲ್ಲೂ ಬೈಗುಳದ ನುಡಿಗಳನ್ನು ಸಾಮಾನ್ಯವಾಗಿ ನಾವು ಕೇಳುತ್ತಿರುತ್ತೇವೆ. ಯಾರು – ಯಾರಿಗೆ ಬಯ್ಯುತ್ತಾರೆ ಎಂಬುವುದನ್ನಾಗಲಿ ಅಥವಾ ಯಾವ – ಯಾವ ಸಂದರ್ಭದಲ್ಲಿ ಬಯ್ಯುತ್ತಾರೆ ಎಂಬುದನ್ನಾಗಲಿ ಪಟ್ಟಿ ಮಾಡುವುದಕ್ಕೆ ಸಾಧ್ಯವಿಲ್ಲ. ವ್ಯಕ್ತಿಗಳ ನಡುವೆ ಸಾವಿರಾರು ನುಡಿಗಳು ಹಲವಾರು ಬಗೆಗಳಲ್ಲಿ ಪರಸ್ಪರ ವಿನಿಮಯಗೊಳ್ಳುವಂತೆ ಬೈಗುಳದ ಪದಗಳು ಕೂಡ ಸಂಭಾಷಣೆಯ ಮಧ್ಯ ನಿರಂತರವಾಗಿ ವಿನಿಮಯಗೊಳ್ಳುತ್ತಿರುತ್ತವೆ. ಆದ್ದರಿಂದ ಈ ಬೈಗುಳದ ಪದಗಳು ಮೂಡಿಬರಲು ಕಾರಣವಾಗುವಂತಹ ಮಾನಸಿಕ ಮತ್ತು ಸಾಮಾಜಿಕ ಪ್ರೇರಣೆಗಳು ಯಾವುವು ಎಂಬುವುದನ್ನು ವಿಶ್ಲೇಷಣೆ ಮಾಡುವುದು ಸೂಕ್ತವಾದ ವಿಧಾನವಾಗಿದೆ ಎಂದು ಹೇಳುತ್ತಾರೆ.

ಬೈಗುಳಗಳನ್ನು ಸಂಖ್ಯೆಯಲ್ಲಿ ಹೆಚ್ಚಾಗಿ ಮತ್ತು ಅರ್ಥದಲ್ಲಿ ತೀಕ್ಷ್ಣವಾಗಿ ತಮ್ಮ ನಿತ್ಯ ಜೀವನದ ಸಂಭಾಷಣೆಗಳಲ್ಲಿ ಪರಸ್ಪರ ಬಳಸುವವರು ಯಾರು ಎಂದರೆ ಸಮಾಜಿಕವಾಗಿ ಮತ್ತು ಆರ್ಥಿಕವಾಗಿ ಕೆಳಕ್ಕೆ ತುಳಿಯಲ್ಪಟ್ಟಿರುವ ಜನವರ್ಗ. ಅನಕ್ಷರತೆ ಮತ್ತು ಬಡತನದಿಂದ

ಕೂಡಿರುವ ಯಾವುದೇ ಪರಿಸರದಲ್ಲಿ ವಾಸಮಾಡುತ್ತಿರುವ ಜನರ ನಿತ್ಯ ಸಂಭಾಷಣೆಯಲ್ಲಿ ಬೈಗುಳದ ಪಾತ್ರ ಅಧಿಕವಾಗಿರುತ್ತದೆ. ಎಂದು ಹೇಳುತ್ತಾ ಯಾವುದೇ ಜಾತಿಯ ಜನರು ವಿದ್ಯಾವಂತರಾಗುತ್ತಾ ಮತ್ತು ಸಂಪತ್ತನ್ನು ಹೊಂದಿ ತಮ್ಮ ಸಮಾಜಿಕ ಅಂತಸ್ತನ್ನು ಹೆಚ್ಚಿಸಿಕೊಂಡಂತೆಲ್ಲಾ ಅವರ ಸಂಭಾಷಣೆಯಲ್ಲಿ ಬೈಗುಳದ ಬಳಕೆ ಕಡಿಮೆಯಾಗುತ್ತಾ ಬರುತ್ತದೆ. ಇದಕ್ಕೆ ಪ್ರಮುಖವಾದ ಎರಡು ಕಾರಣಗಳನ್ನು ಕೋಡುತ್ತಾರೆ.

೧) ಬೈಗುಳದ ಪ್ರಯೋಗದಿಂದ ತಮ್ಮ ಘನತೆ ಗೌರವಗಳು ಹಾಳಾಗಿ ತಮಗಿರುವ ಸಾಮಾಜಿಕ ಗೌರವ ಕುಗ್ಗುವುದೆಂಬ ಭೀತಿ

೨) ಬೈಗುಳದ ಶಬ್ದಗಳನ್ನು ಆಧಿಕವಾಗಿ ಬಳಸುವಂತ ಜನರ ಸಂಪರ್ಕದಿಂದ ದೂರ ಸರಿಯುವುದು.

ಬೈಗುಳಗಳಲ್ಲಿ ಅರ್ಥ ಪ್ರಧಾನವಾಗಿರುತ್ತದೆ ಮತ್ತು ಯಾವುದೇ ಸಂದರ್ಭದಲ್ಲಾಗಲಿ ಬೈಗುಳದ ಅರ್ಥ ಒಂದೇ ರೀತಿಯಿರುತ್ತದೆ ಎಂದು ಅಧ್ಯಯನದ ದೃಷ್ಟಿಯಿಂದ ಬೈಗುಳದ ಪ್ರಭೇದಗಳನ್ನು ಮೂರು ರೀತಿಯಲ್ಲಿ ವರ್ಗೀಕರಿಸಿಕೊಂಡು ಚರ್ಚಿಸುತ್ತಾರೆ.

೧. ಸರ್ವ ಸಾಧಾರಣಾ ಬೈಗುಳಗಳು

೨. ಲೈಂಗಿಕ ಬೈಗುಳಗಳು

೩. ಶಾಪರೂಪದ ಬೈಗುಳಗಳು

ಬೈಗುಳಗಳ ಬಗೆಗೆ ಜನರು ಹೊಂದಿರುವಂತ ವಿವಿಧ ಬಗೆಯ ಭಾವನೆಗಳು, ನಂಬಿಕೆಗಳು ಮತ್ತು ಸಂಪ್ರದಾಯಗಳು ಅತ್ಯಂತ ವಿಲಕ್ಷಣವಾಗಿವೆ. ಮನುಷ್ಯನ ಮನಸ್ಸಿನ ತೀವ್ರವಾದ ಸಂವೇದನೆಯಿಂದ ಅಭಿವ್ಯಕ್ತಗೊಳ್ಳುವ ಬೈಗುಳದ ನುಡಿಗಳಲ್ಲಿ ಕಾವ್ಯಾಂಶದ ಲಕ್ಷಣಗಳನ್ನು ಕಾಣಬಹುದು. ಬೈಗುಳಗಳಲ್ಲಿ ಕಂಡುಬರುವ ಉಪಮೆಗಳು, ರೂಪಕಗಳು ಮತ್ತು ಸಂಕೇತಗಳನ್ನು ವಿಶ್ಲೇಷಣೆ ಮಾಡುತ್ತಾರೆ.

ಬೈಗುಳದ ಕೆಲವು ಶಬ್ದಗಳು ನಮ್ಮ ಸಮಾಜದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದ್ದು ಈಗ ಕೈಬಿಟ್ಟು ಹೋಗುತ್ತಿರುವ ಸಾಂಸ್ಕೃತಿಕ ಕ್ರಿಯೆಗಳ ಬಗ್ಗೆ ಬೆಳಕು ಚಲ್ಲುತ್ತವೆ. ಮತ್ತೆ ಕೆಲವು ಶಬ್ದಗಳು ನಮ್ಮ ಸಮಾಜದಲ್ಲಿ ಈಗಲೂ ನಡೆಯುತ್ತಿರುವ ಕೆಲವು ಆಚರಣೆಗಳ ಬಗ್ಗೆ ಮಾಹಿತಿ ನೀಡುತ್ತವೆ. ಅಂತಹ ಕೆಲವು ಶಬ್ದಗಳನ್ನು ಕುರಿತು ವಿಶ್ಲೇಷಣೆ ಮಾಡುವುದು ಪ್ರಮುಖ ಗುರಿಯಾಗಿದೆ ಎಂದು ಹೇಳುತ್ತಾರೆ.

ವ್ಯಕ್ತಿಯ 'ವೈಯಕ್ತಿಕ' ಮತ್ತು ಸಮುದಾಯದ 'ಸಮೂಹಿಕ' ಮನಸ್ಸಿನ ಕ್ರಿಯೆಗಳನ್ನು ಆಳವಾಗಿ ಅಧ್ಯಯನ ಮಾಡುವುದರ ಮೂಲಕ ನಂಬಿಕೆಗಳ ಮತ್ತು ಸಂಪ್ರದಾಯಗಳ ಬಗೆಗಿನ ಹಿನ್ನೆಲೆಯನ್ನು ದೇವತೆಗಳ ಆರಾಧನೆಯಲ್ಲಿ ಬಳಸುವ ಬೈಗುಳದ ಪಾತ್ರವನ್ನು ವಿಶ್ಲೇಷಣೆ ಮಾಡುತ್ತಾ ಬೈಗುಳದ ಶಬ್ದಗಳು ಅಭಿವ್ಯಕ್ತಗೊಳ್ಳುವುದರ ಮೂಲಕ ಮಳೆ ಬರುತ್ತದೆ.

ದೈವಗಳ ಜೊತೆ ಭಯದಿಂದ ನಡೆದುಕೊಳ್ಳಬೇಕೆ ಹೊರತು ಸಲಿಗೆಯಿಂದ ಅಲ್ಲ. ಆದರೆ ಕರಿಯವ್ವ, ಮಾರಿಯಂತಹ ಕೆಳದೈವಗಳನ್ನು ಬೈದರೆ ಅವಕ್ಕೆ ತೃಪ್ತಿ. ಶಿವ, ರಾಮ, ಕೃಷ್ಣ, ಹನುಮಂತರಿಗೆ ಸಾತ್ವಿಕ ಆಹಾರ, ಸಾತ್ವಿಕ ಪೂಜಾ ವಿಧಾನಗಳು ಮತ್ತು ಎಲ್ಲವೂ ವಿಧಿವತ್ತಾಗಿ ನಡೆಯಬೇಕು. ಮಂತ್ರ ಪಠಣವಾಗಬೇಕು. ಆದರೆ ಕರಿಯವ್ವ, ಮಾರೆವ್ವರಿಗೆ ಇದು ಬೇಕಿಲ್ಲ. ಅದಕ್ಕೆ ತೃಪ್ತಿಯಾಗುವುದು ನಿಯಮಗಳನ್ನು ಮೀರಿದಾಗಲೇ. ಕುರಿ, ಕೋಣ ಕಡಿಯಬೇಕು. ಪೂಜಾ ವಿಧಾನಗಳಲ್ಲಿ ಹೆಚ್ಚು ಕಡಿಮೆಯಾದರೂ ಚಿಂತೆಯಿಲ್ಲ ಇವಕ್ಕೆ ಮಂತ್ರ ಪಠಣವನ್ನು ಎಲ್ಲಿಂದ ತರಬೇಕು? ಬೈಗುಳಗಳೇ ಇವಕ್ಕೆ ಮಂತ್ರ ಪಠಣ. ಈ ದೇವತೆಗಳಿಗೆ ಅತ್ಯಂತ ಹೊಲಸಾದ ಭಾಷೆಯಲ್ಲಿ ಬೈದು ಹಾಡುತ್ತಿದ್ದರೆ ಖುಷಿಯಾಗುತ್ತದೆ ಎಂದು ವಿವರಿಸಿ ಗ್ರಾಮದೇವತೆಗಳನ್ನು ಆರಾಧನಾ ಪೂರ್ವಕವಾಗಿ ಬಯ್ಯುವುದರ ಹಿನ್ನಲೆಯನ್ನು ಕುರಿತು ಅಧ್ಯಯನದ ಅಗತ್ಯವನ್ನು ಸೂಚಿಸಿದ್ದಾರೆ ಎಂದು ಡಾ ಎಂ. ಚಿದಾನಂದಾ ಮೂರ್ತಿ ಅವರು ಬರೆದ ಲೇಖನದಲ್ಲಿನ ವಿಷಯವನ್ನು ಕುರಿತು ಈ ಪ್ರಬಂಧದಲ್ಲಿ ಪ್ರಸ್ತಾಪಿಸಿದ್ದಾರೆ.

ಬೈಗುಳದ ಪದಗಳನ್ನು ಭಾಷಾ ವಿಜ್ಞಾನದ ಹಿನ್ನಲೆಯಲ್ಲಿ ಅಧ್ಯಯನ ಮಾಡುವುದರಿಂದ ಕನ್ನಡ ಬೈಗುಳಗಳಲ್ಲಿ ಸಮಾವೇಶಗೊಂಡಿರುವ ಅನ್ಯ ಭಾಷಾ ಶಬ್ದಗಳು ಯಾವುವು ಎಂಬುದನ್ನು ಗುರುತಿಸುವುದು, ಕಾಲದಿಂದ ಕಾಲಕ್ಕೆ ಕೆಲವು ಶಬ್ದಗಳಲ್ಲಿ ಕಂಡುಬರುವ ಧ್ವನಿ ಮತ್ತು ಅರ್ಥ ವ್ಯತ್ಯಾಸವನ್ನು ಹಾಗೂ ಇನ್ನಿತರ ಲಕ್ಷಣಗಳನ್ನು ವಿಶ್ಲೇಷಣೆ ಮಾಡಬಹುದು ಎಂದು ಸೂಚಿಸುತ್ತಾರೆ.

ನಾವಲಗಿ ಸಿ.ಕೆ. ಅವರ 'ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳ ಅಧ್ಯಯನ' (೨೦೦೦)

ಎಂಬ ಕೃತಿಯಲ್ಲಿ ಭಾಷಿಕ ಅಂಶಗಳು ಎಂಬ ಅಧ್ಯಾಯದಲ್ಲಿ ವಚನ ಸಾಹಿತ್ಯದಲ್ಲಿ ಬೈಗುಳಗಳ ನುಡಿ ಹೇಗೆ ಇದೆ ಎಂಬುದನ್ನು ಕುರಿತು ತಿಳಿಸಿದ್ದಾರೆ. ನುಡಿ ಕಿಡಿಗಳೇ ಅಥವಾ ಕಿಡಿಕಾರುವ ನುಡಿಗಟ್ಟುಗಳೇ ಬೈಗುಳ. ವ್ಯಕ್ತಿಯ ದೈಹಿಕ – ಮಾನಸಿಕ ಯಾತನಾನುಭವಗಳ ಅಭಿವ್ಯಕ್ತಿಯೇ ಬೈಗುಳಗಳು. ಮಾನಸಿಕ ನೋವನ್ನುಂಟು ಮಾಡುವುದೇ ಇವುಗಳ ಸಾಮಾನ್ಯ ಉದ್ದೇಶ. ಮೈ ಮೇಲಿನ ಗಾಯ ಆರಬಹುದು, ಮಾನಸಿಕಗಾಯ ಆರುವದಿಲ್ಲ ಎಂಬ ಗಾದೆ ದೈಹಿಕ ನೋವಿಗಿಂತಲೂ ಮಾನಸಿಕ ನೋವು ಏನೆಂಬುದನ್ನು ತಿಳಿಸುತ್ತದೆ. ಸಾಮಾನ್ಯವಾಗಿ ಕೆಟ್ಟದಾಗಿ, ಒರಟಾಗಿ, ನಿಷ್ಠುರವಾಗಿ ಆಡುವ ಮಾತುಗಳೆಲ್ಲವೂ ಬೈಗುಳ ಎನಿಸಿಕೊಳ್ಳುತ್ತಿವೆ. ಕೆಟ್ಟದ್ದನ್ನಾಡಿದರೆ ಕೆಂಡದಂತೆ ಕೋಪ ಎಂಬ ನಾಣ್ಣುಡಿಯಲ್ಲಿ ಬೈಯುವುದರಿಂದ ಕೋಪ, ತಾಪ, ಈರ್ಷೆ, ವೈಷಮ್ಯಗಳೇ ಹೆಚ್ಚುತ್ತವೆಂದು ಹೇಳಲಾಗಿದೆ ಎನ್ನುತ್ತಾರೆ.

ಜನರ ಗಮನವನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಶಕ್ತಿ ಬೈಗುಳಗಳಿಗಿದೆ. ಈ ಶಕ್ತಿ ಈ ಪ್ರಮಾಣದಲ್ಲಿ ಶಬ್ದ ಭಂಡಾರದ ಇತರ ಯಾವುದೇ ಭಾಗಕ್ಕೂ ಇರುವಂತೆ ತೋರುವುದಿಲ್ಲ.

ಬೈಗುಳಗಳು ಅಲ್ಲಿ ನೇರವಾಗಿ ಭಾಗಿಯಾಗುವ ಇಬ್ಬರು ಅಥವಾ ಹಲವರಿಂದ ತೀವ್ರ ತಕ್ಷಣದ ಪ್ರತಿಕ್ರಿಯೆಯನ್ನುಂಟು ಮಾಡುತ್ತವೆ. ವ್ಯಕ್ತಿ ಅನೇಕ ಸಂದರ್ಭಗಳಲ್ಲಿ ಬೈಯುವುದುಂಟು, ಬೈಯಿಸಿಕೊಳ್ಳುವುದುಂಟು. ಒಮ್ಮೆ ಎದುರಿಗೆ ಬೈದರೆ ಬೈಯಿಸಿಕೊಂಡರೆ ಇನ್ನೊಮ್ಮೆ ಹಿಂದೆ ಬೈಯುತ್ತಾನೆ ಬೈಯಿಸಿಕೊಳ್ಳುತ್ತಾನೆ. ಮಾನವ ಬದುಕಿನಲ್ಲಿ ಬೈಯ್ಯುವುದು ಮತ್ತು ಬೈಯಿಸಿಕೊಳ್ಳುವುದು ತೀರ ಸಾಮಾನ್ಯ. ಅವು ಒಂದು ರೀತಿಯಲ್ಲಿ ಪೆಟ್ರೋಲ್ ಇದ್ದಂತೆ. ಶುದ್ಧಿ ಮಾಡುವ, ಯಂತ್ರಗಳನ್ನು ಓಡಿಸುವ, ಬೆಂಕಿ ಹತ್ತಿ ಎಲ್ಲವನ್ನು ಕ್ಷಣದಲ್ಲಿ ಸುಡುವ ಶಕ್ತಿಗಳು ಎರಡಕ್ಕೂ ಸಮಾನ ಎಂದು ಹೇಳುತ್ತಾರೆ.

ನಮ್ಮ ಗ್ರಾಮೀಣ ಪ್ರದೇಶದಲ್ಲಿ ಬಳಕೆಯಲ್ಲಿರುವ ಸಹಸ್ರಾರು ಬೈಗುಳಗಳು ವಚನ ಕಾಲದಲ್ಲಿಯೂ ರೂಢಿಯಲ್ಲಿದ್ದವು. ಅಂದಿನ ಪರಿಸರದಲ್ಲಿ ಬಳಕೆಯಲ್ಲಿರುವ ಹಲವಾರು ಬಯ್ಗುಳಗಳನ್ನು ಎಲ್ಲಾ ವಚನಕಾರರು ತಮ್ಮ ವಚನಗಳಲ್ಲಿ ಪ್ರಯೋಗಿಸಿದ್ದಾರೆ. ವಚನಗಳಲ್ಲಿ ಅಭಿವ್ಯಕ್ತಗೊಂಡ ಬಯ್ಗುಳಗಳು ಅನಂತ, ಅಸಂಖ್ಯೆ. ಅವುಗಳಲ್ಲಿ ಹೆಚ್ಚು ರೂಢಿಯಲ್ಲಿರುವ ಕೆಲವನ್ನು ಮಾತ್ರ ಆಯ್ದು ವಿವರಿಸಿದ್ದಾರೆ. ಅಧ್ಯಯನದ ದೃಷ್ಟಿಯಿಂದ ಬೈಗುಳಗಳನ್ನು ಚಿದಾನಂದಮೂರ್ತಿಯವರ ಬೈಗುಳದ ವರ್ಗೀಕರಣವನ್ನೇ ಆಧರಸಿ ಪ್ರಮುಖವಾಗಿ ನಾಲ್ಕು ಪ್ರಭೇದಗಳನ್ನಾಗಿ ಮಾಡಿ ಚರ್ಚಿಸಿದ್ದಾರೆ.

೧. ಅನೈತಿಕತೆಗೆ ಸಂಬಂಧಿಸಿದ ಬೈಗುಳಗಳು

೨. ವ್ಯಕ್ತಿಯ ಶಾರೀರಿಕ ಮತ್ತು ಬೌದ್ಧಿಕ ದೋಷಗಳಿಗೆ ಸಂಬಂಧಿಸಿದ ಬೈಗುಳಗಳು

೩. ವ್ಯಕ್ತಿಯ ಕುಲ, ಜಾತಿ, ವರ್ಗ, ವ್ಯಕ್ತಿಗಳಿಗೆ ಸಂಬಂಧಿಸಿದ ಬೈಗುಳಗಳು

೪. ಇತರ ಬೈಗುಳಗಳು

ವಚನಗಳಲ್ಲಿ ಉಕ್ತವಾದ ಬೈಗುಳಗಳು ಹೆಚ್ಚು ಕಡಿಮೆ ಈಗಲೂ ಬಳಕೆಯಲ್ಲಿವೆ. ಸಮಾಜದ ಲೋಪ ದೋಷಗಳನ್ನು ಟೀಕಿಸಿ, ಬಯಲಿಗೆಳೆಯುವಾಗ ಸಹಜವಾಗಿ ಬಯ್ಗುಳಗಳು ವಚನಕಾರರ ನಾಲಿಗೆಯಿಂದ ಹೊರಹೊಮ್ಮಿವೆ. ಬೈಗುಳಗಳ ಮೂಲಕ ತಮ್ಮ ಭಾವನೆಗಳ ಅಭಿವ್ಯಕ್ತಿಯಾದ ಭಾಷೆಗೆ ಮೊನಚನ್ನು, ಜಿಗಟನ್ನು ತಂದುಕೊಂಡಿದ್ದಾರೆ. ಸಾಮಾನ್ಯರಲ್ಲಿ ಜನಜನಿತವಾದ ಬೈಗುಳಗಳನ್ನು ತಮ್ಮ ವಚನಗಳಲ್ಲಿ ಪ್ರಯೋಗಿಸಿದ್ದಾರೆ. ಇವುಗಳ ಮೂಲಕವೇ ಶರಣರು ತಮ್ಮ ಅಭಿವ್ಯಕ್ತಿ ಮಾಧ್ಯಮವಾದ ವಚನ ಭಾಷೆಗೆ ಕ್ರಾಂತಿಧ್ವನಿಯನ್ನು ತಂದುಕೊಂಡಿದ್ದಾರೆ. ಸಮಾಜ ಸುಧಾರಣೆಗಾಗಿ ವಚನಗಳಲ್ಲಿ ಬೈಗುಳಗಳನ್ನು ಸೇರಿಸಿಕೊಳ್ಳಲು ಅವರು ಮುಂದಾದುದು ಗಮನಾರ್ಹ ವಿಷಯ. ವಚನಕಾರರ ಭಾಷಾಕ್ರಾಂತಿಗೆ ಬೈಗುಳಗಳೂ ಬಹುಮಟ್ಟಿಗೆ ಕಾರಣವಾದುದನ್ನು ಮರೆಯುವಂತಿಲ್ಲ ಎಂದು ಹೇಳುತ್ತಾರೆ.

ಗಾಯತ್ರಿ ನಾವಡ ಅವರ 'ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು' (೧೯೯೯)

ಎಂಬ ಕೃತಿಯಲ್ಲಿ ಸ್ತ್ರೀವಾದಿ ಜಾನಪದ ಎಂಬ ಅಧ್ಯಾಯದಲ್ಲಿ ಜಾನಪದದಲ್ಲಿ ಲಿಂಗವಿವಕ್ಷೆಯನ್ನು ವಿವರಿಸುತ್ತಾ ಲಿಂಗಪ್ರಭೇದದ ಅಧ್ಯಯನದಲ್ಲಿ ಬೈಗುಳಗಳು ಬಹಳ

ಮುಖ್ಯವಾಗುತ್ತವೆ. ಶೋಷಕ ಸ್ಥಾನದಲ್ಲಿರುವ ಗಂಡು ಇದರ ಉತ್ಪಾದಕನಾಗಿರುವುದನ್ನು ಬೈಗುಳಗಳ ರೂಪಾವಳಿಗಳು ಹೇಳುತ್ತವೆ. ಗಂಡನ್ನು ಬೈಯುವ ಸಂದರ್ಭದಲ್ಲೂ ಅದು ಹೆಣ್ಣಿನ ಮೂಲಕವೇ ವ್ಯಕ್ತಗೊಳ್ಳುತ್ತದೆ ಎಂದು ಉದಾಹರಣೆ ಸಹಿತ ತಿಳಿಸಿದ್ದಾರೆ.

ಉದಾ:

ಮುಂಡೇ ಮಗ

ನಿನ್ನ ಹೆಂಡತಿ ರಂಡೆಯಾಗಲಿ

ನಿನ್ನ ಅಜ್ಜಿ ಹೆಣ್ಣು ಹೆರಲಿ

ನಿನ್ನ ಹೆಂಡತಿ ವಾಲಿಕಳಿಯ ಇತ್ಯಾದಿಗಳು ನಿರಪರಾಧಿ ಹೆಣ್ಣಿನ ನಿಕೃಷ್ಟತೆಯನ್ನು ತೆರೆದಿಡುತ್ತವೆ ಎನ್ನುತ್ತಾರೆ.

ಬೈಗುಳಗಳಲ್ಲಿ ಅಷ್ಟೇ ಅಲ್ಲದೆ ಗಾದೆಗಳಲ್ಲಿ ಹೆಣ್ಣನ್ನು ಯಾವ ರೀತಿಯಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಕಟ್ಟಿಕೊಟ್ಟಿದೆ ಎಂಬುದನ್ನು ಸಹ ಇಲ್ಲಿ ಹೇಳಿದ್ದಾರೆ. ಗಂಡಿನ ಅಧಿಕಾರ ಪ್ರವೃತ್ತಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ನಿರಂತರ ಹೋರಾಡುತ್ತಲೇ ಬಂದಿದೆ ಅದಕ್ಕಾಗಿ ಮೌಲ್ಯದ ಹೆಸರಿನಲ್ಲಿ ಹೆಣ್ಣಿನ ಕೆಲವೊಂದು ಗುಣ, ಪಾತ್ರಗಳನ್ನು ನಿರ್ದೇಶಿಸಿ ಅವನ್ನು ಸಹಜ ಎಂದು ಭ್ರಮಾತ್ಮೀಕರಣ ಗೊಳಿಸಲಾಗಿದೆ. ಗಾದೆಗಳು ಇಂತಹ ಸಾಮಾಜಿಕ ನೀತಿ – ನಿಯಮಗಳನ್ನು ಜಾರಿಗೊಳಿಸುವಲ್ಲಿ ಮತ್ತು ಪುರಷಾಧಿಕಾರದ ಸಾತತ್ಯಕ್ಕಾಗಿ ದುಡಿಯುತ್ತಿರುತ್ತವೆ. ಹೀಗಾಗಿ ಇವು ಪ್ರಕಟಿಸುವ ನಿಲುವು ಇಂತಹ ಮೌಲ್ಯಗಳನ್ನು ಸ್ಥಿರೀಕರಿಸುವುದೇ ಆಗಿದೆ.

ಉದಾ:

ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ

ಗಂಡು ಕೂತು ಕೆಟ್ಟ, ಹೆಣ್ಣು ತಿರುಗಿ ಕೆಟ್ಟಳು

ಕಪ್ಪೆ ಸೊಕ್ಕಿದ್ದರೆ ಹಳ್ಳದಲ್ಲಿ ನಿಲ್ಲದು, ಹೆಣ್ಣು ಸೊಕ್ಕಿದ್ದರೆ ಮನೆಯಲ್ಲಿ ನಿಲ್ಲದು

ಬಸವರಾಜ ಪೋಲೀಸ್ ಪಾಟೀಲ ಅವರ 'ಹೈದ್ರಾಬಾದ್ ಕರ್ನಾಟಕ ಜನಪದ ಸಾಹಿತ್ಯ.' (೨೦೦೧)

ಎಂಬ ಈ ಕೃತಿಯಲ್ಲಿ ಹಂತಿಯ ಹಾಡುಗಳು ಎಂಬ ಅಧ್ಯಾಯದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಹಂತಿ ಹಾಡುಗಳಲ್ಲಿ ಬೈಗುಳಗಳು ಯಾವ ರೀತಿಯಲ್ಲಿ ದೊರೆಯುತ್ತವೆ ಎಂಬುವುದನ್ನು ವಿವರಿಸಿದ್ದಾರೆ. ಮೇಲುಗೈ ಕೆಳಗೈಯಾದಾಗ ವಾದ – ಪ್ರತಿವಾದ ತಲೆದೋರಿದಾಗ ಬೈಗುಳ ಪದಗಳು ಹೊರಬೀಳುತ್ತವೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಹಂತಿಯ ಹಾಡುಗಳಲ್ಲಿ ಗ್ರಾಮ್ಯ ಬೈಗುಳಗಳು ವಿಪುಲವಾಗಿ ದೊರೆಯುತ್ತವೆ.

ಉದಾ:

ಒಲಗುಣಿ ಮರ್ರ್ಯಾಂವ ವಾಂಥಾ ತಗಿಯಲುಬ್ಯಾಡ
ಗುದ್ದಿದರ ಗೂದಿ ಬಿದ್ದೀತೊ
ಸದ್ದಿಲ್ದೆ ಜಡೀತಿನಿ ಗೂಟಾ
ಮುಂದಕ ಬರಬ್ಯಾಡ ಖತನಾಟೋ
ಪಿಸರಗುಂಡ್ಯಾವ ನನಜಾಣೊ

ಇಂತಹ ಸಾವಿರಾರು ಬೈಗುಳ ಪದಗಳು ಬಳಕೆಯಾಗುತ್ತವೆ. ಗ್ರಾಮ್ಯ ಬೈಗುಳಗಳ ಬನಿಯಲ್ಲಿ ಅವರ ಮಾತಿನ ತೀವ್ರತೆ, ಗಡಸುತನ, ಎದೆಗಾರಿಕೆ ಎದ್ದು ಕಾಣುತ್ತದೆ ಎಂದು ಹೇಳುತ್ತಾರೆ.

ಶ್ರೀನಿವಾಸ ಬೇಂದ್ರೆ ಅವರ 'ಬೀದರ ಕನ್ನಡ ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರಭೇದಗಳು' (೨೦೦೨)

ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಬೀದರ ಕನ್ನಡದ ಬೈಗಳು ಹಾಗೂ ಅವುಗಳು ಹುಟ್ಟುವ ಸನ್ನಿವೇಶಗಳು ಎಂಬ ಅಧ್ಯಾಯದಲ್ಲಿ ಮಾನವನು ಸೃಷ್ಟಿಯಿಂದಲೆ ಯಾವುದು ಬೇಕು ಯಾವುದು ಬೇಡ ಎಂಬುವುದನ್ನು ವಿಚಾರ ಮಾಡುತ್ತಾ ಬಂದು ಬೇಕಾದುದನ್ನು ಸ್ವೀಕರಿಸಿ ಬೇಡವಾದುದನ್ನು ಮುಖ ಗಂಟಿಕ್ಕಿ ದಬ್ಬಿ ಹಾಕುವುದು ರೂಢಿಸಿಕೊಂಡು ಬಂದಿದ್ದಾನೆ. ಹಾಗೆಯೇ ಮನುಷ್ಯ ತಪ್ಪು ಮಾಡಿದಾಗ ತಿದ್ದುವುದು, ಬೇಸರದಿಂದ ಜರೆಯುವುದು ರೂಢಿಗೆ ಬಂತು. ಜರೆಯುವುದರ ಅತ್ಯಂತ ತುತ್ತ ತುದಿಯ ಒಂದು ಹಂತಕ್ಕೆ ಬೈಗಳೆಂದು ಕರೆಯಬಹುದು. ವ್ಯಕ್ತಿಯು ರೌದ್ರಾವತಾರ ತಾಳಿ ಕೋಪದ ಕಿಡಿಯನ್ನು ತನ್ನ ಬಾಯಿಯ ಮುಖಾಂತರ ಕಾರುವ ಅವಾಚ್ಯ ಶಬ್ದಗಳೆ ಬೈಗಳಾದವು ಎನ್ನಬೇಕು ಎನ್ನುತ್ತಾರೆ.

ಶಾಸನದ ಕೊನೆ ಸಾಲುಗಳಲ್ಲಿ ಬೈಗಳು ಬರುತ್ತವೆ. ಇವು ಎಚ್ಚರಿಕೆ ಮಾತುಗಳು. ಅವುಗಳನ್ನು ಉಲ್ಲಂಘಿಸಿದವರಿಗೆ ಶಿಕ್ಷೆಯಾಗುತ್ತಿತ್ತು. ಹಿಂದಿನ ಕಾಲದಲ್ಲಿ ಬೈಗಳಿಗೆ ಬಹಳ ಹೆದರುತ್ತಿದ್ದರೆಂದು ಬೈಗಳಿಂದ ತಿಳಿಯುತ್ತದೆ. ಲೈಂಗಿಕ ಬೈಗುಳ ಹೆಚ್ಚಾಗಿರುವುದು ನಾವು ಕಾಣುತ್ತೇವೆ. ಶಾಸನಗಳಲ್ಲಿ ಬರುವ ಬೈಗಳು ಗಂಡಸರ ಬೈಗಳಾಗಿವೆ. ಶಾಸನ ಕವಿಗಳೆಲ್ಲ ಗಂಡಸರೆಯಾಗಿರುವುದು ಇದಕ್ಕೆ ಒಂದು ಕಾರಣವಾದರೆ ಇನ್ನೊಂದು ಕಾರಣ ಶಾಸನಗಳೆಲ್ಲವೂ ರಾಜಾಜ್ಞೆಗಳಾಗಿದ್ದವು ರಾಜನು ಪುರುಷನಾಗಿರುವುದರಿಂದ ಈ ರೀತಿಯ ಬೈಗಳು ಇಲ್ಲಿ ಕಾಣುತ್ತೇವೆ. ಸಾಹಿತ್ಯದಲ್ಲಿ ಗಂಡಸರ ಬೈಗಳು ಹೆಂಗಸರ ಬೈಗುಳಗಳನ್ನು ನಾವು ಕಾಣುತ್ತೇವೆ. ಶಾಸನಗಳು ಹಾಗೂ ಸಾಹಿತ್ಯವಷ್ಟೇ ಬೈಗಳಿಗೆ ಉದಾಹರಣೆಗಳಲ್ಲ. ಅದಕ್ಕೂ ಎಷ್ಟೋ ಪಟ್ಟು ಬೈಗುಳಗಳು ಜನಸಾಮಾನ್ಯರಲ್ಲಿ ನಾವು ದಿನನಿತ್ಯ ಕಾಣುತ್ತೇವೆ ಎಂದು ವಿವರಿಸಿದ್ದಾರೆ.

ಬೀದರ ಕನ್ನಡದಲ್ಲಿ ಗಂಡ – ಹೆಂಡತಿಗೆ ಬೈಯುವುದು ಸಾಮಾನ್ಯ. ಎಷ್ಟೋ ಅವಾಚ್ಯವಾಗಿಯೂ ಬೈಯಬಹುದು. ಆದರೆ ಹೆಂಡತಿಯೊಡನೆ ಜಗಳವಾಡುವಾಗ ಆಕೆಯ ತಂಗಿಗೂ, ಅಕ್ಕಳಿಗೂ, ತಾಯಿಗೂ ಬೈಯುವುದರಿಂದ ಆಕೆಗೆ ಹೆಚ್ಚು ಕೋಪ ಬರುತ್ತದೆ. ಅದಕ್ಕೆ ಆಕೆಯ ಪ್ರತಿಕ್ರಿಯೆ ಗಂಡನ ತಂಗಿ, ತಾಯಿಗೂ ಬೈಯುವುದು ಸಹಜ. ಸ್ವತಃ ಆಕೆಯನ್ನು ಉದ್ದೇಶಿಸಿ ಬೈದರೆ ಯಾವ ತೊಂದರೆಯಾಗುವುದಿಲ್ಲ. ಸಹೋದರಿಯನ್ನು ಉದ್ದೇಶಿಸಿ ಬೈದರೆ ಜಗಳ ಬಹಳವಾಗುತ್ತದೆ. ಪರರ ಹೆಂಡತಿಯರನ್ನು ಉದ್ದೇಶಿಸಿ ಬೈದರೆ ಕಾದಾಟ ಹೊದೆಪೆಟ್ಟು ಆಗೇ ಆಗುತ್ತವೆ. ಕೆಲವೊಮ್ಮೆ ಜೀವ ಹೊರಟು ಹೋಗುವುದು ಸಹಜ ಅದಕ್ಕಾಗಿ ಎಷ್ಟೇ ಜಗಳವಾಡಿದರೂ ಎದುರಾಳಿಯ ಹೆಂಡತಿಯನ್ನು ಉದ್ದೇಶಿಸಿ ಬೈಯುವುದು ಬಹಳ ಕಡಿಮೆ ಎಂದು ಚರ್ಚಿಸುತ್ತಾರೆ.

ವಿಪ್ಲವಿಯವರ 'ತತ್ವಪದ ಸಾಹಿತ್ಯದ ಭಾಷೆ : ಒಂದು ಅಧ್ಯಯನ' ಎಂಬ ಪಿ.ಎಚ್.ಡಿ ಮಹಾ ಪ್ರಬಂಧದಲ್ಲಿ (೨೦೧೧)

ತತ್ವಪದಕಾರರು ಬಳಸಿದ ಭಾಷೆಯ ಸ್ವರೂಪ ಎಂಬ ಅಧ್ಯಾಯದಲ್ಲಿ ತತ್ವಪದಗಳಲ್ಲಿ ಬೈಗುಳಗಳ ಬಳಕೆ ಹೇಗಿವೆ ಎಂಬುದನ್ನು ಕುರಿತು ಚರ್ಚಿಸಿದ್ದಾರೆ. ಸಾಮಾನ್ಯವಾಗಿ ಆಡುಭಾಷೆಯಲ್ಲಿ ಗಾದೆ, ಒಗಟು, ಲೋಕನೀತಿ, ಮಾತುಗಳು ಶಾಸ್ತ್ರ ಬೈಗುಳಗಳಿಗೆ ಸಂಬಂಧಿಸಿದಂತೆ ಜನರು ದಿನನಿತ್ಯದ ಬದುಕಿನಲ್ಲಿ ಸಹಜವೆಂಬಂತೆ ಬಳಸುವುದು ರೂಢಿ. ಮನುಷ್ಯ ತಪ್ಪು ಮಾಡಿದಾಗ ಅವನಿಗೆ ತಿದ್ದಿ ಬುದ್ಧಿ ಹೇಳುವ ಸಲುವಾಗಿ ಗಾದೆ, ಒಗಟು, ಲೋಕನೀತಿ, ಮಾತುಗಳು, ನಾಣ್ಣುಡಿ, ಶಾಸ್ತ್ರ, ಬೈಗುಳಗಳು ಸಮಾಜದಲ್ಲಿ ಹುಟ್ಟಿಕೊಂಡಂತೆ ಕಾಣಿಸುತ್ತವೆ. ಇಂಥ ವಿಚಾರಗಳನ್ನು ನಾವು ಬರೀ ಸಮಾಜದಲ್ಲಷ್ಟೇ ಕಾಣದೆ ಸಾಹಿತ್ಯ ಸಂದರ್ಭದಲ್ಲೂ ಗಮನಿಸಬಹುದು. ಪಂಪನಿಂದ ಇಂದಿನ ಸಾಹಿತ್ಯದವರೆಗೂ ಇಂಥ ನಾಣ್ನುಡಿ, ಲೋಕನೀತಿ ಬೈಗಳು, ಒಗಟು, ಗಾದೆಗಳು ಸಾಹಿತ್ಯ ಕೃತಿಗಳಲ್ಲಿ ಬಳಕೆಗೊಂಡಿರುವುದನ್ನು ಕಾಣಬಹುದು ಎಂದು ಹೇಳುತ್ತಾ ಇಲ್ಲಿ ತತ್ವಪದಗಳನ್ನು ಮಾತ್ರ ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಿದ್ದಾರೆ. ಹಾಗಾಗಿ ತತ್ವಪದಕಾರರು ತಮ್ಮ ಭಾಷೆಯಲ್ಲಿ ಸರ್ವೇಸಾಮಾನ್ಯವಾಗಿ ಬಳಸಿದ ಬೈಗುಳಗಳನ್ನು ಮಾತ್ರ ಇಲ್ಲಿ ವಿವೇಚಿಸಿದ್ದಾರೆ.

ತತ್ವಪದಕಾರರು ತಮ್ಮ ಪದಗಳಲ್ಲಿ ಬೈಗುಳಗಳನ್ನು ಸಂದರ್ಭೋಚಿತವಾಗಿ ಬಳಕೆ ಮಾಡಿರುವುದನ್ನು ನಾವು ಕಾಣಬಹುದು. ಈ ಬೈಗುಳಗಳು ಅವರ ಪದಗಳಲ್ಲಿ ಬಳಕೆಗೊಳ್ಳುವುದು ಹೆಣ್ಣು ಅಂಕೆ ಮೀರಿದ ಸ್ಥಿತಿಯಲ್ಲಿ. ಇಂಥ ತತ್ವಪದಗಳು ಹೆಣ್ಣು–ಗಂಡುಗಳ ಮನಸ್ಸಿನ ಚಂಚಲತೆ, ಲಾಲಸೆ, ರಸಿಕತನ, ಅನೈತಿಕತೆ, ವ್ಯಭಿಚಾರ, ಅತಿಯಾದ ಇಂದ್ರಿಯ ಬಯಕೆ ಇವುಗಳಿಗೆ ಮಿತಿ ಇರುವುದಿಲ್ಲ. ಆವೊಂದು ಘಳಿಗೆಯಲ್ಲಿ ಮನಸ್ಸು ತನ್ನ ಸ್ಥಿಮಿತತೆಯನ್ನು ಕಳೆದುಕೊಂಡಾದ ಮೇಲೆ ಪಾಶ್ಚಾತಾಪ ಪಡಬಾರದು ಎನ್ನುವುದು ಅವರ ಉದ್ದೇಶವಾಗಿದೆ. ಈ ವಿಚಾರಗಳನ್ನು ಇನ್ನಷ್ಟು ತಿಳಿದುಕೊಳ್ಳಲು ತತ್ವಪದಗಳಲ್ಲಿ ಬಳಕೆಗೊಂಡ ಬೈಗುಳಗಳನ್ನು ಗಮನಿಸಿ ಚರ್ಚಿಸಿದ್ದಾರೆ.

ಬೈಗುಳಗಳು ಸಮಾಜದಲ್ಲಿ ಮನೆಮಾಡಿಗೊಂಡಿವೆ. ಜನ ಸಮುದಾಯಗಳಲ್ಲಿ ಸುಧಾರಣೆಗೆ ತರಲು ಮತ್ತು ಅನೈತಿಕತೆಯಿಂದ ಕೂಡಿದ ಜನರನ್ನು ಮುಖ್ಯವಾಗಿರಿಸಿಕೊಂಡು ಅವರು ಮಾತಾಡುವ ಅವಾಚ್ಯ ಪದಗಳು ಮಹಿಳೆಗೆ ತೀರ ಅಸಹ್ಯವಾಗಿ ಕಾಣಿಸುತ್ತವೆ. ಮತ್ತು ಕೆಟ್ಟ ನಡೆತೆಯುಳ್ಳ ಹೆಂಗಸನ್ನು ಕಂಡು ತತ್ವಪದಕಾರರು ಅವುಗಳ ವಿಚಾರವನ್ನು ಬಹಿರಂಗವಾಗಿ ಹೇಳಿರುವುದು ವಿಶೇಷವಾಗಿ ಕಂಡುಬರುತ್ತದೆ.

ಅನ್ನಪೂರ್ಣ ಗೂಡದೂರು ಅವರ 'ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು' ಎಂಬ ಪಿ.ಎಚ್.ಡಿ ಮಹಾಪ್ರಬಂಧದಲ್ಲಿ (೨೦೧೧)

ಕಾದಂಬರಿಗಳಲ್ಲಿ ಬೈಗುಳಗಳ ಸಂಭಾಷಣೆ ಹೇಗಿವೆ ಎಂಬುದನ್ನು ಕುರಿತು ಚರ್ಚಿಸಿದ್ದಾರೆ. ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಬೈಗುಳಗಳು ಸಹಾಯಕವಾಗುತ್ತವೆ. ಇಬ್ಬರು ಸೇರಿ ಮಾತನಾಡುತ್ತಿದ್ದರೆ ಅದನ್ನು ಯಾರು ಗಮನಿಸುವುದಿಲ್ಲ ಆದರೆ ಇಬ್ಬರು ಸೇರಿ ಜಗಳವಾಡುತ್ತಿದ್ದರೆ ಒಬ್ಬರನ್ನು ಒಬ್ಬರು ಬೈಯ್ಯುತ್ತಿದ್ದರೆ ಅಲ್ಲಿ ಸಾಮಾನ್ಯವಾಗಿ ಜನರ ಗುಂಪು ಸೇರುತ್ತದೆ. ಹೀಗೆ ಬೈಗುಳಗಳಿಗೆ ಜನರನ್ನು ಮತ್ತು ಜನರ ಮನಸ್ಸನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಶಕ್ತಿಯಿದೆ. ತನಗೆ ಆಗದವರನ್ನು ದೈಹಿಕವಾಗಿ ಹಿಂಸೆ ಮಾಡುವುದು ಹೊಡೆತದ ಉದ್ದೇಶವಾದರೆ, ಬೈಗುಳದ ಉದ್ದೇಶ ತನ್ನ ಶತ್ರುವಿಗೆ ಮಾನಸಿಕವಾಗಿ ಹಿಂಸೆ ಮಾಡುವುದಾಗಿದೆ ಎಂದು ತಿಳಿಸುತ್ತಾರೆ.

ಬೈಗುಳವು ಹೊಡೆತಕ್ಕಿಂತ ಸೂಕ್ಷ್ಮವಾದುದು. ಹೊಡೆತದ ನೋವು ಮನುಷ್ಯ ಮರೆಯಬಹುದು ಆದರೆ ಬೈಗುಳದ ನೋವನ್ನು ಮರೆಯಲು ಆಗುವುದಿಲ್ಲ. ಬೈಗುಳದ ಮಾತುಗಳು ಆ ಕ್ಷಣ ಮರೆಯುವಂತಹವಲ್ಲ. ಅವು ಜೀವ ಇರುವವರೆಗೂ ನೆನಪಿರುತ್ತವೆ. ಬೈಗುಳಗಳನ್ನು ವಾಚ್ಯಾರ್ಥಕ್ಕಿಂತ ಅದರ ಸಾಂದರ್ಭಿಕ ಮತ್ತು ನಿಯೋಗಾತ್ಮಕ ಅರ್ಥಗಳೇನೆಂದು ತಿಳಿಯುವಲ್ಲಿ ಅವುಗಳ ವಿಶೇಷತೆಯಿದೆ ಎಂದು ಹೇಳುತ್ತಾರೆ.

ಯಾವುದೇ ಒಂದು ಅಶ್ಲೀಲವಾದ ಪದ ತನ್ನ ಎದುರಾಳಿಗೆ ಮಾನಸಿಕವಾಗಿ ನೋವುಂಟು ಮಾಡಲು ಅಸ್ತ್ರವಾಗಿ ಬಳಕೆಯಾದರೆ ಇನ್ನೊಂದು ಕಡೆ ಸ್ನೇಹ, ಪ್ರೀತಿ, ವಿಶ್ವಾಸ ರೂಪದಲ್ಲಿ ಅದೇ ಪದವನ್ನು ಸ್ನೇಹಿತರಿಗೆ, ಮಕ್ಕಳಿಗೆ ಅಥವಾ ತಮ್ಮ ಸಂಬಂಧಿಕರಿಗೆ ಬಳಕೆಯಾಗುವುದನ್ನು ನೋಡಬಹುದು. ಆದರೆ ಇಲ್ಲಿ ಯಾರು ಯಾರಿಗೆ ಯಾವ ಸಂದರ್ಭದಲ್ಲಿ ಬಳಸುತ್ತಾರೆ ಎಂಬುವುದು ಮುಖ್ಯವಾಗುತ್ತದೆ ಎಂಬ ಅಂಶವನ್ನು ಗಮನಿಸಬಹುದು.

ಬೈಗುಳವೂ ಕೂಡ ಸಮಾಜದ ಜನರ ಅಂತಸ್ತನ್ನು ಸೂಚಿಸುವ ಮೇಲ್ವರ್ಗ– ಕೆಳವರ್ಗ, ಗಂಡು – ಹೆಣ್ಣು, ಅಧಿಕಾರಿ – ಅಧಿಕಾರಹೀನ ಎಂಬ ಅಂಶಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ. ಎಂಬುದನ್ನು ಕಾದಂಬರಿಗಳಲ್ಲಿ ಬೈಗುಳಗಳ ಹಿನ್ನಲೆಯಲ್ಲಿ ಚರ್ಚಿಸಿದ್ದಾರೆ. ಇದನ್ನು ಎರಡು ಉಪಶೀರ್ಷಕೆಯಡಿಯಲ್ಲಿ ಚರ್ಚಿಸಿದ್ದಾರೆ. ಅವುಗಳೆಂದರೆ,

೧. ಎರಡು ಭಿನ್ನ ಸಾಮಾಜಿಕ ವರ್ಗಗಳಲ್ಲಿ ಬಳಕೆಯಾಗುವ ಬೈಗುಳಗಳು

೨. ಒಂದೇ ಸಾಮಾಜಿಕ ವರ್ಗಗಳಲ್ಲಿ ಬಳಕೆಯಾಗುವ ಬೈಗುಳಗಳು

ವಾಮನ ನಂದಾವರ ಅವರು ಸಂಪಾದಿಸಿರುವ ಪಾವಡ ಎಂಬ ಕೃತಿಯಲ್ಲಿನ (೨೦೧೦)

ಅಶೋಕ ಕೆ. ಅವರ ಒಳನಾಡಿನ ಮಡಿವಾಳರ ಸಾಮಾಜಿಕ ಪರಿಸ್ಥಿತಿ ಎಂಬ ಲೇಖನವನ್ನು ಗಮನಿಸುವುದಾದರೆ, ಮೇಲ್ವರ್ಗದವರು ಕೆಳವರ್ಗದವರನ್ನು ಬೈಗುಳದ ಮೂಲಕ ನಿಂದಿಸುವುದು. ಮೇಲ್‌ಜಾತಿಯವರು ಕೆಳಜಾತಿಯವರನ್ನು ನೇರವಾಗಿ ಜಾತಿಯನ್ನು ಇಟ್ಟುಕೊಂಡು ನಾನಾ ರೀತಿಯಲ್ಲಿ ಬೈಯುವ ಕ್ರಮವನ್ನು ಮುಖ್ಯವಾಗಿ ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಶಿಕ್ಷಕರು ಕೆಳಜಾತಿ ವಿದ್ಯಾರ್ಥಿಯರನ್ನು ಯಾವ ರೀತಿಯಲ್ಲಿ ಬೈಯುತ್ತಾರೆ, ಬೈಯುವಾಗ ಅವರ ಜಾತಿಯನ್ನು ಎತ್ತಿ ಹಿಡಿದು ಬೈದು ಅವರ ತಂದೆ – ತಾಯಿಯರನ್ನು ಬೈಯುವುದು ಮತ್ತು ಬೈಗುಳದ ಮೂಲಕ ಜಾತಿ ನಿಂದನೆಯನ್ನು ಮಾಡುವುದನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಚಂದ್ರಕಲಾ ಜಿ. ಅವರ 'ಕನ್ನಡ ಭಾಷೆ:ಲಿಂಗಸಂಬಂಧಿ ಆಯಾಮಗಳು' ಪಿಎಚ್.ಡಿ ಮಹಾಪ್ರಬಂಧದಲ್ಲಿ (೨೦೧೭)

ಕನ್ನಡ ಸಮುದಾಯದ ಭಾಷಿಕ ನೆಲೆಗಳು: ಗಂಡು ಮತ್ತು ಹೆಣ್ಣು ಎಂಬ ಅಧ್ಯಾಯದ ಉಪಶೀರ್ಷಿಕೆಯಾದ ಬೈಗುಳ: ಲಿಂಗಸಂಬಂಧಿ ನೆಲೆಗಳು ಎಂಬುದನ್ನು ಗಮನಿಸುವುದಾದರೆ,

ಸಮುದಾಯದ ಅಭಿವ್ಯಕ್ತಿ ನೆಲೆಗಳಲ್ಲಿ ಬೈಗುಳಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ ಎಂದು ಹೇಳುತ್ತಾ, ಮನಸ್ಸಿನ ಮೇಲೆ ಬೈಗುಳದಷ್ಟು ತೀವ್ರತರವಾದ ಪರಿಣಾಮವನ್ನು ಬೀರುವ ಭಾಷಿಕನೆಲೆ ಮತ್ತೊಂದು ಇಲ್ಲ ಎಂದು ಹೇಳುತ್ತಾರೆ. ಪುರುಷ ಪ್ರಧಾನ ಸಮುದಾಯದಲ್ಲಿ ಭಾಷಾ ಬಳಕೆಯ ನೆಲೆಗಳಲ್ಲಿ ಗಂಡು ಮತ್ತು ಹೆಣ್ಣಿಗೆ ಸಂಬಂಧಿಸಿದಂತೆ ಕೆಲವು ನಿಯಮ ಮತ್ತು ನಿಷೇಧಗಳಿವೆ. ಹೆಣ್ಣು ಹೀಗೆ ಭಾಷೆ ಬಳಸಬೇಕೆಂಬ ನಿಯಮವಿದೆ ಎಂದು ಹೇಳುತ್ತಾ ಇದನ್ನು ಪರಿಶೀಲಿಸುವ ಅಗತ್ಯವಿದೆ ಮತ್ತು ಎಲ್ಲ ವರ್ಗದ ಹೆಣ್ಣು ಮಕ್ಕಳಿಗೂ ಈ ನಿಯಮ ಅನ್ವಯವಾಗುತ್ತದೆಯೇ ಎಂದು ಚರ್ಚಿಸಿದ್ದಾರೆ.

ಬೈಗುಳಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡು ಅವುಗಳ ರಚನೆ ಮತ್ತು ಬಳಕೆಯ ಎರಡೂ ನೆಲೆಗಳನ್ನು ಪರಿಶೀಲಿಸಿದ್ದಾರೆ.

೧. ಮಹಿಳೆ ಕೇಂದ್ರವಾಗಿರುವ ಬೈಗುಳಗಳು

೨. ಅನೈತಿಕ ಸಂಬಂಧದ ಹಿನ್ನೆಲೆಯಲ್ಲಿ ಬಳಕೆಯಾಗುವ ಬೈಗುಳಗಳು

೩. ದೈಹಿಕ ದೌರ್ಬಲ್ಯಗಳ ಬೈಗುಳಗಳು

೪. ಅರ್ಥವಿಲ್ಲದ ರೂಢಿಗತ ನೆಲೆಯಲ್ಲಿ ಬೈಗುಳಗಳ ಬಳಕೆ

ಮಹಿಳೆ ಕೇಂದ್ರವಾಗಿರುವ ಬೈಗುಳಗಳು ಈ ಭಾಗದಲ್ಲಿ ಇದುವರೆಗೆ ನಡೆದಿರುವ ಬೈಗುಳ ಅಧ್ಯಯನಗಳಾದ 'ಕನ್ನಡ ಬೈಗುಳಗಳ ಅಧ್ಯಯನ' ಸಿ.ಪಿ.ನಾಗರಾಜ್, ಮತ್ತು 'ಬೈಗಳುಗಳಲ್ಲಿ ಮಹಿಳೆ' ಹಂದ್ರಾಳ ಗವಿಸಿದ್ದಪ್ಪ ಇವುಗಳಲ್ಲಿ ಮಹಿಳೆಯರನ್ನು ಕೇಂದ್ರವಾಗಿಸಿಕೊಂಡ ಹೆಚ್ಚು ಬೈಗುಳಗಳು ಇವೆ. ಇವುಗಳಲ್ಲಿ ಕೆಲವು ಬೈಗುಳಗಳನ್ನು ಉದಾಹರಣೆಯ ಮೂಲಕ ಮತ್ತೆ ಎರಡು ಭಾಗಗಳಾಗಿ ಮಾಡಿಕೊಂಡು ಚರ್ಚಿಸಿದ್ದಾರೆ.

೧. ಲೈಂಗಿಕ ಆಕ್ರಮಣಕಾರಿ ನಿಲುವು

೨. ಕ್ರಿಯೆಯ ಹಿನ್ನೆಲೆ

ಒಬ್ಬ ಪುರುಷ ಮತ್ತೊಬ್ಬ ಪುರುಷನನ್ನು ಮಾನಸಿಕವಾಗಿ ಘಾಸಿಗೊಳಿಸುವ ಅಥವಾ ಅವನನ್ನು ಮತ್ತಷ್ಟು ಸಿಟ್ಟಿಗೇಳಿಸಲು ಅವನಿಗೆ ಸಂಬಂಧಪಟ್ಟಂತಹ ಹೆಣ್ಣುಮಕ್ಕಳ ಮೇಲೆ ಲೈಂಗಿಕ ಆಕ್ರಮಣ ಮಾಡುವ ಬೈಗುಳಗಳನ್ನು ಬಳಸುತ್ತಾನೆ. ಈ ಲೈಂಗಿಕತೆಗೆ ಸಂಬಂಧಿಸಿದ ಬೈಗುಳಗಳು ಕ್ರಿಯಾಪದದ ರೂಪದಲ್ಲಿಯೂ ಇರುತ್ತವೆ. ಲೈಂಗಿಕತೆಗೆ ಸಂಬಂಧಿಸಿದ ಬೈಗುಳಗಳನ್ನು ಪುರುಷರು ಮಾತ್ರ ಬಳಸುವಂತಹ ಬೈಗುಳಗಳಾಗಿವೆ. ಈ ರೀತಿಯ ಬೈಗುಳಗಳನ್ನು ಹೆಣ್ಣು ಪುರುಷನನ್ನು ಕೇಂದ್ರವಾಗಿಸಿಕೊಂಡ ಲೈಂಗಿಕ ಬೈಗುಳಗಳನ್ನು ಬೈಯುವಾಗ ಬಳಸುವಂತಿಲ್ಲ ಹೆಣ್ಣಿಗೆ ಸಮಾಜ ವಿಧಿಸಿರುವ ಮಡಿವಂತಿಕೆ ಮತ್ತು ಸ್ವೇಚ್ಚಾಚಾರವೇ ಇದಕ್ಕೆ ಕಾರಣವಾಗಿರುತ್ತದೆ. ಹೆಣ್ಣು ಹೆಣ್ಣಿಗೆ ಲೈಂಗಿಕ ಬೈಗುಳ ಮತ್ತು ಶಾಪರೂಪದ ಬೈಗುಳಗಳನ್ನು ಬಳಸುವುದನ್ನು ಕಾಣಬಹುದು ಎಂದು ಹೇಳುತ್ತಾರೆ.

ಹೆಣ್ಣಿನ ಸಾಮಾಜಿಕ ಸ್ಥಿತಿಯನ್ನು ಹೀಯಾಳಿಸುವ ಹಿನ್ನೆಲೆಯಲ್ಲಿ ಈ ಬೈಗುಳಗಳು ಸೃಷ್ಟಿಯಾಗಿವೆ ಮತ್ತು ಸಮಾಜದಲ್ಲಿ ಮಾನ್ಯತೆಯನ್ನು ಕಳೆದುಕೊಂಡ ಕೆಲವು ಪದಗಳು ಅದು ಹೀನಾರ್ಥ ಅಥವಾ ಬೈಗುಳದ ನೆಲೆಗೆ ಬಂದು ನಿಲ್ಲುತ್ತದೆ ಎಂದು ಚರ್ಚಿಸಿದ್ದಾರೆ.

ಬೈಗುಳಗಳ ಬಳಕೆಯ ಹೆಚ್ಚಿನ ಸಂದರ್ಭಗಳಲ್ಲಿ ಅವುಗಳು ರಚನೆಯಾದ ಅರ್ಥದ ನೆಲೆಯಲ್ಲಿ ಬಳಕೆಯಾಗುವುದಿಲ್ಲ. ಸಮಾಜದಲ್ಲಿ ರೂಢಿಯಲ್ಲಿರುವ ಎಲ್ಲ ಬಗೆಯ ಬೈಗುಳಗಳನ್ನು ಎಲ್ಲರೂ ಬಳಕೆ ಮಾಡುತ್ತಾರೆ. ಸಮಾಜದ ಎಲ್ಲ ರೀತಿಯ ನಿಂದನೆಗಳಿಗೆ ಮೊದಲು ಸ್ತ್ರೀ ಒಳಗಾದರೂ ಪುರುಷನಿಗೂ ಎಲ್ಲ ಕಟ್ಟುಪಾಡುಗಳು ಅನ್ವಯವಾಗುತ್ತವೆ. ಮತ್ತು ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗಿಂತ ಗಂಡಿಗೆ ಸ್ವಾತಂತ್ರ ಅಧಿಕವಾಗಿರುವುದರಿಂದ ಅವಳು ನಿಂದನೆಗಳಿಗೆ ಬೇಗ ಗುರಿಯಾಗುತ್ತಾಳೆ ಹೀಗಾಗಿ ಮಹಿಳಾ ಕೇಂದ್ರಿತ ಬೈಗುಳಗಳ ಸಂಖ್ಯೆ ಹೆಚ್ಚಾಗಿವೆ ಎಂಬುದನ್ನು ಲಿಂಗಸಂಬಂಧಿ ನೆಲೆಗಳಲ್ಲಿ ಚರ್ಚಿಸಿದ್ದಾರೆ.

ಅಂಗಡಿ ಎಸ್.ಎಸ್.ಅವರ 'ವಚನ ಸಾಹಿತ್ಯ ಭಾಷೆ' (೨೦೦೭)

ಬೈಗುಳಗಳ ಅರ್ಥವಿನ್ಯಾಸ ಎಂಬ ಲೇಖನದಲ್ಲಿ ಬೈಗುಳಗಳು ಭಾಷೆಯ ಪರಿಣಾಮಕಾರಿ ಘಟಕಗಳಾಗಿವೆ. ಅವು ಒಂದು ರೀತಿಯಲ್ಲಿ ಭಾಷಿಕ ಹೊಡೆತ ಎಂದಿದ್ದಾರೆ. ಬೈಗುಳಗಳು ಸೃಷ್ಟಿಯಾಗುವುದು ವ್ಯಕ್ತಿಗೆ ದೈಹಿಕ ಮತ್ತು ಮಾನಸಿಕ ಯಾತನೆಯಾದಾಗ ಎಂದು ಹೇಳುತ್ತಾರೆ.

ಈ ಲೇಖನದಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಶರಣರು ಬಳಸಿದ ಬೈಗುಳಗಳು ಮತ್ತು ವಚನಗಳಲ್ಲಿ ಬಳಕೆಯಾದ ಬೈಗುಳಗಳನ್ನು ಕಾಣಬಹುದು.

ಶರಣರು ಬಳಸಿದ ಬೈಗುಳ ಪದಗಳಲ್ಲಿ ಸಾಮಾಜಿಕ ಕಳಕಳಿಯಿದೆ. ಶರಣರು ಬೈಗುಳಗಳನ್ನು ಬಳಸುವುದರ ಮೂಲಕ ಮಡಿವಂತ ಯಥಾಸ್ಥಿತಿವಾದಿಗಳ ಬದುಕಿನಲ್ಲಿ ಸಹಜವಾಗಿ ಬಳಸುವ ಪ್ರಯತ್ನ ಮಾಡಿದ್ದಾರೆ. ದೈನಂದಿನ ಬದುಕಿನಲ್ಲಿ ಜನಸಾಮಾನ್ಯರು ಬಳಸುವ ಪದಗಳನ್ನೇ ಶರಣರು ಬಳಸಿದ್ದಾರೆ. ಶರಣರ ಬದುಕು ಒಂದು ತೆರೆದ ಪುಸ್ತಕದಂತೆ ಒಂದು ಮಡಿಮೈಲಿಗೆ ಇಲ್ಲದ ಮಾತುಗಳು ಅವರ ವಾಸ್ತವ ಬದುಕನ್ನು ಚಿತ್ರಿಸುತ್ತವೆ ಎಂದು ಹೇಳುತ್ತಾರೆ.

ಬೈದವರನ್ನು ಬಂಧುಗಳೆಂದು, ಹೊಯ್ದವರನ್ನು ಹೊರೆದವರೆಂದು ಬೈಗುಳಗಳನ್ನು ಸ್ವೀಕರಿಸಿದರು ಎಂದು ಬಸವಣ್ಣನವರು ಹೇಳಿದ್ದಾರೆ. ಹೀಗೆ ಇನ್ನೂ ಹಲವು ವಚನಕಾರರು ಬಳಸಿದ ವಚನಗಳಲ್ಲಿ ಬೈಗುಳಗಳನ್ನು ಇಟ್ಟುಕೊಂಡು ಈ ಲೇಖನದಲ್ಲಿ ಚರ್ಚಿಸಿದನ್ನು ಕಾಣಬಹುದು.

ಒಲೆಯೊಳಗಿಕ್ಕು, ಮೂಗುಕೊಯ್ಯಿ – ಅಕ್ಕಮಹಾದೇವಿ

ಹಲ್ಲುಕಳೆ, ಹಂತದ ಮುರಿ ಆಚಾರ ಭ್ರಷ್ಟ – ಚೆನ್ನಬಸವಣ್ಣ

ಜೀವಿಗಳ್ಳ, ಪಾಪಾತ್ಮ, ಎಡ್ಡ – ಸಿದ್ದರಾಮ

ಹಂದಿ ಹಡಕೆಯ ನೆನಸಿ ಹಾಳುಗೇರಿಗೆ ಹೋದಂತೆ – ಷಣ್ಮುಖ ಶಿವಯೋಗಿ

ಹೀಗೆ ಇನ್ನೂ ಹಲವಾರು ವಚನಕಾರರು ವಚನಗಳಲ್ಲಿ ಬಳಸಿದ ಬೈಗುಳಗಳನ್ನು ನಾಲ್ಕು ರೀತಿಯಾಗಿ ವರ್ಗೀಕರಿಸಿ ಚರ್ಚಿಸುತ್ತಾರೆ.

೧. ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ದೋಷಗಳಿಗೆ ಸಂಬಂಧಿಸಿದ ಬೈಗುಳಗಳು.

೨. ಅನೈತಿಕತೆಗೆ ಸಂಬಂಧಿಸಿದ ಬೈಗುಳಗಳು.

೩. ಜಾತಿ–ವರ್ಗ, ವೃತ್ತಿಗೆ ಸಂಬಂಧಿಸಿದ ಬೈಗುಳಗಳು.

೪. ಸಂಕೀರ್ಣ ಬೈಗುಳಗಳು.

ಈ ರೀತಿಯಲ್ಲಿ ವರ್ಗಿಕರಣ ಮಾಡಿಕೊಂಡು ಉದಾಹರಣೆಯ ಮೂಲಕ ಚರ್ಚಿಸಿದ್ದಾರೆ. ಶರಣರು ಬೈಗುಳಗಳ ಮೂಲಕ ತಮ್ಮ ಭಾವನೆಗಳ ಅಭಿವ್ಯಕ್ತಿಯಾದ ಭಾಷೆಗೆ ಮೊನಚನ್ನು, ಕ್ರಾಂತಿಧ್ವನಿಯನ್ನು ತಂದುಕೊಟ್ಟಿದ್ದಾರೆ. ವಚನಕಾರರ ಭಾಷಾಕ್ರಾಂತಿಗೆ ಬೈಗುಳಗಳು ಬಹುಮಟ್ಟಿಗೆ ಕಾರಣವಾಗಿವೆ ಎಂಬುದು ಗಮನಾರ್ಹ ವಿಷಯವಾಗಿದೆ ಎಂದು ಹೇಳಿದ್ದಾರೆ.

ದೇವರಿಗೆ ಬೈಗುಳದ ನೈವೇದ್ಯ : ಪ್ರಜಾವಾಣಿ ಪತ್ರಿಕೆ

ಈ ಲೇಖನದಲ್ಲಿ ಮುಖ್ಯವಾಗಿ ಕಂಡುಬರುವ ಅಂಶವೆಂದರೆ ಸಮೃದ್ಧ ಮಳೆ – ಬೆಳೆಗಾಗಿ ದೇವರನ್ನು ಬೈಗುಳ ಮೂಲಕ ನಿಂದಿಸುವ ವಿಶಿಷ್ಟ ಸಂಪ್ರದಾಯವೊಂದನ್ನು ಕಾಣಬಹುದು. ಕೆರೆ, ಜಲಾಶಯಗಳಲ್ಲಿ ನೀರಿನ ಸಂಗ್ರಹವಾಗಿಲ್ಲ ಇದರಿಂದಾಗಿ ರೈತರು ಆತಂಕದಲ್ಲಿದ್ದಾರೆ. ಕೂಡಲೇ ಮಳೆಯನ್ನು ಸುರಿಸಿ, ರೈತಾಪಿ ವರ್ಗವನ್ನು ಕಾಪಾಡು ಎಂದು ಊರಿನ ಹಿರಿಯ ಮುಖಂಡರು, ಮಹಿಳೆಯರು ಮತ್ತು ಮಕ್ಕಳು ಬಾಯಿ– ಬಾಯಿ ಬಡಿದುಕೊಳ್ಳುವ ಮೂಲಕ ದೇವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ದೇವರ ಮೂರ್ತಿಗೆ ಬೈಗುಳಗಳ ಸುರಿಮಳೆಯ ಮೂಲಕ ಡೊಳ್ಳುವಾದ್ಯ ವಿವಿಧ ಜಾನಪದ ವಾಧ್ಯಗಳೊಂದಿಗೆ ಮೆರವಣಿಗೆಯನ್ನು ಮಾಡಲಾಯಿತು ಈ ರೀತಿಯ ದೇವರಿಗೆ ಬೈಯುವ ವಿಶಿಷ್ಟ ಸಂಪ್ರದಾಯವನ್ನು ಕಾಣಬಹುದು.

ಅಂಜಲಿ ರಾಮಣ್ಣ ಅವರು ಬರೆದಿರುವ 'ರೋಜಾ ರಾಂಗಾದಳು ಬೈಗುಳ ಮಳೆ ಸುರಿಸಿದಳು' ಎಂಬ ಲೇಖನವು ವಿಜಯ ಕರ್ನಾಟಕ ಪತ್ರಿಕೆ

ಈ ಲೇಖನದಲ್ಲಿ ಕೇಳಿಸಿಕೊಂಡಿದ್ದನ್ನೆಲ್ಲಾ ಆಡಬೇಕು ಎನಿಸುವ ವಯಸ್ಸಿನಲ್ಲಿದ್ದಾಗ ಬೀದಿಯಲ್ಲಿ, ಮನೆಯಲ್ಲಿ, ಕೇರಿಯಲ್ಲಿ ಬೈಯುವ ಪದಗಳು ಯಾವ ರೀತಿಯಲ್ಲಿ ಸೆಳೆಯುತ್ತವೆ ಎಂಬ ಅಂಶವನ್ನು ಕಾಣಬಹುದು. ರಸ್ತೆ ಬದಿಯಲ್ಲಿ ಉಚ್ಚೆಗೆ ನಿಲ್ಲುತ್ತಿದ್ದ ಮನುಷ್ಯ ಪ್ರಾಣಿಗಳನ್ನು ಕಂಡಾಗ, ರಸ್ತೆಯಲ್ಲಿ ಉಗಿದು ಹೋಗುವ ಅನಾಗರಿಕ ಜೀವಿಗಳನ್ನು ನೋಡಿದಾಗ ಬಾಯಿಂದ ಬರುವ ಬೈಗುಳಗಳನ್ನು ಕುರಿತು ಚರ್ಚಿಸಿದ್ದಾರೆ. ಹಾಗೂ ವಿದ್ಯಾವಂತ, ಶಿಷ್ಟ ಮಧ್ಯಮ ವರ್ಗದ ಕುಟುಂಬಗಳ ಅತ್ಯಂತ ಕೆಟ್ಟ ಅಶ್ಲೀಲ ಬೈಗುಳಗಳನ್ನು ಕುರಿತಿ ಚರ್ಚಿಸಿದ್ದಾರೆ. ಹೆಣ್ಣು ಮಕ್ಕಳ ಬಾಯಿಂದ ಬರುವ ಬೈಗುಳಗಳ ಯಾವ ಪದಗಳನ್ನು ಸಮಾಜ ಒಪ್ಪುತ್ತದೆ ಯಾವ ಪದಗಳನ್ನು ಒಪ್ಪುವುದಿಲ್ಲ ಎಂಬುವುದನ್ನು ಕುರಿತು ಚರ್ಚಿಸಿದ್ದಾರೆ. ಬೈಗುಳಗಳ ಭಾಷೆಯನ್ನು ನೋಡಿದಾಗ ಲಿಂಗಭೇದವನ್ನು ತೋರದೆ ಯಾರು ಯಾರನ್ನು ಬೇಕಾದರು ಕುರಿತು ಏನನ್ನಾದರೂ ಮಾತನಾಡಬಹುದು ಎಂಬ ಅಂಶವನ್ನು ಸಹ ಹೇಳಿದ್ದಾರೆ. ಸರ್ಕಾರ ಕೆಲವು ಜಯಂತಿಗಳನ್ನು ನಿಗಧಿಪಡಿಸಿದಂತೆ ಬೈಗುಳಗಳ ದಿನಾಚರಣೆ ಎಂದು ಒಂದು ದಿನವನ್ನು ನಿಗದಿಪಡಿಸಿ ಅಧಿಕೃತಗೊಳಿಸಿ ಪ್ರತೀ ತಿಂಗಳ ಎರಡನೇ ಶುಕ್ರವಾರವೋ, ಭಾನುವಾರವೋ ಅಥವಾ ಸೋಮವಾರವೋ 'ಂಬಣಟಿರ ಆಚಿಥಿ' ಎಂದು ಕ್ಯಾಲೆಂಡರಿನಲ್ಲಿ ಅಚ್ಚಾಗಿ ಹೊರಬರಬೇಕು ಎಂದು ಕೊನೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಟರಾಜ ಹುಳಿಯಾರ್ ಅವರು ಬರೆದಿರುವ ಆಹಾ ! ಬೈಗುಳಗಳ ಭವ್ಯ ಭಾರತವೇ ! ಎಂಬ ಲೇಖನವು ಪ್ರಜಾವಾಣಿ ಪತ್ರಿಕೆ

ಈ ಲೇಖನದಲ್ಲಿ ಟಿ.ವಿ.ಯಲ್ಲಿ ಪ್ರಸಾರವಾಗುವ ಡಬ್ಲ್ಯೂ.ಡಬ್ಲ್ಯೂ.ಎಫ್. ಮ್ಯಾಚ್‌ಗಳಲ್ಲಿ ಕೆಟ್ಟ ಕೆಟ್ಟ ಬೈಗುಳಗಳೂ ಅವರ ಬಾಯಿಂದ ಬರುತ್ತವೆ. ಈಚಿನ ದಿನಗಳಲ್ಲಿ ನಮ್ಮ

ರಾಜಕರಣಿಗಳ ಬೈಗುಳಗಳ ಚೀರಾಟ ನೋಡುವವರಿಗೆ ಇದು ಡಬ್ಲೂ.ಡಬ್ಲೂ.ಎಫ್. ಮ್ಯಾಚ್‌ಗಿಂತ ಭಿನ್ನವಲ್ಲ ಎಂಬುದು ಗೊತ್ತಿರುತ್ತದೆ ಎಂಬ ಅಂಶವನ್ನು ಕುರಿತು ಚರ್ಚಿಸಿದ್ದಾರೆ. ಈಚೆಗೆ ನಮ್ಮ ರಾಜಕರಣಿಗಳು ಬೈಗುಳದ ಭಾಷೆಯನ್ನು ಹೆಚ್ಚು ಬಳಸುತ್ತಿದ್ದಾರೆ. ಈ ಬಗೆಯ ಮಾತುಗಳನ್ನು ಬಳಸಿ ಮನರಂಜನೆ ಕೊಡುವುದು ಮತ್ತು ಜಾತಿಗಳ ಹೆಸರುಗಳನ್ನೇ ಬೈಗುಳಗಳನ್ನಾಗಿ ಬಳಸುವ ಹಿಂದೂ ವ್ಯವಸ್ಥೆಯಲ್ಲಿ ಜಾತಿದುರಹಂಕಾರ ನಿತ್ಯದ ಮಾತುಕತೆಯಲ್ಲೇ ಎದ್ದು ಕಾಣುತ್ತದೆ. ಕೆಳಜಾತಿಯವರನ್ನು ಬೈಯುವ ಪದಗಳು ಮೇಲು ಜಾತಿಯವರನ್ನು ಬೈಯುವ ಪದಗಳು ಬೇರೆ – ಬೇರೆ ಮತ್ತು ಅಲ್ಪಸಂಖ್ಯಾತರ ಹಾಗೂ ಮಹಿಳೆಯರ ವಿರುದ್ಧ ಬಳಸುವ ಬೈಗುಳದ ಪದಗಳಿಗೆ ಕಾನೂನಿನ ಕಡಿವಾಣವಿದೆ ಎಂಬ ಅಂಶವನ್ನು ತಿಳಿಸಿ ಕೊಟ್ಟಿದ್ದಾರೆ. ಕೊನೆಯಲ್ಲಿ ಬೈದವರೆನ್ನಲ್ಲ ಬಂಧುಗಳೆಂದು ಕರಿಯೋಣ ಎಂದು ಈ ಲೇಖನದಲ್ಲಿ ಹೇಳಿದ್ದಾರೆ.

ಶೇಖರಾಚಾರಿ.ಕೆ ಅವರ 'ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ' ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ (೨೦೧೦)

ಬೈಯ್ಗುಳ, ವ್ಯಂಗ್ಯ, ಮೂದಲಿಕೆ ಎಂಬ ಲೇಖನದಲ್ಲಿ ಸಮುದಾಯ ಹಾಗೂ ವ್ಯಕ್ತಿಗಳೆಡೆಗಿನ ಸಾಮಾಜಿಕ ಮನೋಭಾವಗಳು ಸಮುದಾಯ ಹಾಗೂ ವ್ಯಕ್ತಿಗಳ ವ್ಯವಹಾರಿಕ ಸಾಮಾಜಿಕ ನಡೆನುಡಿಗಳಿಂದ ರೂಪುಗೊಂಡಿರುತ್ತದೆ. ಇದು ಎಷ್ಟೋವೇಳೆ ಇತರ ವ್ಯಕ್ತಿ ಸಮುದಾಯಗಳಿಗೆ ಒಪ್ಪಿತವಾದ ನಡೆನುಡಿ ವರ್ತನೆಗಳ ಆಧರಿಸಿ ಮೂದಲಿಕೆ, ವ್ಯಂಗ್ಯ, ಬೈಯ್ಗುಳಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಇದರಲ್ಲಿ ಪ್ರೀತಿ, ಆತ್ಮೀಯತೆ, ದ್ವೇಷ, ಅಸಹನೆ ಎಲ್ಲಾ ಭಾವಗಳಿಗೂ ಬೇರೆ–ಬೇರೆ ರೀತಿಯಲ್ಲಿ ವ್ಯಕ್ತವಾಗುತ್ತದೆ ಎಂದು ಚರ್ಚಿಸಿದ್ದಾರೆ. ಉದಾ:– ಪೋಷಕರು, ಮಕ್ಕಳ ನಡುವೆ, ಗೆಳೆಯರು, ಆತ್ಮೀಯರು, ಪ್ರೀತಿ ಪಾತ್ರರ ನಡುವೆ ಹಾಗೆಯೇ ವಿವಿಧ ಸಮುದಾಯಗಳ ನಡುವೆ ಬೇರೆ–ಬೇರೆ ರೀತಿಯಲ್ಲಿ ಬಳಕೆಯಾಗುತ್ತವೆ ಎಂದು ಹೇಳಿದ್ದಾರೆ.

ಒಂದರ್ಥದಲ್ಲಿ ಬೈಗುಳ ದೈಹಿಕ ಹೊಡೆತವಾದುದು. ಎದುರಾಳಿಯನ್ನು ಹೊಡೆಯಲು ಯಾವುದಾದರೂ ವಸ್ತುವನ್ನು ಬಳಸಬೇಕಾಗುತ್ತದೆ (ಕೈಯಿಂದ, ಕಾಲಿನಿಂದ, ಉಪಕರಣ) ಆದರೆ ಬೈಗುಳಗಳಿಗೆ ಆಡುವ ಮಾತುಗಳೇ ಅವರ ಮನಸ್ಸಿನ ಮೇಲೆ ಅಸ್ತ್ರವಾಗಿ ಪರಿಣಮಿಸುತ್ತವೆ. ತನ್ನ ವಿರೋಧಿಗಳಿಗೆ ದೈಹಿಕವಾಗಿ ನೋವುಂಟು ಮಾಡುವುದು ಹೊಡೆತದ ಉದ್ದೇಶವಾಗಿದ್ದರೆ, ಬೈಗುಳದ ಮುಖ್ಯ ಉದ್ದೇಶ ತನ್ನ ವಿರೋಧಿಗಳಿಗೆ ಮಾನಸಿಕ ನೋವನ್ನು ಕೊಡುವುದಾಗಿದೆ. ಹೊಡೆತದ ನೋವನ್ನು ಮನುಷ್ಯ ಮರೆಯಬಹುದು. ಆದರೆ ಬೈಗುಳ ಹೊಡೆತಕ್ಕಿಂತ ದೊಡ್ಡದು ಅದನ್ನು ಮರೆಯಲು ಆಗುವುದಿಲ್ಲ. ಆದರೆ ಹೊಡೆತದ ಹಾಗೆ ಸುಲಭವಾಗಿ ಹೋಗುವಂತಹುದಲ್ಲ ಎಂದು ಹೇಳುತ್ತಾರೆ.

ಪಾಂಚಾಳ ಸಮುದಾಯವನ್ನು ಇಟ್ಟುಕೊಂಡು ಇತರ ಸಮುದಾಯಗಳು ಅನೇಕ ಬೈಗುಳಗಳನ್ನು ಕಟ್ಟಿವೆ ಅಂತಹ ಕೆಲವು ಬೈಗುಳಗಳನ್ನು ಇಲ್ಲಿ ಚರ್ಚಿಸಿದ್ದಾರೆ.

ಉದಾ:-

ಆಚಾರಿ ಪಕ್ಕ ದೊಣ್ಣೆ ತಕ್ಕೊಂಡು ನೆಕ್ಕ.

ಕೆಲಸವಿಲ್ಲದ ಬಡಗಿ ಮಗನ ಮುಕಳಿ ಕೆತ್ತಿದ.

ಕಮ್ಮಾರಂದ್ರೆ ಮೂರು ಕಾಸಿನ ಕಬ್ಬಿಣಕ್ಕೆ ನಾಲಿಗೆ ಹಚ್ಚೋನು.

ದಣಿ ಹೇಳಾಟ ಬಡಗಿ ಮಾಡಾಟ.

ಕಮ್ಮಾರನ ಬುದ್ದಿ ಕುಂಡಿಮ್ಯಾಗ ಮೂರು ಬರೆ.

ಕುಮಾರ ಸಿ. ನಿರಂಜನಪ್ಪ ಸಿ. ಅವರ ದೂರದರ್ಶನ ಧಾರವಾಹಿಗಳಲ್ಲಿ ಕನ್ನಡ ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ (೨೦೧೫)

ಬೈಗುಳಗಳ ಬಳಕೆ ಎಂಬ ಲೇಖನದಲ್ಲಿ ಬೈಗುಳ ಎಂದರೇನು? ಯಾವ ಬಗೆಯ ಶಬ್ದಗಳನ್ನು ಧಾರವಾಹಿಗಳಲ್ಲಿ ಬೈಗುಳವೆಂದು ಪರಿಗಣಿಸಲಾಗಿದೆ ಎಂಬುವುದರ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ.

ನಾನಾ ಬಗೆಯ ಭಾವೋದ್ರೇಕಗಳಿಂದ ತುಯ್ದಾಡುತ್ತಾ, ನ್ಯಾಯಕ್ಕೆ ಅಥವಾ ಪ್ರೀತಿಗೆ ವಿರುದ್ಧವಾದ ರೀತಿಯಲ್ಲಿ ಭಾಷೆಯನ್ನು ಅಪಪ್ರಯೋಗ ಮಾಡುತ್ತಾ, ಅನ್ಯವ್ಯಕ್ತಿಗಳ ಮನಸ್ಸನ್ನು ನೋಯಿಸುವಂತ ಮತ್ತು ಘಾಸಿಗೊಳಿಸುವಂತ ನುಡಿಗಳನ್ನು ಂಬಣಾಜ ಐಚಿಟರಿಣಾಚಿರಿಜ ಎಂದು ವ್ಯಾಖ್ಯಾನಿಸಿದ್ದಾರೆ. ದೈವದೂಷಣೆಯಿಂದ ಹಿಡಿದು ಅನ್ಯರನ್ನು ಕುಚೋದ್ಯ ಅಥವಾ ಪರಿಹಾಸ್ಯ ಮಾಡುವ ತನಕ ಇದರ ವ್ಯಾಪ್ತಿಯು ಹರಡಿದೆ. ಐದು ಬಗೆಗಳಲ್ಲಿ ಇದು ಪ್ರಯೋಗಗೊಳ್ಳುತ್ತದೆ ಎಂದು ಹೇಳಿದ್ದಾರೆ.

೧.Coutuncly (ಧಿಕ್ಕಾರದ, ತಾತ್ಸರದ, ನಿರ್ಲಕ್ಷ್ಯದ ಮಾತು)

೨.Ditraction (ಅವರ್ಯಾದೆ)

೩.Backbiting (ಚಾಡಿ ಹೇಳುವುದು)

೪.Ridicule (ಅಣಕ, ಕುಚೋದ್ಯ, ಅಪಹಾಸ್ಯ, ಗೇಲಿಮಾಡು)

೫.Cursing (ಶಾಪ ಹಾಕುವುದು)

ಈ ಲೇಖನದಲ್ಲಿ ಚರ್ಚಿತವಾದ ಅಂಶಗಳೆಂದರೆ ದೂರದರ್ಶನ ಧಾರವಾಹಿಗಳಲ್ಲಿ ಸಾಂದರ್ಭಿಕವಾಗಿ ಬೈಗುಳಗಳನ್ನು ಬಳಸುವಲ್ಲಿ ಶಿಷ್ಟಾಚಾರವನ್ನು ಅಳವಡಿಸಿಕೊಳ್ಳಲಾಗಿದೆ. ಸಾಮಾನ್ಯ ಬೈಗುಳಗಳನ್ನು ಅಂದರೆ ಆಡುಮಾತಿನಲ್ಲಿರುವ ಬೈಗುಳಗಳನ್ನು ಬಳಸಿಕೊಳ್ಳದೆ ಕೆಲವೊಂದು ಬೈಗುಳಗಳನ್ನು ಪರಿಶೀಲನೆ ಮಾಡಿ ಬಳಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಕೌಟುಂಬಿಕ ಧಾರವಾಹಿಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಬಳಕೆ ಮಾಡಿಕೊಂಡು ಬೈಗುಳಗಳನ್ನು ಬಳಕೆ ಮಾಡಿರುವುದು ಬೈಗುಳಗಳ ಸ್ವರೂಪ ಬದಲಾವಣೆಯ ಸಂಕೇತವಾದ ಅಂದರೆ ಇಂಗ್ಲೀಷ್ ಗೊತ್ತಿರುವ ಪಾತ್ರಗಳು ಕನ್ನಡ ಬೈಗುಳಗಳ ಸ್ವರೂಪದ ಮಾದರಿಯನ್ನು ಬಿಟ್ಟು ಇಂಗ್ಲೀಷ್ ಭಾಷೆಯಲ್ಲಿ ಬೈಯುವುದನ್ನು ಕೌಟುಂಬಿಕ ಧಾರಾವಾಹಿಗಳಲ್ಲಿ ಗುರುತ್ತಿಸಿದ್ದಾರೆ. ಮತ್ತು ಆಜ್ಞಾಪನ ರೂಪದ ಬೈಗುಳಗಳು ಕೌಟುಂಬಿಕ ಧಾರಾವಾಹಿಗಳಲ್ಲಿ ಹೇಗೆ ಬಳಕೆಯಾಗಿವೆ ಎಂದು ಸಹ ಚರ್ಚಿಸಿದ್ದಾರೆ.

ಬೈಗುಳಗಳ ಬಳಕೆಯು ಕೌಟುಂಬಿಕ ಹಾಗೂ ಪ್ರಾದೇಶಿಕ ಧಾರಾವಾಹಿಗಳಲ್ಲಿ ಹೆಚ್ಚು ಬಳಕೆಯಾಗಿವೆ. ಹಾಸ್ಯ ಮತ್ತು ಚಾರಿತ್ರಿಕ ಧಾರವಾಹಿಗಳಲ್ಲಿ ಬೈಗುಳಗಳ ಬಳಕೆ ಕಡಿಮೆ. ಹಾಗೂ ಕೌಟುಂಬಿಕ ಮತ್ತು ಪ್ರಾದೇಶಿಕ ಧಾರಾವಾಹಿಗಳಲ್ಲಿ ಬಳಕೆಯಾಗಿರುವ ಬೈಗುಳಗಳನ್ನೇ ಹೆಚ್ಚಾಗಿ ಉದಾಹರಿಸಿದ್ದಾರೆ. ಹಾಸ್ಯ ಮತ್ತು ಚಾರಿತ್ರಿಕ ಧಾರಾವಾಹಿಗಳಲ್ಲಿ ಬಳಕೆಯಾಗಿರುವ ಬೈಗುಳಗಳನ್ನು ಬಳಸಿಕೊಂಡಿರುವುದು ಕಡಿಮೆ ಎಂದು ಹೇಳಿದ್ದಾರೆ.

ನಾಗರಾಜ ಸಿ.ಪಿ. ಅವರ 'ಜನಪದ ಬೈಗಳು' (೨೦೧೪)

ಎಂಬ ಲೇಖನದಲ್ಲಿ ಸಮಾಜದ ಎಲ್ಲಾ ಕಡೆಗಳಲ್ಲೂ ಬೈಗುಳಗಳನ್ನು ಸಾಮಾನ್ಯವಾಗಿ ನಾವು ಕೇಳುತ್ತಿರುತ್ತೇವೆ. ಆದರೆ ಯಾರು ಯಾರಿಗೆ ಬೈಯುತ್ತಾರೆ ಎಂಬುದನ್ನಾಗಲಿ, ಯಾವ ಸಂದರ್ಭಗಳಲ್ಲಿ ಬೈಯುತ್ತಾರೆ ಎಂಬುದನ್ನಾಗಲೀ ಪಟ್ಟಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ ಬೈಗುಳದ ಪದಗಳು ಮೂಡಿಬರಲು ಕಾರಣವಾಗುವಂತಹ ಮಾನಸಿಕ ಮತ್ತು ಸಾಮಾಜಿಕ ಪ್ರೇರಣೆಗಳು ಯಾವುವು ಎಂಬುದನ್ನು ವಿಶ್ಲೇಷಣೆ ಮಾಡುವುದು ಸೂಕ್ತ ಎಂದು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಬೈಯುವ ಕ್ರಿಯೆಯಲ್ಲಿ ತೊಡಗಿದ ವ್ಯಕ್ತಿ ಮಾನಸಿಕವಾಗಿ ಒಂದು ಬಗೆಯ ಉಪಶಮನವನ್ನು ಹೊಂದುತ್ತಾನೆ. ಕ್ರೋಧಗೊಂಡಿದ್ದ ಅಥವಾ ನಿರಾಶೆಗೊಂಡಿದ್ದ ಅವನ ಮನದ ಬಹುಬಗೆಯ ಉದ್ವೇಗಗಳು ತಮ್ಮೆಲ್ಲ ಒತ್ತಡಗಳಿಂದ ಸಾಧ್ಯವಾದಷ್ಟು ವಿಮುಕ್ತಿಗೊಳ್ಳತ್ತವೆ. ಅಂದರೆ ಬೈಯುವ ವ್ಯಕ್ತಿಯ ಮನಸ್ಸಿನ 'ಖಿಜಟಿಚಿಟ' ಕಡಿಮೆಯಾಗುತ್ತದೆ. ಈ ಮಾತುಗಳ ಸ್ಪಷ್ಟೀಕರಣಕ್ಕಾಗಿ 'Aggression' ಅನ್ನು ಕುರಿತ ಮಾನಸಿಕ ವಿಶ್ಲೇಷಣೆಯ ಕೆಲವು ವಾಕ್ಯಗಳನ್ನು ಈ ಲೇಖನದಲ್ಲಿ ಹೇಳಿದ್ದಾರೆ.

ನಮ್ಮ ಸಮಾಜ ಪ್ರಮುಖವಾಗಿ ಜಾತಿ ವ್ಯವಸ್ಥೆಯ ಕಟ್ಟುಪಾಡುಗಳಿಂದ ಕೂಡಿದೆ. ಈ ಜಾತಿ ವ್ಯವಸ್ಥೆಯಿಂದಾಗಿ ಇಲ್ಲಿಯ ವ್ಯಕ್ತಿಗಳ ನಡುವೆ ಮೇಲು-ಕೀಳು ಎಂಬ ಭಾವನೆಯಿದೆ. ಯಾವುದೇ ಜಾತಿಯ ಜನರು ವಿದ್ಯಾವಂತರಾಗುತ್ತಾ ಮತ್ತು ಸಂಪತ್ತನ್ನು ಹೊಂದಿ ತಮ್ಮ ಸಾಮಾಜಿಕ ಅಂತಸ್ತನ್ನು ಹೆಚ್ಚಿಸಿಕೊಂಡಂತೆಲ್ಲಾ ಅವರ ಸಂಭಾಷಣೆಯಲ್ಲಿ ಬೈಗುಳದ ಬಳಕೆ ಕಡಿಮೆಯಾಗುತ್ತ ಬರುತ್ತದೆ ಮತ್ತು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ

ಹಿಂದುಳಿದ ವರ್ಗದ ಜನರಲ್ಲಿ ಗಂಡಸರಿಗಿಂತಲೂ ಹೆಚ್ಚಾಗಿ ಹೆಂಗಸರು ಬೈಗುಳಗಳನ್ನು ಅಧಿಕ ಪ್ರಮಾಣದಲ್ಲಿ ಬಳಸುತ್ತಾರೆ. ಬೈಗುಳದ ಕ್ರಿಯೆಯಲ್ಲಿ ಹೆಂಗಸರು ಹೆಚ್ಚಾಗಿ ತೊಡಗಲು ದೈಹಿಕವಾದ ಮತ್ತು ಮಾನಸಿಕವಾದ ಕಾರಣಗಳು ಪ್ರಮುಖವಾಗಿವೆ. ಗಂಡಸಿಗಿಂತ ಹೆಂಗಸಿನಲ್ಲಿ ದೈಹಿಕ ಆಕ್ರಮಣಶೀಲತೆಯ ಪ್ರವೃತ್ತಿ ಕಡಿಮೆಯಾಗಿರುತ್ತದೆ. ಆದ್ದರಿಂದಲೇ ತೀವ್ರವಾದ ದೈಹಿಕ ಮತ್ತು ಮಾನಸಿಕ ಒತ್ತಡ ಹಾಗೂ ತುಳಿತಕ್ಕೆ ಗುರಿಯಾಗಿರುವ ಹೆಣ್ಣಿನ ಬಾಯಿಂದ ಹೆಚ್ಚು ಬೈಗುಳಗಳು ಹೊರಹೊಮ್ಮಲು ಕಾರಣ ಎಂದು ಹೇಳುತ್ತಾರೆ.

ಬೈಗುಳದ ಎಷ್ಟೋ ಶಬ್ದಗಳ ಅರ್ಥ ತಿಳಿಯದಿದ್ದರೂ, ಅವುಗಳ ಉಚ್ಚಾರಣಾ ರೂಪವನ್ನು ಕೇಳಿ ತಿಳಿದಿರುವ ಮಾತ್ರದಿಂದಲೇ ಜನರು ಅವನ್ನು ಬಳಸುತ್ತಾರೆ. ಸರ್ಕಾರದ ಮುದ್ರೆಯನ್ನು ಹೊಂದಿರುವ ವಿವಿಧ ಬಗೆಯ ನಾಣ್ಯಗಳು ಮತ್ತು ನೋಟುಗಳು ಚಲಾವಣೆಯಲ್ಲಿರುವಂತೆ ಮನುಷ್ಯನ ಮಾನಸಿಕ ಮತ್ತು ಸಾಮಾಜಿಕ ಪ್ರಕ್ರಿಯೆಗಳಿಂದ ಸೃಷ್ಟಿಗೊಂಡಿರುವ ಬೈಗುಳದ ಶಬ್ದಗಳು ಪರಿಸರದ ಪ್ರಭಾವಕ್ಕೆ ಅನುಗುಣವಾಗಿ ಚಲಾವಣೆಯಲ್ಲಿವೆ ಎಂದು ಚರ್ಚಿಸಿದ್ದಾರೆ.

ಜೇನಹಳ್ಳಿ ಸಿದ್ದಲಿಂಗಪ್ಪ ಅವರ 'ಬೈಗುಳ' (೨೦೧೧)

ಎಂಬ ಲೇಖನದಲ್ಲಿ ಬೈಗುಳ ಕೋಪೋದ್ರಿಕ್ತರಾದಾಗ ಅದಕ್ಕೆ ಕಾರಣನಾದ ವ್ಯಕ್ತಿಯನ್ನು ನಿಂದಿಸಲು, ದೂಷಿಸಲು, ಬಳಸುವ ಶಬ್ದಗಳೇ ಬೈಗುಳಗಳು ಎಂದು ಹೇಳುತ್ತಾ ಬೈಗುಳ ಎಂತಹುದು? ಯಾಕೆ ಬೈಯುತ್ತಾರೆ? ಯಾವಾಗ ಬೈಯ್ಯುತ್ತಾರೆ? ಬೈಗುಳದಿಂದಾಗುವ ಪ್ರಯೋಜನ ಏನು? ಬೈಗುಳ ಅನಿವಾರ್ಯವೇ? ಮುಂತಾದ ಪ್ರಶ್ನೆಗಳನ್ನು ಹಾಕಿಕೊಂಡು ನೂರಾರು ಬಗೆಯ ಬೈಗುಳದ ಪರಿಚಯ ನಮಗಾಗುತ್ತದೆ ಎಂದು ಚರ್ಚಿಸುತ್ತಾರೆ.

ಬೈಗುಳದ ವಿಷಯವೇ ಅಶ್ಲೀಲವಾದದ್ದು, ನಿಷಿದ್ಧವಾದದ್ದು, ಅವಾಚ್ಯವಾದದ್ದು, ನಿಕೃಷ್ಟವಾದದ್ದು, ಶಾಪಯುಕ್ತವಾದದ್ದು, ದೂರಾಲೋಚನೆಯಿಂದ ಕೂಡಿದ್ದು ಇತ್ಯಾದಿ ಆಗಿರುತ್ತದೆ. ಕೆಲವು ಸಲ ಪ್ರೀತಿಯುತ ನೀತಿಯುತ, ಹೊಗಳಿಕೆ, ತೆಗಳಿಕೆ, ಕೊಡುಕೊಳ್ಳುವಿಕೆಯ ಸಂಬಂಧಯುಕ್ತವೂ ಆಗಿರುತ್ತದೆ. ಆದರೆ ಸಂದರ್ಭಗಳು ಬೇರೆಯಾಗಿವೆ. ಉದಾ:-ಖುಷಿಯಲ್ಲಿ ಬೈಯುವಾಗ, ದ್ವೇಷದಲ್ಲಿ ಬೈಯುವಾಗ, ಒಳ್ಳೆಯದಕ್ಕೆ ಬೈಯುವಾಗ, ಛೇಡಿಸಿದಕ್ಕೆ ಬೈಯುವಾಗ ಹಾಗೂ ಸಂತೋಷಕ್ಕೆ ಬೈಗುಳಗಳು ತನ್ನದೇ ಆದ ಸ್ಥಾನವನ್ನು ಪಡೆದುಕೊಳ್ಳುತ್ತವೆ ಎಂದು ಹೇಳುತ್ತಾರೆ.

ಬೈಗುಳಗಳಿಂದಾಗುವ ಪ್ರಯೋಜನಗಳೇನು? ಇಲ್ಲ, ಇದೆ ಎಂದು ಎರಡನ್ನು ಹೇಳುತ್ತಾರೆ. ಹಾಗೆಯೇ ಬೈಗುಳ ಕೂಡ ಒಂದು ಕಲೆ. ಸಂಪ್ರದಾಯ, ನಂಬಿಕೆ, ಆಚಾರ-ವಿಚಾರಗಳಲ್ಲಿ ಬೆರೆತುಕೊಂಡೇ ಇರುವ ಬೈಗುಳಗಳು ಪ್ರತಿನಿತ್ಯ, ಪ್ರತಿಕ್ಷಣ ಪ್ರತಿ ಸಂದರ್ಭಗಳಲ್ಲಿ ಇಣಿಕು ಹಾಕುತ್ತಲೇ ಇರುತ್ತವೆ ಮತ್ತು ಬೈಗುಳಗಳ ವ್ಯಾಪ್ತಿ ಇಷ್ಟೇ ಎಂದು ಹೇಳಲಿಕ್ಕಾಗದು.

ಬದುಕಿನ ನಾನಾ ಸಂದರ್ಭಗಳಲ್ಲಿ, ನಾನಾ ಸನ್ನಿವೇಶಗಳಲ್ಲಿ ಗಂಡು-ಹೆಣ್ಣಿನ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡು ಬಂದಿದೆ. ಸಹಜವಾಗಿ ಬೈಗುಳದ ಪ್ರಮಾಣ ಹೆಂಗಸಿನಲ್ಲಿ ಜಾಸ್ತಿ ಎಂಬುದು ಹಲವರ ಅಭಿಪ್ರಾಯ ಎಂದು ಚರ್ಚಿಸುತ್ತಾ ಗಾದೆ ಮಾತುಗಳಲ್ಲಿ ನೋಡುವ ಹಾಗೆ ಬೈಗುಳಗಳ ಮಹಾಪೂರವೇ ಇಲ್ಲಿ ಕಂಡುಬರುತ್ತದೆ. ಇಲ್ಲೆಲ್ಲ ವ್ಯಕ್ತಿಯ ಹಾದರತನ, ಲೈಂಗಿಕ ಕೌರ್ಯ ಅಡ್ಡದಾರಿ ಹಿಡಿದಿರುವ ನೂರೆಂಟು ಸಂದರ್ಭಗಳ ವಿಶ್ಲೇಷಣೆ ಇರುತ್ತದೆ ಎಂದು ಹೇಳುತ್ತಾರೆ.

ಮೋಹನ್ ಜಿ.ಎಸ್. ಅವರ ತೆಲುಗರ ಬೈಗುಳಗಳು (೨೦೧೧)

ಪ್ರಪಂಚದ ಎಲ್ಲಾ ಭಾಷೆಗಳಲ್ಲಿ ಇರುವಂತೆಯೇ ತೆಲುಗರಲ್ಲೂ ಸಾವಿರಾರು ಬೈಗುಳಗಳಿವೆ. ತೀವ್ರವಾದ ಬೈಗುಳಗಳನ್ನು ತೆಲುಗಿನಲ್ಲಿ 'ಬೂತು' (ಅಶ್ಲೀಲ) ಎನ್ನುತ್ತಾರೆ. ಬೈಗುಳಕ್ಕೆ ಪ್ರೇರಣೆ ಕೋಪ ಎಂಬುದು ಪ್ರಸಿದ್ಧವಾದ ಹೇಳಿಕೆಯಾಗಿದ್ದರೂ ಮಾನವನಿಗೆ ಕೋಪದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ದುರ್ಬಲತೆಯನ್ನು ಬಚ್ಚಿಟ್ಟುಕೊಳ್ಳಲು ಮಾಡುವ ಪ್ರಯತ್ನದಲ್ಲಿ ಬೈಗುಳಗಳು ಹೊರಹೊಮ್ಮುತ್ತವೆ. ಬೈಗುಳ ಆತ್ಮರಕ್ಷಣೆಯ ತಂತ್ರವೆಂದು ಕೂಡ ಹೇಳಬಹುದು. ಸಾಮಾನ್ಯವಾಗಿ ಬಲಹೀನರೇ ಬೈಗುಳಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ದೈಹಿಕಬಲ ಮತ್ತು ಮನೋಬಲ ಇಲ್ಲದವರು ಬೈಗುಳಗಳನ್ನು ಆಶ್ರಯಿಸುತ್ತಾರೆ ಎಂದು ಈ ಲೇಖನದಲ್ಲಿ ಚರ್ಚಿಸುತ್ತಾರೆ.

ಜನಪದ ಮತಾಚರಣೆಗಳಲ್ಲಿ ಅನೇಕ ಬೈಗುಳಗಳು ಕೇಳಿಬರುತ್ತವೆ. ಜಾತ್ರೆಗಳಲ್ಲಿ, ಉತ್ಸವಗಳಲ್ಲಿ ಬೈಗುಳಗಳು ಬಳಕೆಯಾಗುವುದು ಹೇರಳವಾಗಿದೆ. ಮುಖ್ಯವಾಗಿ ಗ್ರಾಮದೇವತೆಗಳ ಜಾತ್ರೆಗಳಲ್ಲಿ ಯಥೇಚ್ಛವಾಗಿ ಬೈಗುಳಗಳನ್ನು ಬಳಸುತ್ತಾರೆ. ಬೈಯದಿದ್ದರೆ ಪಾಪ ಬರುತ್ತದೆಂಬ ನಂಬಿಕೆಯೂ ಇದೆ. ಗ್ರಾಮದೇವತೆಗಳನ್ನು ಬೈಗುಳಗಳದಿಂದ ಕೆರಳಿಸಿ ತಮಗೆ ವರಕೊಡುವಂತೆ ಕೇಳುವ ಸಂಪ್ರದಾಯವಿದೆ.

ತೆಲುಗಿನಲ್ಲಿ ತುಂಬ ಪ್ರಚಾರದಲ್ಲಿರುವ ಬೈಗುಳವೆಂದರೆ 'ವೆಧವ' (ವಿಧವೆ). ಇದನ್ನೇ ಇನ್ನೊಂದು ರೀತಿ 'ಮುಂಡ' (ಮುಂಡೆ) ಎಂದು ಹೇಳುವುದುಂಟು. ವಿಧವೆಯನ್ನು ಬೈಗುಳದಲ್ಲಿ ಮುಖ್ಯವಸ್ತುವನ್ನಾಗಿ ಮಾಡುವುದು, ಬೇರೆಯವರನ್ನು ಮಗನೆಂದು ಹೇಳುವುದು, ಇವೆಲ್ಲ ಅನೈತಿಕ ಸಂಬಂಧದ ಸೂಚನೆಯಾಗಿ ಕೂಡ ಇರಬಹುದು. ದೈಹಿಕ ಕಾರ್ಯಗಳನ್ನು, ಕಾಯಿಲೆಗಳನ್ನು ಮುಟ್ಟಿನಂಥ ಸಂದರ್ಭಗಳನ್ನು ಬೈಗುಳಗಳಲ್ಲಿ ಸೇರಿಸುವುದನ್ನು ಕೂಡ ನೋಡುತ್ತೇವೆ. ಸ್ತ್ರೀ ಸಂಬಂಧಗಳನ್ನು ಅನೇಕ ವಿಧದ ಬೈಗುಳಗಳನ್ನಾಗಿ ನಿರೂಪಿಸುವುದನ್ನು ಕಾಣಬಹುದು ಎಂದು ಹೇಳುತ್ತಾರೆ.

ಬೈಗುಳಗಳಿಗೆ ಪ್ರತ್ಯೇಕವಾದ ಭಾಷಾಭಿವ್ಯಕ್ತಿ ಇದೆ. ಅದರಲ್ಲಿ ಬಳಕೆಯಾಗುವ ಪದಗಳನ್ನು ವಾಕ್ಯಗಳನ್ನು ಸಂದರ್ಭವನ್ನು ಭಾಷೆಯ ಸ್ವರೂಪವನ್ನು ಪ್ರತ್ಯೇಕವಾಗಿ ಪರಿಶೀಲಿಸಿ

ಚರ್ಚಿಸಬಹುದು ಎಂದು ಹೇಳುತ್ತಾರೆ. ವಿದ್ಯಾವಂತರು, ಅನಕ್ಷರಸ್ಥರು, ಬುಡಕಟ್ಟುಗಳು, ಗ್ರಾಮೀಣರು, ನಾಗರಿಕರು, ವಿದ್ಯಾರ್ಥಿಗಳು, ಅಧ್ಯಾಪಕರು, ರಾಜಕಾರಣಿಗಳು, ಅಧಿಕಾರಿಗಳು ಮೊದಲಾದವರು ಬಳಸುವ ಬೈಗುಳಗಳನ್ನು ಕುರಿತು ಚರ್ಚಿಸಲು ಅವಕಾಶವಿದೆ ಎಂದು ಈ ಲೇಖನದಲ್ಲಿ ಹೇಳುತ್ತಾರೆ.

ಬೈಗುಳಗಳಲ್ಲಿ ತೀಕ್ಷ್ಣವಾದ ಬೈಗುಳಗಳು, ಸರಳವಾದ ಬೈಗುಳಗಳು, ಪ್ರೀತಿಯಿಂದ ಆಡುವ ಬೈಗುಳ, ಪುರುಷರ ಬೈಗುಳ, ಹೆಣ್ಣು ಮಕ್ಕಳ ಬೈಗುಳ, ಮಕ್ಕಳ ಬೈಗುಳಗಳನ್ನು ಕುರಿತು ಚರ್ಚಿಸುತ್ತಾ ತೆಲುಗಿನ ಬೈಗುಳಗಳಲ್ಲಿ ಜಾತಿ ಸೂಚನೆ, ವೃತ್ತಿ ಸೂಚನೆ, ಪ್ರಾಣಿಗೆ ಹೋಲಿಕೆ, ರೋಗ ಸೂಚನೆ, ಲೈಂಗಿಕ ಸಂಬಂಧಗಳು, ಶಾಪಗಳು, ಮುತ್ತೈದೆತನವನ್ನು ಕಳೆದುಕೊಳ್ಳಬೇಕೆಂಬ ಸೂಚನೆ ತೆಲುಗು ಬೈಗುಳಗಳಲ್ಲಿವೆ ಎಂದು ಈ ಲೇಖನದಲ್ಲಿ ಚರ್ಚಿಸುತ್ತಾರೆ.

ಕೆ.ಜೆ. (ಕಾವ್ಯಜೀವಿ) ಅವರ ಬೈಗುಳಗಳು (೨೦೧೧)

ಕೋಪಗೊಂಡಾಗ ಅದಕ್ಕೆ ಕಾರಣವಾದವರನ್ನು ನಿಂದಿಸಲು ದೂಷಿಸಲು ಬಳಸುವ ಪದಗಳು ಬೈಗುಳಗಳಾಗಿ ಉಪಯೋಗಿಸುವ ಶಬ್ದಗಳು ನಮ್ಮ ಸಂಸ್ಕೃತಿಯ ಒಂದು ಮುಖವನ್ನು ತೋರಿಸುತ್ತಿವೆ. ನಾಲಗೆ ಕುಲವನ್ನು ನಿರ್ಧರಿಸುತ್ತದೆ ಎನ್ನುವ ಮಾತು ಮನೆ ಮಾತಾಗಿದೆ. ಹೀಗಿದ್ದರೂ ಬೈಗುಳ ಶಬ್ದಗಳನ್ನು ಕಿವಿಯ ಮೇಲೆ ಹಾಕಿಕೊಳ್ಳದ ಬೈಗುಳಗಳ ಭಾಷೆ, ರಚನೆ ಹಾಗೂ ಆಶಯ ಮನೋಭಾವಗಳ ಬಗೆಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ.

ಒಂದು ಭಾಷೆಯ ಶಬ್ದಗಳು ಬೇರೆಂದೂ ಭಾಷೆಗೆ ಹೋಗಿ ಅನಂತರ ಮತ್ತೊಂದು ಭಾಷೆಗೆ ಬಂದ ಉದಾಹರಣೆಗಳು ಭಾಷಾಶಾಸ್ತ್ರದಲ್ಲಿ ಸಾಕಷ್ಟಿವೆ. ಈ ಮಾತು ಬೈಗುಳ ಶಬ್ದಗಳಿಗೂ ಸರಿಯಾಗಿ ಅನ್ವಯಿಸುವುದು. ಉರ್ದು, ಪಾರಸಿ, ಅರಬ್ಬಿ ಭಾಷೆಯ ಕೆಲವು ಬೈಗುಳಗಳು ಮೊದಲು ಹಿಂದಿ ಭಾಷೆಗೆ ಸೇರಿ ಅನಂತರ ಕನ್ನಡಕ್ಕೆ ಬಂದಿರುವುದು ಉಂಟು. ಈ ದೀರ್ಘಪ್ರಯಾಣದಲ್ಲಿ ಅವು ಬದಲಾವಣೆ ಹೊಂದುವುದು ಸಾಧ್ಯವಿದೆ. ಬೇರೆ-ಬೇರೆ ಭಾಷೆಗಳ ಸಂಕರದಿಂದ ಉತ್ಪತ್ತಿಯಾದ ಬೈಗುಳಗಳೂ ಇವೆ-ಕಳ್ಳಸುವರ್, ನಮಕ್ ಹರಾಂ ಇತ್ಯಾದಿ.

ಬೈಗುಳಗಳಲ್ಲಿನ ಮುಖ್ಯ ಆಶಯಗಳಲ್ಲಿ ವ್ಯಭಿಚಾರ ಹಾಗೂ ಅದರ ಬಗೆಗಿನ ತಿರಸ್ಕಾರಗಳು, ವಿಶ್ವಾಸದ್ರೋಹ, ಸೋಮಾರಿತನ, ದಡ್ಡತನ, ಕಳ್ಳತನ ಇವುಗಳ ಬಗೆಗಿನ ಅಸಹನೆ ಹಾಗೂ ತೀವ್ರ ಹೊಟ್ಟೆಕಿಚ್ಚು ಸೇರಿಕೊಂಡಿವೆ. ಲೈಂಗಿಕ ವ್ಯಭಿಚಾರವೆ ಬಹುಪಾಲು ಬೈಗುಳಗಳ ಮುಖ್ಯ ಆಶಯ ಎಂದು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಮೋಹನ್ ಜಿ.ಎಸ್. ಬೈಗುಳ (೨೦೦೬)

ಎಂಬ ಲೇಖನದಲ್ಲಿ ಬೈಗುಳ ಎಂದರೆ ಕೋಪೋದ್ರಿಕ್ತರಾದಾಗ ಅದಕ್ಕೆ ಕಾರಣನಾದ ವ್ಯಕ್ತಿಯನ್ನು ನಿಂದಿಸಲು, ದೂಷಿಸಲು ಬಳಸುವ ಶಬ್ದಗಳೇ ಬೈಗುಳಗಳು ಎನ್ನುತ್ತಾರೆ. ಬೈಗುಳಗಳಿಗೆ ಕಾರಣವಾದ ಅಂಶಗಳನ್ನು ಹೇಳುತ್ತಾರೆ. ಇವುಗಳು ದಿನನಿತ್ಯ ಮಾತುಗಳಿಗಿಂತಲೂ ಭಿನ್ನ ರೀತಿಯಲ್ಲಿ ಇರುತ್ತವೆ ಎನ್ನುತ್ತಾರೆ. ಜನಪದರ ಪ್ರಕಾರ ವಿರೋಧಿಗಳನ್ನು ತೆಗಳಿ ಕಟುವಾಗಿ ಮಾತಾನಾಡಿ ನೋವುಂಟು ಮಾಡುವುದೇ ಬೈಗುಳ. ಸಮಾಜದಲ್ಲಿ ಬೇಡವಾದದನ್ನು ಬಹಿರಂಗ ಪಡಿಸಿ ಶಾಬ್ದಿಕವಾಗಿ ಆಡುವ ಶಬ್ದಗಳಿವೆ. ಕೆಡಕನ್ನು ಅಥವಾ ಸಾವನ್ನು ಹಾರೈಸುವುದು ಬೈಗುಳದ ಇನ್ನೊಂದು ಮುಖ. ಮಾನ ಮಾರ್ಯಾದೆ ಬಿಟ್ಟು ಮಾತಾನಾಡುವುದು ಕೂಡ ಬೈಗುಳ ಎಂದು ಹೇಳುತ್ತಾರೆ. ಇಷ್ಟಲ್ಲದೆ ಬೈಗುಳಗಳು ಕೇವಲ ಪಂಡಿತ–ಪಾಮರ, ಬಡವ ಬಲ್ಲಿದರಲ್ಲಷ್ಟೆ ಅಲ್ಲ ಮಾತು ಬಾರದ ಮೂಗರು ಕೂಡ ತಮ್ಮ ಹಾವ ಭಾವದಲ್ಲೂ ವ್ಯಕ್ತಪಡಿಸುತ್ತಾರೆ ಎನ್ನುತ್ತಾರೆ. ಬೈಗುಳಗಳು ವ್ಯಂಗ್ಯಕ್ಕಾಗಿ, ಕೆಲವೊಮ್ಮೆ ಸಂತೋಷ ಹೆಚ್ಚಾದಾಗ ಮತ್ತು ಇನ್ನೊಬ್ಬರನ್ನು ಸಂತೋಷ ಪಡಿಸುವುದಕ್ಕಾಗಿ ಒಬ್ಬನ ಕೆಲಸಕ್ಕೆ ಬಹು ಮೆಚ್ಚುಗೆ ಸೂಚಿಸುವುದಕ್ಕಾಗಿ, ದುಃಖವಾದಾಗ ದೇವರನ್ನು ನಂಬಿ ಆ ಕೆಲಸ ಆಗದೆ ಇದ್ದ ಸಂದರ್ಭದಲ್ಲಿ ಬೈಗುಳಗಳು ಬರುತ್ತವೆ ಎನ್ನುತ್ತಾರೆ.

ಬೈಗುಳದ ವ್ಯಾಪ್ತಿ ಇಷ್ಟೇ ಎಂದು ಸೀಮಿತಗೊಳಿಸಲಾಗದು. ಬದುಕಿನ ನಾನಾ ಸಂದರ್ಭಗಳಲ್ಲಿ ನಾನಾ ಸನ್ನಿವೇಶಗಳಲ್ಲಿ ಗಂಡು–ಹೆಣ್ಣಿನ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡು ಬಂದಿವೆ. ಬೈಗುಳ ಕೂಡ ಒಂದು ಕಲೆ. ಅದು ಎಲ್ಲರಿಗೂ ಬರುವಂತಹದಲ್ಲ. ಗಂಡಸರಿಗಿಂತ ಹೆಂಗಸರಲ್ಲಿ ಬೈಗುಳ ಹೆಚ್ಚು ಕಂಡುಬರುತ್ತವೆ. ಬೈಗುಳದ ವಿಷಯವೆ ಅಶ್ಲೀಲವಾದದ್ದು, ಅವಾಚ್ಯವಾದದ್ದು ಮತ್ತು ಶಾಪಯುಕ್ತವಾದದ್ದು ಎಂದು ಇದಕ್ಕೆ ಪೂರಕವಾಗಿ ಜನಪದರಲ್ಲಿ 'ಬರಗಾಲದಲ್ಲಿ ಒಳ್ಳೆ ಊಟ ಸಿಗೋಲ್ಲ, ಜಗಳದಲ್ಲಿ ಒಳ್ಳೆ ಮಾತು ಬರೋಲ್ಲ' ಎಂಬ ಗಾದೆಯನ್ನು ಹೇಳುತ್ತಾ ಯಾವ–ಯಾವ ಸಂದರ್ಭದಲ್ಲಿ ಬೈಗುಳಗಳು ಬಳಕೆಯಾಗುತ್ತದೆ, ಯಾವ ಕಾರಣಕ್ಕಾಗಿ ಬೈಗುಳಗಳು ಬಳಕೆಯಾಗುತ್ತದೆ, ಯಾವ ಕಾರಣಕ್ಕಾಗಿ ಬೈಗುಳಗಳು ಬರುತ್ತವೆ, ಯಾವ ಸಂದರ್ಭದಲ್ಲಿ ಯಾವ ರೀತಿಯ ಬೈಗುಳಗಳನ್ನು ಬಳಸುತ್ತಾರೆ, ಗಾದೆ ರೀತಿಯ ಬೈಗುಳಗಳನ್ನು ಯಾವಾಗ ಬಳಸುತ್ತಾರೆ, ಶಾಪರೂಪದ ಬೈಗುಳಗಳನ್ನು ಯಾವಾಗ ಬಳಸುತ್ತಾರೆ, ಬೈಗುಳಗಳು ಯಾವಾಗ ಬೋಧನೆಯಾಗುತ್ತವೆ, ಬೈಗುಳಗಳು ಯಾವಾಗ ಪ್ರೀತಿಯ ಸಂಕೇತವಾಗುತ್ತವೆ. ಈ ಎಲ್ಲ ಅಂಶಗಳನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಆಶಾಕುಮಾರಿ ಬಿ.ಪಿ. ಬೈಗುಳ ಹಬ್ಬ (೨೦೦೬)

ಈ ಲೇಖನದಲ್ಲಿ ಕರ್ನಾಟಕ ರಾಜ್ಯ ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ದೇವಪುರ ಎಂಬ ಗ್ರಾಮದಲ್ಲಿ ವರ್ಷ ಒಂದರಲ್ಲಿ ನಡೆಯುವ ಅಯ್ಯಪ್ಪ ದೇವರ ಉತ್ಸವ ನಡೆಯುತ್ತದೆ. ಇದು ಬುಡಕಟ್ಟು ಸಮೂಹದಲ್ಲಂತೂ 'ಕುಂಡೆ ಹಬ್ಬ' ವೆಂದೇ ಪ್ರಸಿದ್ಧವಾಗಿದೆ.

ಸನ್ನುವಂಡ ಕೊಡವ ಕುಟುಂಬಸ್ಥರು ಈ ಹಬ್ಬದ ಉಸ್ತುವಾರಿಗಳು. ಆದರೆ ಇದರಲ್ಲಿ ಪಾಲ್ಗೊಳ್ಳುವವರು ಮಾತ್ರ ಬುಡಕಟ್ಟು ಜನರೆ. ಪೌರಾಣಿಕ ಹಿನ್ನೆಲೆಯಲ್ಲಿ ಕುರುಬರನ್ನು ಅಯ್ಯಪ್ಪ ಬೇಟೆಗೆ ಕರೆದುಕೊಂಡು ಕಾಡಿಗೆ ಹೋರಾಟಾಗ ಮಧ್ಯದಲ್ಲ ಭಗವತಿಯನ್ನು ನೋಡಿದ ಕೂಡಲೇ ಅವರನ್ನು ಅವಳ ಜೋತೆಗೆ ಹೊರಟನಂತೆ. ತಿರುಗಿ ನೋಡದೆ 'ಕುಂಡೆ' ತೋರಿಸುತ್ತ ಹೋದ ಅಯ್ಯಪ್ಪ ಮತ್ತು ಭಗವತಿ ದೇವಿಯನ್ನು ಬೈಯುತ್ತ ಹಿಂದಿರುಗಿ ಬಂದ ನೆನಪಿಗಾಗಿ ವರ್ಷ ಈ ಹಬ್ಬವನ್ನು ಆಚಾರಿಸುತ್ತಾರೆ.

ಬೈಗುಳ ಜಾತ್ರೆಯಲ್ಲಿ ಅಯ್ಯಪ್ಪ ಮತ್ತು ಭಗವತಿ ದೇವರನ್ನು ಬೈಯುವುದರ ಮೂಲಕ ತಮ್ಮ ಸುತ್ತಮುತ್ತಲಿನ ಜನರನ್ನು ಕುರಿತು ಅಶ್ಲೀಲವಾಗಿ ಬೈಯುತ್ತಾರೆ. ಆದರೆ ಇಂತಹ ಸಂದರ್ಭದಲ್ಲಿ ಬೈದರೂ ಯಾರು ಕೋಪ ಮಾಡಿಕೊಳ್ಳಬಾರದು. ದಾರಿಯುದ್ದಕ್ಕೂ ಹೋಗುವಾಗ ನಿಂತಿರುವ ಜನರನ್ನು ಕುರಿತು ಮುಖ್ಯವಾಗಿ ಜನರ ಹಿಂಬದಿಯನ್ನು ಕುರಿತು ಹಾಸ್ಯ ಮಾಡುತ್ತಾ, ಸಂಗೀತದ ಜೊತೆ ವ್ಯಂಗ್ಯ ಸೇರಿಸಿಕೊಂಡು ಹಾಡುತ್ತಾ ಹೋಗುತ್ತಾರೆ ಅದರಲ್ಲಿ ಬೈಗುಳವು ಸೇರುತ್ತದೆ.

ಉದಾಹರಣೆಗೆ: ಕುಂಡೆ... ಕುಂಡೆ... ಕರಿಕುಂಡೆ... ಬಿಳಿಕುಂಡೆ... ಆ ಕುಂಡೆ... ಈ ಕುಂಡೆ... ಹೀಗೆ ಕುಂಡೆ ಕುರಿತು ರಾಗ ಬದ್ಧವಾಗಿ ಹೇಳುತ್ತಾ ಹೋಗುತ್ತಾರೆ. ಇದರಿಂದ ಕುಂಡೆ ಹಬ್ಬ ಬಂದಿದೆ ಎಂದು ಲೇಖಕರು ಹೇಳುತ್ತಾರೆ.

ಮೆರವಣಿಗೆಗೆ ಹೋಗುವ ದಾರಿಯಲ್ಲಿ ಅಂಗಡಿಯಲ್ಲಿ ಮಾಲಿಕರ ಹತ್ತಿರ ದುಡ್ಡು ಕೇಳುತ್ತಾರೆ. ಕೋಡದೆ ಇದ್ದರೆ ಬಾಯಿಗೆ ಬಂದಂತೆ ಬೈಯುತ್ತ ಅವರನಷ್ಟಲ್ಲದೆ ಅವರ ಮನೆಯವರನ್ನು ಅಶ್ಲೀಲವಾದ ಬೈಗುಳದ ಮೂಲಕ ಬೈಯುತ್ತಾರೆ. ಈ ಹಬ್ಬದಲ್ಲಿ ಯಾರಿಗೆ ಬೈದರೂ ಶಿಕ್ಷೆಯಾಗುವುದಿಲ್ಲ ಎಂದು ತಿಳಿದು ತಮ್ಮಗೆ ಮೊದಲು ತೊಂದರೆ ಕೊಟ್ಟ ಯಾಜಮಾನರಿಗೆ ಇದೇ ಅವಕಾಶವೆಂದು ಬೈಯುತ್ತಾ ಹೋಗುತ್ತಾರೆ. ಬೇರೆ ದಿನಗಳಲ್ಲಿ ಇವರ ಎದುರು ನಿಂತುಕೊಳ್ಳಲು ಹೆದರುತ್ತಾರೆ. ಅದು ಒಂದು ದಿನ ಮಾತ್ರ ಅವರಿಗೆ ಸ್ವಾತಂತ್ರ್ಯ ಸಿಕ್ಕಿದಾಗೆ. ಹಾಗೇಯೇ ಇಲ್ಲಿಯವರೆಗೆ ದೇವರನ್ನು ಬೈಯುತ್ತಾ ಬಂದಿದ್ದಕ್ಕಾಗಿ ಕ್ಷಮಿಸಬೇಕು ಇನ್ನು ಮುಂದೆ ಬೈಯುವುದಿಲ್ಲ ಎಂದು ದೇವರಲ್ಲಿ ಕೇಳಿಕೊಳ್ಳುತ್ತಾರೆ. ಆದರೆ ಇದು ಈ ವರ್ಷಕ್ಕೆ ಮಾತ್ರ, ಮುಂದಿನ ವರ್ಷ ಅದೇ ರೀತಿ ಬೈಯುತ್ತಾ ಹಬ್ಬವನ್ನು ಆಚರಿಸುತ್ತಾರೆ. ಹೀಗೆ ಈ ಲೇಖನದಲ್ಲಿ ಬೈಗುಳ ಹಬ್ಬವನ್ನು ಕುರಿತು ಚರ್ಚಿಸಿದ್ದಾರೆ.

ನಾಗರಾಜ ಸಿ.ಪಿ. 'ಬೈಗುಳ': (೧೯೯೮)

ಇವರ ಲೇಖನದಲ್ಲಿ ಯಾವುದೇ ವಸ್ತು ಸಂಗತಿ ವ್ಯಕ್ತಿಯನ್ನು ತೆಗಳುವುದಕ್ಕಾಗಿ, ನೋಯಿಸುವುದಕ್ಕಾಗಿ, ಕೇಡು ತಟ್ಟಲೆಂದು ಶಪಿಸುವುದಕ್ಕಾಗಿ ಆಡುವ ನುಡಿಸಾಮಗ್ರಿಗಳನ್ನು ಬೈಗುಳ ಎಂದಿದ್ದಾರೆ. ಬೈಗುಳ ಪದ ಹೇಗೆ ರೂಪ ಪಡೆದುಕೊಂಡಿದೆ, ಜನರು ಹೇಗೆ

ಉಚ್ಚಾರಣೆ ಮಾಡುತ್ತಾರೆ, ಬೈಗುಳ ಪದಗಳನ್ನು ಎಲ್ಲರೂ ಏಕೆ ಕೆಟ್ಟದು ಎನ್ನುತ್ತಾರೆ ಎಂದು ಚರ್ಚಿಸಿದ್ದಾರೆ. ತಮ್ಮ ಜೀವನದಲ್ಲಿ ಯಾರು ಬೈಯಿಸಿಕೊಳ್ಳದ ವ್ಯಕ್ತಿಗಳು ಇಲ್ಲ ಹಾಗೆಯೇ ಒಂದಲ್ಲ ಒಂದು ಬೈಗುಳಗಳನ್ನು ಬಳಸದ ವ್ಯಕ್ತಿಗಳಿಲ್ಲ ಎಂದು ಹೇಳುತ್ತಾರೆ. ಬೈಗುಳಗಳು ಬಳಕೆಗೊಂಡಿರುವ ಕೆಲವು ಪ್ರಸಂಗಗಳನ್ನು ಗಮನಿಸುವ ಅಗತ್ಯವಿದೆ. ಮತ್ತು ಆ ಮೂಲಕ ಬೈಗುಳಗಳು ಯಾವಾಗ, ಎಲ್ಲಿ, ಯಾರಿಗೆ, ಏಕೆ, ಹೇಗೆ ಬಳಕೆಯಾಗುತ್ತವೆ ಎಂಬುದನ್ನು ತಿಳಿಯಬೇಕು ಮತ್ತು ಶ್ರೀಮಂತ ಮತ್ತು ಮೇಲ್ವರ್ಗದ ಹೆಣ್ಣು ಯಾಕೆ ಹೆಚ್ಚಾಗಿ ಬೈಯಿಸಿಕೊಳ್ಳುತ್ತಾಳೆ ಗಂಡಿಗೆ ಯಾಕೆ ಎದುರಾಡುವುದಿಲ್ಲ. ಕೆಳವರ್ಗದ ಹೆಣ್ಣು ಗಂಡಿಗೆ ಸಮಾನಾಗಿ ಬೈಗುಳಗಳಿಗೆ ತೋಡುಗುತ್ತಾಳೆ. ಮತ್ತು ಮೇರ್ಲ್ವದವರ ನೆಲೆಯಲ್ಲಿ ಬೈಗುಳ ಹೇಗಿರುತ್ತೆ, ಕೆಳವರ್ಗದವರ ನೆಲೆಯಲ್ಲಿ ಬೈಗುಳಗಳು ಹೇಗಿರುತ್ತವೆ ಎಂಬಂಶಗಳನ್ನು ಹೇಳುತ್ತಾ, ಇದ್ದಕ್ಕಿದ್ದಂತೆ ಯಾವಾಗ ಬೈಯುತ್ತಾರೆ? ಯಾವ ಬೈಗುಳಗಳನ್ನು ಬಳಕೆ ಮಾಡುತ್ತಾರೆ, ಉದ್ದೇಶಪೂರ್ವಕವಾಗಿ ಯಾವಾಗ ಬೈಯುತ್ತಾರೆ? ಉದ್ದೇಶಪೂರ್ವಕವಾಗಿ ಯಾವ ರೀತಿಯ ಬೈಗುಳಗಳನ್ನು ಬಳಸುತ್ತಾರೆ ಮತ್ತು ಯಾವುದೇ ಒಂದು ನುಡಿ ಸಮುದಾಯದ ಮಾತುಕತೆಗಳಲ್ಲಿ ಯಾವ ಬಗೆಯ ಬೈಗುಳಗಳು ಬಳಕೆಯಾಗುತ್ತವೆ ನುಡಿ ಸಮುದಾಯದ ಸಾಮಾಜಿಕ ವರ್ತನೆಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

* * *

ಅಧ್ಯಾಯ : ೩

ಬೈಗುಳ ಮತ್ತು ಹೆಣ್ಣು - ಭಾಷಿಕ ರಚನೆ

ಅಧ್ಯಾಯ – ೩

ಬೈಗುಳ ಮತ್ತು ಹೆಣ್ಣು – ಭಾಷಿಕ ರಚನೆ

ಬೈಗುಳಗಳು ಸಾಂದರ್ಭಿಕವಾಗಿ ರಚನೆಯಾಗುವ ಅಥವಾ ಪ್ರತಿ ಬಳಕೆಯ ಸಂದರ್ಭದಲ್ಲಿಯೂ ಕ್ರಿಯಾಶೀಲ ಭಾಷಿಕ ಚಟುವಟಿಕೆ ಆಗಿರದೆ ಅವು ಸಿದ್ಧ ರಚನೆಗಳು ಪದ, ಪದಪುಂಜ, ವಾಕ್ಯಾತ್ಮಕ ಸಂಕಥನಗಳವರೆಗೂ ದೀರ್ಘವಾಗುತ್ತವೆ. ಹಾಗೆಯೇ ಬೈಗುಳಕ್ಕೆ ಒಳಗಾಗುವ ವ್ಯಕ್ತಿ ಅಥವಾ ಘಟನೆ ಸಂದರ್ಭಗಳಿಗೆ ಸಂಬಂಧಿಸಿದಂತೆ ಆ ರಚನೆಯ ಚೌಕಟ್ಟಿಗೆ ಹೊಸ ಸೇರ್ಪಡೆವಾಗುತ್ತಿರುತ್ತವೆ. ಯಾವು ಯಾವುದೇ ಕಾಲದಲ್ಲಿ ರಚನೆಗೊಂಡಿರಬಹುದಾದ ಬೈಗುಳಗಳಿಗೆ ರಚನೆಯಾದ ಸಂದರ್ಭದ ಸಾಮಾಜಿಕ ವ್ಯವಹಾರಗಳು ಆಕರವಾಗಿದ್ದು ಅವು ಬಳಕೆಯಾಗುವ ಪ್ರಸ್ತುತ ಸಂದರ್ಭದಲ್ಲಿ ಯಾವುದೇ ಗುರುತುಗಳಲ್ಲಿರಬಹುದು. (ಉದಾ: 'ಬಸವಿ', 'ಬಜಾರಿ', 'ಬೋಳಿ') ಈ ಸಂದರ್ಭಗಳು ಪ್ರಸ್ತುತದಲ್ಲಿ ಇಲ್ಲವೆನ್ನುವಷ್ಟು ಕಡಿಮೆಯಾಗಿದ್ದರೂ ಬೈಗುಳಗಳಾಗಿ ಅಸ್ತಿತ್ವದಲ್ಲಿವೆ.

ಸಮಾಜದ ಜನತೆಯ ಸಂಸ್ಕಾರ ಹಾಗೂ ಸಂಸ್ಕೃತಿಗಳನ್ನು ತಿಳಿಯಲು ಭಾಷೆಯು ಸಹಾಯವಾಗುತ್ತದೆ. ಬೈಗುಳಗಳ ಭಾಷೆಯು ಮಾನವನ ವ್ಯಕ್ತಿತ್ವವನ್ನು ಅನುಭವಗಳನ್ನು ಮತ್ತು ಆಲೋಚನೆಗಳನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಬಹುದು. ಬೈಗುಳಗಳ ಭಾಷಿಕ ರಚನೆಯನ್ನು ನೋಡಿದಾಗ ಅದರಲ್ಲಿ ಹೆಣ್ಣನ್ನು ಯಾವ ರೀತಿಯಲ್ಲಿ ಕೇಂದ್ರಿಕರಿಸಿಕೊಂಡು ರಚನೆಯಾಗಿವೆ ಎಂಬುದನ್ನು ತಿಳಿಯಬಹುದು. ಸಾಮಾಜಿಕ ಸಂಬಂಧಗಳನ್ನು ಬೈಗುಳಗಳ ಭಾಷೆಯ ಮೂಲಕ ಅರ್ಥಮಾಡಿಕೊಳ್ಳುವ ಸಾಧ್ಯತೆಯಿದೆ. ಭಾಷಿಕ ರಚನೆಯ ಹಿನ್ನೆಲೆಯಲ್ಲಿ ಬೈಗುಳಗಳನ್ನು ಗಮನಿಸಿದಾಗ ಸ್ತ್ರೀಯನ್ನೆ ಆಧರಿಸಿ ರಚನೆಯಾಗಿರುವ ಬೈಗುಳಗಳ ಪ್ರಮಾಣವೇ ಸಾಕಷ್ಟು ಸಿಗುತ್ತವೆ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಭಾಷಿಕ ಅಂಶವಾಗಿ ಪದ, ಪದಪುಂಜ, ವಾಕ್ಯ, ಪ್ರಾಸ, ಗಾದೆ, ನುಡಿಗಟ್ಟುಗಳನ್ನು ಗುರುತಿಸಿಕೊಂಡು ಇವುಗಳಲ್ಲಿ ಹೆಣ್ಣನ್ನು ಹೇಗೆ ಬೈಗುಳದ ಮೂಲಕ ಚಿತ್ರಿಕರಿಸಲಾಗಿದೆ ಮತ್ತು ಗಂಡಿಗೆ ಬೈದರೂ ಅದು ಹೆಣ್ಣಿನ ಮೂಲಕ ಹೇಗೆ ವ್ಯಕ್ತವಾಗುತ್ತದೆ ಎಂಬಾಂಶವನ್ನು ಇಟ್ಟುಕೊಂಡ ಭಾಷಿಕವಾಗಿ ಈ ಭಾಗದಲ್ಲಿ ದಾಖಲಿಸಲಾಗಿದೆ.

೩.೧ ಪದರೂಪದ ಬೈಗುಳಗಳು:

ಪದರೂಪದಲ್ಲಿರುವ ಬೈಗುಳನ್ನು ರಚನೆ ಮತ್ತು ಬಳಕೆ ಎರಡು ನೆಲೆಗಳಲ್ಲೂ ಪರಿಶೀಲಿಸಬಹುದು. ಪದರೂಪದಲ್ಲಿರುವ ಬೈಗುಳಗಳನ್ನು ಅದರ ನಿಷ್ಪತ್ತಿ, ಅರ್ಥದ ನೆಲೆಗಳನ್ನು ಕುರಿತು ದಾಖಲಿಸಲಾಗಿದೆ. ಹೆಣ್ಣಿಗೆ ಅನ್ವಯವಾಗುವಂತಹ ಪದರೂಪದ ಬೈಗುಳ, ಇಬ್ಬರಿಗೂ ಅನ್ವಯವಾಗುವಂತಹ ಬೈಗುಳ, ಅನ್ಯಭಾಷಾ ಪದಗಳಿಂದ ಬಂದಂತಹ ಬೈಗುಳಗಳನ್ನು ಈ ಭಾಗದಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

ಪದರೂಪದಲ್ಲಿರುವ ಬೈಗುಳಗಳನ್ನು ಮೂರು ನೆಲೆಯಲ್ಲಿ ದಾಖಲಿಸಬಹುದು.

೩.೧.೧. ಪದರೂಪದ ಬೈಗುಳಗಳ ನಿಷ್ಪತ್ತಿಯನ್ನು ಕುರಿತು ಮತ್ತು ಅದರ ಮೂಲಾರ್ಥ ಕಾಲಾಂತರದಲ್ಲಿ ಅದು ಪಡೆದುಕೊಂಡ ಅರ್ಥದ ನೆಲೆಯಲ್ಲಿ.

೩.೧.೨. ಒಂದು ತಟಸ್ಥ ಪದರೂಪದ ಬೈಗುಳ ಗಂಡಿಗೆ ಅನ್ವಯವಾದಾಗ ಹೊಂದುವ ಅರ್ಥದ ನೆಲೆ ಮತ್ತು ಹೆಣ್ಣಿಗೆ ಅನ್ವಯವಾದಾಗ ಹೊಂದುವ ಅರ್ಥದ ನೆಲೆಯಲ್ಲಿ.

೩.೧.೩. ಅನ್ಯ ಭಾಷಾಯಿಂದ ಬಂದ ಪದರೂಪದ ಬೈಗುಳಗಳ ಅರ್ಥದ ನೆಲೆ ಮತ್ತು ಬಳಕೆಯ ನೆಲೆಯಲ್ಲಿ.

೩.೧.೧. ಪದರೂಪದ ಬೈಗುಳಗಳ ನಿಷ್ಪತ್ತಿಯನ್ನು ಕುರಿತು ಮತ್ತು ಅದರ ಮೂಲಾರ್ಥ ಕಾಲಾಂತರದಲ್ಲಿ ಅದು ಪಡೆದುಕೊಂಡ ಅರ್ಥದ ನೆಲೆಯಲ್ಲಿ. ಉದಾ.

೧. [ಸುಳೆ] ರತಿಸುಖ ನೀಡುವವಳು → [ವೃತ್ತಿ] ಹೀನಾರ್ಥ ಪ್ರಾಪ್ತಿ → [ಹಾದರ ಮಾಡುವವಳು]

೨. [ಬಜಾರಿ] ಬಜಾರದಲ್ಲಿ ಕೆಲಸ ಮಾಡುವವಳು → [ವೃತ್ತಿ] ಹೀನಾರ್ಥ ಪ್ರಾಪ್ತಿ → [ಹೆಚ್ಚು ಮಾತನಾಡುವವಳು]

೩. [ಬಸವಿ] ದೇವರಿಗೆ ಬಿಟ್ಟ ಹೆಣ್ಣು → [ಸಾಂಸ್ಕೃತಿಕ ಆಚರಣೆ] ಹೀನಾರ್ಥ ಪ್ರಾಪ್ತಿ ಹೆಚ್ಚು → [ಅಲಂಕಾರ ಮಾಡಿಕೊಳ್ಳುವ ಹೆಣ್ಣು]

೪. [ಬೊಡ್ಡಿ] ರತಿಸುಖ ನೀಡುವವಳು → [ವೃತ್ತಿ] ಹೀನಾರ್ಥ ಪ್ರಾಪ್ತಿ → [ಮಕ್ಕಳು ಇಲ್ಲದ ಹೆಣ್ಣು]

೫. [ತುಡುಗಿ] ರತಿಸುಖ ಬಯಸುವ ಗಂಡಿಗೆ ಹೆಣ್ಣುಗಳನ್ನು ಹೊಂದಿಸಿ ಕೊಡುವವಳು → [ವೃತ್ತಿ] ಹೀನಾರ್ಥ ಪ್ರಾಪ್ತಿ → [ತಲೆಹಿಡಿಯುವವಳು]

೬. [ಜೋಗಮ್ಮ] ದೇವರಿಗೆ ಬಿಟ್ಟ ಹೆಣ್ಣು → [ಸಾಂಸ್ಕೃತಿ ಆಚರಣೆ] ಹೀನಾರ್ಥ ಪ್ರಾಪ್ತಿ → [ಹೆಣ್ಣಿನಂತೆ ವರ್ತಿಸುವ ಗಂಡು]

೭. [ಹಿಡಿಂಬಿ] ರಾಕ್ಷಸ ಸಮುದಾಯದ ಹೆಣ್ಣು → [ಒರಟುತನ] ಹೋಲಿಕೆ → [ದೈತ್ಯಾಕಾರದ ಹೆಣ್ಣು]

೮. [ತಾಟಗಿತ್ತಿ] ರಾಕ್ಷಸ ಸಮುದಾಯದ ಹೆಣ್ಣು → [ಜಗಳಗಂಟಿ] ಹೋಲಿಕೆ → [ತಂದಿಡುವ ಗುಣವುಳ್ಳವಳು]

೯. [ಶೂರ್ಪನಖಿ] ರಾಕ್ಷಸ ಸಮುದಾಯದ ಹೆಣ್ಣು → [ಲಂಪಟತನ] ಹೋಲಿಕೆ → [ಮೋಸ ಮಾಡುವ ಗುಣವುಳ್ಳವಳು]

೧೦. [ಸವತಿ] ಗಂಡನ ಎರಡನೆ ಹೆಂಡತಿ → [ಸಂಬಂಧ ವಾಚಕ] ಹೀನಾರ್ಥ ಪ್ರಾಪ್ತಿ → [ದ್ವೇಷ ಸಾಧಿಸುವ ಗುಣವುಳ್ಳವಳು]

೧೧. [ಕುಂಟಲಗಿತ್ತಿ] ಗಂಡು ಹೆಣ್ಣಿಗೆ ರಹಸ್ಯ ಸಂಭೋಗಕ್ಕೆ ಹೊಂದಿಸುವವಳು → [ವೃತ್ತಿ] ಹೀನಾರ್ಥ ಪ್ರಾಪ್ತಿ → [ತಂದಿಡುವ ಗುಣವುಳ್ಳವಳು]

೧೨. ಜಂಬಗಿತ್ತಿ ಜಂಬ ಕೊಚ್ಚಿಕೊಳ್ಳುವವಳು → ಸ್ವಭಾವ ಹೀನಾರ್ಥ ಪ್ರಾಪ್ತಿ → ಅಹಂಕಾರದಿಂದ ಮೆರೆಯುವವಳು

೧೩. ಗಯ್ಯಾಳಿ ಜಗಳಗಂಟಿ → ನಡವಳಿಕೆ ಹೀನಾರ್ಥ ಪ್ರಾಪ್ತಿ → ಧಿಮಾಕಿನಿಂದ ವರ್ತಿಸುವವಳು

೧೪. ಮಳ್ಳಿ ಗೊತ್ತಿದ್ದು ನಟನೆ ಮಾಡುವವಳು → ನಡವಳಿಕೆ ಹೀನಾರ್ಥ ಪ್ರಾಪ್ತಿ → ಅಹಂಕಾರದಿಂದ ಮೆರೆಯುವವಳು

೧೫. ಬಡ್ಡಿ ಬಡ್ಡಿ ವ್ಯಾಪಾರ ಮಾಡುವವಳು → ವೃತ್ತಿ ಹೀನಾರ್ಥ ಪ್ರಾಪ್ತಿ → ವೇಶ್ಯೆ/ಸೂಳೆ

ನಡವಳಿಕೆಗೆ ಸಂಬಂಧಿಸಿದ

ಸೂಳೆ

ಬೊಡ್ಡಿ

ತುಡುಗಿ

ಗಯ್ಯಾಳಿ

ಬಜಾರಿ

ಬಿಡಿಕಿ

ಬೋಳಿ

ಮಳ್ಳಿ

ಬಡ್ಡಿ

ಹಡಸಿ

ಸ್ವಭಾವಕ್ಕೆ ಸಂಬಂಧಿಸಿದ

ಜಂಬಗಿತ್ತಿ

ಕುಂಟಲಗಿತ್ತಿ

ತಿಗಳಗಿತ್ತಿ

ತೀಟಗಾತಿ

ಅಗಣಗಿತ್ತಿ

ತಾಟಗಿತ್ತಿ

ಸವತಿ

ಹೋಲಿಕೆಗೆ ಸಂಬಂಧಿಸಿದ

ಹಿಡಂಬಿ

ಶೂರ್ಪನಖಿ

ಮಂಡೋದರಿ

ಜೋಗಮ್ಮ

ಬಸವಿ

ಇತರೆ

ಬೋಳಿ

ರಂಡೆ

ಮುಂಡೆ

ಸೂಳೆ:–

ಅನೈತಿಕ ನಡುವಳಿಕೆಯಲ್ಲಿ ತೊಡಗಿರುವ ಹೆಣ್ಣಿಗೆ ಸಂಬಂಧಿಸಿದಂತೆ ರಚನೆಯಾಗಿರುವ ಪದರೂಪದ ಬೈಗುಳ ಇದಾಗಿದೆ. ಅನೈತಿಕ ನಡವಳಿಕೆಯಲ್ಲಿ ಗಂಡು ತೊಡಗಿದರೂ ಅದು ತಪ್ಪು ಎಂದು ಸಮಾಜ ಹೇಳುವುದಿಲ್ಲ, ಆದರೆ ಹೆಣ್ಣು ತೊಡಗಿದಾಗ ಅದು ನಿಷಿದ್ಧ ಎಂಬ ನಿಲುವು ಸಮಾಜದಲ್ಲಿದೆ. ಸೂಳೆ ಎಂಬ ಪದಕ್ಕೆ ಹಿಂದೆ 'ವೇಶ್ಯೆ' ಎಂಬ ಅರ್ಥವಿದ್ದು, ಸಮುದಾಯ ಒಪ್ಪಿತವಾದ ವೃತ್ತಿಸೂಚಕ ಪದವಾಗಿತ್ತು. ಈ ಪದ ವೃತ್ತಿಗೆ ಸಂಬಂಧಿಸಿದಾಗಿದ್ದು ಕಾಲಾಂತರದಲ್ಲಿ ಅದು ಬೈಗುಳ ಪದವಾಗಿ ರೂಪ ಪಡೆದುಕೊಂಡಿದೆ. 'ವೇಶ್ಯೆ' ವೇಷ ಹಾಕುವ ಮಹಿಳೆ. ಇವಳು ಮಾಡುವ ಕೆಲಸ 'ಸೂಳೆಗಾರಿಕೆ'.

ಉದಾ: ಸೂಳೆಗಾರಿಕೆತನ ಮಾಡತ್ತೀಯಾ ನೀನು ಎಂದು ಹೇಳುತ್ತಾರೆ. ಇದರ ಅರ್ಥ ಸೂಳೆಗಾರಿಕೆ ವೃತ್ತಿ ಮಾಡುತ್ತಿಯಾ ಎಂಬುದಾಗಿದೆ. ಒಂದು ಕಾಲದಲ್ಲಿ ಇದು ಸಮಾಜದಲ್ಲಿ ಒಪ್ಪಿತವಾದ ಕೆಲಸವಾಗಿದ್ದು ಇವರು ಗೌರವದಿಂದ ಜೀವನ ನಡೆಸುತ್ತಿದ್ದರು. ಕಾಲಾಂತರದಲ್ಲಿ ಈ ಕೆಲಸ ಒಪ್ಪಿತವಲ್ಲದ ವೃತ್ತಿಯಾಗಿ ಬಳಕೆಯಾಗ ತೊಡಗಿತು. ಆಗ ಈ ಪದ ಬೈಗುಳದ ಪದವಾಗಿ ರೂಪ ಪಡೆದುಕೊಂಡಿದೆ ಎಂದು ಹೇಳಬಹುದು.

ಸೂಳೆ: ಸೂಳ್+ಎ=ಸೂಳೆ

ಸೂಳ್ ಪದದ ಅರ್ಥ

ಸೂಳ್–ಹೊತ್ತು, ಸಮಯ

ರತಿಸುಖದ ಸರದಿ, ವೇಳೆ ಆಗಿದ್ದವು.

'ಸೂಳ್' ಪದಕ್ಕೆ ಸ್ತ್ರೀವಾಚಕ ಪ್ರತ್ಯಯ 'ಎ'ಯನ್ನು ಸೇರಿಸಿ ಸೂಳೆ ಎಂಬ ಪದ ರಚಿತವಾಗಿದೆ ಎಂದು ಊಹಿಸಲು ಸಾಧ್ಯವಿದೆ. ಸರದಿಯ ಪ್ರಕಾರ ರತಿ ಸುಖವನ್ನು ನೀಡುವವಳು ಅಥವಾ ರತಿಸುಖದ ವೇಳೆಯಲ್ಲಿ ಅದನ್ನು ನೀಡುವ ಹೆಣ್ಣು ಎಂಬ

ಅರ್ಥದಲ್ಲಿ ಈ ಪದ ರಚಿತವಾಗಿದೆ'. (ಕನ್ನಡ ಭಾಷೆ: ಲಿಂಗಸಂಬಂಧಿ ಆಯಾಮಗಳು ಪು.೧೨೩)

ಬಜಾರಿ:-

ಇದೊಂದು ನಾಮಪದ ರೂಪದ ಬೈಗುಳವಾಗಿದೆ. ಅತೀ ಹೆಚ್ಚು ಮಾತಾನಾಡುವ ಹೆಣ್ಣಿಗೆ ಸಂಬಂಧಿಸಿದಂತೆ ಈ ಪದರೂಪದ ಬೈಗುಳ ರಚನೆಯಾಗಿದೆ. ಗಂಡುಮಕ್ಕಳು ಹೆಚ್ಚು ಮಾತಾನಾಡಿದರೂ ಅವರಿಗೆ ಈ ಪದ ಬಳಕೆಯಾಗುವುದಿಲ್ಲ. 'ಮಾತು ಬೆಳ್ಳಿ, ಮೌನ ಬಂಗಾರ' ಎಂಬ ಗಾದೆ ಇರುವಂತೆ ಹೆಣ್ಣು ಮೌನವಾಗಿರಬೇಕು ಅವಶ್ಯಕತೆಕ್ಕಿಂತ ಹೆಚ್ಚು ಮಾತನಾಡಬಾರದು ಎಂಬುವುದು ಸಮಾಜದ ವಾಡಿಕೆಯಾಗಿದೆ. ಈ ಪದ 'ಬಜಾರ್' ಎಂಬ ಪದದಿಂದ ಬಂದಿದೆ. ಬಜಾರದಲ್ಲಿ ವ್ಯಾಪಾರ ಮಾಡುವವರು ಹೆಣ್ಣು-ಗಂಡು ಆಗಿರಬಹುದು. ಅವರು ವ್ಯಾಪಾರ ಮಾಡುವ ದೃಷ್ಟಿಯಿಂದ ಹೆಚ್ಚು ಮಾತಾನಾಡುತ್ತಾರೆ. ಅದು ವ್ಯಾಪಾರದ ಒಂದು ಲಕ್ಷಣವು ಹೌದು. ಇದು ಇದರ ಮೂಲಾರ್ಥವಾಗಿದೆ. ಆದರೆ ಗಂಡು ವ್ಯಾಪಾರಕ್ಕಾಗಿ ಹೆಚ್ಚು ಮಾತಾನಾಡಿದರೂ ಬಜಾರ ಎಂಬ ಪದ ಬಳಕೆಯಲ್ಲಿ ಇಲ್ಲ. ಆದರೆ ಇದು ಕೇವಲ ಹೆಣ್ಣಿಗೆ ಮಾತ್ರ ಸೀಮಿತವಾದ ಪದವಾಗಿದೆ. ಈ ಹಿನ್ನೆಲೆಯಲ್ಲಿ 'ಬಜಾರ' ಎಂಬ ಪದಕ್ಕೆ ಸ್ತ್ರೀವಾಚಕ ಪ್ರತ್ಯಯ 'ಇ'ಯನ್ನು ಸೇರಿಸಿ 'ಬಜಾರಿ' ಎಂಬ ಪದ ರಚನೆಯಾಗಿ ಬಳಕೆಗೆ ಬಂದಿದೆ.

ಬಸವಿ:-

ಇದೊಂದು ಹೆಣ್ಣಿಗೆ ಬೈಯುವ ಪದರೂಪದ ಬೈಗುಳವಾಗಿದೆ. ಈ ಪದ ದೇವರಿಗೆ ಬಿಟ್ಟ ಹೆಣ್ಣಿಗೆ ಸಂಬಂಧಿಸಿದಂತೆ ಈ ಪದ ರಚನೆಯಾಗಿದೆ ಎಂದು ಊಹಿಸಲು ಸಾಧ್ಯವಿದೆ. ದೇವರಿಗೆ ಹೆಣ್ಣನ್ನು ಅರ್ಪಿಸುವುದು ಅಥವಾ ಹರಿಕೆಯನ್ನು ತೀರಿಸಿಕೊಳ್ಳುವ ಸಲುವಾಗಿ ಹೆಣ್ಣನ್ನು ದೇವರಿಗೆ ಬಿಡುತ್ತಾರೆ. ಈ ಪದ್ಧತಿ ಸಮಾಜದಲ್ಲಿ ರೂಢಿಗತವಾಗಿ ಬೆಳೆದುಕೊಂಡು ಬಂದಿದೆ. ಇಂತ ಹೆಣ್ಣನ್ನು ಗುರುತಿಸುವ ಸಲುವಾಗಿ ಬಸವಿ ಎಂಬ ಪದ ಬಳಕೆಯಾಗ ತೊಡಗಿತ್ತು. ಈಗ ಇದು ಬೈಗುಳ ಪದವಾಗಿ ಬಳಕೆಯಾಗುತ್ತದೆ. ಇನ್ನೊಂದು ರೀತಿಯಲ್ಲಿ ನೋಡುವುದಾದರೆ ಇದು ಸಂಸ್ಕೃತದ ವೃಷಭ ಎಂಬ ಶಬ್ದದ ತದ್ಭವವಾಗಿದೆ. ಈ ಶಬ್ದಕ್ಕೆ ಬೇರೆ-ಬೇರೆ ಅರ್ಥವನ್ನು ಹೇಳುವುದಾದರೆ ಹೋರಿ, ಗೂಳಿ, ಎತ್ತು ಎಂದು ಇದೆ. ದೇವಸ್ಥಾನಗಳಿಗೆ ಬಿಡುವ ಗಂಡು ಕರು ಬಸವ. ಬಸವ ಎಂಬ ಪದಕ್ಕೆ ಸ್ತ್ರಿವಾಚಕ 'ಇ' ಪ್ರತ್ಯಯ ಸೇರಿಸಿ ಬಸವಿಯಾಗಿದೆ. ಬಸವಿಯನ್ನು ಸಹ ದೇವರಿಗೆ ಬಿಟ್ಟ ಹೆಣ್ಣು ಆಗಿರುತ್ತಾಳೆ. ಹಾಗಾಗಿ ಬಸವ ಎಂಬ ಪದದಿಂದ ಬಸವಿ ಎಂಬ ಪದ ಹುಟ್ಟಿದೆ ಎಂದು ಹೇಳಬಹುದು. ದೇವದಾಸಿ, ಬಸವಿ, ಸೂಳೆ ಈ ಮೂರು ಪದಗಳಿಗೂ ಒಂದು ಸ್ಪಷ್ಟ ವ್ಯತ್ಯಾಸವಿದೆ. 'ಸೂಳೆ' ಎಂಬುದು ಸಾಮಾನ್ಯವಾಗಿ ವೇಶ್ಯೆ ಎಂಬಾರ್ಥವನ್ನು ಪಡೆದಿದೆ. ಶಾಸನಗಳಲ್ಲಿ ಅದನ್ನು 'ದೇವದಾಸಿ' ಎಂಬರ್ಥದಲ್ಲಿ ಬಳಕೆ ಮಾಡಿರುವುದೂ ಉಂಟು. 'ಬಸವಿ'

ಎಂಬರ್ಥದಲ್ಲಿಯೂ ಅದನ್ನು ವ್ಯವಹಾರದಲ್ಲಿ ಬಳಸುತ್ತಾರೆ. ಆದರೆ ಸಾಮಾನ್ಯವಾಗಿ ಅದನ್ನು ಹೀನಾರ್ಥದಲ್ಲಿ ಬಳಸುವುದೇ ಹೆಚ್ಚು. ದೇವದಾಸಿ ಮತ್ತು ಬಸವಿ ಇಬ್ಬರೂ ದೇವರ ಹೆಣ್ಣುಗಳು ಮತ್ತು ಅವರು ಸಾಮಾಜಿಕವಾಗಿ ತಿರಸ್ಕೃತರಲ್ಲ. ಅವರನ್ನು ಸಮಾಜ ಒಪ್ಪಿಕೊಂಡಿರುತ್ತದೆ. ದೇವದಾಸಿ ದೇವಾಲಯದ ಆಡಳಿತಕ್ಕೆ ಸೇರಿದವಳಾದ್ದರಿಂದ ಅವಳಿಗೆ ಅದರ ಆದಾಯದ ಹಕ್ಕು ಇರುತ್ತದೆ. ಅವಳನ್ನು ದೇವಾಲಯದ ಆಡಳಿತವರ್ಗ ನೇಮಿಸಿಕೊಂಡಿರುತ್ತದೆ. ಆದರೆ ಬಸವಿಯರನ್ನು ದೇವಾಲಯ ನೇಮಿಸಿಕೊಂಡಿರುವುದಿಲ್ಲ. ತಂದೆ-ತಾಯಿಂದಿರು ಬೇರೆ-ಬೇರೆ ಕಾರಣಗಳಿಗಾಗಿ ಅಂದರೆ ಹರಕೆ, ಸಂತಾನಾಪೇಕ್ಷೆ ಇತ್ಯಾದಿಗಳಿಗೋಸ್ಕರ ತಾವೇ ದೇವರಿಗೆ ಒಪ್ಪಿಸಿರುತ್ತಾರೆ. ಅವರನ್ನು ಸಾಕಬೇಕಾದವರು ಅವರ ತಂದೆ-ತಾಯಿಂದಿರೇ. ಬಸವಿಯಾಗಿರುವುದು ಸಮಾಜದ ಕಾರಣವಾಗಿ ಅಲ್ಲ, ಒಂದು ಸಂಸಾರದ ವೈಯಕ್ತಿಕ ಕಾರಣದಿಂದ ಎಂದು ಹೇಳಬಹುದು. ಆದರೆ ಈ ಪದ ಕಾಲಾಂತರದಲ್ಲಿ ಹೀನಾರ್ಥ ಪಡೆದುಕೊಂಡು ಬೈಗುಳ ಪದವಾಗಿ ಬಳಕೆಯಾಗುತ್ತಿದೆ.

ಈ ಪದ ಬಳಕೆಯಾಗುವ ನೆಲೆಯನ್ನು ನೋಡುವುದಾದರೆ ಹೆಚ್ಚು ಅಲಂಕಾರ ಮಾಡಿಕೊಳ್ಳುವ ಹೆಣ್ಣಿಗೆ 'ನೀನೇನು ಬಸವಿ ಏನು ಹಾಂಗೆ ರೇಡಿಯಾಗತ್ತಿಯಲ್ಲಾ' ಎಂದು ಬೈಯುತ್ತಾರೆ ಮತ್ತು ವಯ್ಯಾರ ಮಾಡುವ ಹೆಣ್ಣಿಗೂ ಸಹ 'ಏನು ಹಾಂಗೆ ವಯ್ಯಾರ ಮಾಡಕೊಂಡು ಬರತ್ತಿಯಾ ಗೋತ್ತಾಗಲ್ಲ ನಿನಗೆ ಒಳ್ಳೆ ಬಸವಿಯರು ಮಾಡಿದಾಂಗೆ ಮಾಡತ್ತಿಯಾ ಅಲ್ಲಾ ನೀನು' ಎಂದು ಬೈಯುತ್ತಾರೆ. ಅಂದರೆ ಬಸವಿ ಹೆಣ್ಣು ಮಕ್ಕಳು ಹೆಚ್ಚು ಅಲಂಕಾರ ಭೂಷಿತರಾಗಿರುತ್ತಾರೆ. ಸಾಮಾನ್ಯ ಹೆಣ್ಣು ಮಕ್ಕಳಗಿಂತ ಈ ಬಸವಿಯರು ಭಿನ್ನ ರೀತಿಯಲ್ಲಿ ಅಲಂಕಾರ ಮಾಡಿಕೊಂಡಿರುತ್ತಾರೆ ಮತ್ತು ಅವರ ನಡೆ ನುಡಿ ಸಹ ಭಿನ್ನ ರೀತಿಯಲ್ಲಿರುತ್ತದೆ. ಇತ್ತಿಚಿಗೆ ಈ ಪದ್ಧತಿ ಕಡಿಮೆಯಾಗುತ್ತ ಬಂದಿದೆ ಮತ್ತು ಹಿಂದೆ ಇದ್ದ ಈ ಬಸವಿ ಅವರನ್ನು ಈಗ ಅವರು ನಾವು ಬಸವಿಯವರು ಎಂದು ಹೇಳುವುದಿಲ್ಲ ನಾವು ದೇವದಾಸಿಗಳು ಎಂದು ಹೇಳುತ್ತಾರೆ. ಬಸವಿ ಬದಲು ದೇವದಾಸಿ ಎಂಬ ಪದ ಬಳಕೆಯಾಗುತ್ತಿದೆ.

ಬೊಡ್ಡಿ:-

ಮಕ್ಕಳು ಇಲ್ಲದವಳಿಗೆ ಬೊಡ್ಡಿ ಎಂದು ಕರಿಯುವುದು ಸಮಾಜದಲ್ಲಿ ರೂಢಿಗತವಾಗಿ ಬೆಳೆದು ಬಂದಿದೆ ಆದರೆ ಇತ್ತೀಚಿಗೆ ಈ ಪದ ಬೈಗುಳವಾಗಿ ಬಳಕೆಯಾಗುತ್ತಿದೆ. ಮಕ್ಕಳಾಗದ ಸ್ಥಿತಿಗೆ ಹೆಣ್ಣು-ಗಂಡು ಇಬ್ಬರು ಕಾರಣವಾಗಿದ್ದರೂ ಗಂಡಿಗೆ ಯಾವುದೇ ಪದ ಬಳಕೆಯಾಗುವುದಿಲ್ಲ ಆದರೆ ಇದಕ್ಕೆಲ್ಲ ಹೆಣ್ಣೆ ಕಾರಣ ಎಂದು ಸಮಾಜ ಅವಳನ್ನು ನಿಕೃಷ್ಟವಾಗಿ ಹಿಯಾಳಿಸುತ್ತದೆ. ಮಕ್ಕಳು ಇಲ್ಲದವಳನ್ನು ಬೊಡ್ಡಿ, ಬೊಡ್ಡಿಸೂಳೆ ಎಂದೆಲ್ಲ ಬೈಗುಳದ ಮೂಲಕ ಸಮಾಜ ಅವಳನ್ನು ಗುರುತಿಸುತ್ತದೆ. ಆದರೆ ಹಿಂದೆ ಇದಕ್ಕೆ ಅರ್ಥ ಬೇರೆಯಾಗಿತ್ತು ಈ ಶಬ್ದಕ್ಕೆ ವೇಶ್ಯೆ, ಸೂಳೆ ಎಂದಾರ್ಥವಿತ್ತು. ಅದೇ ಬೊಡ್ಡಿ ಎಂದಾಗಿದೆ

ಈತ್ತಿಚಿನ ಕನ್ನಡದಲ್ಲಿ ಪೊಡ್ಡಿ ಎಂಬುದು ಸ್ತ್ರೀಯರು ಗೌರವದಿಂದ ಸ್ವೀಕರಿಸುತ್ತಿದ್ದ ಹೆಸರಾಗಿತ್ತು. ದಪ್ಪಗಿರುವವಳನ್ನು ಬೊಡ್ಡಿ ಎಂದು ಸಣ್ಣಗಿರುವವಳನ್ನು ಕಡ್ಡಿ ಎಂದು ಕರಿಯುತ್ತಿದ್ದರು ಆದರೆ ಈಗ ಈ ಪದ ಕೇವಲ ಮಕ್ಕಳು ಇಲ್ಲದವಳಿಗೆ ಬೊಡ್ಡಿ ಎಂದು ಬೈಗುಳ ಪದವಾಗಿ ಸೀಮಿತ ಅರ್ಥದಲ್ಲಿ ಬಳಕೆಯಾಗುತ್ತಿದೆ ಎಂದು ಹೇಳಬಹುದು.

ಬೋಳಿ:–

ಬೋಳಿ ಎಂಬ ಪದಕ್ಕೆ ಕನ್ನಡದಲ್ಲಿ ಬೋಡು ಎಂಬ ಇನ್ನೊಂದು ಅರ್ಥ ಇದೆ. ಇಷ್ಟಲ್ಲದೆ ಇನ್ನೂ ಹಲವಾರು ಅರ್ಥಗಳು ಇವೆ.

ಉದಾ:–

೧. ತಲೆಯಲ್ಲಿ ಕೂದಲು ಇಲ್ಲದಿರುವಿಕೆಗೆ ಬೋಡು ಎಂದು ಕರೆಯುತ್ತಾರೆ.

೨. ಬಾಯಿಯಲ್ಲಿ ಹಲ್ಲು ಇಲ್ಲದಿರುವಿಕೆಗೆ ಬೋಡಬಾಯಿ ಎಂದು ಸಹ ಕರೆಯುತ್ತಾರೆ.

ಈ ಬೋಡು ಶಬ್ದಕ್ಕೆ ವ್ಯಕ್ತಿವಾಚಕವಾದ 'ಅ' ಪ್ರತ್ಯಯ ಸೇರಿದರೆ ಬೋಡು+ಅ=ಬೋಡ, ತಲೆಯಲ್ಲಿ ಕೂದಲು ಇಲ್ಲದವನು, ಬಾಯಿಯಲ್ಲಿ ಹಲ್ಲು ಇಲ್ಲದವನು ಎಂದಾರ್ಥ. ಬ್ರಾಹ್ಮಣರಲ್ಲಿ ಗಂಡ ಸತ್ತವರಿಗೆ ತಲೆ ಬೋಳಿಸುವ ಸಂಪ್ರದಾಯವಿದೆ. ಬೋಳಿ ಎಂದರೆ ಗಂಡ ಸತ್ತವಳು ಎಂದರ್ಥದಲ್ಲಿ ಬಳಕೆಯಾಗಿದೆ. ಬೋಡು ಶಬ್ದಕ್ಕೆ 'ಅ' ಪುರುಷವಾಚಕ ಪ್ರತ್ಯಯ ಸೇರಿಸದೆ ನೇರವಾಗಿ ಬೋಡು+ಇ ಸೇರಿಸಿ ಬೋಡಿ ಆಗಿರಬಹುದು. ಬೋಡ ಶಬ್ದಕ್ಕೆ 'ಇ' ಎಂಬ ಸ್ತ್ರೀವಾಚಕ ಪ್ರತ್ಯಯ ಸೇರಿದರೆ ಬೋಡಿ ಎಂದಾಗುತ್ತದೆ. ಅದೇ ರೀತಿಯ ಅರ್ಥ ಕನ್ನಡದಲ್ಲಿ 'ಡ' ಕಾರ 'ಳ' ಕಾರವಾಗುತ್ತದೆ. ಹೀಗಾಗಿ ಬೋಡಿ=ಬೋಳಿ ಆಗಿದೆ. ಗಂಡ ಸತ್ತವಳು ಎಂಬುದು ಸಾಮಾಜಿಕ ಸಂಪ್ರದಾಯದಿಂದ ಬಂದ ಅರ್ಥ. ಕಾಲಾಂತರದಲ್ಲಿ ಇದರ ಅರ್ಥ ಬೇರೆಯಾಗಿ ಹೀನಾರ್ಥ ಹೊಂದಿ ಬೈಗುಳ ಪದವಾಗಿ ಬಳಕೆಯಾಗುತ್ತಿದೆ. ಇದನ್ನು ಕೇವಲ ಹೆಂಗಸರಿಗಷ್ಟೇ ಅಲ್ಲದೆ ಗಂಡಸರಿಗೆ ಬೈಯುವಾಗ ಪುರುಷವಾಚಕ ಪ್ರತ್ಯಯ ಸೇರಿಸಿ ಬಳಕೆ ಮಾಡುತ್ತಾರೆ.

ಈ ಪದ ಬೈಗುಳ ಪದವಾಗಿ ಭಿನ್ನರೀತಿಯಲ್ಲಿ ಬಳಕೆಯಾಗುತ್ತದೆ.

ಉದಾ:–ಬೋಳುಹಣೆ:–

ಪ್ರ: ಹೆಣ್ಣಿಗೆ ಶೃಂಗಾರ ಮುಖ್ಯ ಹಾಗಾಗಿ ಅವಳ ಹಣೆಯಲ್ಲಿ ಸದಾ ಕುಂಕುಮ ಇರಬೇಕು ಎಂಬುದು ಸಮಾಜದ ಸಂಪ್ರದಾಯವಾಗಿದೆ. ಅದರಲ್ಲೂ ಮದುವೆಯಾದ ಹೆಣ್ಣಿಗೆ ಕುಂಕುಮನೇ ಸೌಭಾಗ್ಯ. ಮದುವೆಯಾದ ಹೆಣ್ಣು ಒಂದು ವೇಳೆ ಹಣೆಗೆ ಕುಂಕುಮ ಹಚ್ಚುವುದನ್ನು ಮರೆತರೆ ಅವಳು ಬೈಗುಳಕ್ಕೆ ಒಳಗಾಗುತ್ತಾಳೆ.

ಪ್ರ: ಬೋಳುಹಣೆ ಆಗೈತಿ ಅಲ್ಲ ಕುಂಕುಮ ಹಚ್ಚುಕೊಳ್ಳೋಕೆ ಏನು ದಾಡಿ ನಿನಗೆ ಹೆಂಗೆ ಕಾಣತ್ತಿಯಾ ನೋಡು ಬೋಳುಹಣೆ ಇಟ್ಟುಕೊಂಡು ಗಂಡ ಸತ್ತ ಹೆಣ್ಣು ಇದಾಂಗ ಇದಿಯಾಲ್ಲ ಎಂದು ಬೈಯುತ್ತಾರೆ.

ಬೋಳುಕೈ:–

ಮದುವೆಯಾದ ಹೆಣ್ಣಿಗೆ ಕುಂಕುಮ ಹೇಗೆ ಮುಖ್ಯವೋ ಹಾಗೆಯೇ ಬಳೆ ಕೂಡ ಅಷ್ಟೆ ಮುಖ್ಯವಾಗಿದೆ. ಅವಳು ಕೈ ತುಂಬಾ ಬಳೆ ಧರಿಸಿರಬೇಕು ಹಾಗಿದ್ದರೆ ಅವಳು ಮುತ್ತೈದೆ ಎಂದು ಸಮಾಜ ಭಾವಿಸಿದೆ. ಒಂದು ವೇಳೆ ಅವಳು ಬಳೆ ಹಾಕಿಕೊಳ್ಳದೆ ಇದ್ದರೆ ಅವಳಿಗೆ ಬೋಳುಕೈಯವಳೆ ಎಂದು ಬೈಯುತ್ತಾರೆ. ಇದು ಈಗ ಒಂದು ಪ್ಯಾಶನ್ ಆಗಿದೆ. ಇತ್ತೀಚಿನ ಹೆಣ್ಣು ಮಕ್ಕಳು ಬಳೆ ಹಾಕಿಕೊಳ್ಳುವುದು ಅಂದರೇನೆ ಅಸ್ಟಾಯ ಎಂದು ಭಾವಿಸಿದ್ದಾರೆ. ಮದುವೆಯಾದ ಹೆಣ್ಣು ಆದರೂ ಸರಿ, ಆಗದೆ ಇರುವ ಹೆಣ್ಣು ಆದರೂ ಬಳೆ ಧರಿಸುವುದು ತುಂಬಾ ಕಡಿಮೆ. ಒಂದು ವೇಳೆ ಧರಿಸಿದರೂ ಸಂಪ್ರದಾಯದ ಉಡುಪಾದ ಸೀರೆಯನ್ನು ಧರಿಸಿದರೆ ಮಾತ್ರ ಬಳೆ ಹಾಕಿಕೊಳ್ಳುತ್ತಾರೆ. ಇವರಿಗೆ ಬೈಯುವಾಗ ಬಳೆಯಾಗುವ ಬೈಗುಳಗಳನ್ನು ನೋಡುವುದಾದರೆ,

ಪ್ರ: ಬೋಳುಕೈ ಐತಿ ನೋಡು, ಬೋಳುಕೈ ಸೂಳೆ ಇದಾಂಗ ಇದಲ್ಲಾ ನೋಡು ಎಂದು ಬೈಯುತ್ತಾರೆ.

ಬೋಳುಕತ್ತು:–

ಕೋರಳಲ್ಲಿ ಸರ ಇಲ್ಲದೆ ಇರುವುದಕ್ಕೆ ಬೋಳುಕತ್ತು ಎಂದು ಕರೆಯುತ್ತಾರೆ. ಸರ ಹಾಕಿಕೊಳ್ಳದೆ ಇರುವವಳಿಗೆ ಬೋಳುಕತ್ತು ಇದಾಂಗೆ ಇದೆ ನೋಡು ಅವಳ ಕತ್ತು ಎಂದು ಬೈಯುತ್ತಾರೆ.

ಬೋಳಿ ಪದ ಗಂಡ ಸತ್ತವಳಿಗೆ ಮಾತ್ರ ಬಳಕೆಯಾಗುತ್ತಿತ್ತು. ಈಗ ವಿಶಾಲಾರ್ಥ ಪಡೆದುಕೊಂಡು ಬೋಳಿ ಪದ ಈಗ ಬೈಗುಳವಾಗಿ ಎಲ್ಲರಿಗೂ ಬಳಕೆಯಾಗುತ್ತಿದೆ.

ಮಳ್ಳಿ:–

ಈ ಪದಕ್ಕೆ ಎರಡು ಅರ್ಥಗಳಿವೆ. ಒಂದು ಅವಿವೇಕಿ, ಬುದ್ದಿಗೇಡಿ ಎಂದೂ. ಎರಡು ಜಾಣೆಯಾಗಿದ್ದು ದಡ್ಡಳಂತೆ ನಟನೆ ಮಾಡುವವಳು ಎಂದು. ಸಾಮಾನ್ಯವಾಗಿ ಜನರು ಎರಡನೇ ಅರ್ಥದಲ್ಲಿ ಹೆಚ್ಚಾಗಿ ಬಳಕೆ ಮಾಡುತ್ತಾರೆ.

ಈ ಪದ ಒಳಗೊಂಡಂತೆ ಇರುವ ಗಾದೆಯನ್ನು ನೋಡುವುದಾದರೆ ಮಳ್ಳಿ ಮಳ್ಳಿ ಮಂಚಕ್ಕೆ ಕಾಲು ಎಷ್ಟು ಅಂದರೆ ಮೂರು ಮತ್ತೊಂದು ಅಂದಳಂತೆ. ಅಂದರೆ ಗೊತ್ತಿದ್ದು ಧಿಮಾಕು ಮಾಡುವವಳನ್ನು ಮಳ್ಳಿ ಎಂದು ಬೈಯುತ್ತಾರೆ. ಮಂಚಕ್ಕೆ ಕಾಲು ಎಷ್ಟು ಅಂದರೆ ಚಿಕ್ಕ ಮಕ್ಕಳು ಹೇಳುತ್ತಾರೆ ನಾಲ್ಕು ಎಂದು ಆದರೆ ಇವಳು ಗೊತ್ತಿದ್ದು ಧಿಮಾಕಿನಿಂದ ಮೂರು ಮತ್ತೊಂದು ಎಂದು ಹೇಳುತ್ತಾಳೆ. ಎಂಬುದು ಈ ಗಾದೆ ಬಳಕೆಯ ಅರ್ಥ. ಈ ಪದದ ಬಳಕೆಯ ವಿವಿಧ ನೆಲೆಗಳನ್ನು ನೋಡುವುದಾದರೆ,

ಲೇ ಮಳ್ಳಿ

ಮಳ್‌ಸೂಳೆ

ಲೇ ಮಳ್‌ಸೂಳೆ

ಪ್ರ: ಲೇ ಮಳ್ಳಿ ಎಷ್ಟು ಧಿಮಾಕ ಮಾಡತ್ತಿಯಲ್ಲಾ ಇಲ್ಲೆ ಐತಿ ಕಸಬರಕಿ ಆದರೂ ನೋಡಿಲ್ಲ ಅನ್ನೋತರ ಕಾಲಲ್ಲಿ ವದಕೊಂಡು ಒಡಾಡತ್ತಿಯಾ ಅಲ್ಲಾ. ಒಳ್ಳೆ ಮಳ್ಳಿ ಐದಿ ಬೀಡು ನೀನು ಎಂದು ತಾಯಿ ಮಗಳಿಗೆ ಬೈಯುವುದನ್ನು ನೋಡಬಹುದು.

ಅಂದರೆ ಮಗಳಿಗೆ ಕಸಬರಕಿ ಎಲ್ಲಿದೆ ಅನ್ನೋದು ಗೊತ್ತಿದ್ದು ಗೊತ್ತಿಲ್ಲ ಎಂದು ಕಾಲಲ್ಲಿ ವದಕೊಂಡು ಓಡಾಡತ್ತಾಳೆ ನೋಡಿ ನೋಡಿಲ್ಲ ಅನ್ನುತ್ತಾಳೆ ಎಂದು ತಾಯಿ ಮಗಳಿಗೆ ಮಳ್ಳಿ ಬೀಡು ನೀನು ಧಿಮಾಕಿನ ಹೆಂಗಸು ಎಂದು ಬೈಯುತ್ತಾಳೆ.

೩.೧.೨. ಒಂದು ತಟಸ್ಥ ಪದರೂಪದ ಬೈಗುಳ ಗಂಡಿಗೆ ಅನ್ವಯವಾದಾಗ ಹೊಂದುವ ಅರ್ಥದ ನೆಲೆ ಮತ್ತು ಹೆಣ್ಣಿಗೆ ಅನ್ವಯವಾದಾಗ ಹೊಂದುವ ಅರ್ಥದ ನೆಲೆಯಲ್ಲಿ. ಉದಾ.

ನಿಮ್ಮಮ್ನ

ತಿಗಿಡಿ/ತಾರತಿಗಡಿ

ನಿನ್ನ ಅವ್ವನ್

ಬುದ್ದಿಗೇಡಿ

ತಿಳಿಗೇಡಿ

ಖಬರಗೇಡಿ

ತಿಗಳಗಿತ್ತಿ

ಭಿಕಾರಿ

ತಿರಬೋಕಿ

ಮಿಂಡ್ರಿ

ಪಿಕನಾಸಿ

ಮಾನಗೇಡಿ

ಬಡಿವಾರ

ಒಡಕಬಾಯಿ

ಪಾಪಿ

ಮೂಳ

ಕುಲಗೇಡಿ

ತಾರತಿಗಡಿ

ಉದಾ:–

ನಿಮ್ಮಮ್ನ:–

ನಿಮ್ಮಮ್ನ ಎಂಬ ಬೈಗುಳ ಗಂಡು ಮತ್ತು ಹೆಣ್ಣು ಇಬ್ಬರಿಗೂ ಬಳಕೆಯಾಗುತ್ತದೆ. ಗಂಡು–ಗಂಡಿಗೆ ಬೈಯುವಾಗ ನಿಮ್ಮಮ್ನ ಎಂದು ಬೈಯುತ್ತಾರೆ, ಹೆಣ್ಣು–ಹೆಣ್ಣಿಗೆ ಬೈಯುವಾಗ ಈ ಪದವನ್ನು ಬಳಕೆ ಮಾಡುವುದನ್ನು ಕಾಣಬಹುದು. ಗಂಡಸರು ಸಿಟ್ಟು ಬಂದಾಗ ಅಥವಾ ತನ್ನ ಎದುರಿಗೆ ಇರುವ ವ್ಯಕ್ತಿಯ ಸಿಟ್ಟನ್ನು ಹೆಚ್ಚಿಸಲು ಮತ್ತು ಅವನ ಪೌರುಷವನ್ನು ಹೆಚ್ಚಿಸಲು ಈ ಪದವನ್ನು ಬಳಸುವುದನ್ನು ಕಾಣಬಹುದು. ಈ ಬೈಗುಳ ಗಂಡಿಗೆ ಅನ್ವಯವಾದಾಗ ಈ ನೆಲೆಯಲ್ಲಿ ಬಳಕೆಯಾಗುತ್ತದೆ. ಈ ಬೈಗುಳದ ಪದ ಹೆಣ್ಣನ್ನು ಒಳಗೊಂಡಿದೆ. ಆದರೆ ಇದೇ ಬೈಗುಳದ ಪದ ಹೆಣ್ಣಿಗೆ ಅನ್ವಯವಾದಾಗ ಹೆಣ್ಣು–ಹೆಣ್ಣಿಗೆ ಈ ಪದವನ್ನು ಬಳಕೆ ಮಾಡುತ್ತಾರೆ. ತಮಾಷೆಗೆ ನಿಮ್ಮಮ್ನ ಬರತ್ತಿನಿ ಅಂತ ಹೇಳಿದೆ ಯಾಕೆ ಬರಲಿಲ್ಲ ಎಂಬ ಸಂದರ್ಭದಲ್ಲಿ ಬಳಕೆಯಾಗುತ್ತದೆ ಈ ನೆಲೆಯಲ್ಲಿ ಹೆಣ್ಣಿಗೆ ಅನ್ವಯವಾದಾಗಲೂ ಬಳಕೆಯಾಗುತ್ತದೆ ಎಂದು ಹೇಳಬಹುದು. ಆದರೆ ಗಂಡಿಗೆ ಅನ್ವಯವಾದಾಗ ಎದುರಾಳಿ ಅವನ ತಾಯಿಯನ್ನು ಬೈದರೆ ಅವನಿಗೆ ಬೇಗ ಕೋಪ ಬರುತ್ತೆ ಎಂಬ ಉದ್ದೇಶದಿಂದ ಬಳಕೆ ಮಾಡುತ್ತಾರೆ ಇದೊಂದು ಗ್ರಹಿಕೆಯಾದರೆ, ಹೆಣ್ಣಿಗೆ ಹೆಣ್ಣು ತಮಾಷೆ ಮಾಡಿಕೊಳ್ಳುವಾಗ ಈ ಪದ ಬಳಕೆ ಮಾಡುತ್ತಾರೆ ಆದರೆ ಇಲ್ಲಿ ಈ ಬೈಗುಳ ನಕರಾತ್ಮಕವಾಗಿ ಗ್ರಹಿಕೆಯಾಗುವುದಿಲ್ಲ ಸಕರಾತ್ಮಕವಾಗಿ ಮಾತ್ರ ಬಳಕೆಯಾಗುತ್ತದೆ.

ಮಿಂಡ್ರಿ:–

ಅನೈತಿಕ ಚಟುವಟಿಕೆಗಳಲ್ಲಿ ತೊಡಗಿರುವ ಗಂಡು ಮತ್ತು ಹೆಣ್ಣಿಗೆ ಈ ಪದ ಬಳಕೆಯಾಗುತ್ತಿದೆ. ಮಿಂಡ್ರಿ ಎಂಬ ಬೈಗುಳ ಪದ ಇಬ್ಬರಿಗೂ ಅನ್ವವಾಗುವಂತಹ ಪದವಾಗಿದೆ ಆಗಾಗಿ ಇದನ್ನು ತಟಸ್ಥ ಬೈಗುಳ ಪದ ಎಂದು ಗುರುತಿಸಬಹುದು. ಏಕೆಂದರೆ ಈ ಪದವನ್ನು ಗಂಡಿಗೆ ಬೈಯುವಾಗಲೂ ಬಳಕೆ ಮಾಡುತ್ತಾರೆ ಮತ್ತು ಹೆಣ್ಣಿಗೆ ಬೈಯುವಾಗಲೂ ಬಳಕೆ ಮಾಡುವುದು ಕಂಡುಬರುತ್ತದೆ. ಮತ್ತು ಮಕ್ಕಳಿಗೂ ಸಹ ಈ ಬೈಗುಳ ಪದವನ್ನು ಬಳಕೆ ಮಾಡುತ್ತಾರೆ. ಆದರೆ ಬಳಕೆ ಮಾಡುವ ಸಂದರ್ಭ ಮತ್ತು ಕಾರಣ ಬೇರೆಯಾಗಿರುತ್ತದೆ. ಹೆಣ್ಣಿಗೆ ಈ ಪದ ಅನ್ವಯವಾದಾಗ ಇದರ ಅರ್ಥದ ನೆಲೆ ಬೆರೆಯಾಗಿರುತ್ತದೆ. ಗಂಡಿಗೆ ಅನ್ವಯವಾದಾಗ ಈ ಪದದ ಅರ್ಥದ ನೆಲೆ ಬೆರೆಯಾಗಿರುತ್ತದೆ ಎಂಬುದನ್ನು ಪರಿಶೀಲಿಸಬಹುದು.

ಗಂಡಿಗೆ ಅನ್ವಯವಾದಾಗ

ಮಿಂಡ್ರಿ ಮಗ

ಮಿಂಡ್ರಿಸೂಳೆಮಗ

ಮಿಂಡ್ರಿ ನನ್ ಮಗ

ಮಿಂಡ್ರಿಗುಟ್ಟಿದೋನು ಎಂದೆಲ್ಲ ಈ ಪದ ಬಳಕೆಯಾಗುತ್ತದೆ.

ಹೆಣ್ಣಿಗೆ ಅನ್ವಯವಾದಾಗ

ಮಿಂಡಿ

ಮಿಂಡ್ರಿ

ಮಿಂಡ್ರಿಸೂಳೆ

ಮಿಂಡ್ರಿಗುಟ್ಟಿದೋಳು ಎಂದೆಲ್ಲ ಈ ಪದ ಬಳಕೆಯಾಗುತ್ತದೆ.

ಮಕ್ಕಳು ಬಳಕೆ ಮಾಡುವ ವಿಧಾನ

ಮಿಂಡಿ

ಮಿಂಡ್ರಿ

ಮಿಂಡ್ರಿ ಮಗ ಎಂದು ಬಳಕೆ ಮಾಡುತ್ತಾರೆ.

ಪ್ರ: ಗಂಡಿಗೆ ಅನ್ವಯವಾದಾಗ 'ಲೇ ಮಿಂಡ್ರಿಸೂಳೆಮಗ ಹೆಂಗೆ ಇದಿಯಾ ನೋಡು ಒಳ್ಳೆ ತಿರಬೋಕಿ ತರ ಏನಾಗೈತಿ ನಿನಗೆ ದರಿದ್ರಸೂಳೆಮಗನೆ' ಎಂದು ಬೈಯುತ್ತಾರೆ.

ಹೆಣ್ಣಿಗೆ ಅನ್ವಯವಾದಾಗ ಲೇ ಮಿಂಡ್ರಿಗುಟ್ಟಿದೋಳೆ ಹೆಂಗೆ ಐತಿ ನಿನ್ ಮೈಗೆ ವದಿಸ್ಕಿಂತಿಯಾ ನನಗೆ ಎದರಾಡಿದ್ದರೆ, ವದ್ದರೆ ಹಾಂಗೆ ಒಂದೇ ಸಾರಿ ಸತ್ತು ಹೋಗತ್ತಿಯಾ ನೋಡು ಸುಮ್ಮನೆ ಇದ್ದರೆ ಸರಿ ಎಂದು ಗಂಡ ಹೆಂಡತಿಗೆ ಬೈಯುವುದನ್ನು ನೋಡಬಹುದು.

ಮಕ್ಕಳು ಬೈಯುವಾಗ ಲೇ ಮಿಂಡ್ರಿ, ಮಿಂಡ್ರಿಮಗ ಎಂದು ಬೈಯುವುದನ್ನು ಕಾಣಬಹುದು. ಆದರೆ ಆ ಪದದ ಅರ್ಥವೇ ಆ ಮಕ್ಕಳಿಗೆ ಗೋತ್ತಿಲ್ಲದೆ ಬೈಯುವಾಗ ಬಳಕೆ ಮಾಡುತ್ತಾರೆ ಎಂಬುದು ಪ್ರಮುಖವಾಗಿ ಕಾಣಬರುವ ಅಂಶವಾಗಿದೆ ಎಂದು ಹೇಳಬಹುದು.

ಹೀಗೆ ಈ ಪದ ಗಂಡು ಮತ್ತು ಹೆಣ್ಣಿಗೆ ಇಬ್ಬರಿಗೂ ಬಳಕೆಯಾಗುತ್ತದೆ. ಆದರೆ ಒಂದು ಅಂಶವನ್ನು ಗಮನಿಸುವುದಾದರೆ ಇಬ್ಬರಿಗೂ ಅನ್ವಯವಾದರೂ ಅದು ಹೆಣ್ಣಿನ ಮೂಲಕವೇ ಅನ್ವಯವಾಗುತ್ತದೆ. ಮಿಂಡ್ರಿ ಎಂಬ ಪದ ಪರಪುರುಷನ ಸಹವಾಸಕ್ಕೆ ಒಳಗಾದ ಹೆಣ್ಣು ಎಂಬರ್ಥವಾಗುತ್ತದೆ. ಹಾಗಾಗಿ ಈ ಪದವನ್ನು ನೋಡಿದರೆ ಹೆಣ್ಣು ಸಮಾಜದ

ದೃಷ್ಟಿಯಲ್ಲಿ ತಪ್ಪು ಮಾಡದೆ ಇದ್ದರೂ ಅವಳು ಅಪರಾಧಿ ಎಂಬ ನಿಲುವಿಗೆ ಸಮಾಜ ಬರುತ್ತದೆ ಎಂದು ಹೇಳಬಹುದು. ಇಲ್ಲಿ ಹೆಣ್ಣು ಬೈಗುಳದ ಮೂಲಕ ಶೋಷಣೆಗೆ ಒಳಪಡುತ್ತಾಳೆ ಎಂದು ಸಹ ತಿಳಿಯಬಹುದು.

ಮಿಂಡ್ರಿ ಎಂಬ ಪದ ಎರಡು ನೆಲೆಯಲ್ಲಿ ಕೆಲಸ ಮಾಡುತ್ತದೆ ಎಂದು ಹೇಳಬಹುದು. ಹೇಗೆಂದರೆ ಒಂದು ಮಿಂಡ್ರಿ ನನ್ ಮಗ ಎಂದು ಗಂಡಿಗೆ ಬೈದಾಗ ಅದು ಬೇರೆಯವರಿಗೆ ಹುಟ್ಟಿದ ಮಗ ಎಂಬ ಅರ್ಥದಲ್ಲಿ ತಾಯಿ ಕೇಂದ್ರಿತವಾದ ಬೈಗುಳವಾಗಿ ಕಂಡುಬಂದರೆ, ಇನ್ನೊಂದು ನೆಲೆಯಲ್ಲಿ ಬೇರೆಯವರ ಸಹವಾಸಕ್ಕೆ ಒಳಗಾದ ಗಂಡಿನ ಅನೈತಿಕ ಸಂಬಂಧವನ್ನು ಸಹ ಸೂಚಿಸುತ್ತದೆ.

(ಮಿಂಡ್ರಿ ಎಂಬ ಪದವು ಬಳಕೆಯ ನೆಲೆಯಲ್ಲಿ ಸ್ವಲ್ಪ ಭಿನ್ನವಾಗಿ ನಿಲ್ಲುತ್ತದೆ ಎಂದು ಹೇಳುತ್ತ ಕೆಲವು ಪ್ರಯೋಗಗಳನ್ನು ನೀಡಿದ್ದಾರೆ.

ಮಿಂಡ್ರಿ ಮುಂಡೆ-ಮಿಂಡನನ್ನು ಹೊಂದಿರುವ ಹೆಣ್ಣು

ಮಿಂಡ್ರಿಗೆ ಹುಟ್ಟಿದ ನನ್ ಮಗ್ನೆ- ಅನೈತಿಕ ಸಂಬಂಧದಿಂದ ಜನಿಸಿದ ಮಗ

ಹೈಮಿಂಡ್ರಿ-ಅನೈತಿಕ ಚಟುವಟಿಕೆಯಲ್ಲಿ ತೋಡಗಿದ ಗಂಡು

ಮಿಂಡ್ರಿ ಎಂಬ ಬೈಗುಳವು ಮಿಂಡನನ್ನು ಹೊದಿರುವ ಹೆಣ್ಣಿಗೆ ಅನ್ವಯವಾಗಿ ಬಳಕೆಯಾಗುತ್ತಿದ್ದರೂ ಅದೇ ಪದ ಅನೈತಿಕ ಚಟುವಟಿಕೆಯಲ್ಲಿ ತೊಡಗಿದ ಗಂಡಿಗೂ ಸಮಾನಾಂತರವಾಗಿ ಬಳಕೆಯಾಗುತ್ತದೆ. (ಕನ್ನಡ ಭಾಷೆ: ಲಿಂಗಸಂಬಂಧಿ ಆಯಾಮಗಳು ಪು.೧೨೪)

ತಾರತಿಗಡಿ:-

ಇದು ಇಬ್ಬರಿಗೂ ಬಳಸುವ ಬೈಗುಳ ಪದವಾಗಿದೆ. ಈ ಬೈಗುಳ ಪದ ಯಾವ ನೆಲೆಯಲ್ಲಿ ಬಳಕೆಯಾಗುತ್ತದೆ ಎಂದರೆ ಸುಳ್ಳು ಹೇಳಬೇಡ, ಅಲ್ಲಿ ಒಂದು ಮಾತು, ಇಲ್ಲಿ ಒಂದು ಮಾತು ಆಡಬೇಡ ಎಂಬ ಹಿನ್ನೆಲೆಯಲ್ಲಿ ಈ ಬೈಗುಳ ಬಳಕೆಯಾಗುತ್ತದೆ.

ಹೆಣ್ಣಿಗೆ ಬೈಯುವಾಗ,

ಲೇ ತಾರತಿಗಡಿ ಹೆಂಗಸು

ತಾರತಿಗಡಿ ಹೆಣ್ಣು

ತಾರತಿಗಡಿ ಸೂಳೆ

ತಾರತಿಗಡಿ ಮುಂಡೆ ಎಂದೆಲ್ಲ ಬೈಯುತ್ತಾರೆ.

ಗಂಡ–ಹೆಂಡತಿಗೆ:–

ಪ್ರ: ಲೇ ತಾರತಿಗಡಿ ಹೆಂಗಸು ಇದಾಂಗೆ ಬೀಡು ನೀನು. ಎಲ್ಲ ಸುಳ್ಳು–ಸುಳ್ಳು ಹೇಳತ್ತಿಯಾ ಒಂದು ನೆಟ್ಟಗೆ ಹೇಳಲ್ಲ ನೀನು ಬರಿ ಸುಳ್ಳು ಹೇಳೋದು ಕಲಿತು ಬಿಟ್ಟಿಯಾ. ಎಲ್ಲ ವಿಷಯದಲ್ಲೂ ಹಿಂಗೆ ತಾರಾತಿಗಡಿ ಮಾಡೋದನ್ನ ಕಲಿತು ಬಿಟ್ಟಿಯಾ ನೀನು ಎಂದು ಗಂಡ ಹೆಂಡತಿಗೆ ಬೈಯುವುದನ್ನು ನೋಡಬಹುದು.

ಅಂದರೆ ಗಂಡನ ಬಳಿ ಹೆಂಡತಿ ಸುಳ್ಳು ಹೇಳಿದಾಗ ಅವನು ಬೈಯುವ ರೀತಿ ಇದು. ನನ್ನ ಹತ್ತಿರನೇ ಸುಳ್ಳು ಹೇಳತ್ತಿಯಾ ನೀನು ನನಗೆ ಮೋಸ ಮಾಡುತ್ತಿಯಾ ಎಂಬ ಹಿನ್ನೆಲೆಯಲ್ಲಿ ಈ ಬೈಗುಳ ಬಳಕೆಯಾಗುವುದನ್ನು ಗಮನಿಸಬಹುದು.

ಗಂಡಿಗೆ ಬೈಯುವಾಗ,

ತಾರತಿಗಡಿ ಗಂಡಸು

ಲೇ ತಾರತಿಗಡಿ

ತಾರತಿಗಡಿ ಸೂಳೆಮಗ

ತಾರತಿಗಡಿ ನನ್ ಮಗ ಎಂದು ಬೈಯುತ್ತಾರೆ.

ತಾಯಿ–ಮಗನಿಗೆ:–

ಪ್ರ: ಏನು ತಾರತಿಗಡಿ ಗಂಡಸು ಆಗಿಬಿಟ್ಟಿಯಾ ಅಪ್ಪ ನೀನು. ಮಾತು ಎತ್ತಿದಂದರೆ ಬರೀ ಸುಳ್ಳು ಹೇಳೋದನ್ನು ಕಲಿತು ಬಿಟ್ಟಿಯಾ. ಏನು ಅಂತಾ ನನ್ನ ಹೊಟ್ಟೆಯಲ್ಲಿ ಹುಟ್ಟಿಯಾ ನೀನು. ಎಲ್ಲರೂ ಅವರ ಅಪ್ಪ ಅಮ್ಮ ನೋಡಿದರೆ ಎಷ್ಟು ಒಳ್ಳೆಯವರು ಅಂತ ಹೇಳತ್ತಾರೆ ನಿನ್ನಿಂದಾಗಿ ನಮ್ಮಗೆ ಕೆಟ್ಟ ಹೆಸರು ಬರುತ್ತೆ ಅಷ್ಟೆ. ಎತ್ತ ಮಗನ್ನ ಎತ್ತಿನಿ ಅಂತಾ ನನಗೆ ನಾಚಿಕೆ ಆಗೋತ್ತರ ಮಾಡತ್ತಿಯಾ ನೀನು ಎಂದು ತಾಯಿ ಮಗನಿಗೆ ಬೈಯುವುದನ್ನು ನೋಡಬಹುದು.

ಅಂದರೆ ಮಗ ಸುಳ್ಳು ಹೇಳಿರೋ ವಿಷಯ ತಿಳಿದ ತಾಯಿ ಮಗನಿಗೆ ಬೈಯುವಾಗ ತಾರತಿಗಡಿ ಮಾಡಬೇಡ ಅಂತಾ ಬೈಯುವುದನ್ನು ನೋಡಬಹುದು. ಮಕ್ಕಳಿಗೆ ಬೈಯುವಾಗ ಸಹ ಈ ಪದ ಬಳಕೆಯಾವುದನ್ನು ನೋಡಬಹುದು.

ಮಕ್ಕಳಲ್ಲಿ ಹೆಣ್ಣಾಗಲಿ, ಗಂಡಗಾಲಿ ಇಬ್ಬರಿಗೂ ಬೈಯುವಾಗ ಈ ಪದವನ್ನು ಬಳಕೆ ಮಾಡುವುದನ್ನು ನಾವು ಗಮನಿಸಬಹುದು.

ಒಬ್ಬ ಪರಿಚಿತ ಹೆಣ್ಣು ಮಕ್ಕಳಿಗೆ ಬೈಯುವಾಗ 'ಏನು ತಾರತಿಗಡಿ ಇದರಾವ್ವ ಈ ನಿನ್ ಮಕ್ಕಳು ಈ ವಯಸ್ಸಯಲ್ಲೆ ಹಿಂಗೆ ಐದಾರ ಆಮೇಲೆ ಏನ ಐತಿ ಇವರದು' ಎಂದು ಬೈಯುವುದನ್ನು ನೋಡಬಹುದು.

ಬಡಿವಾರ:-

ಇದೊಂದು ಬೈಗುಳ ಪದವಾಗಿದೆ. ಇದು ಒಂದು ತಟಸ್ಥ ಪದವಾಗಿದೆ. ಯಾಕೆಂದರೆ ಈ ಬೈಗುಳ ಪದವನ್ನು ಹೆಣ್ಣು ಗಂಡು ಎಂಬ ಯಾವುದೇ ಭೇದವಿಲ್ಲದೆ ಇಬ್ಬರಿಗೂ ಬೈಯುವಾಗ ಬಳಕೆಯಾಗುವಂತಹ ಪದವಾಗಿದೆ. ಆದರೆ ಗಂಡಿಗೆ ಬೈಯುವಾಗ ಹೆಣ್ಣಿನ ಮೂಲಕವೇ ಬೈಯುವುದನ್ನು ಕಾಣಬಹುದು. ಹೆಣ್ಣಿಗೆ ಬೈಯುವುವಾಗ ಸಹ ಅವಳು ಅನೈತಿಕ ಚಟುವಟಿಕೆಯುಳ್ಳವಳು ಎಂಬ ಅರ್ಥದಲ್ಲೇ ಈ ಬೈಗುಳ ಪದ ಬಳಕೆಯಾಗುವುದನ್ನು ನೋಡಬಹುದು. ಹೆಚ್ಚು ಧಿಮಾಕು ಮಾಡುವವರಿಗೆ ಬೈಯುವ ಪದವಾಗಿ ಇದು ಕಂಡುಬರುತ್ತದೆ.

ಗಂಡಿಗೆ ಬೈಯುವಾಗ,

ಪ್ರ: ಏನು ಬಡಿವಾರ ಸೂಳೆಮಗ ಇದನಾವ್ವ ಇವನು ತಿನ್ನೋಕೆ ಕೂಳ್ ಇಲ್ಲ ಏನು ಇಲ್ಲ ಆದರೂ ಎಷ್ಟು ಧಿಮಾಕ ನೋಡು ಈ ಸೂಳೆಮಗನಿಗೆ' ಎಂದು ಬೈಯುತ್ತಾರೆ.

ಅಂದರೆ ಅವನಿಗೆ ಸರಿಯಾಗಿ ತಿನ್ನೋಕು ಒಂದು ಹೊತ್ತು ಊಟ ಇಲ್ಲ ಆದರೂ ಎಷ್ಟು ಧಿಮಾಕ ಮಾಡುತ್ತಾನೆ ನೋಡು ಬರೀ ಚೆನ್ನಾಗಿರುವ ಬಟ್ಟೆ ಹಾಕೊಂಡು ಇದ್ದರೆ ಆಗಲ್ಲ ಅವನಿಗೆ ಏನು ಕೆಲಸ, ಅವನು ಹೇಗೆ ಎಂಬುವುದು ಮುಖ್ಯವಾಗುತ್ತದೆ. ಇದು ಯಾವುದೂ ಇಲ್ಲದೆ ಬರೀ ಒಣ ಧಿಮಾಕ ಮಾಡಿದರೆ ಹೆಂಗೆ ಎಂಬರ್ಥದಲ್ಲೂ ಈ ಬೈಗುಳ ಬಳಕೆಯಾಗುತ್ತದೆ. ಇದು ಗಂಡಿಗೆ ಬೈದರೂ ಅವನ ತಾಯಿಯ ನೆಲೆಯಿಂದ ಬೈಯುವುದನ್ನು ನೋಡಬಹುದು. ಅಂದರೆ ಅವಳು ಅನೈತಿಕಯುಳ್ಳವಳು ಮತ್ತು ಅನೈತಿಕತೆಯಿಂದ ಹುಟ್ಟಿದ ಮಗ ಎಂಬರ್ಥದಲ್ಲಿ ಈ ಬೈಗುಳ ಪದ ಬಳಕೆಯಾಗುತ್ತದೆ.

ಹೆಣ್ಣಿಗೆ ಬೈಯುವಾಗ, ಈ ಪದ ಬಳಕೆಯಾಗುವುದನ್ನು ನೋಡುವುದಾದರೆ,

ಪ್ರ: ಲೇ ಬಡಿವಾರ ಸೂಳೆ ಬರೀ ಬಡಿವಾರ ಮಾಡೋದು ಆಯ್ತು ನಿನದು ಮನೆ ಕೆಲಸನೇ ಮಾಡಲ್ಲ ಅಲ್ಲ ನೀನು ಬಡಿವಾರ ಮಾಡೋದರಲ್ಲೇ ಟೈಮ್ ಕಳೆದು ಬಿಡತ್ತಿಯಾ ಅಲ್ಲಾ ನೀನು' ಎಂದು ತಾಯಿ ಮಗಳಿಗೆ ಬೈಯುವುದನ್ನು ನೋಡಬಹುದು.

ಅಂದರೆ ಮಗಳಿಗೆ ತಾಯಿ ಸೂಳೆ ಎಂದು ಆರೋಪಿಸುತ್ತಿಲ್ಲಾ ಬೈಯುವಾಗ ಸಾಮಾನ್ಯವಾಗಿ ಬಳಕೆಯಾಗುವ ಪದವಾಗಿದೆ. ಇಲ್ಲಿ ಸೂಳೆ ಎಂಬ ಪದ ಕೇವಲ ಉಪಮೆಯಾಗಿ ಬಳಕೆಯಾಗುತ್ತದೆ ಎಂದು ಹೇಳಬಹುದು. ಇಲ್ಲಿ ಬಡಿವಾರ ಎಂಬ ಪದವೇ ಮುಖ್ಯವಾಗಿ ಕಂಡುಬರುವ ಬೈಗುಳವಾಗಿದೆ. ಮಗಳು ಕೆಲಸ ಮಾಡೋದನ್ನು ಬಿಟ್ಟು ಕೇವಲ ಅಲಂಕಾರ ಮಾಡಿಕೊಳ್ಳುವುದನ್ನು ಕಂಡು ತಾಯಿ ಬೈಯುವ ಬೈಗುಳ ಇದು ಎಂದು ಹೇಳಬಹುದು.

ಹೀಗೆ ಈ ಬಡಿವಾರ ಎಂಬ ಪದ ಇಬ್ಬರಿಗೂ ಬಳಕೆಯಾಗುವುದನ್ನು ನೋಡಬಹುದು. ಮಕ್ಕಳಿಗೂ ಬೈಯುವಾಗ ಈ ಪದ ಬಳಕೆಯಾಗುತ್ತದೆ.

ಮಾನಗೇಡಿ:–

ಈ ಬೈಗುಳ ಪದ ಗಂಡು, ಹೆಣ್ಣು ಇಬ್ಬರಿಗೂ ಬಳಕೆಯಾಗುವ ಬೈಗುಳವಾಗಿದೆ. ಯಾರಿಗೂ ಹೆದರದೆ ತಮ್ಮ ಇಚ್ಛೆ ಅಂತೆ ನಡೆದುಕೊಳ್ಳುವವರನ್ನು ಬೈಯುವಾಗ ಬಳಕೆಯಾಗುವ ಪದವಾಗಿದೆ. ಯಾವುದೇ ನಾಚಿಕೆ ಇಲ್ಲದೆ ಇರುವವರಿಗೂ ಬೈಯುವಾಗ ಸಹ ಈ ಪದ ಬಳಕೆಯಾಗುತ್ತದೆ. ಗಂಡಗಾಲಿ, ಹೆಣ್ಣಾಗಲಿ ಇಬ್ಬರೂ ಸಮಾಜದಲ್ಲಿ ಹೀಗೆ ಇರಬೇಕು ಎಂಬ ನಿಲುವು ಇದೆ. ಅದನ್ನು ಮೀರಿ ಯಾವುದಕ್ಕೂ ಹೆದರದೆ ಯಾರನ್ನು ಲೆಕ್ಕಿಸದೇ ತಮ್ಮಗೆ ಏನೂ ಇಷ್ಟ, ಹೇಗೆ ಇರಬೇಕು ಅಂತಾ ಬಯಸುತ್ತಾರೆಯೋ ಹಾಗೆ ಇರುವುದನ್ನು ಕಂಡು ಸಹಿಸದ ಸಮಾಜ ಅವರಿಗೆ ಮಾನಗೇಡಿ ಎಂದು ಬೈಗುಳದ ಮೂಲಕ ಅವರನ್ನು ನಿಂಧಿಸುವುದನ್ನು ಕಾಣಬಹುದು.

೩.೧.೩. ಅನ್ಯ ಭಾಷೆಯಿಂದ ಬಂದ ಪದರೂಪದ ಬೈಗುಳಗಳ ಅರ್ಥದ ನೆಲೆ ಮತ್ತು ಬಳಕೆಯ ನೆಲೆಯಲ್ಲಿ.

ಅನ್ಯಭಾಷಾ ಪದರೂಪ ಬೈಗುಳಗಳು ಗಂಡಸರಿಗೆ ಹೆಚ್ಚು ಬಳಕೆಯಾಗುತ್ತವೆ. ಕೆಲವು ಬೈಗುಳಗಳು ಹೆಣ್ಣಿಗೂ ಸಂಬಂಧಿಸಿದ್ದಾಗಿದೆ. ಅನ್ಯಭಾಷಾ ಬೈಗಳುಗಳನ್ನು ೩ ನೆಲೆಯಲ್ಲಿ ನೋಡಬಹುದು.

೩.೧.೩.೧. ಗಂಡಿಗೆ ಸಂಬಂಧಿಸಿದ ಅನ್ಯಭಾಷಾ ಬೈಗುಳಗಳು

೩.೧.೩.೨. ಹೆಣ್ಣಿಗೆ ಸಂಬಂಧಿಸಿದ ಅನ್ಯಭಾಷಾ ಬೈಗುಳಗಳು

೩.೧.೩.೩. ಇಬ್ಬರಿಗೂ ಸಂಬಂಧಿಸಿದ ಅನ್ಯಭಾಷಾ ಬೈಗುಳಗಳು

೩.೧.೩.೧. ಗಂಡಿಗೆ ಸಂಬಂಧಿಸಿದ ಅನ್ಯಭಾಷಾ ಬೈಗುಳಗಳು:–

ಉದಾ:–ಲೋಫರ್

ಲಫಂಗ

ದಾಂಡಿಗ

ರೌಡಿ

ಬೇವಾರ್ಸಿ

ಬೇಕೂಬ್

ಬಚ್ಚ

ಬಡವಾ

ದರ್ಬೇಸಿ

ಫಂಟಿಗ

ಉಡಾಳ

ಗಾಂಡು

ಸುವ್ವರ್

ಸ್ಟುಪಿಡ್

ಬಡವಾ:–

ಹಿಂದಿಯಲ್ಲಿ ಭಡು ಎಂಬ ಶಬ್ದವಿದೆ. ಇದೇ ಮರಾಠಿಯಲ್ಲಿ ಭಡವಾ ಎಂಬ ರೂಪದಲ್ಲಿ ಬಳಕೆಯಾಗುತ್ತದೆ. ಹಾಗಾಗಿ ಇದು ಮರಾಠಿ ಬೈಗುಳ ಪದವಾಗಿದೆ. ಈ ಪದವನ್ನು ಕನ್ನಡಿಗರೂ ಬಳಸುವಾಗ ಬಡವಾ ಎಂದು ಬಳಕೆ ಮಾಡುತ್ತಾರೆ. ಭಡವಾ ಎಂಬ ಪದದ ಅರ್ಥ ಗಂಡು–ಹೆಣ್ಣುಗಳು ವ್ಯಭಿಚಾರಕ್ಕೆ ತೊಡಗಲು ಸಹಾಯ ಮಾಡುವ ತಲೆಹಿಡುಕ ಎಂದಾರ್ಥ. ಈ ಪದ ಕನ್ನಡದಲ್ಲೂ ಬಳಕೆಯಲ್ಲಿದೆ ಆದರೆ ಇದು ಗುಣವಾಚಕ ಪದವಾಗಿ ಕಾರ್ಯನಿರ್ವಸುತ್ತದೆ. ಒಬ್ಬ ವ್ಯಕ್ತಿ ಆರ್ಥಿಕವಾಗಿ ದುರ್ಬಲನಾಗಿದ್ದರೆ ಅಂತಹ ವ್ಯಕ್ತಿಯನ್ನು ಗುರುತಿಸುವ ಸಲುವಾಗಿ ಈ ಪದವಾಗಿ ಬಳಕೆಯಾಗುತ್ತಿದೆ ಮತ್ತು ಏನೂ ಗತಿ ಇಲ್ಲದವನನ್ನು ಗುರುತಿಸುವ ಪದವಾಗಿಯೂ ಕಾರ್ಯನಿರ್ವಹಿಸುತ್ತಿದೆ. ಆದರೆ ಮರಾಠಿಯಲ್ಲಿರುವ ಭಡವಾ ಪದ ಬೈಗುಳವಾಗಿ ಬಳಕೆಯಾಗುತ್ತಿದೆ. ಹಳೆ ಮೈಸೂರಿನಲ್ಲಿ ತಲೆಹಿಡುಕ ಎಂಬ ಶಬ್ದ ಹೆಚ್ಚು ಪ್ರಚಾರದಲ್ಲಿದೆ. ಕನ್ನಡಿಗರೂ ಬಳಕೆ ಮಾಡುವಾಗ ಕತ್ತೆಬಡವಾ, ಲೇ ಬಡವಾ, ಬಡವಾ ನನ್ ಮಗನೆ ಎಂದೆಲ್ಲ ಬಳಕೆಯಲ್ಲಿದೆ. ಈ ಪದ ಅದು ಹೆಣ್ಣಿನ ಮೂಲಕವೇ ಬೈಯುವುದನ್ನು ಕಾಣಬಹುದು. ಮರಾಠಿಯ 'ಭ' ಕಾರ ಕನ್ನಡಿಗರ ಬಳಕೆಯಲ್ಲಿ 'ಬ' ಕಾರವಾಗಿ ಬಳಕೆಯಾಗುತ್ತಿದೆ.

ಬೇಕುಬ್/ಬೇಕುಫ್:–

ಈ ಪದರೂಪದ ಬೈಗುಳ ಅವಿವೇಕಿ, ತಿಳಿಗೇಡಿ, ಮೂರ್ಖ, ದಡ್ಡ ಎಂಬರ್ಥದಲ್ಲಿ ಬಳಕೆಯಲ್ಲಿದೆ. ಬಳಕೆಯ ಇದರ ನೆಲೆಯನ್ನು ನೋಡುದಾದರೆ,

ಉದಾ:– ಬೇಕುಬ್ ನನ್ನ ಮಗ, ಬೇಕುಬ್ ಸೂಳೆಮಗ, ಬೇಕುಬ್ ಮಾಡಿದಾಂಗ ಮಾಡಿತ್ತೀಯಾ ಅಲ್ಲ ಎಂದು ಬಳಸಲಾಗುತ್ತದೆ. ಜನರಿಗೆ ಇದು ಯಾವ ಭಾಷೆಯಿಂದ ಬಂದಿದ್ದು, ಇದರ ಅರ್ಥ ಏನೂ ಎಂಬ ಯಾವ ಯೋಚನೆ ಮಾಡದೆ ಸಾಮಾನ್ಯವಾಗಿ ಬೈಯುವಾಗ ಬಳಕೆ ಮಾಡುತ್ತಾರೆ.

ಬೇಕುಬ್ ಪದವು:- ಬೇವಕೂಫ್-ಬೇಕೂಫ್-ಬೇವಕೂಫ್-ಬೇಕೂಬ್ ಇದು ಮರಾಠಿ ಭಾಷೆಯಿಂದ ಬಂದತಂಹ ಬೈಗುಳವಾಗಿದೆ. ಕನ್ನಡಿಗರು, ಕನ್ನಡೇತರರು ಈ ಪದವನ್ನು ಬಳಕೆ ಮಾಡುತ್ತಾರೆ.

ಬೇಕುಬ್ ಎಂಬ ಪದಕ್ಕೆ ಬೇರೆ ಯಾವ ಪದಗಳನ್ನು ಸೇರಿಸಿ ಬೈಯುತ್ತಾರೆ ಎಂಬುವುದನ್ನು ನೋಡುವುದಾದರೆ,

ಉದಾ:-

ಬೇಕುಬ್ ನನ್ ಮಗ

ಬೇಕುಬ್ ಸೂಳೆಮಗ

ಬೇಕುಬ್ ಮಾಡಿದಾಂಗೆ ಮಾಡತ್ತಿಯಲ್ಲಾ

ಬೇಕುಬ್ ಎಂಬ ಪದ ಮಾತ್ರ ಬೇರೆ ಭಾಷೆಯದು. ಇನ್ನೂ ಬೇರೆ ಪದಗಳಾದ ನನ್ ಮಗ, ಸೂಳೆಮಗ ಎಂಬ ಪದಗಳು ಕನ್ನಡದವು. ಈ ಬೈಗುಳವನ್ನು ಕನ್ನಡಿಗರು ಬೈಯುವಾಗ ಬಳಕೆ ಮಾಡುವುದು ಹೆಚ್ಚು ಎಂದು ಹೇಳಬಹುದು. ಬೇಕುಬ್ ಎಂಬ ಪದ ಪುರುಷವಾಚಕವಾಗಿದ್ದು ಅದನ್ನು ಗಂಡಿಗೆ ಬೈಯುವಾಗ ಸ್ತ್ರೀವಾಚಕ ಸೇರಿಸಿ ಬೈಯುವುದು ಒಂದು ಕ್ರಮ ಎಂದು ಹೇಳಬಹುದು. ಬೇರೆ ಭಾಷೆಯಾದ್ದಾಗಿದ್ದರೂ ಅದಕ್ಕೆ ಕನ್ನಡ ಪದಗಳನ್ನು ಸೇರಿಸಿ ಬೈಯುವಾಗ ಅದು ಹೆಣ್ಣಿನ ಮೂಲಕವೇ ಈ ಬೈಗುಳ ಬೈಯ್ಯಲಾಗುತ್ತದೆ. ಈ ಬೈಗುಳಗಳಲ್ಲಿ ಹೆಣ್ಣು ಒಳಪಟ್ಟಿರುತ್ತಾಳೆ. ಹೇಗೆ ಎಂದರೆ ನನ್ ಮಗ, ಸೂಳೆಮಗ ಎಂಬ ಪದಗಳ ಅರ್ಥವನ್ನು ನೋಡುವುದಾದರೆ ನನ್ ಮಗ ಅಂದರೆ ನನಗೆ ಹುಟ್ಟಿದ ಮಗ, ನನ್ನ ಮಗ ಎಂಬರ್ಥದಲ್ಲಿ ಈ ಪದ ಕಾರ್ಯನಿರ್ವಹಿಸುತ್ತದೆ. ಸೂಳೆಮಗ ಎಂಬ ಪದವು ಅನೈತಿಕತೆ ಸಂಬಂಧದಿಂದ ಹುಟ್ಟಿದ ಮಗ ಎಂಬಾರ್ಥದಲ್ಲಿ ಈ ಪದ ಕಾರ್ಯನಿರ್ವಸುವುದನ್ನು ನೋಡಬಹುದು. ಹಾಗಾಗಿ ಇಲ್ಲಿ ಹೆಣ್ಣು ಬೈಗುಳಕ್ಕೆ ಒಳಗಾಗುತ್ತಾಳೆ ಎಂದು ಹೇಳಲು ಸಾಧ್ಯವಿದೆ.

ಬಚ್ಚ:-

ಬಚ್ಚ ಎಂಬ ಪದದ ಅರ್ಥ ಚಿಕ್ಕದು, ಸಣ್ಣದು, ಚಿಕ್ಕವರು, ಸಣ್ಣವರು ಎಂಬ ನೆಲೆಯಲ್ಲಿ ಬಳಕೆಯಲ್ಲಿದೆ. ಇದನ್ನು ದೊಡ್ಡವರಿಗೆ-ಚಿಕ್ಕವರಿಗೆ ಬೈಯುವಾಗಲೂ ಬಳಕೆಯಾಗುತ್ತದೆ.

ಈ ಪದದ ಬಳಕೆಯ ನೆಲೆಯನ್ನು ನೋಡುವುದಾದರೆ, ಬಚ್ಚ ಸೂಳೆಮಗ, ಬಚ್ಚ ಮಾಡಿದಾಂಗ ಮಾಡಿತ್ತೀಯಾ ಇನ್ನೂ ಬುದ್ಧಿ ಬಂದಿಲ್ವ ನಿನಗೆ, ಬಚ್ಚ ನಿನಗೆ ಏನು ಗೊತ್ತು ಸುಮ್ಮನೆ ಇರು, ನೀನು ಚಿಕ್ಕವನು ನಿನಗೆ ಇದು ಇನ್ನೂ ಅರ್ಥವಾಗುವುದಿಲ್ಲ ಎಂಬ ನೆಲೆಯಲ್ಲಿ ಈ ಬೈಗುಳ ಬಳಕೆಯಲ್ಲಿದೆ.

ಇದು ಮರಾಠಿ ಭಾಷೆಯ 'ಬಚ್ಚಾ' ಎಂಬ ಪದದಿಂದ ಬಂದಿದೆ. ಬಚ್ಚಾ ಎಂದರೆ 'ಮಗ' ಎಂದರ್ಥ. ಇದು ಪುರುಷರಿಗೆ ಸಂಬಂಧಿಸಿದ ಬೈಗುಳವಾಗಿದ್ದರೂ ಸಹ ಬೈಯುವಾಗ ಸ್ತ್ರೀವಾಚಕ ಸೇರಿಸಿಯೇ ಬೈಯುವುದನ್ನು ನೋಡಬಹುದು. ಇಲ್ಲಿಯೂ ಸಹ ಹೆಣ್ಣು ಬೈಗುಳಕ್ಕೆ ಒಳಗಾಗುತ್ತಾಳೆ. ಹಾಗೆ ಸಮಾಜ ಬೈಗುಳಗಳನ್ನು ಸೃಷ್ಟಿಸಿವೆ.

ಈ ಪದದ ರಚನೆ ದೃಷ್ಟಿಯನ್ನು ನೋಡುವುದಾದರೆ ಬಚ್ಚಾ, ಬಚ್ಚ ಆಗಿ ಕಾರ್ಯನಿರ್ವಹಿಸುತ್ತದೆ. 'ಆ' ಕಾರ 'ಅ' ಕಾರವಾಗಿ ಬಳಕೆಯಾಗುತ್ತದೆ.

ದಾದಾ/ಡಾನ್:–

ದಾದಾ ಎಂದರೆ ಗೂಂಡಾ, ಡಾನ್ ಎಂದರ್ಥ. ಹಾಗೆಯೇ ಮರಾಠಿಯಲ್ಲಿ ಅಣ್ಣ ಎನ್ನುವ ಅರ್ಥವೂ ಇದೆ ಆದರೆ ಈ ಪದ ಬೈಗುಳವಾಗಿ ಬಳಕೆಯಾಗುತ್ತದೆ. ಇದು ಅನ್ಯ ಭಾಷಾ ಬೈಗುಳವಾಗಿದ್ದರೂ ಈ ಬೈಗುಳವನ್ನು ಕನ್ನಡಿಗರೂ ಬಳಕೆ ಮಾಡುವುದನ್ನು ನೋಡಬಹುದು. ಇದು ಕೇವಲ ಗಂಡಸರಿಗೆ ಬೈಯುವ ಪದವಾಗಿದ್ದೂ ಅದು ಹೆಣ್ಣಿನ ಮೂಲಕವೇ ಬಳಕೆಯಾಗುತ್ತದೆ. ಈ ಬೈಗುಳವನ್ನು ಚಿಕ್ಕವರು ದೊಡ್ಡವರು ಇಬ್ಬರೂ ಬಳಕೆ ಮಾಡುತ್ತಾರೆ.

ಪ್ರ: ನೀನು ಏನು ದೊಡ್ಡ ಡಾನ್ ಸೂಳೆಮಗನಾ ನನ್ನ ಹತ್ತಿರ ನಿನ್ನದು ಏನು ನಡಿಯಲ್ಲಾ ಇಂತ ಎಲ್ಲ ಧಿಮಾಕ ಬಿಟ್ಟು ಬೀಡು ಎಂದು ಬೈಯುವುದನ್ನು ನೋಡಬಹುದು.

ಸ್ನೇಹಿತರು–ಸ್ನೇಹಿತರು 'ಅವನು ನೋಡಲೇ ಹೆಂಗೆ ದೊಡ್ಡ ಡಾನ್ ನನ್ನ ಮಗ ಮಾಡಿದಾಂಗೆ ಮಾಡತ್ತಾನೆ. ಈಗೀಗ–ಹೀಗ ಬಳ ಆಗೈತಿ ಅವನದು' ಎಂದು ಪರಸ್ಪರ ಮಾತಾನಾಡುವ ಸಂದರ್ಭದಲ್ಲಿ ಬೈಯುವುದನ್ನು ಕಾಣಬಹುದು. ಹೀಗೆ ಈ ಪದ ಬಳಕೆಯಾಗುತ್ತದೆ.

ಉಡಾಳ:–

ಈ ಪದ ಯಾವ–ಯಾವ ರೀತಿಯಲ್ಲಿ ಬಳಕೆಯಾಗುತ್ತದೆ ಎಂಬುವುದನ್ನು ನೋಡುವುದಾದರೆ,

ಉಡಾಳ ನನ್ ಮಗನೆ

ಉಡಾಡಿ ಇದ್ದಾಂಗೆ ನೋಡು ಇವನು

ಉಡಾಡಿ ನನ್ ಮಗ

ಉಡಾಡಿ ಸೂಳೆಮಗ

ಈ ಪದ ಯಾವ ಅರ್ಥದಲ್ಲಿ ಬಳಕೆಯಾಗುತ್ತದೆ ಅಂದರೆ ಹಾದಿಬಿಟ್ಟವ/ಮೂರು ಬಿಟ್ಟವ, ನೀಚ, ನೀಚಸೂಳೆಮಗ, ತಂಟೆಕ್ಕೋರ, ಸೋಮಾರಿ, ಸೋಮಾರಿ ನನ್ ಮಗ ಎಂದೆಲ್ಲ ಬಳಕೆಯಾಗುತ್ತದೆ.

ಪ್ರ: ಗಂಡಸರು-ಗಂಡಸರು ಮಾತಾನಾಡಿಕೊಳ್ಳವಾಗ 'ಅಲ್ಲಿ ನೋಡಲೇ ಆ ಉಡಾಡಿ ಸೂಳೆಮಗ ಬಂದ ನೋಡು ಬರೀ ತಿನ್ನೋದೆ ಅವನ ಕೆಲಸ' ಎಂದು ಬೈಯುವುದನ್ನು ನೋಡಬಹುದು.

'ಉಡಾಳ ನನ್ ಮಗ ಇದಾಂಗೆ ನೋಡು ಬಾರಿ ಸೋಮಾರಿ ಇದಾನ ಇವನು ಯಾವ ಕೆಲಸದಲ್ಲೂ ಆಸಕ್ತಿ ಇಲ್ಲ ಇವನಿಗೆ' ಎಂದು ತಂದೆ ಮಗನಿಗೆ ಬೈಯುವುದನ್ನು ಸಹ ನೋಡಬಹುದು. ಒಂದೇ ಬೈಗುಳ ಪದ ಭಿನ್ನ ರೀತಿಯಲ್ಲಿ ಬಳಕೆಯಾಗುವುದನ್ನು ಗಮನಿಸಬಹುದು. ಇಲ್ಲಿಯೂ ಹೆಣ್ಣು ಬೈಗುಳಕ್ಕೆ ಒಳಗಾಗುವುದನ್ನು ನೋಡಬಹುದು.

ಉಡಾಳ ಎಂಬ ಪದ ಮರಾಠಿ ಭಾಷೆಯಿಂದ ಬಂದಿದೆ. ಬಳಕೆಯಲ್ಲಿ ಉಡಾಳ, ಉಡಾಡಿ ಎಂದು ಮಾಡಿಕೊಂಡಿದ್ದಾರೆ. ಇದರಲ್ಲಿ ಸ್ತ್ರೀಲಿಂಗರೂಪ ಇಲ್ಲ. ಜನರು ಬಳಕೆ ಮಾಡುವ ಸಂದರ್ಭದಲ್ಲಿ ಉಡಾಳಿ, ಉಡಾಳಿಸೂಳೆ ಎಂದು ಬೈಯುವಾಗ ಬಳಕೆ ಮಾಡುತ್ತಾರೆ.

ದರ್ಬೇಸಿ:-

ಇದು ಪಾರಸಿ ಭಾಷೆಯ ದರವೇಶ್ ಶಬ್ದದಿಂದ ಬಂದಿದೆ. ಹಿಂದೀ, ಮರಾಠಿ ಭಾಷೆಗಳಲ್ಲಿಯೂ ಪ್ರಯೋಗವಾಗುತ್ತದೆ. ಕನ್ನಡದಲ್ಲಿ ದರವೇಶಿ, ದರಬೇಸಿ, ದರವೇಸಿ, ದರ್ವೇಸಿ ಎಂಬ ರೂಪಗಳಲ್ಲಿಯೂ ಜನರು ಬಳಕೆ ಮಾಡುತ್ತಾರೆ. ಮೂಲದಲ್ಲಿ ಇದಕ್ಕೆ ಅರ್ಥ ಮಹಮ್ಮದೀಯ ಫಕೀರ, ಸಾದು ಎಂಬರ್ಥ ಇತ್ತು. ಆದರೆ ಕನ್ನಡದಲ್ಲಿ ಇದರ ಅರ್ಥ ಹೀನಾರ್ಥವಾಗಿ ಬಳಕೆಯಾಗುತ್ತಿದೆ. ಅಂದರೆ ಕನ್ನಡದಲ್ಲಿ ಈಗ ಬಡವ, ದರಿದ್ರ, ಗತಿ ಇಲ್ಲದವನು, ಕ್ಷುಲಕ ಎಂಬ ಅರ್ಥವನ್ನು ಹೊಂದಿದೆ.

ಬಳಕೆಯಲ್ಲಿ ಇದನ್ನು ದರ್ಬೇಸಿ ನನ್ ಮಗ, ದರ್ಬೇಸಿ ಸೂಳೆಮಗ, ದರ್ಬೇಸಿ ಇದಾಂಗೆ ಇದಾನ ನೋಡು ಅವನು ಎಂದು ಬೈಯುವಾಗ ಬಳಕೆ ಮಾಡುತ್ತಾರೆ.

೩.೧.೩.೨.ಹೆಣ್ಣಿಗೆ ಸಂಬಂಧಿಸಿದ ಅನ್ಯಭಾಷಾ ಬೈಗುಳಗಳು:-

ಉದಾ:-

ಲೌಡಿ

ತಾಟಗಿತ್ತಿ

ಮಿಟಕಲಾಡಿ

ಚಿನಾಲಿ

ಕುಂಟಲಗಿತ್ತಿ

ಕಂತ್ರಿಲೌಡಿ

ಬೋಸುಡಿ

ತೆಗುವಿನಸೂಳೆ

ತೆಗುವಿಂದಿ

ಲೌಡಿ:-

ಇದು ಹೆಣ್ಣು ಮಕ್ಕಳಿಗೆ ಬೈಯುವಾಗ ಬಳಕೆ ಮಾಡುವ ಪದವಾಗಿದೆ. ಈ ಬೈಗುಳವನ್ನು ಗಂಡ ಹೆಂಡತಿಗೆ ಬೈಯುವಾಗ ಬಳಸುತ್ತಾನೆ. ಗಂಡಸರು-ಹೆಂಗಸರಿಗೆ ಬೈಯುವಾಗ ಬಳಸುತ್ತಾರೆ.

ಬಳಕೆಯ ವಿಧಾನ:-

ಲೇ ಲೌಡಿ

ಲೇ ಕತ್ತೆಲೌಡಿ

ಕತ್ತೆಲೌಡಿ

ಲೌಡಿ ಅಂತಾ ಸೂಳೆ

ಕತ್ತೆಲೌಡಿ ಮಾಡಿದಾಂಗೆ ಮಾಡಿತ್ತಿಯಲ್ಲಾ

ಕತ್ತೆಲೌಡಿ ಇದಾಂಗೆ ನೋಡು ನೀನು ಎಂದೆಲ್ಲಾ ಬೈಯುವಾಗ ಬಳಕೆ ಮಾಡುತ್ತಾರೆ.

ಲೌಡಿ ಅಂದರೆನೆ ಸೂಳೆ ಎಂದರ್ಥ ಆದರೆ ಅದರ ಅರ್ಥ ಗೋತ್ತಿಲ್ಲದ ಜನ ಲೌಡಿಗೆ ಮತ್ತೆ ಸೂಳೆ ಎಂಬ ಪದ ಸೇರಿಸಿ ಕತ್ತೆಲೌಡಿ ಸೂಳೆ ಎಂದು ಬೈಯುವುದನ್ನು ನೋಡಬಹುದು. ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಕತ್ತೆಗೆ ಸೂಳೆ ಇದಾಂಗೆ ನೀನು ಎಂಬರ್ಥದಲ್ಲಿ ಈ ಬೈಗುಳ ಬಳಕೆ ಆಗುತ್ತದೆ ಆದರೆ ಇದನ್ನು ಬಳಕೆ ಮಾಡುವ ಜನರಿಗೆ ಇದರ ಅರ್ಥ ಗೊತ್ತಿಲ್ಲದೆ ಬಾಯಿ ಬಂದಂಗೆ ಬೈಯುವುದನ್ನು ಸಹ ಕಾಣಬಹುದು. ಹೆಣ್ಣಿಗೆ ಬೈಯುವಾಗ ಹೆಚ್ಚಾಗಿ ಸೂಳೆ ಎಂದೇ ಬೈಯುತ್ತಾರೆ.

ಲೌಡಿ ಎಂಬ ಪದವು ಪಾರಸೀ ಭಾಷೆಯ ಲವಂದ್, ಹಿಂದೀ ಭಾಷೆಯ ಲೌಂಡಿ ಆಗಿ ಮರಾಠಿಯಲ್ಲಿ ಲವಂಡಿ ಆಗಿದೆ. ಆ ಶಬ್ದಕ್ಕೆ ವೇಶ್ಯೆ, ದಾಸಿ, ತೊತ್ತು ಎಂಬರ್ಥವಿದೆ. ಇದು ಕನ್ನಡದಲ್ಲಿ ಬೈಗುಳ ಪದವಾಗಿ ಬಳಕೆಯಾಗುತ್ತದೆ.

ಲವುಡಿ ಎಂಬ ಶಬ್ದವು ಸಂಸ್ಕೃತದ ಲಗುಡ ಎಂಬುದರ ತದ್ಭವ, ಪ್ರಾಕೃತದಲ್ಲಿ ಅದು ಲವುಡ ಎಂದಾಗುತ್ತದೆ. ಕನ್ನಡದಲ್ಲಿ ಲವುಡಿ ಇದಕ್ಕೆ ಲೌಡಿ, ಲಗುಡಿ ಎಂಬ ರೂಪಗಳೂ ಇವೆ. ಇದಕ್ಕೆ ದೊಣ್ಣೆಯ ಹಾಗಿರುವ ಕಬ್ಬಿಣದ ಆಯುಧ ಎಂಬ ಅರ್ಥವಿದೆ. ಗಯಚರಿತ್ರೆಯಲ್ಲಿ 'ಸುರುಗಿಯಲಿ ಲವುಡಿಯಲಿ, ಮುಸಲದಲಿ ಕೃಪಾಣದಲಿ...ಎಚ್ಚಾಡಿದನು' ಎಂದು ಒಂದು ಪ್ರಯೋಗ ನೀಡಿದ್ದಾರೆ. (ಇಗೋ ಕನ್ನಡ ಪು.೫೯೧)

ತಾಟಗಿತ್ತಿ:-

ತಾಟಗಿತ್ತಿಗೆ ತಟವಾಣಿ ಎಂದು ಕರೆಯುವುದುಂಟು. ಹಾಗಾಗಿ ತಟವಾಣಿ ಇದು ಹಿಂದಿ ಭಾಷೆಯ ಟಟವಾನೀ ಎಂಬ ಶಬ್ದದ ಮೂಲಕ ಬಂದಿದೆ.

ಬಳಕೆಯ ವಿಧಾನ,

ಲೇ ತಾಟಗಿತ್ತಿ

ತಾಟಗಿತ್ತಿಸೂಳೆ

ಮಹಾನ್ ತಾಟಗಿತ್ತಿ

ಮಹಾನ್ ತಾಟಗಿತ್ತಿಸೂಳೆ

ಬಡಿವಾರ ಮಾಡೋ ತಾಟಗಿತ್ತಿಸೂಳೆ ಇದಾಂಗೆ ನೀನು.

ಪ್ರ: 'ಲೇ ತಾಟಗಿತ್ತಿ ಸೂಳೆ ನಮ್ಮ ಕೊಳವೆ ಹತ್ರ ನೀರು ಹಿಡಿಯೋಕೆ ಬಂದು ಅಲ್ಲೆ ಎಲ್ಲ ಗಲಿಜು ಮಾಡಿ ಮತ್ತೆ ನಮಗೆ ನಾನಲ್ಲ ಅಂತ ಹೇಳತ್ತಿ ಅಲ್ಲ ಹೆಂಗೆ ನಿನ್ ಬಿಟ್ಟು ಮತ್ತೆ ಯಾರು ಬಂದಿಲ್ಲ ನಾವು ಸಹ ಅಲ್ಲಿಗೆ ಹೋಗಿಲ್ಲ ಮತ್ತೆ ಯಾರು ಬಂದ್ರು ಗಲಿಜು ಮಾಡಿದ್ರವ್ವ ನಿನ್ ಬಿಟ್ಟು' ಎಂದು ಬೈಯುವುದನ್ನು ಕಾಣಬಹುದು.

ಇದು ತಪ್ಪು ಮಾಡಿ ಮಾಡಿಲ್ಲ ಅಂತಾ ವಾದ ಮಾಡುವುದರ ಮೂಲಕ ನಾನು ಮಾಡಿಲ್ಲ ಎಂದು ಜೋರು ಬಾಯಿ ಮಾಡುವವಳಿಗೆ ಬಳಸುವ ಬೈಗುಳ ಪದವಾಗಿದೆ. ಈ ಪದ ಬಜಾರಿ, ಜಗಳಗಂಟಿ ಎಂಬರ್ಥದಲ್ಲಿ ಬಳಕೆಯಾಗುತ್ತಿದೆ.

ಇದು ರಾಮಾಯಣದಲ್ಲಿ ಬರುವ ತಾಟಕಿ ಎಂಬ ರಾಕ್ಷಸಿಯ ಹೆಸರಿನ ಅಪಭಂಶ್ರ. ಕನ್ನಡದಲ್ಲಿ ತಾಟಕೆ, ತಾಟಕಿ, ತ್ರಾಟಕಿ, ತಾಟಗಿತ್ತಿ ಎಂಬ ಅನೇಕ ರೂಪಗಳನ್ನು ಪಡೆದಿವೆ. ರಾಮಾಯಣದಲ್ಲಿ ರಾಮನು ಕೊಂದ ಮೊದಲ ವ್ಯಕ್ತಿ ತಾಟಕಿ. ಕನ್ನಡದಲ್ಲಿ ಈ ಅಪಭ್ರಂಶ ರೂಪಗಳನ್ನು ಜಗಳಗಂಟಿ, ಬಜಾರಿ, ಗಯ್ಯಾಳಿ, ತಂಟೆ ಮಾಡುವವಳು ಎಂಬ ಅರ್ಥದಲ್ಲಿ ಪ್ರಯೋಗಿಸುತ್ತಾರೆ.

ಇದಕ್ಕೆ ತಟ್ಟು ಎಂದು ಕರೆಯವ ಕುದುರೆಯ ಜಾತಿ ಎಂದು ಅರ್ಥ. ಇದು ಹೆಣ್ಣು ಕುದುರೆಗೆ ಇರುವ ಹೆಸರು. ಒಂದು ಹಳೆಯ ಕಾವ್ಯದಲ್ಲಿ ಕಡಿವಾಣಂಗಳಂ ಕಟ್ಟಿರುವ ತಟ್ಟವಾಣಿಗಳ ಮೇಲ್ಕುಳೀತು ಎಂದು ಪ್ರಯೋಗವಿದೆ. ಇದೇ ತಟವಾಣಿ ಎಂದು ಕಿಟ್ಟಲ್ ಗುರುತಿಸಿದ್ದಾರೆ. ಕೆಲವು ವೇಳೆ ಗಟ್ಟಿಗಿತ್ತಿಯಾದ ಹೆಂಗಸನ್ನು ಬೈಯುವುದಕ್ಕೆ ಈ ಶಬ್ದ ಉಪಯೋಗವಾಗುತ್ತದೆ. ಪ್ರಾಚೀನ ಕಾವ್ಯಗಳಲ್ಲಿ ಸುಂದರಿಯನ್ನು ವರ್ಣಿಸುವಾಗ ಅಶ್ವದ ಉಪಮಾನವನ್ನು ಕೊಡುತ್ತಾರೆ (ಇಗೋ ಕನ್ನಡ ಪು.೨೮೦).

ಕುಂಟಲಗಿತ್ತಿ:-

ಕನ್ನಡದಲ್ಲಿ ಈ ಪದಕ್ಕೆ ಅನೇಕ ಪರ್ಯಾಯ ರೂಪಗಳು ಬಳಕೆಯಾಗುತ್ತಿವೆ. ಕುಂಟಣಿ, ಕುಂಟಲಿ, ಕುಂಟಲಿಗ, ಕುಂಟಲಗಿತ್ತಿ, ಕುಂಟಣಗಿತ್ತಿ ಇತ್ಯಾದಿ. ಕುಟನೀ ಎಂಬ ಪದಕ್ಕೆ ಗಂಡು-ಹೆಣ್ಣುಗಳ ರಹಸ್ಯ ಸಂಭೋಗಕ್ಕೆ ಏರ್ಪಾಡು ಮಾಡುವ ಸ್ತ್ರೀ ಅಥವಾ ಪುರುಷ ಎಂದರ್ಥ. ಆದರೆ ಈ ಬೈಗುಳ ಪದ ಹೆಣ್ಣಿಗೆ ಮಾತ್ರ ಬೈಯುವಾಗ ಬಳಕೆ ಮಾಡುತ್ತಾರೆ. ಕುಟ್ಟನೀ ಅಥವಾ ಕುಟ್ಟನೀ ಎಂಬ ಸಂಸ್ಕೃತ ಪದಕ್ಕೆ ಅಮರವಾದ ಟೀಕೆ ಸ್ವಾರಸ್ಯವಾಗಿದೆ. 'ವಿಟಸ್ಯ ಕುಟುಂಬಂ ಅರ್ಥಹರಣೇನ ಕುಟ್ಟಯತಿ=ಧನವನ್ನು ಅಪಹರಿಸುವುದರಿಂದ ವಿಟನ ಕುಂಟುಬವನ್ನು ನಾಶ ಮಾಡುವವಳು ಎಂದು ಈ ಪದಕ್ಕೆ ಅರ್ಥ ಆದರೆ ಇದು ಬೈಗುಳ ಪದವಾಗಿ ಬಳಕೆಯಾಗುತ್ತದೆ.

ಸಂಸ್ಕೃತದ ಕುಟ್ಟನೀ ಎಂಬ ಪದದಿಂದ ಕುಂಟಲಗಿತ್ತಿ ಎಂದು ಕನ್ನಡದಲ್ಲಿ ಬಳಕೆಯಾಗುತ್ತದೆ. ಇದರ ಅರ್ಥ ಕದ್ದು ಮುಚ್ಚಿ ವ್ಯಭಿಚಾರದ ವ್ಯವಹಾರ ಮಾಡುವ ವ್ಯಕ್ತಿಯನ್ನು ಕುಂಟಲಗಿತ್ತಿ ಎಂದು ಅರ್ಥದಲ್ಲಿ ಬಳಕೆಯಾದರೆ ಮತ್ತೊಂದು ಅರ್ಥದಲ್ಲಿ ಚಾಡಿ ಹೇಳುವವರಿಗೆ ಬೈಯುವಾಗಲೂ ಸಹ ಕುಂಟಲಗಿತ್ತಿ ಬೈಯುವುದನ್ನು ನೋಡಬಹುದು.

ಹೆಣ್ಣು-ಹೆಣ್ಣಿಗೆ:-

ಪ್ರ: 'ಅವಳದು ಬರೀ ಕುಂಟಲಗಿತ್ತಿ ವ್ಯವಹಾರ ಬೀಡು. ಅವಳದು ಏನೂ ಹೇಳತ್ತಿಯಾ ನೀನು. ಅಲ್ಲಿಂದ ಇಲ್ಲಿಗೆ ಹೇಳೋದು ಅವಳ ಕೆಲಸ'. ಅವಳದು ನಾನು ಬಂದಗಿನಿಂದ ನೋಡತ್ತ ಇದಿನಿ ಬರೀ ಕುಂಟಲಗಿತ್ತಿ ಕೆಲಸ ಮಾಡೋದರಲ್ಲೇ ಕಾಲ ಕಳೆದು ಬಿಟ್ಟಳು ನೋಡು ಅವಳು ಅದರಿಂದ ಏನು ಸಿಗುತ್ತೋ ಅವಳಿಗೆ ಪಾಪ ಅವಳ ಗಂಡ ಮಕ್ಕಳ ಗತಿ ಏನಾಗಬೇಕು ಎಂಬ ಬಳಕೆಯ ಸಂದರ್ಭ ಕಾಣಬಹುದು.

(ಸಂಸ್ಕೃತದಲ್ಲಿ ಕುಟ್ಟನೀ ಎಂಬ ಶಬ್ದವಿದೆ. ಇದೇ ಕನ್ನಡದಲ್ಲಿ ಕುಂಟಣಿ ಎಂದು ತದ್ಭವವಾಗುತ್ತದೆ. ಇದಕ್ಕೆ ವ್ಯಭಿಚಾರಕ್ಕಾಗಿ ಗಂಡು-ಹೆಣ್ಣುಗಳನ್ನು ಹೊಂದಿಸುವ ದಾಸಿ, ತಲೆಹಿಡುಕಿ, ಎಂದು ಅರ್ಥ. ಈ ಪದ ಒಂದು ಗುಂಪಿನ ಜನರಲ್ಲಿ ಅಪಾರವಾದ ಪ್ರಯೋಗಕ್ಕೆ ಸಿಕ್ಕಿ ಅದಕ್ಕೆ ಅನೇಕ ಪರ್ಯಾಯ ರೂಪಗಳು ಬೆಳೆದುಬಂದಿವೆ. ಕುಂಟಣಿ, ಕುಂಟಲಿ, ಕುಂಟಣಿ, ಕುಂಠಣಿ, ಕೂಂಟಣಿ, ಕೂಟಣಿ ಇತ್ಯಾದಿ. ಕುಂಟಣಿಯ ಕೆಲಸ ಮಾಡುವ ಗಂಡಸು ಕುಂಟಣಿಗ. ಈ ಪದದ ಸ್ತ್ರೀಲಿಂಗ ಕುಂಟಣಿಗಿತ್ತಿ... ಈ ಪದವೆ ಕುಂಟಲಗಿತ್ತಿ ಎಂಬ ಮತ್ತೊಂದು ರೂಪವನ್ನು ಪಡೆದು ದಿವ್ಯವಾದ ಚರಿತ್ರೆಯನ್ನು ಹೊಂದಿದೆ (ಇಗೋ ಕನ್ನಡ ಪು.೧೬೩).

ತೆಗುವಿನಸೂಳೆ:-

ತೆಗುವಿನ ಎಂಬ ಪದ ತೆಲಗು ಪದ. ಇದಕ್ಕೆ ಸೂಳೆ ಎಂಬ ಪದ ಸೇರಿಸಿ ಬೈಯುವಾಗ ಬಳಕೆ ಮಾಡುವುದನ್ನು ನೋಡಬಹುದು. ಸೊಕ್ಕಿನಿಂದ ಅಥವಾ ಸೊಕ್ಕು ಇರುವ ಹೆಣ್ಣಿಗೆ ಬೈಯುವಾಗ ಬಳಕೆ ಮಾಡುವ ಪದವಾಗಿದೆ.

ಪ್ರ: ಹೆಣ್ಣು-ಹೆಣ್ಣಿಗೆ:-

ಎಷ್ಟು ತೆಗುವು ಐತಿ ಈ ಹೆಂಗಸಿಗೆ ಅಷ್ಟು ಒಳ್ಳೆದಲ್ಲಾ ನೋಡು. ಮುಂದೆ ಅನುಭವಿಸುತ್ತಿಯಾ ನೀನು ಎಂಬ ಬಳಕೆಯ ಸಂದರ್ಭ ಕಾಣಬಹುದು.

ಹೆಣ್ಣಿಗೆ ಸೊಕ್ಕು ಇರಬಾರದು ಅದು ಹೆಣ್ಣಿಗೆ ಒಳ್ಳೆದು ಅಲ್ಲಾ ಅಂತಾ ಬೈಗುಳದ ಮೂಲಕ ಹೇಳುವುದನ್ನು ನೋಡಬಹುದು.

ಬಳಕೆಯ ವಿಧಾನ,

ತೆಗುವಿಂದಿ

ತೆಗವು ಜಾಸ್ತಿ ಇದೆ ಅಲ್ಲಾ ನಿನಗೆ

ಮುಕ್ಲಗಾ ತೆಗವು ಜಾಸ್ತಿ ಆಗೈತಿ ಹೆಣ್ಣಿಗೆ

ಬೋಸುಡಿ:-

ಇದೊಂದು ಮರಾಠಿಯಿಂದ ಸ್ವೀಕರಿಸಿಕೊಂಡ ಬೈಗುಳವಾಗಿದೆ. ಇದು ಹೆಂಗಸರಿಗೆ ಬೈಯುವಾಗ ಬಳಕೆ ಮಾಡುವ ಬೈಗುಳ ಪದವಾಗಿದೆ. ಇದು ಹೆಣ್ಣು ಹೆಣ್ಣಿಗೆ, ಗಂಡು ಹೆಣ್ಣಿಗೆ ಬೈಯುವಂತಹ ಪದವಾಗಿದೆ.

ಬಳಕೆಯ ವಿಧಾನ,

ಲೇ ಬೋಸುಡಿ

ಬೋಸುಡಿ ಸೂಳೆ

ಬೋಸುಡಿನಾಡ

ಬೋಸುಡಿಸೂಳೆನಾಡ

ಎಂದೆಲ್ಲ ಹೆಣ್ಣು ಮಕ್ಕಳಿಗೆ ಬೈಯುವಾಗ ಬಳಕೆಮಾಡುತ್ತಾರೆ. ಇದೋದು ತೀರ ಅವಾಚ್ಯ ಪದರೂಪದ ಬೈಗುಳವಾಗಿದೆ. ಈ ಬೈಗುಳವು ಹಾದರಗಿತ್ತಿಗೆ ಸಮಾನಾಗಿ ನಿಲ್ಲುವ ಪದವಾಗಿದೆ.

ಗಂಡ–ಹೆಂಡಿಡತಿಗೆ:–

ಪ್ರ: ಲೇ ಬೋಸುಡಿನಾಡ ಇಷ್ಟೊವತ್ತು ಎಲ್ಲಿಗೆ ಆಳಾಗಿ ಹೋಗಿದ್ದೆ ನೀನು ಯಾವನ್ ತಕ ದೇಂಗಿಸಿನಾಕ ಹೋಗಿದ್ದೆ ಎಂದು ಗಂಡ ಹೆಂಡತಿಗೆ ತೀರ ಅಶ್ಲೀಲವಾಗಿ ಬೈಯುವಾಗ ಕಂಡುಬರುತ್ತದೆ.

ಈ ಬೈಗುಳವನ್ನು ಗಮನಿಸಿದಾಗ ಕುಡಿದ ಬಂದ ಗಂಡ ಹೆಂಡತಿ ಇಲ್ಲ ಎಂದು ತಿಳಿದು ತೀರ ಅಶ್ಲೀಲವಾದ ಬೈಗುಳಗಳನ್ನು ಬಳಕೆ ಮಾಡುವ ಒಂದು ವಿಧಾನವಾಗಿದೆ.

೩.೧.೩.೩.ಇಬ್ಬರಿಗೂ ಸಂಬಂಧಿಸಿದ ಅನ್ಯಭಾಷಾ ಬೈಗುಳಗಳು:–

ಉದಾ. **ಗಂಡಿಗೆ**	**ಹೆಣ್ಣಿಗೆ**
ಕಂತ್ರಿ	ಕಂತ್ರಿಸೂಳೆ
ಕಂಜೂಸ್	ಕಂಜೂಸ್‌ಸೂಳೆ
ಬದ್ಮಾಸ್	ಬದ್ಮಾಸ್‌ಸೂಳೆ
ಬೇವಾರ್ಸಿ	ಬೇವಾರ್ಸಿಸೂಳೆ
ಬಡಾಯಿ	ಬಡಾಯಿಸೂಳೆ
ಬೋಸುಡಿ	ಬೋಸುಡಿಸೂಳೆ
ನಾಲಾಯಕ ನನ್ ಮಗ	ನಾಲಾಯಕಸೂಳೆ
ಲೋಫರ	ಲೋಫರಸೂಳೆ
	ಲೋಫರಮುಂಡೆ
ಪಿಂಜಾರ	ಪಿಂಜಾರಸೂಳೆ

ಈ ಮಾದರಿಯ ಅನ್ಯಭಾಷೆಯಿಂದ ಬಂದ ಪದಗಳು ಮೂಲದಲ್ಲಿ ತಟಸ್ಥ ಪದಗಳಾಗಿದ್ದು ಕನ್ನಡದಲ್ಲಿ ಲಿಂಗ ನಿರ್ದಿಷ್ಟವಾಗುವಾಗ ಕನ್ನಡ ಸ್ತ್ರೀ ಮತ್ತು ಪುರುಷವಾಚಕ ಪದಗಳನ್ನು ಪಡೆದು ಬಳಕೆಯಾಗುತ್ತವೆ. ಈ ಪದಗಳು ಸ್ತ್ರೀವಾಚಕವಾಗುವಾಗ ಸೂಳೆ, ಮುಂಡೆ ಇಂಥ ಕನ್ನಡ ಬೈಗುಳಗಳನ್ನು ಪಡೆದು ರಚನೆಗೊಳ್ಳುತ್ತವೆ. ಈ ಪದರಚನೆಗಳು ಪುರುಷವಾಚಕವಾಗುವಾಗ ಸ್ತ್ರೀವಾಚಕದ ಮುಂದೆ ಮಗ, ಗಂಡ ಇಂಥ ಪದಗಳನ್ನು ಪಡೆದು ರಚನೆಗೊಳ್ಳುತ್ತವೆ.

ಉದಾ. **ಹೆಣ್ಣಿಗೆ**	**ಗಂಡಿಗೆ**
ಕಂತ್ರಿಸೂಳೆ	ಕಂತ್ರಿಸೂಳೆಮಗ

ನಾಲಾಯಕ್‌ಸೂಳೆ ನಾಲಾಯಕ್ ಸೂಳೆಮಗ

ಬೇವರ್ಸಿಮುಂಡೆ ಬೇವರ್ಸಿ ಮುಂಡೆಗಂಡ

ಈ ರೀತಿಯ ರಚನೆಗಳು ಹೊಂದುತ್ತವೆ. ಕೆಲವೊಮ್ಮೆ ಸ್ತ್ರೀವಾಚಕವಾಗುವಾಗ ಸೂಳೆ ಅಥವಾ ಮುಂಡೆ ಎಂಬ ಪದಗಳಿಗೆ ಮಗಳು ಎನ್ನುವ ಪದ ಸೇರಿಸಿ ಪದರಚನೆ ಸಾಧ್ಯತೆಗಳಿವೆ. ಹಾಗೆಯೇ ಕಂತ್ರಿಸೂಳೆಮುಂಡೆ, ಬೇವರ್ಸಿಸೂಳೆಮುಂಡೆ ಇಂಥ ರಚನೆಗಳು ಸಾಧ್ಯತೆಗಳಿವೆ. ಈ ಪದಗಳು ಲಿಂಗ ನಿರ್ದಿಷ್ಟವಾಗುವಾಗ ಸ್ತ್ರೀಯನ್ನು ಸ್ತ್ರೀವಾಚಕ ಸೇರಿರಚನೆಗೊಳ್ಳುತ್ತದೆ.

ಕಂತ್ರಿ:–

ಈ ಬೈಗುಳದ ಪದ ಇಂಗ್ಲೀಷಿನ ಪದವಾಗಿದೆ. ಈ ಪದವು ಇಂಗ್ಲೀಷ್‌ನ 'ಅಂಣಟಿ–ಣಡಿಥಿ' ಯಿಂದ ಬಂದಿದೆ. ಅಂಣಟಿಣಡಿಥಿ ಪದವು ಸ್ಥಳೀಯ ಐಂಛಿಚಿಟ ಎಂಬ ಅರ್ಥವನ್ನು ಹೊಂದಿದೆ. 'Country' ಕಂತ್ರಿ ಎಂದು ಹೀನಾರ್ಥವಾಗಿ ಬೈಗುಳ ಪದವಾಗಿ ಬಳಕೆಯಲ್ಲಿದೆ.

ಗಂಡಿಗೆ ಅನ್ವಯವಾದಾಗ ಇದರ ಬಳಕೆ ವಿಧಾನವನ್ನು ನೋಡುವುದಾದರೆ,

ನೀನು ಕಂತ್ರಿ

ನಿನ್ನ ಕಂತ್ರಿ ಬುದ್ಧಿ ತೋರಿಸಬೇಡ

ಕಂತ್ರಿಸೂಳೆಮಗ

ಕಂತ್ರಿ ನನ್ ಹಟಗಳ್ಳ

ಕಂತ್ರಿ ನನ್ ಮಗ

ಮಹಾನ್ ಕಂತ್ರಿ ಅವನು

ಲೋ ಕಂತ್ರಿಸೂಳೆಮಗ

ಹೆಣ್ಣಿಗೆ ಅನ್ವಯವಾದಾಗ ಬಳಕೆಯಾಗುವ ವಿಧಾನ,

ಲೇ ಕಂತ್ರಿ

ಲೇ ಕಂತ್ರಿಸೂಳೆ

ಕಂತ್ರಿಸೂಳೆ

ಏನ್ ಮಹಾನ್ ಕಂತ್ರಿಸೂಳೆ ಐದಿ ಅವ್ವ ನೀನು

ನೀನು ಮೋಸ ಮಾಡುವ ಬುದ್ಧಿ ತೋರಿಸಬೇಡ ಎಂಬ ನೆಲೆಯಲ್ಲಿ ಈ ಬೈಗುಳದ ಪದ ಬಳಕೆಯಲ್ಲಿದೆ. ಹೆಣ್ಣಿಗೆ ಬೈಯುವಾಗಲೂ ನೀನು ಮೋಸ ಮಾಡುತ್ತಿಯಾ ನಿನ್ ಬುದ್ಧಿ ಸರಿಯಿಲ್ಲ ಎಂದು ಬೈಯುತ್ತಾರೆ ಅದರ ಜೋತೆಗೆ ಸೂಳೆ ಎಂದು ಸೇರಿಸಿ ನೀನು ಅನೈತಿಕತೆಯುಳ್ಳವಳು ಎಂದು ಸಹ ಬೈಯುತ್ತಾರೆ. ಹಾಗೆಯೇ ಗಂಡಿಗೆ ಈ ಪದ ಅನ್ವಯವಾದರೂ ಅದು ಹೆಣ್ಣಿನ ಮೂಲಕವೆ ಬೈಯುವುದನ್ನು ನೋಡಬಹುದು. ಕಂತ್ರಿಸೂಳೆಮಗ ಎಂದು ಬೈದರೆ ಅಲ್ಲಿ ಅನೈತಿಕ ಚಟುವಟಿಕೆಯಿಂದ ಜನಿಸಿದ ಮಗ ನೀನು ಎಂಬರ್ಥವನ್ನು ಕೋಡುತ್ತದೆ. ಹಾಗಾಗಿ ಇಲ್ಲಿ ಗಮನಿಸಬೇಕಾದ ಅಂಶ ಗಂಡಿಗೂ ಅನ್ವಯವಾದರೂ ಅದು ಹೆಣ್ಣಿನ ಮೂಲಕವೇ ಎಂಬಂಶ ಪ್ರಮುಖವಾಗುತ್ತದೆ.

ಕಂಜೂಸ್:–

ಕಂಜೂಸ್ ಕನ್ನಡದಲ್ಲಿ ಜಿಪುಣ ಎಂಬರ್ಥವನ್ನು ಹೊಂದಿದೆ. ಯಾವುದೇ ವಸ್ತುವನ್ನು ಕೊಂಡುಕೊಳ್ಳುವಾಗ ಹಿಂದೆ–ಮುಂದೆ ಮಾಡುವಾಗ ಹೆಣ್ಣಿಗಾಗಲೀ, ಗಂಡಿಗಾಗಲೀ ಕಂಜೂಸ್ ಎಂದು ಬೈಯುತ್ತಾರೆ. ವಸ್ತುವನ್ನು ಖರಿದಿ ಮಾಡುವಾಗ ಅಷ್ಟೆ ಅಲ್ಲ ಊಟ ಮಾಡುವಾಗ, ಬಡಿಸುವಾಗ ಜೀಪುಣ ಬುದ್ಧಿ ಇರುವವರನ್ನು ಬೈಯುವಾಗ ಈ ಪದವನ್ನು ಬಳಸುತ್ತಾರೆ. ಈ ಪದ ಹೆಣ್ಣಿಗೆ ಅನ್ವಯವಾದಾಗ ಕಂಜೂಸ್‌ಸೂಳೆ, ಕಂಜೂಸ್‌ಮುಂಡೆ ಎಂದು ಬೈಯುತ್ತಾರೆ. ಇದು ಹಿಂದಿ ಭಾಷೆಯಿಂದ ಬಂದ ಪದವಾಗಿದೆ.

ಪ್ರ: ಇವಳು ಯಾವಳು ಕಂಜೂಸು ಮುಂಡೆ ಊಟ ನೀಡಬೇಕಾದರೂ ನೀಡೊಲೋ ಬೇಡವೋ ಅನ್ನುವಾಂಗ ಮಾಡತ್ತಾಳಾ. ಅಲ್ಲ ಯಾಕದರೂ ಬಂದವೋ ಇವರ ಮನೆಗೆ ಒಳ್ಳೆ ಇವರ ಮನೆಯಲ್ಲಿ ಎಲ್ಲ ತಿಂದು ಹೋಗುತ್ತಿವಿ ಅನ್ನೋತರ ಮಾಡತ್ತಾಳ. ಅಲ್ಲಾ ಇವಳು ಬಾಳ ಕಂಜೂಸ ಇದಾಳ ಬೀಡು. ಇವಳ ಮನೆಗೆ ಇನ್ನೊಂದು ಸಾರಿ ಬರೋಕೆ ಹೋಗಲ್ಲಾಪ್ಪ ನಾವು ಎಂಬ ಬಳಕೆ ಕಾಣಬಹುದು.

ಬಡಾಯಿ:–

ಇದು ಸಹ ಇಬ್ಬರಿಗೂ ಬಳಕೆಯಾಗುವಂತ ಬೈಗುಳ ಪದವಾಗಿದೆ. ಇದು ಗುಣವಾಚಕ ಪದವಾಗಿದೆ. ಹೆಣ್ಣಿಗೆ ಬೈಯುವಾಗ ಸ್ತ್ರೀವಾಚಕ ಸೇರಿಸಿ ಬೈಯುವುದನ್ನು ನೋಡಬಹುದು. ಇದು ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿರುವ ಬಡಾಈ, ಬಢಾಈ ಎಂಬ ಪದ ಬಳಕೆಯಲ್ಲಿ ಬಡಾಯಿ ಆಗಿದೆ. 'ಈ' ಕಾರ 'ಯಿ' ಕಾರವಾಗಿ ಬಳಕೆಯಾಗುತ್ತಿದೆ. ಹಿಂದಿಯಲ್ಲಿ ಬಡಾಯಿ ಎಂದರೆ ದೊಡ್ಡಸ್ತಿಕೆ ಎಂದರ್ಥ. ಕನ್ನಡದಲ್ಲಿ ಇದು ಜಂಬ, ದರ್ಪ, ಹೆಮ್ಮೆ, ಒಣಹೆಮ್ಮೆ, ಒಣಜಂಬ ಇತ್ಯಾದಿ ಅರ್ಥದಲ್ಲಿ ಬಳಕೆಯಾಗುತ್ತದೆ. ಅಂದರೆ ಮೂಲ ಅರ್ಥವೇ ಬೇರೆ ಬಳಕೆಯಾಗುತ್ತಿರುವ ಅರ್ಥ ಬೇರೆಯಾಗಿದೆ. ಜನರು ಸಾಮಾನ್ಯವಾಗಿ ಬಡಾಯಿ ಕೊಚ್ಚುವುದೂ, ಬಡಾಯಿ ಹೊಡೆಯುವುದೂ ಹೆಚ್ಚು. ಏನು ಇಲ್ಲದೆ ನಮ್ಮ ಹತ್ತಿರ ಅದು

ಇದೆ, ಇದು ಇದೆ ಎಂದು ಒಣಜಂಬ ಕೊಚ್ಚುಕೊಳ್ಳುವವರನ್ನು ಬಡಾಯಿ ಕೊಚ್ಚಿಕೊಳ್ಳುತ್ತಾರೆ ಎಂದು ಬೈಯುವುದನ್ನು ನೋಡಬಹುದು. ಬಂಡವಾಳವಿಲ್ಲದೆ ಬಡಾಯಿ ಕೊಚ್ಚಿದರೆ ಆಗುವ ಅನಾಹುತವೇ ಬೇರೆಯಾಗಿರುತ್ತದೆ ಎಂದು ಜನರು ಹೇಳುತ್ತಾರೆ. ಹೆಣ್ಣಿಗೆ ಬೈಯುವಾಗ ಬಡಾಯಿಸೂಳೆ ಎಂದು ಗಂಡಿಗೆ ಬೈಯುವಾಗ ಬಡಾಯಿ ಸೂಳೆಮಗ ಎಂದು ಬೈಯುವುದನ್ನು ನೋಡಬಹುದು. ಹೀಗೆ ಈ ಪದ ಇಬ್ಬರಿಗೂ ಬಳಕೆಯಾಗುತ್ತದೆ.

ಬೇವಾರ್ಸಿ:–

ಈ ಬೈಗುಳವು ಇಬ್ಬರಿಗೂ ಅನ್ವಯವಾಗುವ ಪದವಾಗಿದೆ. ಇದು ಗಂಡಿಗೆ ಅನ್ವಯವಾದಾಗ ಬಳಕೆಯಾಗುವ ವಿಧಾನ ಬೇರೆ, ಹೆಣ್ಣಿಗೆ ಅನ್ವಯವಾದಾಗ ಬಳಕೆಯಾಗುವ ವಿಧಾನ ಬೇರೆಯಾಗಿದೆ. ಒಂದು ಅಂಶವನ್ನು ಗಮನಿಸುವುದಾದರೆ, ಗಂಡಿಗೆ ಬೈದರೂ ಅದು ಹೆಣ್ಣಿನ ಮೂಲಕವೇ ವ್ಯಕ್ತವಾಗುತ್ತದೆ.

ಗಂಡಿಗೆ ಬೈಯುವಾಗ ಬಳಕೆ ಮಾಡುವ ವಿಧಾನ

ಲೇ ಬೇವಾರ್ಸಿ

ಬೇವಾರ್ಸಿಸೂಳೆಮಗ

ಬೇವಾರ್ಸಿಮುಂಡೆಮಗ ಎಂದು ಬಳಕೆಯಾದರೆ,

ಹೆಣ್ಣಿಗೆ ಬೈಯುವಾಗ ಬಳಕೆ ಮಾಡುವ ವಿಧಾನ

ಬೇವಾರ್ಸಿ

ಬೇವಾರ್ಸಿಸೂಳೆ

ಬೇವಾರ್ಸಿಮುಂಡೆ

ಎಂದು ಬಳಕೆಯಾಗುತ್ತದೆ. ಬೈಯುವವರಿಗೆ ಇದರ ಅರ್ಥ ಗೊತ್ತಿಲ್ಲದಿದ್ದರೂ ಇದೊಂದು ಅಸ್ತ್ರದಂತೆ ಬಳಕೆ ಮಾಡುತ್ತಾರೆ. ಇದರ ಮೂಲಾರ್ಥ ಯಾರು ದಿಕ್ಕಿಲ್ಲದವನು, ಭೀಕಾರಿ, ಅನಾಥ ಎಂಬರ್ಥವನ್ನು ಹೊಂದಿದೆ. ಬೇ+ವಾರಿಸ ಎಂಬ ರಚನೆಯಿದೆ. ಸ್ತ್ರೀ ಮತ್ತು ಪುರುಷರಿಗೆ ಬೈಯುವಾಗ ಸಮಾನವಾಗಿ ಬಳಕೆಯಾಗುತ್ತಿದ್ದು ಕೆಲವೊಮ್ಮೆ ಈ ಬೈಗುಳಕ್ಕೆ ಪುರುಷ ಮತ್ತು ಸ್ತ್ರೀಯರಿಗೆ ಬಳಕೆಯಾಗುವ ಇತರೆ ಬೈಗುಳಗಳು ಸೇರಿಸಿ ಬೈಯುವುದು ಕಂಡುಬರುತ್ತದೆ.

ಇದು ಮರಾಠಿಯ ಬೇವಾರಶೀ, ಬೇವಾರಸಾ, ಬೇವಾರೀಸ್ ಬಳಕೆಯಲ್ಲಿ ಬೇವಾರ್ಸಿಯಾಗಿ ಬಳಕೆಯಾಗುತ್ತಿದೆ.

ನಾಲಾಯಕ್:-

ಇದು ಇಬ್ಬರಿಗೂ ಬಳಕೆಯಾಗುವಂತಹ ಬೈಗುಳವಾಗಿದೆ. ನಾಲಾಯಕ್ಕು ಎಂಬ ಪದ ಪಾರಸೀ, ಅರಬ್ಬಿ ಭಾಷೆಯಿಂದ ಬಂದಿದೆ. ಇದರ ಅರ್ಥ ಯೋಗ್ಯವಲ್ಲದ ವ್ಯಕ್ತಿ, ಅಯೋಗ್ಯವಾದ, ಅನುಚಿತ ಎಂಬರ್ಥಗಳು ಇವೆ. ಬೈಯುವಾಗ ಯಾವುದಕ್ಕೂ ಬರಲಾರದವ, ಕೆಲಸಕ್ಕೆ ಬಾರದವ ಎಂಬರ್ಥದಲ್ಲಿ ಬಳಕೆಯಾಗುತ್ತ ಇವೆ.

ಗಂಡಿಗೆ ಬೈಯುವಾಗ,

ನಾಲಾಯಕ್ ನನ್ ಮಗ

ನಾಲಾಯಕ್ ಸೂಳೆಮಗ

ಯಾವ ಕೆಲಸಕ್ಕೂ ಬಾರದವನು ಎಂದು ಬೈತ್ತಾರೆ.

ಹೆಣ್ಣಿಗೆ ಬೈಯುವಾಗ,

ನಾಲಾಯಕ್ ಸೂಳೆ ಎಂದು ಬೈಯುತ್ತಾರೆ. ಹೀಗೆ ಈ ಬೈಗುಳ ಇಬ್ಬರಿಗೂ ಬಳಕೆಯಾಗುತ್ತದೆ. ಗಂಡಿಗೆ ಬೈಯುವಾಗ ನಾಲಾಯಕ್ ಸೂಳೆಮಗ ಎಂಬುದರಲ್ಲಿ ನೀನು ಕೆಲಸಕ್ಕೆ ಬಾರದ ಸೂಳೆಯ ಮಗ ಎಂಬರ್ಥದಲ್ಲಿ ಪ್ರತಿಕ್ರಿಯಿಸುತ್ತದೆ. ಅಂದರೆ ನೀನು ಅನೈತಿಕತೆ ಚಟುವಟಿಕೆಯಿಂದ ಹುಟ್ಟಿದ ಮಗ ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಹೀಗೆ ಈ ಪದ ಪುರುಚವಾಚಕವಾಗಿಯೂ, ಸ್ತ್ರೀವಾಚಕವಾಗಿಯೂ ಬಳಕೆಯಾಗುತ್ತದೆ.

ಪ್ರ: ಲೇ ನಾಲಾಯಕ್ ಸೂಳೆಮಗ, ನಾಲಾಯಕ್ ಸೂಳೆ ನೀನು ಯಾವ ಕೆಲಸಕ್ಕೆ ಬರಲ್ಲ ಅಲ್ಲ ಏನು ಪ್ರಯೋಜನವಿಲ್ಲದ ನನ್ ಮಕ್ಳು ಇದಾಂಗೆ ನೀವು ಎಂದು ಹೆಣ್ಣು ಗಂಡಿಗೆ ಇಬ್ಬರಿಗೂ ಬೈಯುವುದನ್ನು ನೋಡಬಹುದು.

ಹೀಗೆ ಪದರೂಪದಲ್ಲಿರುವ ಬೈಗುಳಗಳನ್ನು ನೋಡಬಹುದು. ಅನ್ಯಭಾಷಡಯಿಂದ ಬಂದಂತಹ ಬೈಗುಳಗಳು ಕನ್ನಡೇತರು ಬಳಸುತ್ತಾರೆ. ಅದರ ಬಳಕೆಯ ನೆಲೆ ಭಿನ್ನರೀತಿಯಲ್ಲಿ ಇರುತ್ತವೆ. ಕನ್ನಡಿಗರು ಬಳಸುವ ಬೈಗುಳಗಳು ಅದರ ಮೂಲಾರ್ಥ ಬೇರೆಯಾಗಿರುತ್ತದೆ ಈಗ ಬಳಸುವ ಅರ್ಥ ಬೇರೆಯಾಗಿರುತ್ತದೆ. ಒಂದು ತಟಸ್ಥ ಬೈಗುಳವೂ ಹೆಣ್ಣಿಗೆ ಅನ್ವಯವಾದಾಗ ಪಡೆದುಕೊಳ್ಳುವ ಅರ್ಥ. ಅದೇ ಬೈಗುಳ ಗಂಡಿಗೆ ಅನ್ವಯವಾದಾಗ ಪಡೆದುಕೊಳ್ಳುವ ಅರ್ಥ ಬೇರೆಯಾಗಿ ಇರುತ್ತದೆ. ಹೀಗೆ ಪದರೂಪದಲ್ಲಿರುವ ಬೈಗುಳಗಳಾಗಬಹುದಾದ ಭಾಷಿಕ ರೂಪಗಳನ್ನು ಇಲ್ಲಿ ಕಲೆಹಾಕಿದೆ.

೩.೨.ಪದಪುಂಜ ರೂಪದ ಬೈಗುಳ:

ವಾಕ್ಯವಲ್ಲದ್ದು, ಪದವಲ್ಲದ್ದು ಪದಪುಂಜ ರೂಪದಲ್ಲಿರುತ್ತದೆ. ಪದಪುಂಜ ರೂಪದ ಬೈಗುಳಗಳಿಗೆ ಪೂರ್ಣಪ್ರಮಾಣದ ಅರ್ಥವಿರುವುದಿಲ್ಲ. ಇವು ಅರ್ಥದ ಒಂದು ಭಾಗವನ್ನು

ಮಾತ್ರ ಧ್ವನಿಸುತ್ತಿರುತ್ತವೆ. ಪದಪುಂಜ ರೂಪದಲ್ಲಿರುವ ಬೈಗುಳಗಳನ್ನು ಯಾರು ಬಳಸುತ್ತಾರೆ, ಯಾರಿಗೆ ಬಳಸುತ್ತಾರೆ, ಯಾಕೆ ಬಳಸುತ್ತಾರೆ ಮತ್ತು ಅವು ಹೆಣ್ಣಿನ ಮೂಲಕವೇ ಯಾಕೆ ಹೆಚ್ಚಾಗಿ ಬಳಕೆಯಾಗುತ್ತವೆ ಎಂಬುವುದನ್ನು ಪರಿಶೀಲಿಸಬೇಕಾಗುತ್ತದೆ. ಕೆಲವು ಪದಪುಂಜ ರೂಪದ ಬೈಗುಳಗಳು ಹೆಣ್ಣಿನ ಸಾಮಾಜಿಕ ವರ್ತನೆಯನ್ನು ಮತ್ತು ಸಮಾಜ ಪರಿಭಾವಿಸುವ ವರ್ತನೆಯನ್ನು ಹೇಳುತ್ತವೆ ಮತ್ತು ಪದಪುಂಜ ರೂಪದ ಬೈಗುಳ ಸಕಾರತ್ಮಕವಾದಾಗ ಅದರ ಅರ್ಥ ಏನಾಗುತ್ತದೆ ಮತ್ತು ನಕಾರತ್ಮಕವಾದಾಗ ಅದರ ಅರ್ಥ ಏನಾಗುತ್ತದೆ ಎಂಬುವುದನ್ನು ಕುರಿತು ಇಲ್ಲಿ ದಾಖಲಿಸಲಾಗಿದೆ.

೩.೨.ಪದಪುಂಜ ರೂಪದ ಬೈಗುಳಗಳು:-

ಆ ನನ್‌ಮಗ

ನಿನ್ ಅಕ್ಕನ್

ನನ್ ಮಗನೆ

ನಿನ್ ಅಮ್ಮನ್

ನಿನ್ ಅಜ್ಜಿ

ನಿನ್ ಅಜ್ಜಿ ತಗಡು

ನಿನ್ ಅಜ್ಜಿ ಪಿಂಡ

ಹಡಬಿಟ್ಟಿಗಂಟು

ಬೋಳಿಮಗ

ರಂಡೆಮಗ

ಸೂಳೆಮಗ

ಸೋಗಲಾಡಿ ಸುಬಕ್ಕ

ಮೂದೇವಿ ತಂದು

ಬಡ್ಡಿಮಗ

ಹಡಿಬಿಟ್ಟಿಸೂಳೆ

ಅವರ ಅವ್ವನ್ ಮಿಂಡ್ರು

ಲೇ ಕಂತ್ರಿಸೂಳೆ

ಮೊಂಡಸೂಳೆ

ರ್‍ಯಾಡಿಬಸಕ್ಕ

ಬೀದಿಸೂಳೆ

ರ್‍ಯಾಡಿಗಳ್ಳಿ

ರ್‍ಯಾಡಿಸೂಳೆ

ಬಾಯಿಬಡಕಿ

ಬಾಯಿಬಡ್ಕಿಸೂಳೆ

ಶನಿಗೇಡಿಸೂಳೆ

ಕಳ್ಳಬಡ್ಡಿಸೂಳೆ

ಕಳ್ಳಬಡ್ಡಿನಾಡ

ತಿಗಳಗೇಡಿಸೂಳೆ

ಖಬರಗೇಡಿಸೂಳೆ

ಕುಲಗೆಟ್ಟಹೆಂಗಸು

ಕುಲಗೆಟ್ಟಸೂಳೆ

ಕುಲಗೆಟ್ಟಹೆಣ್ಣು

ಕುಂಟಲಗಿತ್ತಿಸೂಳೆ

ಆ ನನ್ ಮಗ:–

ಈ ಬೈಗುಳವು ಪದಪುಂಜ ರೂಪದಲ್ಲಿದೆ. ಈ ಬೈಗುಳ ಪದಪುಂಜವು ಪುರುಷವಾಚಕವಾಗಿದೆ. ಇದು ಕೇವಲ ಗಂಡಸರು–ಗಂಡಸರಿಗೆ ಬಳಸುವಂತಹ ಪದಪುಂಜವಾಗಿದೆ. ಈ ಪದ ಮೇಲುನೋಟಕ್ಕೆ ಗಂಡಸರಿಗೆ ಸಂಬಂಧಿಸಿದ್ದಾಗಿದ್ದು, ಗಂಡಸರು–ಗಂಡಸರಿಗೆ ಬಳಸುವ ಪದವಾಗಿದ್ದರೂ ಇಲ್ಲಿ ಹೆಣ್ಣು ಬೈಗುಳಕ್ಕೆ ಒಳಪಡುತ್ತಾಳೆ ಎಂಬ ಅಂಶ ಸೂಕ್ಷ್ಮವಾಗಿ ನೋಡಿದಾಗ ಮಾತ್ರ ಕಂಡುಬರುತ್ತದೆ. ಈ ಬೈಗುಳದ ಪದಶಃ ಅರ್ಥ ಅವನು ನನ್ನ ಮಗ ಎಂಬುವುದಾಗಿದೆ. ಇದು ಬೈಗುಳವಾಗುವುದು ಯಾವನೋ ಒಬ್ಬ ವ್ಯಕ್ತಿಯನ್ನು ಆ ನನ್ ಮಗ ಎಂದು ಕರೆದರೆ ಅದು ಬೈಗುಳ ರೂಪ ಪಡೆದುಕೊಳ್ಳುತ್ತದೆ. ಕೆಲವು ಸಲ ತಂದೆ ಮಗನಿಗೆ ಬೈಯುವಾಗಲೂ ಈ ಪದ ಬಳಕೆ ಮಾಡುವುದನ್ನು ನೋಡಬಹುದು.

ಪ್ರ: ಆ ನನ್ ಮಗನಿಗೆ ಎಷ್ಟು ಸೊಕ್ಕು ನೋಡು ನನಗೆ ಎದರು ಮಾತಾಡತ್ತಾನೆ. ನೀನು ಕಲಿಸಿದ್ದೇ ಚಾಳಿ ಅವನಿಗೆ, ನೀನು ಮುದ್ದು ಮಾಡಿ–ಮಾಡಿ ಹಿಂಗೆ ಆಗ್ಯಾನ. ಅವನಿಗೆ ಬಿಟ್ಟು ಮೊದಲು ನಿನಗೆ ಒದಿಬೇಕು ಅವಾಗ ನಿನ್ನ ಮಗನಿಗೆ ಬುದ್ಧಿ ಬರತೈತಿ. ಆ ನನ್ ಮಗ ಇನ್ನೊಂದು ಸಲ ಎದುರಾಡಲಿ ಅವಾಗ ಮಾಡತಿನಿ ಅವನಿಗೆ ಎಂದು ತಂದೆ ಮಗನಿಗೆ ಬೈಯುತ್ತಾನೆ.

ತಂದೆಯ ಮಾತಿಗೆ ಮಗ ಎದುರಾಡುವ ಸಂದರ್ಭದಲ್ಲಿ ಮಗನಿಗೆ ಆ ನನ್ ಮಗ ಎಂಬ ಬೈಗುಳ ಪದವನ್ನು ತಂದೆ ಬಳಕೆ ಮಾಡುತ್ತಾನೆ ಮತ್ತು ಮಗನಿಗೆ ಬೈಯುವುದರ ಜೊತೆಗೆ ಹೆಂಡತಿಯನ್ನು ಬೈಯುವುದನ್ನು ಈ ಪ್ರಯೋಗದಲ್ಲಿ ನೋಡಬಹುದು.

ಈ ಪದದ ರಚನೆಯನ್ನು ನೋಡುವುದಾದರೆ ಆ ನನ್ ಮಗ ಅನ್ನುವುದರ ಬದಲು ಅವನಿಗೆ ಎಷ್ಟು ಸೊಕ್ಕು ಎಂದು ಸಹ ಬಳಕೆ ಮಾಡಬಹುದು. ಅವನು ತನ್ನ ಮಗ ಎಂದು ತಿಳಿದಿದ್ದು ಸಹ ಆ ನನ್ ಮಗ ಎಂಬ ಪದ ಬಳಕೆಯಾಗುತ್ತದೆ. ಬೇರೆ ವ್ಯಕ್ತಿಗೆ ಬೈಯುವ ಸಂದರ್ಭದಲ್ಲೂ ಆ ನನ್ ಮಗ ಎಂಬ ಪದ ಬಳಕೆಯಾಗುತ್ತದೆ. ಅಲ್ಲಿಯೂ ಒಂದು ಹೆಣ್ಣಿನ ಅನೈತಿಕ ಸಂಬಂಧವನ್ನು ತೋರಿಸುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಆ ನನ್ ಮಗ ಎಂಬ ಪದ ಮಾತ್ರ ಬೈಗುಳ ಪದವಾಗಿ ಬಳಕೆಯಾಗುತ್ತದೆ ಹೊರತು ಆ ನನ್ ಮಗಳು ಎಂಬ ಪದಪುಂಜ ಬೈಗುಳ ಪದವಾಗಿ ಬಳಕೆಯಾಗುವುದಿಲ್ಲ. ಈ ಪದವನ್ನು ಕೇವಲ ಸಕರಾತ್ಮವಾಗಿ ಮಾತ್ರ ಬಳಕೆ ಮಾಡುತ್ತಾರೆ.

ಉದಾ:– ಆ ನನ್ನ ಮಗಳು ಎಷ್ಟು ಒಳ್ಳೆಯವಳು. ಅವಳು ಹೇಳಿದ ಮಾತೆಲ್ಲ ಚೆನ್ನಾಗಿ ಕೇಳುತ್ತಾಳೆ. ಆದರೆ ಆ ನನ್ ಮಗ ಎಂಬ ಪದ ಸಕರಾತ್ಮವಾಗಿ ಬಳಕೆಯಾಗುವುದಕ್ಕಿಂತ ಹೆಚ್ಚಾಗಿ ನಕರಾತ್ಮಕವಾಗಿ ಬಳಕೆಯಾಗುತ್ತದೆ.

ಹಡಿಬಿಟ್ಟಿಗಂಟು:–

ಈ ಪದಪುಂಜದಲ್ಲಿ ಹಡಿಬಿಟ್ಟಿ ಎಂಬುದು ಮಾತ್ರ ಮುಖ್ಯವಾಗುತ್ತದೆ ಮತ್ತು ಇದು ಹೆಚ್ಚಾಗಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಬೈಗುಳ ಪದವಾಗಿದೆ. 'ಹಡಿಬಿಟ್ಟಿ' ಎಂಬ ಪದ 'ಸೂಳೆ' ಎಂದೂ 'ಗಂಟು' ಎಂಬ ಪದ 'ಮುಚ್ಚಿಟ್ಟ ಹಣ' ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಸೂಳೆ ಗಳಿಸಿದ ಹಣವನ್ನು ಹಡಿಬಿಟ್ಟಗಂಟು ಎನ್ನುತ್ತಾರೆ. ಇದು ಕೇವಲ ಸೂಳೆಗೆ ಬಳಕೆ ಆಗುವುದಿಲ್ಲ. ಎಲ್ಲಾ ಹೆಣ್ಣು ಮಕ್ಕಳಿಗೂ ಬೈಯುವಾಗ ಬಳಕೆಯಾಗುವ ಪದವಾಗಿದೆ.

ಹೆಣ್ಣು–ಹೆಣ್ಣಿಗೆ:–

ಪ್ರ: ಆ ಹಡಿಬಿಟ್ಟಿಗಂಟು ಯಾವಳಿಗೆ ಬೇಕು ಹೋಗು ಅವಳು ತಂದು ಕೊಟ್ಟಿದ್ದು ನಾನು ಯಾಕೆ ಈಸಕೊಬೇಕು ಅವಳ ದುಡ್ಡು ಬೇಡ ನನಗೆ ಎಂದು ಬೈಯುವುದನ್ನು ನೋಡಬಹುದು.

ಹೆಣ್ಣು-ಹೆಣ್ಣಿಗೆ ಬೈಯುವಾಗಲೂ ಈ ರೀತಿಯ ಪದವನ್ನು ಬಳಕೆ ಮಾಡುವುದನ್ನು ನೋಡಬಹುದು. ಆ ರೀತಿಯಲ್ಲಿ ಹಣ ಗಳಿಸದೆ ಇದ್ದರೂ ಅವಳ ಮೇಲೆ ಕೋಪ ಇರುವುದರಿಂದ ಅವಳ ದುಡ್ಡು ಬೇಡ ಎಂದು ಹೇಳುವ ಬದಲು ಆ ಹಡಬಿಟ್ಟಿಗಂಟು ಬೇಡ ಎಂದು ಬಳಕೆ ಮಾಡುತ್ತಾರೆ.

ಇದೇ ಪದ ಗಂಡು ಹೆಣ್ಣಿಗೆ ಬೈಯುವಾಗ,

ಲೇ ಹಡಿಬಿಟ್ಟಿ ಸೂಳೆ ನಿನ್ನ ಗಂಟು ಯಾವನಿಗೆ ಬೇಕು ಹೋಗು ಯಾವನ-ಯಾವನೋ ಹತ್ತಿರ ಇಸಕೊಂಡ ಹಣ (ಗಂಟು) ನನಗೆ ಕೊಡತ್ತಿಯಾ ಅಂತಾ ದುಡ್ಡು ನನಗೆ ಬೇಡ ಎಂದು ಬೈಯುವುದನ್ನು ಕಾಣಬಹುದು.

ಹಡಿಬಿಟ್ಟಿಗಂಟು ಎಂಬ ಪದದ ಅರ್ಥ ಗೊತ್ತಿಲ್ಲದೆ ಈ ರೀತಿಯಲ್ಲಿ ಹೀನಾರ್ಥವಾಗಿ ಜನರು ಬಳಕೆ ಮಾಡುತ್ತಾರೆ. ಹೆಂಗಸಿನ ಕೈಯಲ್ಲಿರುವ ಹಣ ಯಾರಿಗೋ ಅನ್ಯಾಯವಾಗಿ ಸೇರುತ್ತದೆ ಎಂಬುದು ಇದರ ಸಾಮಾನ್ಯ ಅರ್ಥವಾಗಿದೆ. ಆದರೆ ಬಳಕೆಯಲ್ಲಿರುವುದು ಸೂಳೆಯು ಸಂಪಾದಿಸಿದ ಹಣ ಹಡಿಬಿಟ್ಟಿಗಂಟು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಇನ್ನೊಂದು ಅರ್ಥವನ್ನು ನೋಡುವುದಾದರೆ ಸೂಳೆ ತಾನು ಗಳಿಸಿದ ಹಣ ಮುಪ್ಪಿನಲ್ಲಿ ತನಗೆ ದಕ್ಕುವುದಿಲ್ಲ ಬೇರೆಯವರಿಗೆ ದಕ್ಕುತ್ತದೆ ಎಂಬರ್ಥವೂ ಸಹ ಇದಕ್ಕೆ ಇದೆ. ಈ ಅರ್ಥ ಗೊತ್ತಿಲ್ಲದ ಜನರು ಸಾಮಾನ್ಯ ಹೆಣ್ಣಿಗೆ ಬೈಯುವಾಗಲೂ ಈ ಪದವನ್ನು ಬಳಕೆ ಮಾಡುತ್ತಾರೆ. ಈ ಪದಪುಂಜದಲ್ಲಿ ಮುಖ್ಯವಾದ ಭಾಗ 'ಹಡು' ಇದು ಹಳಗನ್ನಡದ ಪಡು ಎಂಬ ಧಾತುವಿನಿಂದ ಹೊಸಗನ್ನಡಕ್ಕೆ ಬಂದದ್ದು ಪಡು ಶಬ್ದಕ್ಕೆ ಅನೇಕ ಅರ್ಥಗಳಿವೆ. ಮುಖ್ಯವಾಗಿ ೧.ಮಲಗು ೨.ಹೊಂದು ೩.ಮುಳುಗು ೪.ಅನುಭವಿಸು ೫.ಲೈಗಿಂಕ ಕ್ರಿಯೆಯಲ್ಲಿ ನಿರತನಾಗಿರು ಇತ್ಯಾದಿ. ಈ ಅರ್ಥಗಳಲ್ಲಿ ಕೊನೆಯ ಅರ್ಥದ ದೆಸೆಯಿಂದ ಹಡಬಿ, ಹಡಬೆ ಎಂಬ ರೂಪಗಳು ಬೆಳೆಯುತ್ತವೆ. ಆ ಶಬ್ದಕ್ಕೆ ೧.ವೇಶ್ಯೆ ೨.ಸುಲಭ ಸ್ತ್ರೀ ೩.ಹಾದರಗಿತ್ತಿ ಎಂದಾರ್ಥ ಅಂಥವಳು ಗಳಿಸಿ ಕೂಡಿಟ್ಟ ಹಣವನ್ನು ಕುರಿತದ್ದು ಮೇಲಿನ ಪದಪುಂಜ, ಆದ್ದರಿಂದ ಅದು ಹಡಬಿ ಇಟ್ಟ ಗಂಟು ಹಡಬಿಟ್ಟಿಗಂಟು ಎಂದು ತಪ್ಪಾಗಿ ಪ್ರಚಾರದಲ್ಲಿರುವ ರೂಪ. (ಇಗೋ ಕನ್ನಡ, ಪು.೭೧೩)

'ಪ' ಕಾರ 'ಹ' ಕಾರವಾಗಿ ಆಡುಮಾತಿನಲ್ಲಿ ಬಳಕೆಯಾಗುತ್ತದೆ. 'ಪಡು' ಎಂಬ ರೂಪ 'ಹಡು' ಎಂದು ಬಳಕೆಯಲ್ಲಿದೆ.

ಆ ನನ್ ಸವತಿ:-

ಈ ಪದಪುಂಜವು ಸ್ತ್ರೀವಾಚಕವಾಗಿದೆ. ಇದು ಹೆಂಗಸರಿಗೆ ಮಾತ್ರ ಬಳಕೆಯಾಗುವ ಬೈಗುಳ ಪದವಾಗಿದೆ ಮತ್ತು ಇದು ಸಂಸ್ಕೃತದ 'ಸಪತ್ನೀ' ಇಂದ 'ಸವತಿ' ಎಂಬ ಪದ ಬಂದಿದೆ.

ನನ್ ಸವತಿ ಎಂಬ ಪದಶಃ ಅರ್ಥ ಅವಳು ನನ್ನ ಗಂಡನ ಮತ್ತೊಂಬ ಹೆಂಡತಿ ಎಂದರ್ಥ. ಇದರ ಅರ್ಥ ಗೊತ್ತಿದ್ದರೂ ಈ ಪದವನ್ನು ಬೈಗುಳದ ರೂಪವಾಗಿ ಬಳಕೆ ಮಾಡುತ್ತಾರೆ. ಇನ್ನೊಂದು ಅರ್ಥದಲ್ಲಿ ಒಬ್ಬ ಗಂಡಸು ಇಬ್ಬರ ಹೆಂಡತಿರನ್ನು ಮದುವೆಯಾದರೆ ಅವರಿಬ್ಬರೂ ಒಬ್ಬರಿಗೊಬ್ಬರು ಸವತಿಯರಾಗುತ್ತಾರೆ.

ಪ್ರ: ಆ ನನ್ ಸವತಿ ನೋಡು ಎಷ್ಟು ಧಿಮಾಕ ಮಾಡತ್ತಾಳೆ. ತಾನು ಒಬ್ಬಳೆ ಒಳ್ಳೆ ಒಳ್ಳೆ ಸೀರೆ ತಗೋನೊದು ಅನ್ನೊತರ ಹುಟ್ಟುಕೊಂಡು ಧಿಮಾಕ ಮಾಡತ್ತಾಳೆ ಎಂದು ಹೆಣ್ಣು-ಹೆಣ್ಣಿಗೆ ಬೈಯುವಾಗ ಈ ಪದ ಬಳಕೆಯಾಗುತ್ತದೆ.

ಇನ್ನೊಂದು ಸಂದರ್ಭದಲ್ಲಿ ತಮಾಷೆಗೆ ಅತ್ತೆ ಅಣ್ಣನ ಮಗಳಿಗೆ ನೀನು ಏನು ನನ್ ಸವತಿ ಏನು ಹಾಂಗ ಮಾಡತ್ತಿಯಾ. ನನ್ ಗಂಡನ ಮಡಕೊಳ್ಳೊತ್ತಿಯಾ ನೀನು ಎಂದು ಸಹ ತಮಾಷೆಗೆ ಈ ಪದ ಬಳಕೆ ಮಾಡವುದನ್ನು ನೋಡಬಹುದು.

ಸವತಿ ಎಂಬ ಪದ ಅರ್ಥ ಗೊತ್ತಿದ್ದರೂ ಅವಳು ತನ್ನ ಸವತಿ ಅಲ್ಲದೆ ಇದ್ದರೂ ಸಹ ಸವತಿ ಎಂದು ಬೈಯುವಾಗ ಬಳಕೆ ಮಾಡುತ್ತಾರೆ. ಕೇವಲ ಅರ್ಥಗೊತ್ತಿಲ್ಲದ ಸಂದರ್ಭದಲ್ಲಿ ಹೀಗೆ ಆಗುತ್ತವೆ ಎಂದು ಹೇಳುತ್ತಿದ್ದೆವು ಆದರೆ ಕೆಲವು ಸಲ ಅರ್ಥ ಗೊತ್ತಿದ್ದರೂ ಬೈಯುವಾಗ ಆ ಗುಣಗಳು ಅವರಲ್ಲಿ ಇಲ್ಲದೆ ಇದ್ದರೂ ಇದೆ ಎನ್ನುವ ರೀತಿಯಲ್ಲಿ ಬೈಯುವಾಗ ಬಳಕೆಯಾಗುತ್ತವೆ. (ಸವತಿ ಈ ಶಬ್ದ ಸಂಸ್ಕೃತದ ಸಪತ್ನೀ ಎಂಬ ಶಬ್ದದ ತದ್ಭವ, ಪ್ರಾಕೃತದಲ್ಲಿ ಸವತೀ, ತಮಿಳಿನಲ್ಲಿ ಚವತ್ತಿ, ತೆಲುಗು, ತುಳು, ಕನ್ನಡಗಳಲ್ಲಿ ಸವತಿ, ಹಿಂದಿ ಮರಾಠಿಗಳಲ್ಲಿ ಕೂಡ ತದ್ಭವಗಳಿವೆ. (ಇಗೋ ಕನ್ನಡ ಪು.೬೬೯)

ಸೋಗಲಾಡಿ ಸುಬ್ಬಕ್ಕ:-

ಇಲ್ಲಿ ಎರಡು ಸ್ತ್ರೀವಾಚಕ ಪದಗಳಿವೆ. ಇದು ಪದಪುಂಜ ಬೈಗುಳವಾಗಿದೆ. ಹೆಚ್ಚು ಅಲಂಕಾರ ಮಾಡಿಕೊಂಡು ವಯ್ಯಾರ ಮಾಡುವ ಹೆಣ್ಣಿಗೆ ಬೈಯುವಾಗ ಬಳಸುವ ಬೈಗುಳದ ಪದಪುಂಜವಾಗಿದೆ. ಸೋಗು ಮಾಡತ್ತಿಯಾ ನೀನು ಎನ್ನುವುದರ ಬದಲು ಸೋಗಲಾಡಿ ಸುಬ್ಬಕ್ಕ ಎಂಬ ಪದ ಹೆಚ್ಚು ಬಳಕೆಯಲ್ಲಿದೆ. ಸೋಗಲಾಡಿ ಅಂದರೆ ಹೆಚ್ಚು ವಯ್ಯಾರ ಮಾಡುವ ಗುಣವುಳ್ಳವಳು ಎಂಬರ್ಥವನ್ನು ಹೋದಿದೆ. ಇದಕ್ಕೆ ಸುಬ್ಬಕ್ಕ ಎಂಬ ಇನ್ನೊಂದು ಸ್ತ್ರೀವಾಚಕ ಪ್ರತ್ಯಯ ಸೇರಿಸಿ ಬೈಯುವಾಗ ನೀನು ಬೀಡು ದೊಡ್ಡ ಸೋಗಲಾಡಿ ಸುಬ್ಬಕ್ಕ ಇದ್ದಾಂಗೆ ಎಂದು ಬಳಕೆ ಮಾಡುತ್ತಾರೆ.

ಅತ್ತೆ-ಸೊಸೆಗೆ (ಅಣ್ಣನ ಮಗಳಿಗೆ) ಬೈಯುವಾಗ ಈ ಪದ ಬಳಕೆಯಾಗುವುದನ್ನು ನೋಡುವುದಾದರೆ,

ಪ್ರ: ಲೇ ಎಷ್ಟು ಸೋಗು ಮಾಡಿತ್ತಿಯಾ ನೀನು ಸೋಗಲಾಡಿ ಸುಬ್ಬಕ್ಕ ಎಷ್ಟು ರೇಡಿ ಆಗತೀಯಾ ಬಾ ನಿನ್ ಯಾರು ನೋಡತ್ತಾರೆ ಕರಿಯವ್ವ ನೀನು ಎಷ್ಟು ರೇಡಿಯಾದ್ರು ಬೇಳ್ಳಾಗೆ ಆಗಲ್ಲ ಬಾ ಸೋಗಲಾಡಿ ಎಂದು ಅತ್ತೆ-ಸೊಸೆಗೆ ಬೈಯುವುದನ್ನು ಕಾಣಬಹುದು.

ಇನ್ನೊಂದು ಸಂದರ್ಭದಲ್ಲಿ ಅಕ್ಕ-ತಂಗಿಗೆ

ಪ್ರ: ಎ ಸೋಗಲಾಡಿ ಸುಬ್ಬಕ್ಕ ಸಾಕು ಬಾ ರೇಡಿ ಆಗಿದ್ದು ಕನ್ನಡಿ ಬಿಟ್ಟು ಸ್ವಲ್ಪ ಈಕಡೆ ಬರತ್ತಿಯಾ ನಾನು ಸ್ವಲ್ಪ ರೇಡಿ ಆಗತ್ತಿನಿ ಎಂದು ಬೈಯುವುದನ್ನು ಸಹ ನೋಡಬಹುದು.

ಹೀಗೆ ಈ ಪದಪುಂಜ ಬಳಕೆಯಾಗುವುದನ್ನು ನೋಡಬಹುದು. ಸೋಗು ಎಂಬ ಪದ ಮರಾಠಿಯ ಸೋಂಗ್ ಎಂಬ ಶಬ್ದದಿಂದ ಬಂದಿದೆ. ಅದಕ್ಕೆ ಈ ಶಬ್ದಕ್ಕೆ ವೇಷ, ಓರಿಕ್, ನಟನೆ, ನೆಪ ಮುಂತಾದ ಅರ್ಥಗಳಿವೆ. ಈ ಶಬ್ದಕ್ಕೂ ಇಂಗ್ಲಿಷಿನ **'Hypocrisy'** ಎಂಬ ಶಬ್ದಕ್ಕೂ ಸಮಾನವಾದ ಅರ್ಥವಿದೆ. ಈ ಶಬ್ದದಿಂದ ಸೋಗಲಾಡಿ ಶಬ್ದವು ಬೆಳೆದಿದೆ. ಈ ಶಬ್ದಕ್ಕ ವೇಷ ಕಟ್ಟುವವಳು, ವಯ್ಯಾರಿ, ಮಾತಿನಲ್ಲಿ ಬಣ್ಣ ಕಟ್ಟುವ ಹೆಂಗಸು ಎಂದರ್ಥವಿದೆ ಎಂದು ಪ್ರೋ.ಜಿ.ವೆಂಕಟಸುಬ್ಬಯ್ಯನವರು ಹೇಳಿದ್ದಾರೆ (ಇಗೋ ಕನ್ನಡ ಪು.೬೮).

ಹೀಗೆ ಸೋಗಲಾಡಿ ಎಂಬ ಸ್ತ್ರೀವಾಚಕ ಪದಕ್ಕೆ ಸುಬ್ಬಕ್ಕ ಎಂಬ ಮತ್ತೊಂದು ಸ್ತ್ರೀವಾಚಕ ಪದ ಸೇರಿಸಿ ಸೋಗಲಾಡಿ ಸುಬ್ಬಕ್ಕ ಎಂಬ ಪದಪುಂಜವನ್ನು ರಚಿಸಲಾಗಿದೆ. ಹೀಗೆ ಸೋಗಲಾಡಿ ಎಂಬ ಪದಕ್ಕೆ ಉಚ್ಚರಣೆ ಸಾಮ್ಯತೆ ಇರುವ ಸುಬ್ಬಕ್ಕ (ಉದಾ: ಬಡ್ಡಿ ಭೀಮವ್ವ, ಚೂರಿ ಚಿಕ್ಕಣ್ಣ) ಸೇರಿ ಪದಪುಂಜ ರಚನೆಯಾಗಿದೆ. ಇದೆ ಪದವನ್ನು ಪುರುಷರಿಗೆ ಬಳಸುವಾಗ ಸೋಗಲಾಡಿ ಸುಬ್ಬ ಎಂದು ಬಳಸಲಾಗುತ್ತಿದೆ.

ಮೂದೇವಿ ತಂದು:-

ಈ ಬೈಗುಳ ಪದಪುಂಜ ರೂಪದಲ್ಲಿರುತ್ತದೆ. ಈ ಬೈಗುಳವು ಹೆಣ್ಣು-ಹೆಣ್ಣಿಗೆ ಬೈಯುವಾಗ ಬಳಕೆಯಾಗುತ್ತದೆ. ಇದು ಕೇವಲ ಹೆಣ್ಣಿಗೆ ಬಳಸುವ ಬೈಗುಳ ರೂಪವಾಗಿದೆ. ಆದರೆ ಇದನ್ನು ಬಳಸುವ ಸಂದರ್ಭಗಳು ಭಿನ್ನ ರೀತಿಯಲ್ಲಿವೆ. ಮೂದೇವಿ ಎಂದರೆ ಅನಿಷ್ಟ, ದರಿದ್ರ ಎಂಬರ್ಥದಲ್ಲಿ ಬಳಕೆಯಲ್ಲಿದೆ. ಆದರೆ ಇದರ ನಿಜ ಅರ್ಥ ಬೇರೆಯಾಗಿದೆ. ಈ ಪದವನ್ನು ಲಕ್ಷ್ಮಿಯ ಅಕ್ಕನೆಂದೂ ಜ್ಯೇಷ್ಠಾದೇವಿ ಎಂಬ ಹೆಸರೆಂದೂ ಪ್ರಸಿದ್ಧಳಾದ ಅಲಕ್ಷ್ಮಿಗೆ ಅನ್ವಯಿಸುತ್ತಾರೆ.ಬಿವಳನ್ನು ದರಿದ್ರಲಕ್ಷ್ಮಿ ಎಂದೂ ಕರೆಯುತ್ತಾರೆ. ಮೂದೇವಿ ಎಂಬ ಶಬ್ದದ ವ್ಯೂತ್ಪತ್ತಿ ಅನಿಶ್ಚಿತ. ಸೋಮಾರಿಯಾದ ಹೆಣ್ಣು ಮಕ್ಕಳನ್ನು ಬೈಯುವಾಗ ಈ ಬೈಗುಳ ಹೆಚ್ಚಾಗಿ ಬಳಸುತ್ತಾರೆ. ಈ ಬೈಗುಳ ಹೆಚ್ಚಾಗಿ ಅತ್ತೆ ಸೊಸೆಗೆ ಬೈಯುವಾಗ ಬಳಕೆಯಾಗುತ್ತದೆ.

ಹೆಣ್ಣು-ಹೆಣ್ಣಿಗೆ:-

ಪ್ರ: ಎಂತ ಮೂದೇವಿನಾ ಮನೆಗೆ ತಂದಿಯಾ ಅವ್ವ ನೀನು ಬೇರೆ ಯಾವ ಹುಡುಗಿ ಸಿಗಲಿಲ್ಲ ಏನು ನಿನಗೆ ನಿನ್ ಮಗನಿಗೆ. ನಿನ್ ಮಗ ನೋಡಿದರೆ ಬಂಗಾರ ಇದ್ದಾಂಗ ಇದನಾ ನಿನ್ ಸೊಸೆ ನೋಡಿದರೆ ಹೆಂಗೆ ಐದಾಳ ಬೇಸ್ ಇಲ್ಲ ಒಳ್ಳೆ ಮೂದೇವಿನಾ ತಂದಬಿಟ್ರೆ ಮನೆಗೆ. ಸ್ವಲ್ಪನಾದರೂ ಲಕ್ಷಣವಾಗಿ ಇದಾಳ ಅವಳು ಯಾವಾಗ ನಗತ್ತಾಳೆ ಏನು ಯಾವಗನಾ ಕೇಳು ಅಳೋ ಮಕ ಇದಾಂಗ ಇರುತ್ತೆ ನಿನ್ ಸೊಸೆದು ಮೂದೇವಿನ ತಂದು ಎಂದು ಬೈಯುವುದನ್ನು ನೋಡಬಹುದು.

ಇನ್ನೊಂದು ಸಂದರ್ಭವನ್ನು ಗಮನಿಸುವುದಾದರೆ,

ಅತ್ತೆ ಸೊಸೆಗೆ:-

ಎಂತ ಮೂದೇವಿನಾ ತಂದು ಬಿಟ್ಟವಿ ಮನೆಗೆ ಅವಳು ಬಂದಾಗ ಇದ್ದ ಮನೆಗೆ ದರಿದ್ರ ಬಂದು ಬಿಡತ್ತು. ಇವಳು ಬರೋಕು ಮುಂಚೆ ನಮ್ಮ ಮನೆ ಎಷ್ಟು ಚೆನ್ನಾಗೆ ಇತ್ತು ಮತ್ತು ಎಲ್ಲರೂ ಚೆನ್ನಾಗಿ ಇದ್ವಿ, ಈ ಮೂದೇವಿ ಕಾಲಿಟ್ಟದ್ದೇ ಎಲ್ಲಾ ಆಳಾಗಿ ಹೋಯ್ತು, ಎಲ್ಲಾರಾ ಆರೋಗ್ಯನೂ ಹದಗೆಟ್ಟು ಹೋಗೈತಿ ಎಂದು ಅತ್ತೆ ಸೊಸೆಗೆ ಬೈಯುವಾಗ ಈ ಪದ ಬಳಕೆಯಾಗುವುದನ್ನು ನೋಡಬಹುದು.

ಯಾವುದೋ ಕಾರಣಕ್ಕೆ ಮನೆಗೆ ದರಿದ್ರ ಬಂದರೆ ಅದು ಹೋಸದಾಗಿ ಬಂದ ಸೊಸೆ ಮೇಲೆ ಅಪವಾದ ಬರುತ್ತೆ ಮತ್ತು ಅವಳೆ ಕಾರಣ ಇದಕ್ಕೆಲ್ಲಾ ಎಂದು ಅವಳನ್ನು ಕಡೆಗಣಿಸುತ್ತಾರೆ. ಇದು ಹೇಗೆ ಸರಿ ಒಂದು ಹೆಣ್ಣೇ ಮನೆಗೆ ದೀಪ, ಕೀರ್ತಿ, ಮನೆಯ ಎಲ್ಲಾ ಜವಬ್ದಾರಿ ಎಲ್ಲರ ಯೋಗಕ್ಷೇಮದ ಬಗ್ಗೆ ಗಂಡಿಗಿಂತ ಅವಳಿಗೆ ಜಾಸ್ತಿ ಇರುತ್ತದೆ ಅಂತಹವಳನ್ನು ಸಮಾಜ ದರಿದ್ರ ನೀನು ಎಂದು ದೂಷಿಸುವುದರ ಮೂಲಕ ದರಿದ್ರ, ಮೂದೇವಿ ಎಂಬ ಪಟ್ಟ ಕಟ್ಟುತ್ತದೆ

ಹೀಗೆ ಬೈಗುಳಗಳಲ್ಲಿ ಪದಮುಂಜವನ್ನು ಗುರುತಿಸಬಹುದು ಮತ್ತು ಈ ಬೈಗುಳದ ಪದಮುಂಜಗಳಲ್ಲಿ ಹೆಣ್ಣನ್ನು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಮೇಲಿನ ಎಲ್ಲಾ ಪ್ರಯೋಗದಲ್ಲಿ ನೋಡಲಾಗಿದೆ. ಸಮಾಜ ಹೇಗೆ ಹೆಣ್ಣನ್ನು ಬೈಗುಳದ ಮೂಲಕ ಹಿಡಿದಿಟ್ಟು ಕೊಳ್ಳಲು ಪ್ರಯ್ನತಿಸುತ್ತದೆ ಎಂಬುದನ್ನು ಸಹ ಮೇಲಿನ ಬೈಗುಳದ ಪದಮುಂಜದಲ್ಲಿ ವಿವರಿಸಲಾಗಿದೆ ಎಂದು ಹೇಳಬಹುದು. ಈ ಪದಮುಂಜದ ಬೈಗುಳಗಳನ್ನು ಸಕರಾತ್ಮಾವಾಗಿ ಅರ್ಥ ಮಾಡಿಕೊಳ್ಳುವುದಕ್ಕಿಂತ ಹೆಚ್ಚಾಗಿ ನಕರಾತ್ಮಾವಾಗಿ ಅರ್ಥ ಮಾಡಿಕೊಳ್ಳುವುದೇ ಹೆಚ್ಚು ಎಂದು ಹೇಳಬಹುದು. ಹಾಗೆಯೇ ಈ ಪದಮುಂಜ ಬೈಗುಳಗಳು ಬಳಕೆಯಾಗುತ್ತವೆ.

ಪ್ರಾಸರೂಪದ ಬೈಗುಳಗಳು:–

ಈ ಪ್ರಾಸರೂಪದ ಬೈಗುಳಗಳು ದುಃಖದ ಸಂದರ್ಭದಲ್ಲಿ ಮತ್ತು ಅಸಹಾಯಕತೆಯ ಸಂದರ್ಭದಲ್ಲಿ ಹೆಚ್ಚಾಗಿ ಬಳಕೆ ಆಗುತ್ತವೆ. ಗಾದೆ ರೂಪದ ಬೈಗುಳಗಳು ಸಹ ಹೆಚ್ಚಾಗಿ ಪ್ರಾಸ ರೂಪದಲ್ಲಿರುತ್ತವೆ. ಈ ಪ್ರಾಸರೂಪದ ಬೈಗುಳಗಳಲ್ಲಿ ಹೆಣ್ಣನ್ನು ಹೇಗೆ ಚಿತ್ರೀಕರಿಸಲಾಗಿದೆ ಮತ್ತು ಪ್ರಾಸಬದ್ಧವಾಗಿ ಹೇಗೆ ಬೈಗುಳಗಳು ಸೃಷ್ಟಿಯಾಗಿವೆ ಎಂಬುವುದನ್ನು ಕುರಿತು ವಿವರಿಸಲಾಗಿದೆ. ಪ್ರಾಸರೂಪದ ಬೈಗುಳಗಳಲ್ಲಿ ಹೆಣ್ಣಿಗೆ ಸಂಬಂಧಿಸಿದ ಬೈಗುಳಗಳು ಹೇಗೆ ಬಳಕೆಯಾಗುತ್ತವೆ, ಪ್ರಾಸರೂಪದ ಬೈಗುಳಗಳಲ್ಲಿ ಹೆಣ್ಣಿಗೆ ಸಂಬಂಧಿಸಿದ ಯಾವ ಬೈಗುಳ ಬಳಕೆಯಾಗುತ್ತದೆ ಮತ್ತು ಆ ಬೈಗುಳಕ್ಕೆ ಪ್ರಾಸಬದ್ಧವಾಗಿ (ಪ್ರಾಸ ಬರುವ ಹಾಗೆ) ಪರ್ಯಾಯವಾದ ಯಾವ ಪದ ಬಳಕೆಯಾಗುತ್ತದೆ, ಆಧುನಿಕ ಸಂದರ್ಭದಲ್ಲಿ ಇಂತಹವುಗಳು ಏಕೆ ಕಳೆದು ಹೋಗುತ್ತಿವೆ ಎಂಬುವುದನ್ನು ಕುರಿತು ಈ ಭಾಗದಲ್ಲಿ ಚರ್ಚಿಸಲಾಗಿದೆ.

೩.೩.ಪ್ರಾಸರೂಪದ ಬೈಗುಳಗಳು:–

ಉದಾ:–

- ಅತ್ತೆ ಮೇಲಿನ ಕೋಪ ಕೊತ್ತಿ ಮೇಲೆ.
- ಅಜ್ಜಿಗೆ ಅರಿವೆ ಚಿಂತೆ, ಮೊಮ್ಮಗಳಿಗೆ ಮಿಂಡನ ಚಿಂತೆ.
- ಮೊಲೆ ಬಂದ ಮ್ಯಾಲೆ ನೆಲ ಕಾಣದು.
- ನೀತಿಯಿಲ್ಲದ ಹೆಣ್ಣು, ಜ್ಯೋತಿಯಿಲ್ಲದ ಮನೆ.
- ಗಂಡು ನಗ್ತಾ ಕೆಟ್ಟ, ಹೆಂಗಸು ಅಳ್ತಾ ಕೆಟ್ಟಳು.
- ಅಟ್ಟಿಕ್ಕಲಾರದೋಳಿಗೆ ಒಲೆ ಡೊಂಕು,
- ಕುಟ್ಟಿಕ್ಕಲಾರದೋಳಿಗೆ ಒನಕೆ ಡೊಂಕು.
- ಮಲಗಿ ಮಗ ಕೆಟ್ಟ, ತಿರುಗಿ ಸೊಸೆ ಕೆಟ್ಟಳು.
- ಗಂಡನ ಹೆಸರು ಮಿಂಡನ ಪಿಸುರು.
- ಬೋಳಿಗೆ ಸೆರಗನ ಚಿಂತೆ,
- ಸೂಳೆಗೆ ಸಿಂಗಾರ್ದ ಚಿಂತೆ.
- ಹಾದ್ರಗಿತ್ತಿಗೆ ಹಸ್ನಾದ ಸಾವು,
- ಪತಿವ್ರತೆಗೆ ಪಡಿಪಾಟ್ಲ ಸಾವು.

ಕೇವಲ ಗಾದೆಗಳಲ್ಲಿ ಅಷ್ಟೆ ಅಲ್ಲದೆ ಒಡಪುಗಳಲ್ಲಿಯೂ ಪ್ರಾಸರೂಪದ ಬೈಗುಳಗಳನ್ನು ಕಾಣಬಹುದು. ಹೆಣ್ಣು ತನ್ನ ಗಂಡನ ಹೆಸರು ಹೇಳುವಾಗ ಒಡಪು ಕಟ್ಟಿ ಹೇಳುವುದು

ಒಂದು ಸಂಪ್ರದಾಯವಾಗಿ ಬೆಳೆದುಕೊಂಡು ಬಂದಿದೆ. ಇತ್ತೀಚಿನ ದಿನಮಾನಗಳಲ್ಲಿ ಇವುಗಳು ಕಡಿಮೆಯಾಗತ್ತಿವೆ. ಮತ್ತು ಇತ್ತೀಚಿನ ಹೆಣ್ಣುಮಕ್ಕಳು ಸಹ ಯಾವುದೇ ನಾಚಿಕೆ, ಅಡ್ಡಿ ಆತಂಕ, ಸಂಕೋಚ ಇಲ್ಲದೆ ಗಂಡನ ಹೆಸರು ಹೇಳುತ್ತಾರೆ. ವಿಪರ್ಯಾಸವೆಂದರೆ ಗಂಡನಿಗೆ ಹೆಸರಿಟ್ಟೆ ಸಂಬೋಧನೆ ಮಾಡುವುದು ಆಧುನಿಕ ಸಂದರ್ಭದಲ್ಲಿದೆ. ಹಿಂದಿನ ಹೆಣ್ಣಮಕ್ಕಳು ತಮ್ಮ ಗಂಡನ ಹೆಸರು ಹೇಳುವಾಗ ಹೇಗೆ ಪ್ರಾಸಬದ್ಧವಾಗಿ ಹೇಳುತ್ತಾರೆ ಮತ್ತು ಆ ಒಡಪುಗಳು ಬೈಗುಳದ ಮೂಲಕವೇ ಹೇಗೆ ಚಿತ್ರಿತಗೊಂಡಿವೆ, ಅವುಗಳಲ್ಲಿ ಹೆಣ್ಣು ಹೇಗೆ ಬೈಗುಳಕ್ಕೆ ಒಳಪಡುತ್ತಾಳೆ, ಅದರಲ್ಲೂ ಪ್ರಾಸಬದ್ಧವಾಗಿ ಹೇಗೆ ಒಡಪುಗಳು ಇವೆ ಎಂಬುವುದನ್ನು ದಾಖಲಿಸಿದೆ.

ಉದಾ:–ಸಣ್ ಸಣ್ ಸ್ಯಾವಿಗಿ

ಸಿಂದನೂರು ಸಕ್ಕರಿ

ಸಣ್ ಸಣ್ ಸೂಳೇಯರನ

ಬ್ಯಾಸರಿಲ್ದೆ ನೋಡತಾನ

ಅಕ್ಕಕ್ಕರು ಬಡ್ಡಿ ಆರಾಡು ಕಡಿವಾಗ

ಸೂಳೆರ ನೋಡತಾನೆ ಸುತ್ತರಿತಾನೆ

ನನ್ ನೋಡತಾನೆ ದಿಮ್ಗರಿತಾನೆ

ಹೀಗೆ ಹೆಸರಿಗೆ ಮೊದಲು ಉಪಮೆ, ವಿಶೇಷಣಗಳೊಂದಿಗೆ ವರ್ಣನಾತ್ಮಕವಾಗಿ ಹೇಳುವ ನುಡಿಗಳನ್ನು 'ಒಡಪು' ಎಂದು ಕರೆಯಲಾಗಿದೆ. ಒಡಪುಗಳ ವಸ್ತು, ಪ್ರೀತಿ. ಪ್ರೇಮ, ಗೌರವ, ಹಾಸ್ಯ, ವಿಡಂಬನೆ, ತೆಗಳಿಕೆಗೆ, ಹೊಗಳಿಕೆಗೆ, ವಿರಸ, ಮನಸ್ತಾಪ ಮೊದಲಾದ ಭಾವನೆಗಳು. ಹಾಗೆಯೇ ಬೈಗುಳಗಳು ಕಾಣಿಸುತ್ತವೆ. ಒಡಪುಗಳಲ್ಲಿ ಪ್ರಾಸಗಳೇ ಬಹು ಮುಖ್ಯವಾಗುತ್ತವೆ. ಇತ್ತೀಚಿನ ಒಡಪುಗಳಲ್ಲಿ ಆಧುನಿಕ ವಿಷಯ ವಸ್ತುಗಳು ಮತ್ತು ಇಂಗ್ಲಿಷ್ ಪದಗಳೂ ಬಳಕೆಯಾಗುತ್ತವೆ.

ಉದಾ:–ಪರಿ ಮೇಲೆ ಪರಿ ಉಳಗಡ್ಡಿ ಪರಿ

ಮೋಬಲ್ನಲ್ಲಿ ತುಂಬಿಸಿಕೊಂಡರೆ

ಮುಕಳಿ ಮೇಲೆ ಮೂರು ಬರಿ.

ಅತ್ತೆ ಮೇಲಿನ ಕೋಪ ಕೊತ್ತಿ ಮೇಲೆ:–

ಇದೊಂದು ಪ್ರಾಸರೂಪದ ಗಾದೆಯಾಗಿದೆ. ಇಲ್ಲಿ ಪ್ರಾಸವಾಗಿ ಕಾಣುವ ಪದಗಳೆಂದರೆ 'ಅತ್ತೆ' ಮತ್ತು 'ಕೊತ್ತಿ' ಎಂಬ ಎರಡು ಪದಗಳು. ಈ ಪ್ರಾಸರೂಪದ ಗಾದೆಯ ಅರ್ಥವನ್ನು ನೋಡುವುದಾದರೆ ಅತ್ತೆ ಮೇಲಿನ ಸಿಟ್ಟನ್ನು (ಕೋಪವನ್ನು) ಕೊತ್ತಿ ಎಂದರೆ ಬೆಕ್ಕಿನ ಮೇಲೆ

ತೋರಿಸಿದ ಹಾಗೆ. ಒಬ್ಬ ಸೊಸೆ ಅತ್ತೆಗೆ ನೇರವಾಗಿ ಬೈಯಲು ಆಗದೆ ಇದ್ದ ಸಂದರ್ಭದಲ್ಲಿ ಪರೋಕ್ಷವಾಗಿ ಅಥವಾ ಬೇರೆ ಪ್ರಾಣಿ ಅಥವಾ ವ್ಯಕ್ತಿಗೆ ಹೋಲಿಕೆ ಮಾಡಿ ಬೈಯುತ್ತಾಳೆ. ಒಂದು ಹೆಣ್ಣು ಇನ್ನೊಂದು ಹೆಣ್ಣಿಗೆ ಬೈಯುವಾಗ ಬೆಕ್ಕಿಗೆ ಹೋಲಿಸಿ ಬೈಯುವುದು ಒಂದು ಅಸಂಗತ ಸಂಗತಿಯಾಗಿದೆ ಎಂದು ಹೇಳಬಹುದು ಮತ್ತು ಈ ರೀತಿಯ ಪ್ರಾಸಬದ್ಧವಾದ ಗಾದೆಗಳು ಸಮಾಜದಲ್ಲಿ ಪರಂಪರೆಯಾಗಿ ಬೆಳೆದುಕೊಂಡು ಬಂದಿವೆ. ಇದು ಅಂದಿನ ಕಾಲಕ್ಕೆ ಮಾತ್ರ ಸೀಮಿತ ಎಂದು ಹೇಳಬಹುದು. ಏಕೆಂದರೆ ಆಧುನಿಕ ಸಂದರ್ಭದಲ್ಲಿ ಈ ರೀತಿಯ ಪ್ರಾಸಬದ್ಧ ಗಾದೆಗಳು ಬಳಕೆಯಾದರೂ ಅದರ ಅರ್ಥವೇ ಜನರಿಗೆ ಗೊತ್ತಿಲ್ಲದ ಹಾಗೆ ಬಳಕೆಯಾಗುತ್ತ ಇರುತ್ತವೆ. ಈಗಿನ ಅತ್ತೆಯಂದಿರಿಗೆ ಮತ್ತು ಸೊಸೆಯಂದರಿಗೆ ಈ ಗಾದೆ ಅನ್ವಯವಾಗುವುದು ಸ್ವಲ್ಪ ಕಷ್ಟವೇ ಎಂದು ಹೇಳಬಹುದು.

ಅಜ್ಜಿಗೆ ಅರಿವೆ ಚಿಂತೆ, ಮೊಮ್ಮಗಳಿಗೆ ಮಿಂಡನ ಚಿಂತೆ:–

ಈ ಗಾದೆಯಲ್ಲಿ ಅಜ್ಜಿ–ಅರಿವೆ, ಮೊಮ್ಮಗಳು–ಮಿಂಡ ಎಂಬುವುದು ಪ್ರಾಸರೂಪದ ಪದಗಳಾಗಿವೆ. ಇದು ಹೆಚ್ಚಾಗಿ ಹೆಣ್ಣುಮಕ್ಕಳು–ಹೆಣ್ಣುಮಕ್ಕಳಿಗೆ ಬಳಸುವಂತಹ ಪ್ರಾಸರೂಪದ ಗಾದೆಯಾಗಿದೆ ಮತ್ತು ಇನ್ನೊಂದು ಮುಖ್ಯವಾದ ಅಂಶವೆಂದರೆ ಇದು ಚಿಕ್ಕ ಹೆಣ್ಣುಮಕ್ಕಳಿಗೆ ಮಾತ್ರ ಬಳಕೆ ಮಾಡುವ ಗಾದೆಯಾಗಿದೆ. ಏಕೆಂದರೆ ಹಠ ಮಾಡುವುದು ಚಿಕ್ಕಮಕ್ಕಳೆ ಆಗಿರುವುದ್ದರಿಂದ ಈ ಗಾದೆ ಅವರಿಗೆ ಅನ್ವಯವಾಗುತ್ತದೆ. ದೊಡ್ಡವರು ಹಠ ಮಾಡುತ್ತಾರೆ ಇಲ್ಲ ಅಂತಾ ಹೇಳುವುದಿಲ್ಲ ಆದರೆ ಪರಿಸ್ಥಿತಿ ಇವರಿಗೆ ಅರ್ಥವಾಗುತ್ತದೆ ಆದರೆ ಚಿಕ್ಕಮಕ್ಕಳಿಗೆ ಯಾವ ಸ್ಥಿತಿಯಲ್ಲಿ ಇದ್ದಿವಿ, ಯಾವ ಜಾಗದಲ್ಲಿ ಇದ್ದಿವಿ ಎಂಬುವುದು ಅವರಿಗೆ ತಿಳಿಯದ ಕಾರಣ ಅವರು ಯಾವುದನ್ನು ಲೆಕ್ಕಿಸದೇ ಅವರ ಆಸೆ ತಿರಬೇಕು ಎಂಬುದು ಮಾತ್ರ ಅವರಿಗೆ ಮುಖ್ಯವಾಗಿರುತ್ತದೆ. ಹಾಗಾಗಿ ಯಾವಾಗ ಹಠ ಮಾಡಬೇಕೆಂಬ ಅರಿವು ಅವರಿಗೆ ಇಲ್ಲದ ಕಾರಣ ಚಿಕ್ಕಮಕ್ಕಳಿಗೆ ಬೈಯುವಾಗ ಈ ಗಾದೆ ಬಳಕೆಯಾಗುತ್ತದೆ.

ಈ ಗಾದೆಯ ಅರ್ಥವನ್ನು ತಿಳಿಯುವುದಾದರೆ ಅಜ್ಜಿಗೆ ಅರಿವೆ ಅಂದರೆ ಬಟ್ಟೆಯ ಚಿಂತೆ ಆದರೆ ಮೊಮ್ಮಗಳಿಗೆ ತಿನ್ನುವ ತಿನಿಸು ಅಥವಾ ಆಟ ಆಡುವ ವಸ್ತುಗಳ ಚಿಂತೆ ಎಂಬುವುದು ಈ ಗಾದೆಯ ಅರ್ಥ. ಆದರೆ ಬೈಯುವಾಗ ಅದು ಅಜ್ಜಿಗೆ ಮತ್ತು ಮಗುವಿಗೆ ಬೈಯುವುದಿಲ್ಲ ಎಲ್ಲರಿಗೂ ಈ ಗಾದೆ ಬಳಕೆಯಾಗುತ್ತದೆ. ಈ ರೀತಿಯ ಬೈಗುಳದ ಪದವನ್ನು ಗಾದೆಯಲ್ಲಿ ಸೇರಿಸಿ ಬಳಕೆ ಮಾಡುತ್ತಾರೆ.

ಪ್ರ: ಅಜ್ಜಿ ಮನೆಯಲ್ಲಿ ತಿನ್ನೊಕೆ ಏನು ಇಲ್ಲಾದಾಂಗೆ ಆಯ್ತುಲ್ಲಾ ಅಪ್ಪ ದೇವರೆ ಯಾಕ ಇಟು (ಇಷ್ಟು) ಕಷ್ಟ ನಮಗೆ ಎಂದು ಚಿಂತೆ ಮಾಡುವ ಸಂದರ್ಭದಲ್ಲಿ ಮೊಮ್ಮಗಳು ಬಂದು ಅಜ್ಜಿ ನನಗೆ ತಿನ್ನೊಕೆ ಅಂಗಡಿಯಲ್ಲಿ ಏನಾದರೂ ಕೊಡಿಸು ಅಂದಾಗ ಅಜ್ಜಿ ಲೇ ಬೇವಾರ್ಸಿ ಮುಂಡೆ ನಮಗೆ ಮನೆಯಲ್ಲಿ ಏನು ಇಲ್ಲ ಅಲ್ಲಾ ಅಂತ ಚಿಂತೆ ಮಾಡತ

ಇದ್ದರೆ ನಿನಗೆ ನೋಡಿದ್ರೆ ತಿನ್ನೊದು ಚಿಂತೆ ಅದು ಏನೋ ಅನತರಾಲ್ಲಾ ಅಜ್ಜಿಗೆ ಅರಿವೆ ಚಿಂತೆ ಮೊಮ್ಮಗಳಿಗೆ ಮಿಂಡನ ಚಿಂತೆ ಅದಾಂಗೆ ಆಯ್ತು ನಮ್ಮ ಬಾಳ್ವೆ ಎಂದು ಅಜ್ಜಿ ಮೊಮ್ಮಗಳಿಗೆ ಬೈಯುವಾಗ ಈ ಗಾದೆಯನ್ನು ಬಳಕೆ ಮಾಡುವುದನ್ನು ನೋಡಬಹುದು.

ಮೊಲೆ ಬಂದ ಮ್ಯಾಲೆ ನೆಲ ಕಾಣದು:-

ಈ ಗಾದೆಯಲ್ಲಿ ಪ್ರಾಸರೂಪದ ಪದಗಳು ಮೊಲೆ ಮತ್ತು ನೆಲೆ ಎಂಬುವುಗಳಾಗಿವೆ. ಈ ಗಾದೆಯು ಕೇವಲ ಹೆಣ್ಣಿಗೆ ಮಾತ್ರ ಬಳಕೆಯಾಗುತ್ತದೆ. ಅದರಲ್ಲೂ ಹೆಣ್ಣುಮಕ್ಕಳಿ ಹೆಚ್ಚಾಗಿ ಈ ಗಾದೆಯನ್ನು ಬಳಸುತ್ತಾರೆ. ಈ ಗಾದೆಯಲ್ಲಿ ಮೇಲುನೋಟಕ್ಕೆ ಬೈಗುಳ ಪದಗಳು ಇಲ್ಲ ಅನಿಸಿದರೂ ಹೆಚ್ಚಾಗಿ ಹೆಣ್ಣು ಮಕ್ಕಳಿಗೆ ಬೈಯುವಾಗ ಈ ಗಾದೆ ಬಳಕೆಯಾಗುತ್ತದೆ. ಈ ಗಾದೆಯಲ್ಲಿ 'ಮೊಲೆ' ಎಂಬ ಪದವನ್ನು ಸೊಕ್ಕು ಎಂಬರ್ಥದಲ್ಲಿ ಬೈಗುಳ ಪದವಾಗಿ ಪರಿಗಣಿಸಲಾಗುತ್ತದೆ.

ಈ ಗಾದೆಯನ್ನು ಬಳಕೆ ಮಾಡುವಾಗ ಯಾವ ಅರ್ಥದಲ್ಲಿ ಬಳಕೆಯಾಗುತ್ತದೆ ಎಂಬುವುದನ್ನು ನೋಡುವುದಾದರೆ, ಹೆಣ್ಣು ಚಿಕ್ಕವಯಸ್ಸಿನಿಂದ ಪ್ರಾಯದ ವಯಸ್ಸಿಗೆ ಬಂದಾಗ ಅವಳ ದೇಹದ ಅಂಗಾಂಗಗಳು ದೊಡ್ಡದಾಗುತ್ತವೆ ಇದೊಂದು ಪ್ರಕೃತಿಯ ನಿಯಮ ಮತ್ತು ಲಕ್ಷಣವಾಗಿದೆ. ಆದರೆ ಹೇಹದ ಒಂದು ಅಂಗವಾದ ಮೊಲೆ ಇದು ಬೈಗುಳ ಪದವಾಗಿ ಇಲ್ಲಿ ಬಳಕೆಯಾಗುತ್ತದೆ. ಹೆಣ್ಣು ದೊಡ್ಡವಳಾದ ಮೇಲೆ ಅವಳಿಗೆ ಅಹಂಕಾರ ಬರುತ್ತದೆ ಎಂಬ ನೆಲೆಯಲ್ಲಿ ಈ ಗಾದೆ ಬಳಕೆಯಾಗುತ್ತದೆ.

ಪ್ರ: 'ಹೌದು ಬೀಡವ್ವ ನೀನು ಹೆಂಗಸು ಬಹಳ ಸೊಕ್ಕು ಬಂದೈತಿ ನಿನಗೆ ಮುಂದೆನೆ ನಿಂತಿವಿ ನೋಡಿದ್ರೂ ಮಾತಾಡಸಲ್ಲ ನೀನು ಅವಾಗಂತೂ ಸಣ್ಣಾಕಿ ಇದ್ದೆ ಓಡಿ-ಓಡಿ ನಮ್ಮ ಹತ್ರ ಬರತ್ತಿದ್ದೆ ಈಗ ದೊಡ್ಡವಳಾಗಿಯಾ ಹೆಂಗೆ ಮಾತಾಡಸಿತ್ತಿಯಾ ಹೇಳು ನೀನು. ಮೊಲೆ ಬಂದ ಮ್ಯಾಲೆ ನೆಲ ಕಾಣಲ್ಲ ಅಂತಾರ ಅಲ್ಲಾ ಅದು ಸುಳಲ್ಲ ಬೀಡು' ಎಂದು ಬೈಯುವಾಗ ಈ ಗಾದೆ ಬಳಕೆಯಾಗುತ್ತದೆ.

ಮದುವೆ ಸಮಾರಂಭದಲ್ಲಿ ಬಂದು-ಬಳಗದವರನ್ನು ಮಾತಾನಾಡಸದೇ ಅವರನ್ನು ನೋಡಿದರೂ ನೋಡದೆ ಇರುವವರನ್ನು ಕುರಿತು ಬೈಯುವ ಗಾದೆಯಾಗಿದೆ. ಇದು ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗುವುದನ್ನು ಗಮನಿಸಹುದು. ಈ ರೀತಿಯ ಬೈಗುಳಗಳು ಮತ್ತು ಗಾದೆಗಳು ಬಳಕೆಯಾಗುವುದನ್ನು ಮೇಲಿನ ಪ್ರಯೋಗದಲ್ಲಿ ತಿಳಿಸಲಾಗಿದೆ.

೧೨ನೇ ಶತಮಾನದಲ್ಲಿಯೇ ಅಕ್ಕಮಹಾದೇವಿ 'ಮೊಲೆ ಮುಡಿ ಬಂದರೆ ಹೆಣ್ಣೆಂಬರು' ಎಂಬ ವಚನವನ್ನೇ ಹುಟ್ಟಿಹಾಕಿದ್ದಾಳೆ. ಆದರೆ ಇಲ್ಲಿ ಮೊಲೆ ಎಂಬ ಪದ ಬೈಗುಳವಾಗಿ ಬಳಕೆಯಾಗುತ್ತದೆ. ಮೊಲೆ ಬಂದ ಹೆಣ್ಣಿಗೆ ಅಹಂಕಾರ, ಸೊಕ್ಕು, ದರ್ಪವಿದೆ ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಮತ್ತು ಅದು ಹೆಣ್ಣಿನ ದೈಹಿಕ ಲಕ್ಷಣವಾಗಿದೆ. ಏಕೆ ಮೊಲೆ ಬಂದ

ಮ್ಯಾಲೆ ನೆಲ ಕಾಣಲ್ಲ ಎನ್ನುತ್ತಾರೆ. ಇವು ಅಂದಿನ ದಿನಮಾನಗಳಲ್ಲಿ ಹೆಚ್ಚಾಗಿ ಬಳಕೆಯಾಗುತ್ತಿದ್ದವು. ಆದರೆ ಇತ್ತೀಚಿನ ದಿನಮಾನಗಳಲ್ಲಿ ಈ ರೀತಿಯ ಪ್ರಾಸಬದ್ಧವಾದ ಗಾದೆಗಳಲ್ಲಿ ಬೈಗುಳಗಳು ಬಳಕೆಯಾಗುವುದು ಕಡಿಮೆ. ಈ ಗಾದೆಯಲ್ಲಿ ಬೈಗುಳ ಪದವಾಗಿ ಮೊಲೆ ಎಂಬ ಪದ ಬಳಕೆಯಾಗುತ್ತದೆ ಇದಕ್ಕೆ ಪರ್ಯಾಯವಾಗಿ ಪ್ರಾಸ ಬರುವ ಹಾಗೆ ನೆಲ ಎಂಬ ಪದ ಬಳಕೆಯಾಗುತ್ತದೆ. ನೆಲ ಎಂಬ ಪದ ಬೈಗುಳವಲ್ಲ ಆದರೆ ಪ್ರಾಸಕ್ಕೆ ಈ ಪದವನ್ನು ಬಳಕೆ ಮಾಡಲಾಗುತ್ತದೆ. ಈ ಗಾದೆಯಲ್ಲಿ ನೆಲ ಎಂಬ ಪದ ಹೆಣ್ಣಿಗೆ ಅಹಂಕಾರ, ದರ್ಪವಿದೆ ಎಂಬ ನೆಲೆಯಲ್ಲಿ ಪ್ರಚೋದಿಸುತ್ತದೆ. ಹೀಗೆ ಈ ಗಾದೆ ವ್ಯಕ್ತವಾಗುವುದನ್ನು ನಾವು ಗಮನಿಸಹುದು.

ನೀತಿಯಿಲ್ಲದ ಹೆಣ್ಣು, ಜ್ಯೋತಿಯಿಲ್ಲದ ಮನೆ:-

ಹೆಣ್ಣಿಗೆ ನೀತಿಯೇ ಮುಖ್ಯ ಅವಳು ಸ್ವಲ್ಪ ಎಡವಿದರೂ ಅವರ ಮನೆ ಕತ್ತಲು ಎಂಬ ಅರ್ಥದಲ್ಲಿ ಈ ಗಾದೆ ಹುಟ್ಟಿಕೊಂಡಿದೆ. ಈ ಗಾದೆಯು ಪ್ರಾಸಬದ್ಧವಾಗಿದೆ. ಹೆಣ್ಣು ಸ್ವಲ್ಪ ನೀತಿ ತಪ್ಪಿದರೆ ಅವಳು ಸಮಾಜದಲ್ಲಿ ಬೈಗುಳಕ್ಕೆ ಗುರಿಯಾಗುತ್ತಾಳೆ. ಸಮಾಜವು ಹೆಣ್ಣಿನಲ್ಲಿ ಇಂತಹ ವರ್ತನೆಯನ್ನು ಒಪ್ಪುವುದಿಲ್ಲ ಮತ್ತು ಧಿಕ್ಕರಿಸುತ್ತದೆ. ಸಮಾಜದಲ್ಲಿ ಒಂದು ಹೆಣ್ಣಿನ ನಡವಳಿಕೆ ಹೀಗೆ ಇರಬೇಕು, ಅವಳು ಹೀಗಿದ್ದರೆ ಚೆಂದ ಎಂಬ ನಿಯಮವಿದೆ. ಅದನ್ನು ಮಾತ್ರ ಸಮಾಜ ಬಯಸುತ್ತದೆ. ಆದರೆ ಅವಳ ನಡವಳಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೆ ಸಮಾಜ ಅವಳನ್ನು ನೋಡುವ ದೃಷ್ಟಿಕೋನವೇ ಬೇರೆಯಾಗಿರುತ್ತದೆ. ನೀತಿಯಿಲ್ಲದ ಹೆಣ್ಣಿನ ಮನೆ ಯಾವಾಗಲೂ ಕತ್ತಲೆಯಿಂದ ಕೂಡಿರುತ್ತದೆಯೇ ಹೊರತು ಬೆಳಕಿನಿಂದಲ್ಲ ಎಂದು ಈ ಗಾದೆ ಸಾರುತ್ತದೆ. ಜ್ಯೋತಿಯಿಲ್ಲದ ಮನೆ ಹೇಗೆ ಕತ್ತಲೆಯಿಂದ ಕೂಡಿರುತ್ತದೆಯೋ ಹಾಗೆಯೇ ನೀತಿಯಿಲ್ಲದ ಹೆಣ್ಣಿನ ಬದುಕೂ ಕತ್ತಲೆ ಎನ್ನುವ ಅರ್ಥದಲ್ಲಿಯೂ ಈ ಗಾದೆ ಹುಟ್ಟಿಕೊಂಡಿದೆ ಎಂದು ಹೇಳಬಹುದು.

ಗಂಡು ಅಳ್ತಾ ಕೆಟ್ಟ, ಹೆಂಗಸು ನಗ್ತಾ ಕೆಟ್ಟಳು:-

ಇಲ್ಲಿ ನಗ್ತಾ ಮತ್ತು ಅಳ್ತಾ ಎಂಬ ಎರಡು ಪದಗಳು ಪ್ರಾಸಬದ್ಧವಾಗಿವೆ. ಗಂಡು ಹೆಚ್ಚು ಅಳಬಾರದು, ಹೆಣ್ಣು ಹೆಚ್ಚು ನಗಬಾರದು ಅದು ಒಳ್ಳೆಯದಲ್ಲಾ ಎಂದು ಸಮಾಜದ ಅಭಿಪ್ರಾಯವಾಗಿದೆ. ಹೆಚ್ಚು ಅಳುವ ಗಂಡಸನ್ನು ನೀನು ಏನು ಹೆಂಗಸ? ಹೆಂಗಸು ಅತ್ತಾಂಗೆ ಅಳತ್ತಿಯಾಲ್ಲಾ ಎಂದು ಹೆಣ್ಣಿಗೆ ಹೋಲಿಸಿ ಬೈಯುತ್ತಾರೆ. ಹಾಗೆಯೇ ಹೆಣ್ಣು ಸಹ ಹೆಚ್ಚು ನಗಬಾರದು. ಅದು ಮನೆಗೆ ಒಳ್ಳೆಯದಲ್ಲಾ ಎಂದು ಮನೆಯ ಹಿರಿಯರು ಪದೆ-ಪದೆ ಹೇಳುತ್ತಾ ಇರುತ್ತಾರೆ. ಅಳುವ ಗಂಡಸನ್ನು ನಂಬಾರದು, ನಗುವ ಹೆಂಗಸನ್ನು ನಂಬಾರದು ಎಂದು ಹೇಳುತ್ತಾರೆ. ಹೆಚ್ಚು ನಗುವ ಹೆಂಗಸು ಮೋಸ ಮಾಡುತ್ತಾಳೆ ಮತ್ತು ಕೆಟ್ಟವಳು ಅವಳನ್ನು ನಂಬಾರದು ಎಂಬ ಹಿನ್ನೆಲೆಯಲ್ಲಿ ಈ ಗಾದೆ ಹುಟ್ಟಿಕೊಂಡಿದೆ ಎಂದು ಹೇಳಬಹುದು ಆದರೆ ಹೆಣ್ಣು ತನ್ನ ಮನಸ್ಸಿನಲ್ಲಿರುವ ದುಖಃವನ್ನು ಮತ್ತು ತನ್ನ ವೇದನೆಯನ್ನು

ಯಾರ ಹತ್ತಿರ ಹೇಳಿಕೊಳ್ಳಲು ಆಗದೆ ಇದ್ದ ಸಂದರ್ಭದಲ್ಲಿ ಮತ್ತು ಅವಳ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವವರು ಯಾರು ಇಲ್ಲದೆ ಇದ್ದ ಸಂದರ್ಭದಲ್ಲಿ ನಗುವಿನ ಮೂಲಕ ತನ್ನ ದುಖಃವನ್ನು ಕಡಿಮೆ ಮಾಡಿಕೊಂಡು ಸಮಾಧಾನ ಪಟ್ಟುಕೊಳ್ಳುತ್ತಾಳೆ. ಆದರೆ ಸಮಾಜ ನಗುವ ಹೆಂಗಸು ಕೆಟ್ಟವಳು ಎಂದು ದೂಷಿಸುತ್ತದೆ. ಮತ್ತೊಂದು ಸಂದರ್ಭದಲ್ಲಿ ಮನೆಯಲ್ಲಿ ಚಿಕ್ಕ ಮಕ್ಕಳು ಪದೇ-ಪದೇ ನಗುತ್ತ ಇದ್ದರೆ ಅಥವಾ ಸುಮ್ಮ-ಸುಮ್ಮನೆ ನಗುತ್ತಿದ್ದರೆ ಮನೆಯ ಹಿರಿಯರು ಯಾಕ ಸುಮ್ಮ-ಸುಮ್ಮನೆ ನಗುತ್ತಿರಾ ಏನಾಗೈತಿ ನಿಮ್ಮಗೆ ಹಾಂಗೆಲ್ಲ ಸುಮ್ಮ-ಸುಮ್ಮನೆ ನಗಬಾರದು ಮನೆಗೆ ಒಳ್ಳೇದಲ್ಲಾ ಎಂದು ಬೈಯುವುದನ್ನು ಕಾಣಬಹುದು.

ಕೇವಲ ಗಾದೆಗಳಲ್ಲಿ ಅಷ್ಟೆ ಅಲ್ಲದೆ ಒಡಪುಗಳಲ್ಲಿಯೂ ಪ್ರಾಸರೂಪದ ಬೈಗುಳಗಳನ್ನು ಕಾಣಬಹುದು.

ಉದಾ:-ಅಕ್ಕಿನುಚ್ಚು

ಮಲ್ಲಿಗೆ ಹೂವಿನ ಕುಚ್ಚು

ನನ್ನ ಗಂಡ್ಗೆ ಹಿಡಿದೈತಿ

ಸೂಳೇರ ಹುಚ್ಚು

ಈ ಒಡಪಿನಲ್ಲಿ ಬೈಗುಳ ಪದ 'ಸೂಳೆ'. ಇದಕ್ಕೆ ಪ್ರಾಸಬರುವ ಹಾಗೆ ನುಚ್ಚು, ಕುಚ್ಚು, ಹುಚ್ಚು ಎಂಬ ಪದಗಳನ್ನು ಇಟ್ಟುಕೊಂಡು ಪ್ರಾಸಬದ್ಧವಾಗಿ ಈ ಒಡಪುಗಳನ್ನು ಕಟ್ಟಿಕೊಟ್ಟಿದ್ದಾರೆ. ಈ ಒಡಪಿನ ಪದಶಃ ಅರ್ಥವನ್ನು ತಿಳಿಯುವುದಾದರೆ ಅಕ್ಕಿನುಚ್ಚಿನ ಅನ್ನ ಊಟ ಮಾಡಿ, ಮಲ್ಲಿಗೆ ಹೂವಿನ ಕುಚ್ಚನ್ನು ತಗೊಂಡು ನನ್ನ ಗಂಡ ಸೂಳೇಯ ಮನೆಗೆ ಹೋಗತ್ತಾನೆ ಎಂಬುದಾಗಿದೆ. ಹೆಣ್ಣು ತನ್ನ ಗಂಡನ ಹೆಸರನ್ನು ಹೇಳುವಾಗ ಈ ರೀತಿಯಾಗಿ ಸುತ್ತಿ ಬಳಸಿ ಇನ್ನೊಂದು ಹೆಣ್ಣನ್ನು ಬೈಯುವುದರ ಮೂಲಕ ಅವಳ ಗಂಡನ ಹೆಸರನ್ನು ಹೇಳುತ್ತಾಳೆ. ಪರೋಕ್ಷವಾಗಿ ಇನ್ನೊಂದು ಹೆಣ್ಣು ನಡತೆಗೆಟ್ಟವಳು ಅಥವಾ ಅನೈತಿಕತೆಯುಳ್ಳವಳು ಅಂತವಳ ಮನೆಗೆ ನನ್ನ ಗಂಡ ಹೋಗುತ್ತಾನೆ ಎಂದು ಪರೋಕ್ಷವಾಗಿ ಆ ಹೆಣ್ಣು ಬೈಗುಳಕ್ಕೆ ಒಳಗಾಗುತ್ತಾಳೆ ಎನ್ನುವ ರೀತಿಯಲ್ಲಿ ಈ ಒಡಪನ್ನು ಕಟ್ಟಿದ್ದಾರೆ.

ಸೂಳೆಗೆ ಸುಳ್ಳನಾಗಿ

ಹೆಣ್ತಿಗೆ ಕಳ್ಳನಾಗಿ

ತಪ್ಪಿ ತಪ್ಪಿಸಿಗೊಂಡ ಹೋಗ್ತಾರೆ...

ಈ ಒಡಪಿನಲ್ಲಿ ಗಂಡು-ಹೆಣ್ಣಿಗೆ ಮೋಸ ಮಾಡುವುದನ್ನು ಹೇಳಲಾಗಿದೆ. ಈ ಒಡಪಿನ ಅರ್ಥ ಸೂಳೆಗೂ ಸುಳ್ಳನಾಗಿ ಹೆಣ್ತಿಗೂ ಕಳ್ಳನಾಗಿ ತಪ್ಪಿ-ತಪ್ಪಿಸಿಗೊಂಡು ಓಡುತ್ತಾನೆ ಅಂದರೆ ಸೂಳೆ ಹತ್ತಿರನೂ ನಿಜ ಹೇಳದೆ ಅವಳ ಮನೆಗೂ ಹೋಗದೆ ಹೆಣ್ತಿಗೂ ನಿಜ ಹೇಳಿದೆ

ಕಳ್ಳ ಮಾಡುವ ರೀತಿಯಲ್ಲಿ ಕದ್ದುಮುಚ್ಚಿ ವ್ಯವಹಾರ ಅಥವಾ ಕೆಲಸ ಮಾಡತ್ತಾನೆ ಎಂಬುದಾಗಿದೆ. ನನ್ನ ಗಂಡ ಎಂದು ಕೊನೆಗೆ ಹೆಸರನ್ನು ಹೇಳುತ್ತಾಳೆ ಇಲ್ಲಿ ಸೂಳೆ ಎಂಬ ಪದನೇ ಬೈಗುಳ ಪದವಾಗಿ ಪ್ರತಿಕ್ರಿಯಿಸುತ್ತದೆ.

ಹೆಂಚಿನ ಮನೆಬಿಟ್ಟು
ಕಂಚಿನ ಕದಬಿಟ್ಟು
ಉಣ್ಣೋ ಊಟಬಿಟ್ಟು
ಮಲಗೋ ಮಂಚಬಿಟ್ಟು
ಮುತ್ತಿನಂಥ ಮೂರು ಮಕ್ಕಳ ಬಿಟ್ಟು
ಗತಿಗೆಟ್ಟಳ ಮನೆಗೆ ಮಿತಿಗೆಟ್ಟು ಹೋಗ್ತಾರೆ.

ಈ ಒಡಪಿನಲ್ಲಿ ಹೆಣ್ಣು ತನ್ನ ಗಂಡನ ಹೆಸರನ್ನು ಹೇಳುವುದರ ಮೂಲಕ ಇನ್ನೊಂದು ಹೆಣ್ಣನ್ನು ಬೈಯುವುದನ್ನು ಈ ಒಡಪಿನಲ್ಲಿ ಚಿತ್ರಣಗೊಂಡಿರುವುದನ್ನು ನೋಡಬಹುದು. ಈ ಒಡಪಿನಲ್ಲಿ ಬೈಗುಳ ಪದವಾಗಿ ಕಂಡುಬರುವುದು ಗತಿಗೆಟ್ಟವಳು ಎಂಬ ಪದವಾಗಿದೆ. ಹೆಂಚಿನ–ಕಂಚಿನ, ಬಿಟ್ಟು–ಗೆಟ್ಟು ಎಂಬ ಪದಗಳು ಪ್ರಾಸಬದ್ಧವಾಗಿವೆ. ಈ ಎಲ್ಲ ಪದಗಳನ್ನು ಇಟ್ಟುಕೊಂಡು ಈ ಒಡಪು ರಚನೆಯಾಗಿದೆ. ಹೆಣ್ಣು ತನ್ನ ಮನದಾಳದ ಮಾತನ್ನು ಈ ಒಡಪಿನ ಮೂಲಕ ತನ್ನ ಗಂಡನ ಸ್ಥಿತಿ ಹೇಗಿದೆ ಎಂದು ಹೊರಹಾಕುತ್ತಾಳೆ. ಹೆಂಚಿನ ಮನೆಬಿಟ್ಟು, ಕಂಚಿನ ಕದಬಿಟ್ಟು, ಊಟಬಿಟ್ಟು, ಮಲಗೋ ಮಂಚಬಿಟ್ಟು, ಮುತ್ತಿನಂಥ ಮೂರು ಮಕ್ಕಳನ್ನು ಸಹ ಬಿಟ್ಟು ಆ ಗತಿಗೆಟ್ಟವಳ ಮನೆಗೆ ಇವನು ಮತಿಗೆಟ್ಟು ಹೋಗತ್ತಾನೆ. ಅಂದರೆ ಇನ್ನೊಂದು ಹೆಣ್ಣಿನ ಸಹವಾಸಕ್ಕೆ ಒಳಗಾದ ಗಂಡ ತನ್ನ ಎಲ್ಲವನ್ನು ಬಿಟ್ಟು ಕೊನೆಗೆ ಮಕ್ಕಳನ್ನು ಬಿಟ್ಟು ಸೂಳೆಯ ಮನೆಗೆ ಹೋಗುತ್ತಾನೆ ಎಂದು ಉಪಮೆಗಳನ್ನು ಕೊಡುತ್ತ ಈ ಒಡಪನ್ನು ಕಟ್ಟಿದ್ದಾರೆ ಮತ್ತು ಇದು ಈ ಒಡಪಿನ ಆಶಯವಾಗಿದೆ.

ಹೀಗೆ ಒಡಪುಗಳನ್ನು ಪ್ರಾಸಬದ್ಧವಾಗಿ ಕಟ್ಟುವುದರ ಮೂಲಕ ಇವುಗಳಲ್ಲಿ ಬೈಗುಳಗಳನ್ನು ಬಳಕೆ ಮಾಡಿರುವುದನ್ನು ನೋಡಬಹುದು. ಈ ಒಡಪುಗಳಲ್ಲಿ ಹೆಣ್ಣೆ ಬೈಗುಳಕ್ಕೆ ಒಳಪಡುತ್ತಾಳೆ. ಅದರಲ್ಲೂ ಹೆಣ್ಣೆ ಈ ಒಡಪನ್ನು ಹೇಳುವುದರ ಮೂಲಕ ಇನ್ನೊಂದು ಹೆಣ್ಣು ಎಂತವಹಳು ಅವಳ ಬಗ್ಗೆ ಹೇಳುವುದರ ಮೂಲಕ ತನ್ನ ಗಂಡ ಹೇಗೆ ಎಂಬುವುದನ್ನು ಈ ಒಡಪಿನಲ್ಲಿ ಕಟ್ಟಿಕೊಟ್ಟಿದ್ದಾಳೆ ಎಂಬುವುದನ್ನು ಮೇಲಿನ ಒಡಪುಗಳನ್ನು ನೋಡಿದಾಗ ತಿಳಿದುಬರುತ್ತದೆ.

೩.೪.ವಾಕ್ಯರೂಪದ ಬೈಗುಳಗಳು:

ಕೆಲವು ಬೈಗುಳಗಳು ವಾಕ್ಯ ರೂಪದಲ್ಲಿ ಇರುತ್ತವೆ. ಈ ವಾಕ್ಯರೂಪದ ಬೈಗುಳಗಳಲ್ಲಿ ಹೆಣ್ಣನ್ನು ಹೇಗೆ ಕೇಂದ್ರೀಕರಿಸಿಕೊಂಡು ರಚನೆಯಾಗಿವೆ ಎಂಬುವುದನ್ನು ಚರ್ಚಿಸಬಹುದು.

ವಾಕ್ಯ ರೂಪದಲ್ಲಿರುವ ಬೈಗುಳಗಳು ಹೆಚ್ಚಾಗಿ ಕ್ರಿಯೆಯನ್ನು ಸೂಚಿಸುತ್ತವೆ ಇವುಗಳನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

ವಾಕ್ಯರೂಪದ ಬೈಗುಳಗಳು:

ಉದಾ:–

- ಮನೆ ಬಾರಿಸಿ ತೊಳೆದು ಇಟ್ಟುಬಿಡತ್ತಾಳೆ.
- ನಿಮ್ಮ ಅವ್ವನ್ ಜಾತಿನಾಡ ಗೆಂಡಿಯಿಕ್ಕ.
- ಈಟು ಇದಿದ್ದು ಈಟು ಉದ್ದ ಹರಕೋಂತ್ತಾಳೆ.
- ಇವಳು ಹಂಚಿನ್ಯಾಂಗ ಹಳ್ಳು ಊರಿದ್ಯಾಂಗ ಊರಿತ್ತಾಳೆ.
- ಎತ್ತಿಗ್ನಿ ತಿನ್ನೊ ಹೆಂಗಸ/ಸೂಳೆ ಎಷ್ಟು ಧಿಮಾಕ ಮಾಡತ್ತಿಯಾ/ಮಾಡತ್ತಾಳೆ.
- ಕಣ್ಣಾಕ ಮಣ್ಣು ಹಾಕತ್ತಾಳೆ ಈ ಹೆಂಗಸು ಸಾಮಾನ್ಯದವಳು ಅಲ್ಲಾ.
- ಹೊಗುಳು ಮಾಡೋ ಸೂಳೆ ನನಗೆ ಬಂದು ಏನು ಹೇಳತಿಯಾ ಹೋಗಲೇ ಬೋಸುಡಿಸೂಳೆ.
- ಸುಳ್ಳು ಹೇಳಬೇಡ ಲೇ ಕಳ್ಳಬಡ್ಡಿನಾಡ ನೀಜ ಹೇಳು ಇಲ್ಲ ಅಂದರೆ ದನಕ್ಕೆ ಒದ್ದಾಂಗೆ ಒದಿತ್ತಿನಿ ನೋಡು.
- ಮನೆ ಮುರಿದು ಹತ್ತಿಬಿತ್ತಿ ಇಟ್ಟಬಿಡತ್ತಾಳೆ.
- ಮನೆ ಹಾಳು ಮಾಡಿಬಿಡತ್ತಾಳೆ.
- ಸೇಂಟಾ ಹರಿದು ಗಂಟು ಹಾಕತ್ತಾಳೆ.
- ತುಲ್ಲು ಸಣ್ಣಿಗೆ ಕಡಿತೈತಿ ಅಲ್ಲಾ ನಿನಗೆ.
- ಕೊಯ್ದು ಕಾರ ಉಪ್ಪು ತುಂಬಿ ಬಿಡತ್ತಿನಿ/ಹಾಕತ್ತಿನಿ ನೋಡು.
- ತಿರಕುನ್ನ ತಿನ್ನೋ ಸೂಳೆ ಎಷ್ಟು ಬಡಿವಾರ ಮಾಡತ್ತಾಳೆ.
- ಖಬರಗೇಡಿಸೂಳೆ ಮೈ ಮೇಲೆ ಎಚ್ಚರ ಇಲ್ಲ ಏನು ನಿನಗೆ ಖಬರಗೆಟ್ಟು ಹೋಗಿಬಿಟ್ಟಿಯಾ ಬೀಡು ಹೆಂಗಸು.
- ಮನೆನ ಗೂಡಿಸಿ ಗುಡಾಂತರ ಮಾಡಿ ಬಿಡತ್ತಾಳೆ.
- ಈ ದರಿದ್ರಸೂಳೆಗೆ ಏನು ಬಂದೈತಿ ಅಂತಾ ಹೋತುಕೊಂಡು ಹೋಗೊದು ಹಿಂಗೆ ವೈಕುತ್ತಾಳೆ.

■ **ಮನೆ ಬಾರಿಸಿ ತೊಳೆದು ಇಟ್ಟು ಬಿಡತ್ತಾಳೆ:-**

ಈ ವಾಕ್ಯರೂಪದ ಬೈಗುಳವನ್ನು ನೋಡಿದಾಗ ಇದು ಹೆಣ್ಣಿಗೆ ಸಂಬಂಧಿಸಿದಾಗಿದೆ ಎಂದು ಹೇಳಬಹುದು. ಈ ವಾಕ್ಯದ ಅರ್ಥವನ್ನು ನೋಡುವುದಾದರೆ ಹೆಣ್ಣು ಅಥವಾ ಹೆಂಗಸು ಮನೆಯನ್ನು ಹಾಳು ಮಾಡಿಬಿಡತ್ತಾಳೆ. ಇವಳನ್ನು ನಂಬಿ ಬಿಟ್ಟರೆ ಮನೆಯನ್ನು ಸಾರಿಸಿ ತೋಲುದು ಇಟ್ಟು ಬಿಡತ್ತಾಳೆ. ಮೋಸ ಮಾಡತ್ತಾಳೆ ಇವಳು ಎಂಬ ನೆಲೆಯಲ್ಲಿ ಈ ವಾಕ್ಯ ಅರ್ಥವನ್ನು ನೀಡುತ್ತದೆ. ಈ ವಾಕ್ಯರೂಪದ ಬೈಗುಳವನ್ನು ಎಲ್ಲರೂ-ಎಲ್ಲರಿಗೂ ಬಳಸುತ್ತಾರೆ. ಅದರಲ್ಲೂ ಹೆಣ್ಣುಮಕ್ಕಳು-ಹೆಣ್ಣುಮಕ್ಕಳಿಗೆ ಹೆಚ್ಚಾಗಿ ಬಳಕೆ ಮಾಡುತ್ತಾರೆ.

ಅತ್ತೆ-ಸೊಸೆಗೆ

ಪ್ರ: ಇವಳೂ ಇದಳಲ್ಲಾ ನಮ್ಮ ಮನೆನ ಸಾರಿಸಿ ತೊಳೆದು ಬಿಡತ್ತಾಳೆ. ಎಲ್ಲ ಸಾಮಾನ್ನ ತವರು ಮನೆಗೆ ಹೊರುಸುತ್ತಾಳೆ. ನಾವು ಇಲ್ಲ ಅಂದರೆ ನನ್ನ ಮಗ ತಂದು ಹಾಕಿದ್ದನೆಲ್ಲಾ ಹಾಳು ಮಾಡಿ ಬಿಡತ್ತಾಳೆ. ಈ ಹೆಂಗಸು ಸಾಮಾನ್ಯದವಳು ಅಲ್ಲಾ ಎಂದು ಅತ್ತೆ-ಸೊಸೆಗೆ ಬೈಯುವಾಗ ಈ ವಾಕ್ಯವನ್ನು ಪ್ರಯೋಗ ಮಾಡುವುದನ್ನು ನೋಡಬಹುದು ಮತ್ತು ಒಂದು ರೀತಿಯಲ್ಲಿ ಇದು ಅಪವಾದ ಮಾಡುವ ಬೈಗುಳ ಎಂದು ಸಹ ಹೇಳಬಹುದು.

ಅಂದರೆ ಸೊಸೆ ತನ್ನ ತವರಿಗೆ ಏನಾದರೂ ವಸ್ತುವನ್ನು ಕಳಿಸುತ್ತಾಳೆ ಅವಳು ಮನೆಯನ್ನು ನಾಶ (ಹಾಳು) ಮಾಡುತ್ತಾಳೆ ಯಾಕೆ ಅವರಿಗೆ ಕೋಡಬೇಕು ನನ್ನ ಮಗ ಕಷ್ಟಪಟ್ಟು ಸಂಪಾದಿಸಿದ್ದನ್ನು ಅವರು ಯಾಕೆ ತಿನ್ನಬೇಕು ಅದು ನಮಗೆ ಮಾತ್ರ ಸೀಮಿತ ಎಂಬ ನೆಲೆಯಲ್ಲಿ ಈ ವಾಕ್ಯರೂಪದ ಬೈಗುಳ ಬಳಕೆಯಾಗುತ್ತಿದೆ.

ನಿಮ್ಮ ಅವ್ವನ್ ಜಾತಿನಾಡ ಗೆಂಡಿಯಿಕ್ಕ:-

ಈ ವಾಕ್ಯವನ್ನು ನೋಡಿದರೆ ತುಂಬಾ ಅವಾಚ್ಯ ರೂಪದ ಬೈಗುಳವಾಗಿ ಕಂಡುಬರುತ್ತದೆ. ಈ ವಾಕ್ಯ ರೂಪದ ಬೈಗುಳವನ್ನು ಹೆಚ್ಚಾಗಿ ಗಂಡಸರು ಬಳಕೆ ಮಾಡುತ್ತಾರೆ. ಈ ಬೈಗುಳವನ್ನು ಗಂಡಸು ಇನ್ನೊಬ್ಬ ಗಂಡಸಿನ ಪೌರುಷವನ್ನು ಹೆಚ್ಚಿಸಲು ಈ ರೀತಿಯ ಅವಾಚ್ಯ ರೂಪದ ಬೈಗುಳವನ್ನು ಬಳಸುತ್ತಾರೆ. ಈ ಬೈಗುಳವನ್ನು ಹೆಣ್ಣಿಗೂ ಸಹ ಗಂಡು ಬೈಯುವಾಗ ಬಳಕೆ ಮಾಡುವುದನ್ನು ನೋಡಬಹುದು. ಈ ವಾಕ್ಯದ ವಿವರಣೆಯನ್ನು ನೋಡುವುದಾದರೆ ಹೆಣ್ಣಿನ ಮೇಲೆ ಆಕ್ರಮಣ ಮಾಡುತ್ತೇನೆ ಎಂಬ ಕ್ರಿಯೆಯನ್ನು ಸೂಚಿಸುತ್ತದೆ. ಈ ರೀತಿಯ ಬೈಗುಳ ಬಳಕೆಯಾಗುವ ಸಂದರ್ಭದಲ್ಲಿ ಇನ್ನೊಬ್ಬ ಗಂಡಸಿನ ಆಕ್ರೋಶ ಹೆಚ್ಚಾಗುತ್ತದೆ. ಕೆಲವೊಮ್ಮೆ ಬೇಕು ಅಂತಾನೆ ಈ ವಾಕ್ಯರೂಪ ಬೈಗುಳ ಬಳಕೆ ಮಾಡುತ್ತಾರೆ. ಈ ಬೈಗುಳವನ್ನು ಗಂಡಸು-ಗಂಡಸಿಗೆ ಬೈದರೂ ಇಲ್ಲಿ ಹೆಣ್ಣು ಬಲಿಪಶು ಆಗುವುದನ್ನು ನೋಡಬಹುದು. ಅಂದರೆ ಹೆಣ್ಣು ಬೈಗುಳಕ್ಕೆ ಒಳಗಾಗುತ್ತಾಳೆ. ಅದರಲ್ಲೂ ಅಮ್ಮನ್ ಅಂತಾ ಬೈದರೆ ಸಾಕು ಗಂಡಸಿಗೆ ತನ್ನ ಸಿಟ್ಟು ನೆತ್ತಿಗೆ ಏರುತ್ತದೆ. ಕೆಲವೊಮ್ಮೆ ಅವನ ಸಿಟ್ಟು

ಹೆಚ್ಚಿಸಲು ಈ ರೀತಿಯ ಅವಾಚ್ಯ ಬೈಗುಳಗಳನ್ನು ಬಳಕೆ ಮಾಡುತ್ತಾರೆ. ಹಾಗೂ ಈ ವಾಕ್ಯರೂಪದ ಬೈಗುಳವನ್ನು ಗಮನಿಸುವುದಾದರೆ ಜಾತಿಯನ್ನು ಸಹ ಎತ್ತಿ ಅದು ಹೆಣ್ಣಿನ ಮೂಲಕ ಬೈಯುವುದನ್ನು ಕಾಣಬಹುದು. ನಿಮ್ಮ ಅವ್ವ ಯಾವ ಜಾತಿಯವಳು ಅವಳ ಮೇಲೆ ಆಕ್ರಮಣ ಮಾಡುತ್ತೇನೆ ಎಂಬ ಅರ್ಥವನ್ನು ಸಹ ಈ ವಾಕ್ಯರೂಪದ ಬೈಗುಳ ನೀಡುತ್ತದೆ. ಇನ್ನೊಂದು ಸಂದರ್ಭವನ್ನು ಗಮನಿಸುವುದಾದರೆ ಹೆಂಡತಿಗೆ-ಗಂಡ ಸಹ ಈ ರೀತಿಯ ಬೈಗುಳವನ್ನು ಬಳಕೆ ಮಾಡುತ್ತಾನೆ. ಅಂದರೆ ಗಂಡನ ಸಿಟ್ಟು ಅತಿರೇಕಕ್ಕೆ ಹೋದಾಗ ಈ ಬೈಗುಳ ಬಳಕೆಯಾಗುತ್ತದೆ. ಗಂಡು-ಗಂಡಿಗೆ ಬೈದರೂ ಗಂಡು-ಹೆಣ್ಣಿಗೆ ಬೈದರೂ ಇಲ್ಲಿ ಬೈಗುಳಕ್ಕೆ ಬಲಿಯಾಗುವುದು ಹೆಣ್ಣೇ ಎಂಬುದು ತಿಳಿದುಬರುತ್ತದೆ.

ಈಟು ಇದಿದ್ದು ಈಟು ಉದ್ದ ಹರಕುತ್ತಾಳೆ.

ಹೆಣ್ಣು ಚಿಕ್ಕದನ್ನು ದೊಡ್ಡದು ಮಾಡುತ್ತಾಳೆ ಎಂಬ ನೆಲೆಯಲ್ಲಿ ಈ ಬೈಗುಳ ಬಳಕೆಯಾಗುತ್ತದೆ. ಸಣ್ಣ ವಿಷಯಕ್ಕೆ ಜೋರು-ಜೋರಾಗಿ ಬಾಯಿ ಮಾಡತ್ತಾಳೆ ಎಂಬ ಸಂದರ್ಭದಲ್ಲೂ ಈ ವಾಕ್ಯ ಬಳಕೆಯಾಗುತ್ತದೆ.

ಪ್ರ: ಈಟು ಇದಿದ್ದು ಈಟು ಉದ್ದ ಹರಕುತ್ತಾಳೆ ಅಪ್ಪಾ ಇವಳು ಸಾಮಾನ್ಯದ ಹೆಂಗಸು ಅಲ್ಲಾ. ನಾನು ಏನವ್ವ ನೀನು ಗಂಡನ ಜೋತೆಗೆ ಯಾಕ ಮಾತಾಡಲ್ಲಾಂತೆ ಏನು ಆಯ್ತು ಎಂದು ಕೇಳಿದಕ್ಕೆ ಸುಮ್ಮನೆ ಈಟು ಉದ್ದ ಹರಕುತ್ತಾಳೆ ನಾನು ಯಾಕ ಸುಮ್ಮನೆ ಕೇಳಿದನೋ ಅನಿಸುತ್ತದೆ. ಇವಳ ತಂಟ್ಟಿಗೆ ಹೋಗಬಾರದು ಏನಾದರೂ ಮಾಡಕೊಂಡು ಹಾಳಾಗಿ ಹೋಗ್ಲಿ ಅಂತಾ ಸುಮ್ಮನೆ ಇರಬೇಕಿತ್ತು. ನಾನು ಮನೆ ಯಾಜಮಾನಿ ಹೆಚ್ಚಿ ಕಮ್ಮಿ ಏನಾದರೂ ಆದರೆ ಎಲ್ಲಾರೂ ನನ್ನ ಕೇಳತ್ತಾರೆ ಅಂತಾ ವಿಚಾರಸೋಕೆ ಹೋದರೆ ನನ್ನ ಮೇಲೆ ಬರತ್ತಾಳೆ ಅಲ್ಲಾ ಸುಮ್ಮನೆ ಹೇಳೋಕೆ ಹೋಗಬಾರದು.

ಈ ವಾಕ್ಯರೂಪದ ಬೈಗುಳ ಎರಡು ಅರ್ಥದಲ್ಲಿ ಬಳಕೆಯಾಗುತ್ತದೆ. ಆದರೆ ಸಂದರ್ಭಕ್ಕೆ ತಕ್ಕಂತೆ ಇದು ಬಳಕೆಯಾಗುವುದನ್ನು ನೋಡಬಹುದು. ಈಟು ಇದಿದ್ದು ಈಟು ಉದ್ದ ಹರಕುತ್ತಾಳೆ ಅಂದರೆ ಜೋರಾಗಿ ಬಾಯಿ ಮಾಡತ್ತಾಳೆ ಎಂದು ಒಂದು ಅರ್ಥವಾದರೆ ಇನ್ನೊಂದು ಅರ್ಥ ಹೆಣ್ಣಿನ ಗುಪ್ತಾಂಗವಾದ ಯೋನಿಯನ್ನು ಒಳಗೊಂಡಿದೆ. ಈಟು ಇದಿದ್ದು ಈಟು ಉದ್ದ ಹರಕುತ್ತಾಳೆ ಎಂದು ಗುಪ್ತಾಂಗದ ಬಗ್ಗೆ ಬೈಯುತ್ತಾರೆ. ಹೆಂಗಸರೇ ಹೆಚ್ಚಾಗಿ ಈ ಬೈಗುಳವನ್ನು ಬಳಕೆ ಮಾಡುತ್ತಾರೆ. ಏನೂ ಹೆಂಗಸು ಅವ್ವ ಇವಳು ಸುಮ್ಮನೆ ಸುಮ್ಮನೆ ಗಂಟಲು ಹರಕೊತ್ತಾಳೆ ಎಂದು ಬೈಯುವುದನ್ನು ನಾವು ಕಾಣಬಹುದು. ಅಂದರೆ ಗಂಟಲು ಹರಕೊತ್ತಾಳೆ ಅಂದರೆ ಜೋರು ಜೋರಾಗಿ ಬೇರೆಯವರಿಗೆ ಕೇಳುವ ರೀತಿಯಲ್ಲಿ ಬಾಯಿ ಮಾಡುವುದು ಎಂದರ್ಥ.

ಸಮಾಜದ ದೃಷ್ಟಿಯಲ್ಲಿ ಈಗಾಗಲೇ ಹೆಣ್ಣನ್ನು ಜೋರು ಮಾಡುವವಳು, ಬಜಾರಿ ಎಂದು ಬೈಗುಳದ ಮೂಲಕ ಗುರುತಿಸಲಾಗಿದೆ. ಅಂದರೆ ಸಮಾಜ ಹೆಣ್ಣು ಜೋರಾಗಿ

ಮಾತಾಡಬಾರದು, ಸಣ್ಣ ವಿಷಯವನ್ನು ದೊಡ್ಡದಾಗಿ ಮಾಡಬಾರದು, ಇಂತಹ ಗುಣ ಹೆಣ್ಣಿನಲ್ಲಿ ಇರಬಾರದು ಎಂದು ಬಯಸುತ್ತದೆ. ಆದರೆ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡರೆ ಅವಳು ಬೈಗುಳಕ್ಕೆ ಗುರಿಯಾಗತ್ತಾಳೆ. ಅದರಲ್ಲೂ ಅವಾಚ್ಯ ರೂಪದ ಬೈಗುಳಕ್ಕೆ ಗುರಿಯಾಗುತ್ತಾಳೆ. ಸಣ್ಣ ವಿಷಯವಾಗಲಿ, ದೊಡ್ಡ ವಿಷಯವಾಗಲಿ ಅದನ್ನು ಹೆಣ್ಣು ಆದವಳು ಸುಧಾರಿಸಿಕೊಂಡು ಹೋಗಬೇಕೆ ಹೊರತು ಅದನ್ನೆ ದೊಡ್ಡದು ಮಾಡಬಾರದು. ಇಂತ ಗುಣ ಹೆಣ್ಣಿನಲ್ಲಿ ಇರಬೇಕು ಎಂದು ಸಮಾಜ ಬಯಸುತ್ತದೆ ಹೊರತು ಅದಕ್ಕೆ ವಿರುದ್ಧವಾಗಿ ಇದ್ದರೆ ಅವಳನ್ನು ಸಮಾಜ ನಿಕೃಷ್ಟವಾಗಿ ಕಾಣುತ್ತದೆ ಮತ್ತು ಬೈಗುಳದ ಮೂಲಕ ನಿಂದಿಸುತ್ತದೆ.

ಇವಳು ಹಂಚಿನ್ಯಾಂಗ ಹಳ್ಳು ಉರಿದ್ಯಾಂಗ ಉರಿತ್ತಾಳೆ.

ಈ ವಾಕ್ಯರೂಪದ ಬೈಗುಳವನ್ನು ಹೆಚ್ಚು ಧಿಮಾಕಿನಿಂದ, ಅಹಂಕಾರದಿಂದ ಇರುವ ಹೆಣ್ಣಿಗೆ ಬೈಯುವಾಗ ಬಳಕೆ ಮಾಡುತ್ತಾರೆ ಮತ್ತು ಇದನ್ನು ಹೆಣ್ಣು-ಹೆಣ್ಣಿಗೆ ಬೈಯುವಾಗ ಬಳಕೆ ಮಾಡುತ್ತಾಳೆ. ಸಮಾಜದಲ್ಲಿ ಹೆಣ್ಣಿಗೆ ಬೈಯುವಾಗ ಹೆಚ್ಚು ಉಪಮೆ, ರೂಪಕಗಳನ್ನು ಇಟ್ಟುಕೊಂಡು ಬೈಯುವುದು ಒಂದು ಪ್ರಮುಖವಾದ ಅಂಶವಾಗಿ ಕಂಡುಬರುತ್ತದೆ. ಹೆಣ್ಣು ಅಹಂಕಾರದಿಂದ ಮೆರೆದರೆ ಅವಳಿಗೆ ಸಮಾಜ ಕಾದ ಹಂಚಿನಲ್ಲಿ ಹಳ್ಳು ಹೇಗೆ ಉರಿಯುತ್ತದೆಯೋ ಹಾಗೆ ಇವಳು ಅಹಂಕಾರದಿಂದ ಉರಿತ್ತಾಳೆ ಎಂದು ಉಪಮೆ ಮೂಲಕ ಬೈಯುವುದನ್ನು ಕಾಣಬಹುದು. ಏನು ಅಹಂಕಾರದಿಂದು ಮೆರೆತ್ತಾಳೆ ಇವಳು ಎಂದು ಬೈದರೆ ಸಾಕು ಅದನ್ನು ಸಮಾಜ ಹೇಗೆ ಉಪಮೆ, ರೂಪಕಗಳನ್ನು ಕೊಟ್ಟು ಬೈಗುಳಗಳನ್ನು ಸೃಷ್ಟಿಸುತ್ತದೆ ಎಂಬುದು ಇದರಿಂದ ಗೋಚರವಾಗುತ್ತದೆ. ಈ ಮೂಲಕ ಹೆಣ್ಣಿಗೆ ಅಹಂಕಾರ ಒಳ್ಳೆಯದಲ್ಲಾ ಎಂದು ಸಮಾಜ ಹೇಳಲು ಬಯಸುತ್ತದೆ.

ಕಷ್ಟದಲ್ಲಿ ಇದ್ದ ಹೆಣ್ಣಿಗೆ ಶ್ರೀಮಂತಿಕೆ ಬಂದ ಕೂಡಲೇ ಮೊದಲಿನ ಪರಿಸ್ಥಿತಿಯನ್ನು ಮರೆತು ತನ್ನ ನಡವಳಿಕೆಯಲ್ಲಿ ಬದಲಾವಣೆ ಆಗುವುದು ಸಹಜ. ಮಧ್ಯರಾತ್ರಿಯಲ್ಲಿ ಐಶ್ವರ್ಯ ಸಿಕ್ಕ ಹಾಗೆ ಇವಳಿಗೆ ಧಿಡರನೆ ಹಣಬಂದ ಕೂಡಲೇ ತನ್ನವರೆಲ್ಲರನ್ನು ಮರೆತು ಧಿಮಾಕಿದಿಂದ ಮೆರೆಯುತ್ತಾಳೆ ಎಂದು ಸಮಾಜ ಇವಳು ಹಂಚಿನ್ಯಾಂಗ ಹಳ್ಳು ಉರಿದ್ಯಾಂಗ ಉರಿತ್ತಾಳೆ ಎಷ್ಟು ದಿನ ಇರುತ್ತೆ ಈ ಆಡಂಬರ ಒಳ್ಳೆಯದಲ್ಲ ಇಷ್ಟು ಧಿಮಾಕು ಹೆಣ್ಣಿಗೆ ಇರಬಾರದು ಎಂದು ಬೈಯುವುದನ್ನು ಕಾಣಬಹುದು.

ಸಮಾಜ ಏಕೆ? ನಕಾರತ್ಮಕವಾಗಿ ಯೋಚನೆ ಮಾಡಬೇಕು ಹೆಣ್ಣಾಗಲಿ, ಗಂಡಾಗಲಿ ಕಷ್ಟದಲ್ಲಿ ಇದ್ದವರಿಗೆ ದುಡ್ಡಿನ ಅವಕಾಶ ಸಿಕ್ಕಾಗ ಅವರ ನಡವಳಿಕೆ ಬದಲಾಗುತ್ತದೆ ಇದು ಸಹಜ. ಅದನ್ನು ಏಕೆ ಬೈಗುಳದ ಮೂಲಕ ಹೆಣ್ಣನ್ನು ನಿಂಧಿಸಬೇಕು. ಸಕಾರತ್ಮಕವಾಗಿ ಯೋಚನೆ ಮಾಡಿದರೆ ಸಾಕು ಹೌದಪ್ಪ ಕಷ್ಟದಲ್ಲಿ ಇದ್ದಳು ಪಾಪ ಈಗಲಾದರೂ ಸುಖವಾಗಿ, ಸಂತೋಷವಾಗಿ ಇದ್ದರೆ ಸಾಕು ಎಂದು ಏಕೆ ಸಮಾಜ ಬಯಸುವುದಿಲ್ಲ. ಹೆಣ್ಣಿನ ವಿಚಾರದಲ್ಲಿ

ಏಕೆ ಈ ರೀತಿ ಕೀಳು ಭಾವನೆ. ಅವಳಿಗೂ ಒಂದು ಅವಕಾಶ ಸಿಕ್ಕಾಗ ಅವಳ ಉಡುಗೆ-ತೊಡುಗೆಯಲ್ಲಿ ಬದಲಾಣೆಯಾಗುತ್ತದೆ ಅಷ್ಟೇ. ಅದನ್ನು ಸಮಾಜ ಧಿಮಾಕು ಮಾಡತ್ತಾಳೆ, ಅಹಂಕಾರದಿಂದ ಮೆರೆಯುತ್ತಾಳೆ ಎಂದು ದೂಷಿಸುತ್ತದೆ. ಈ ಹಿನ್ನೆಲೆಯಲ್ಲಿ ಈ ಬೈಗುಳ ಇವಳು ಹಂಚಿನ್ಯಾಂಗ ಹಳ್ಳು ಉರಿದಾಂಗ ಉರಿತ್ತಾಳೆ ಎಂದು ಬಳಕೆಯಾಗುತ್ತದೆ.

ಎತ್ನಿಗ್ನಿ ತಿನ್ನೋ ಹೆಂಗಸು/ಸೂಳೆ ಎಷ್ಟು ಧಿಮಾಕ ಮಾಡತ್ತಾಳೆ.

ಇದೊಂದು ಮೇಲ್ವರ್ಗದ ಹೆಣ್ಣು/ಗಂಡು ಕೇಳವರ್ಗದ ಹೆಣ್ಣಿಗೆ ಬೈಯುವಾಗ ಬಳಕೆ ಮಾಡುವ ಬೈಗುಳವಾಗಿದೆ. ಮೇಲ್ವರ್ಗದ ಹೆಣ್ಣಿಗೆ ಯಾವುದೇ ಆರ್ಥಿಕ ಸಮಸ್ಯೆ ಇಲ್ಲದ ಕಾರಣ ಅವಳು ಗೃಹಿಣಿಯಾಗಿ ಮನೆ ಕೆಲಸ ಮಾಡಿಕೊಂಡು ಮನೆಯಲ್ಲಿ ಇರುತ್ತಾಳೆ. ಈ ಕೆಳವರ್ಗದ ಹೆಣ್ಣುಮಕ್ಕಳು ಆರ್ಥಿಕ ಪರಿಸ್ಥಿತಿ ಸರಿಯಿಲ್ಲದ ಕಾರಣ ತಮ್ಮ ಸಂಸಾರ ನಿಭಾಯಿಸುವ ಸಲುವಾಗಿ ಅವಳು ಕಷ್ಟಪಟ್ಟು ದುಡಿಯಲು ಹೋಗಿ ಬಂದ ಹಣದಿಂದ ಸಂಸಾರವನ್ನು ನಿಭಾಯಿಸಿಕೊಂಡು ಇರುತ್ತಾಳೆ. ಇಂತಹ ಹೆಣ್ಣು ಹಬ್ಬ ಹರಿದಿನಗಳಲ್ಲಿ ಇರುವ ಬಟ್ಟೆಯನ್ನು ಹಾಕಿಕೊಂಡು ಚೆನ್ನಾಗಿ ಅಲಂಕಾರ ಮಾಡಿಕೊಂಡು ಓಡಾಡುವ ಸಂದರ್ಭದಲ್ಲಿ ಮೇಲ್ವರ್ಗದ ಹೆಣ್ಣು ಈ ಎತ್ನಿಗ್ನಿ ತಿನ್ನೋ ಸೂಳೆ ಎಷ್ಟು ಬಡಿವಾರ ಮಾಡತ್ತಾಳೆ ನೋಡು ಹೊಟ್ಟೆಗೆ ಸರಿಗೆ ಒಂದು ಹೊತ್ತು ಕೂಳ್ ಇಲ್ಲಾ ಎಷ್ಟು ಧಿಮಾಕ ಮಾಡತ್ತಾಳೆ ನೋಡು ಎಂದು ಬೈಯುವುದನ್ನು ನೋಡಬಹುದು.

ಇನ್ನೊಂದು ಸಂದರ್ಭದಲ್ಲಿ ಇದೇ ಬೈಗುಳವನ್ನು ಮೇಲ್ವರ್ಗದವರು-ಮೇಲ್ವರ್ಗದ ಹೆಣ್ಣುಮಕ್ಕಳಿಗೆ ಕೆಳವರ್ಗದವರು-ಕೆಳವರ್ಗದ ಹೆಣ್ಣುಮಕ್ಕಳಿಗೆ ಬೈಯುವಾಗಲೂ ಈ ಬೈಗುಳವನ್ನು ಬಳಕೆ ಮಾಡುವುದನ್ನು ಸಹ ನೋಡಬಹುದು.

ಕೆಲವು ಸಲ ಮಕ್ಕಳಿಗೂ ಈ ಬೈಗುಳವನ್ನು ಬಳಕೆ ಮಾಡುತ್ತಾರೆ. ತಾಯಿ-ಮಗಳಿಗೆ ಹೇಳಿದ ಮಾತು ಕೇಳದೆ ಇಂದಾಗ ಲೇ ಎತ್ನಿಗ್ನಿ ತಿನ್ನೊ ಸೂಳೆ ನಾನು ಹೇಳಿದ್ದು ಮಾತು ಒಂದನ್ನು ಸರಿಯಾಗಿ ಕೇಳಲ್ಲ ಅಲ್ಲ ನೀನು ನಿನಗೆ ಈಗ ಗೊತ್ತಾಗಲ್ಲ ಗಂಡನ ಮನೆಗೆ ಹೋಗುತ್ತಿಯಲ್ಲಾ ಆಗ ನಮ್ಮವ್ವ ಹೇಳತ್ತ ಇದ್ದಳು ನಾನು ಕೇಳಲಿಲ್ಲ ಅನ್ನೋಕೊತಿಯಾ ಅವಾಗ ನನ್ನ ಮಾತು ನಿನಗೆ ಅರ್ಥ ಆಗುತ್ತೆ ಅಲ್ಲಿವರೆಗೂ ನಿನಗೆ ಗೊತ್ತಾಗಲ್ಲಾ ಎಂದು ಬೈಯುವುದನ್ನು ನೋಡಬಹುದು. ತಾಯಿ ಮಗಳಿಗೆ ನಾನು ಏನು ಬೈತಿನಿ ಎಂಬ ಅರಿವು ಸಹ ಅವಳಿಗೆ ಇಲ್ಲ ಅಂದರೆ ಸೂಳೆ ಎಂಬ ಪದದ ಅರ್ಥ ಗೊತ್ತಿಲ್ಲದೆ ಈ ರೀತಿಯಾಗಿ ಮಗಳಿಗೆ ಬೈಯುವುದನ್ನು ನೋಡಬಹುದು. ಕೆಲವು ಸಂದರ್ಭದಲ್ಲಿ ಅದರ ಅರ್ಥ ಗೊತ್ತಿದ್ದರೂ ಮಗಳಿಗೆ ಬೈಯುತ್ತಾರೆ ಹಾಗೆ ಸಮಾಜ ಬೈಗುಳಗಳನ್ನು ಸೃಷ್ಟಿಸಿದೆ.

ಕಣ್ಣಾಕ ಮಣ್ಣು ಹಾಕತ್ತಾಳೆ ಈ ಹೆಂಗಸು ಸಾಮಾನ್ಯದವಳು ಅಲ್ಲಾ:-

ಈ ವಾಕ್ಯರೂಪದ ಬೈಗುಳವು ಮೋಸ ಮಾಡುವ ಹೆಣ್ಣಿಗೆ ಸಂಬಂಧಿಸಿದ ಬೈಗುಳವಾಗಿದೆ. ಈ ಬೈಗುಳವನ್ನು ಹೆಣ್ಣು-ಹೆಣ್ಣಿಗೆ, ಗಂಡು-ಹೆಣ್ಣಿಗೆ, ಹೆಣ್ಣು-ಮಕ್ಕಳಿಗೆ ಬೈಯುವಾಗಲೂ

ಬಳಕೆ ಮಾಡುತ್ತಾರೆ. ಇದನ್ನು ಸಿಟ್ಟಿನಲ್ಲಿ ಬೈಯುವಾಗಲೂ ಬಳಕೆ ಮಾಡುತ್ತಾರೆ ಮತ್ತು ತಮಾಷೆಯ ಸಂದರ್ಭದಲ್ಲೂ ಸಹ ಈ ಬೈಗುಳದ ವಾಕ್ಯವನ್ನು ಬಳಕೆ ಮಾಡುವುದನ್ನು ನೋಡಬಹುದು.

ಹೆಣ್ಣು-ಹೆಣ್ಣಿಗೆ:-

ತರಕಾರಿ ಮಾರುವವಳು ಕೊಂಡುಕೊಳ್ಳುವವಳಿಗೆ ಬೈಯುವಾಗ ಈ ವಾಕ್ಯವನ್ನು ಬೈಗುಳವಾಗಿ ಬಳಕೆ ಮಾಡತ್ತಾಳೆ. ಆಕಡೆ-ಈಕಡೆ ನೋಡುವುದರಲ್ಲಿ ಇವಳು ಆಗಲೆ ಬ್ಯಾಗನಲ್ಲಿ ಟಮಟ ಹಣ್ಣು ಹಾಕಿಕೊಳ್ಳತ್ತಾಳೆ ಒಂದೇ ಸಲ ಕಣ್ಣಾಕ ಮಣ್ಣು ಹಾಕತ್ತಾಳೆ ಇವಳು ಎಂದು ಬೈಯುವುದನ್ನು ನೋಡಬಹುದು.

ಹೆಣ್ಣು-ಮಕ್ಕಳಿಗೆ:-

ತಾಯಿ-ಮಗಳಿಗೆ ಇಲ್ಲೆ ಆಟ ಆಡಕೊಂಡು ಇರತ್ತಿನಿ ಅಂತಾ ಹೇಳಿದಳು ನಾನು ಹೋಗಲಿ ಬೀಡು ಪಾಪ ಅಂತಾ ಆಟ ಆಡೋಕೆ ಹೋಗಲಿ ಅಂದರೆ ನಾನು ಇಲ್ಲೆ ಕೂತಿನಿ ಆಗಲೆ ಎಲ್ಲಿಗೆ ಓಡಿ ಹೋಗ್ಯಾಳ ಎಂತ ನನ್ನ ಮಗಳು ಆಗಿರಬೇಡ ಕಣ್ಣಕ ಮಣ್ಣ ಹಾಕಿ ಬಿಡತ್ತಾಳೆ ಒಂದೇ ಸಲ ಸಾಮಾನ್ಯದ ಹೆಂಗಸು ಆಗಲ್ಲ ನೋಡು ಇವಳು ಎಂದು ಬೈಯುವಾಗಲೂ ಈ ವಾಕ್ಯ ಬಳಕೆಯಾಗುತ್ತದೆ.

ಕಣ್ಣಾಕ ಮಣ್ಣು ಹಾಕುವುದು ಎಂದರೆ ಯಾಮಾರಿಸುವುದು ಅಥವಾ ಮೋಸ ಮಾಡುವುದು ಎಂದರ್ಥವಾಗುತ್ತದೆ. ಹೇಳದೆ ಮಾಡುವ ಕೆಲಸಕ್ಕೆ ಕಣ್ಣಾಕ ಮಣ್ಣು ಹಾಕತ್ತಾರೆ ಎಂದು ಹೇಳುತ್ತಾರೆ. ಮಕ್ಕಳು ಇಲ್ಲೆ ಆಡತ್ತಿನಿ ಅಂತಾ ಹೇಳಿ ಸ್ನೇಹಿತನ ಮನೆಗೆ ಹೇಳದೆ ಹೋದಾಗ ತಾಯಿ ಕಣ್ಣಾಕ ಮಣ್ಣು ಹಾಕಿ ಬಿಡತ್ತಾರೆ ನೋಡು ಇಲ್ಲೆ ಆಡತ್ತಿನಿ ಅಂದು ಅವಳ ಸ್ನೇಹಿತಳ ಮನೆಗೆ ಹೋಗ್ಯಾಳ ಹೇಳದೆ ಹೋಗಿದ್ದಕೆ ಈ ರೀತಿ ಕಣ್ಣಾಕ ಮಣ್ಣು ಹಾಕತ್ತಾಳೆ ಎಂದು ಮೋಸ ಮಾಡುವುದಕ್ಕೆ ಈ ರೀತಿಯಲ್ಲಿ ಉಪಮೆ ಮೂಲಕ ಬೈಗುಳಗಳನ್ನು ಸೃಷ್ಟಿಸಿದೆ ಎಂದು ಹೇಳಬಹುದು.

ಹೀಗೆ ಬೈಗುಳಗಳು ವಾಕ್ಯರೂಪದಲ್ಲಿ ಇರುವುದನ್ನು ನೋಡಬಹುದು. ವಾಕ್ಯರೂಪದ ಬೈಗುಳಗಳು ಹೆಚ್ಚಾಗಿ ಹೆಣ್ಣುಮಕ್ಕಳಿಗೆ ಬಳಸಿರುವುದು ಕಂಡುಬರುತ್ತದೆ. ಗಂಡಿಗೆ ಬಳಸಿದರೂ ಅದು ಹೆಣ್ಣಿನ ಮೂಲಕವೇ ಬಳಕೆಯಾಗುತ್ತದೆ. ವಾಕ್ಯರೂಪದ ಬೈಗುಳಗಳು ಉಪಮೆ ಮತ್ತು ರೂಪಕಗಳ ಮೂಲಕ ರಚನೆಯಾಗಿವೆ. ಈ ಬೈಗುಳಗಳು ಹೆಣ್ಣಿಗೆ ಬೈಯುವಾಗ ಉಪಮೆ ಮತ್ತು ರೂಪಕಗಳ ಮೂಲಕ ಬೈಯುವುದನ್ನು ಈ ಬೈಗುಳದ ವಾಕ್ಯದಲ್ಲಿ ನೋಡಬಹುದು. ಅದರಲ್ಲೂ ಹೆಚ್ಚಾಗಿ ಕ್ರಿಯೆಗೆ ಸಂಬಂಧಿಸಿ ಬೈಗುಳದ ವಾಕ್ಯಗಳೇ ಹೆಚ್ಚಾಗಿವೆ ಎಂದು ಹೇಳಬಹುದು.

೩.೫.ಗಾದೆರೂಪದ ಬೈಗುಳಗಳು:

ಗಾದೆಗಳು ಭಾಷೆಯ ಜೀವಾಳವಿದ್ದಂತೆ. ಅನುಭವದ ಮೂಲಕ ಇತಂಹ ಮಾತು ಅಥವಾ ಗಾದೆಗಳು ಬರುವ ಸಾಧ್ಯತೆಯಿದೆ. ಗಾದೆಗಳು ಜನರನ್ನು ಆಕರ್ಷಿಸುವ ಭಾಷೆಯಾಗಿ ಕಂಡುಬರುತ್ತವೆ. 'ಮೂರ್ತಿ ಚಿಕ್ಕದಾಗಿದ್ದರೂ ಕೀರ್ತಿ ದೊಡ್ಡದು' ಎಂಬ ಗಾದೆ ಇಂದಂತೆ, ಗಾದೆಗಳ ರೂಪ ಚಿಕ್ಕದಾಗಿ ಕಂಡರೂ ಕೊಡುವ ಅರ್ಥ ಬಹಳ ದೊಡ್ಡದು. 'ಗಾದೆಗಳು ಅನುಭವದ ವೇದಗಳು ಇದ್ದಂತೆ. ಇವು ಜನ ಜೀವನದ ಗುಣದೋಷಗಳನ್ನು ಎತ್ತಿ ತೋರಿಸಿ, ರೀತಿ–ನೀತಿಗಳನ್ನು ತಿಳಿಸಿಕೊಡುವಲ್ಲಿ ಶ್ರೇಷ್ಠ ಮಾರ್ಗದರ್ಶನಗಳಾಗಿವೆ. ಗಾದೆಗಳು ಚಿಕ್ಕ ವಾಕ್ಯಗಳಂತೆ ಇದ್ದರೂ ಕೂಡ ಕೊಡುವ ಅರ್ಥ ಹಿರಿಯ ಅರ್ಥವನ್ನು ಕೊಡುತ್ತದೆ'. (ಪಾಂಚಾಳ ಭಾಷೆ ಮತ್ತು ಸಂಸ್ಕೃತಿ ಪು.೭೦) ಸಮಾಜದಲ್ಲಿ ಗಾದೆಗಳಿಗೆ ವಿಶಿಷ್ಟ ಸ್ಥಾನವಿದೆ. ಬೈಗುಳಗಳಲ್ಲಿ ಗಾದೆಗಳು ಇರುವುದಿಲ್ಲ, ಗಾದೆಗಳಲ್ಲಿ ಬೈಗುಳಗಳು ಬಳಕೆಯಾಗಿವೆ. ಸಾಮಾನ್ಯವಾಗಿ ಬೈಗುಳಗಳ ಗಾದೆಗಳು ಇನ್ನೊಬ್ಬರನ್ನು ಸರಿದಾರಿಗೆ ತರುವ ಮತ್ತು ಬುದ್ಧಿವಾದ ಹೇಳುವ ಸಂದರ್ಭದಲ್ಲಿ ಹೆಚ್ಚಾಗಿ ಬಳಕೆಗೊಳ್ಳುತ್ತವೆ. ಮಾತಾಡುವ ಸಂದರ್ಭದಲ್ಲಿ ಗಾದೆಗಳನ್ನು ಮಾತಿನ ಮಧ್ಯದಲ್ಲಿ ಬಳಸುವುದನ್ನು ಕಾಣುತ್ತೇವೆ. ಸಮಾಜ ನಿರೂಪಿಸುವ ಬೈಗುಳಗಳ ಗಾದೆಗಳಿಗೆ ಸಮುದಾಯದ ನಿರ್ವಚನಗಳನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ಶಕ್ತಿಯಿದೆ. ಭಾಷಿಕವಾಗಿ ಗಾದೆಗಳನ್ನು ಗಮನಿಸಿದಾಗ ಹೆಣ್ಣನ್ನು ಬೈಗುಳಗಳ ಗಾದೆಗಳಲ್ಲಿ ಯಾವ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ ಎಂಬುದನ್ನು ಕಾಣಬಹುದು ಮತ್ತು ಸಮಾಜದ ಮೌಲ್ಯ ಏನಾಗಿದೆ ಅದನ್ನು ತಿರಸ್ಕರಿಸಿ ಬದುಕಿದ ಹೆಣ್ಣಿನ ಸ್ಥಿತಿ ಹೇಗಿರುತ್ತದೆ ಎಂಬುವುದನ್ನು ಸಹ ಗಾದೆ ರೂಪದಲ್ಲಿರುವ ಬೈಗುಳಗಳಲ್ಲಿ ನೋಡಬಹುದು. ಸಮಾಜದ ಮೌಲ್ಯವನ್ನು ಬಿಟ್ಟು ತನ್ನ ಇಚ್ಚೆಯಂತೆ ಬದುಕುವ ಹೆಣ್ಣಿನ ಪರಿಸ್ಥಿತಿ ಹೇಗಿರುತ್ತದೆ ಎಂದು ಗಾದೆ ರೂಪದಲ್ಲಿರುವ ಬೈಗುಳಗಳಲ್ಲಿ ಚಿತ್ರಿತಗೊಂಡಿವೆ.

ಗಾದೆ ರೂಪದಲ್ಲಿರುವ ಬೈಗುಳಗಳಲ್ಲಿ ಹೆಣ್ಣನ್ನು ನಿರೂಪಿಸಿರುವಂತೆ ಗಂಡನ್ನು ನಿರೂಪಿಸಿರುವುದನ್ನು ಕೆಲವು ಗಾದೆ ರೂಪದಲ್ಲಿರುವ ಬೈಗುಳಗಳನ್ನು ನೋಡಿದಾಗ ತಿಳಿದುಬರುತ್ತದೆ. ಹೆಣ್ಣು ಅಷ್ಟೇ ಸಮಾಜದಲ್ಲಿ ಹೀಗೆ ಇರಬೇಕು ಎಂಬ ಮೌಲ್ಯ ಇರುವಂತೆ ಗಂಡು ಸಮಾಜದಲ್ಲಿ ಹೇಗೆ ಇರಬೇಕು ಅವನ ಸ್ಥಾನ ಏನು, ಅವನ ಕರ್ತವ್ಯ ಏನು ಅದನ್ನು ಹೇಗೆ ನಿಭಾಯಿಸಿಕೊಂಡು ಹೋಗಬೇಕು ಎಂಬುವುದನ್ನು ಗಾದೆ ರೂಪದಲ್ಲಿರುವ ಬೈಗುಳಗಳಲ್ಲಿ ನೋಡಬಹುದು.

ಗಾದೆ ರೂಪದಲ್ಲಿರುವ ಬೈಗುಳಗಳನ್ನು ನಾಲ್ಕು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು.

೩.೫.೧. ಹೆಣ್ಣಿಗೆ ಸಂಬಂಧಿಸಿದ ಗಾದೆ ರೂಪದಲ್ಲಿರುವ ಬೈಗುಳಗಳು

೩.೫.೨. ಗಂಡಿಗೆ ಸಂಬಂಧಿಸಿದ ಗಾದೆ ರೂಪದಲ್ಲಿರುವ ಬೈಗುಳಗಳು

೩.೫.೩. ಇಬ್ಬರಿಗೂ ಸಂಬಂಧಿಸಿದ ಗಾದೆ ರೂಪದಲ್ಲಿರುವ ಬೈಗುಳಗಳು

೩.೫.೪. ಸಾಮಾನ್ಯವಾಗಿ ಎಲ್ಲರಿಗೂ ಸಂಬಂಧಿಸಿದ ಗಾದೆ ರೂಪದಲ್ಲಿರುವ ಬೈಗುಳಗಳು

೩.೫.೧.ಹೆಣ್ಣಿಗೆ ಸಂಬಂಧಿಸಿದ ಗಾದೆ ರೂಪದಲ್ಲಿರುವ ಬೈಗುಳಗಳು

ಸಮಾಜದಲ್ಲಿ ಹೆಣ್ಣು ಹೀಗೆ ಇರಬೇಕು, ಹೀಗೆ ಬದುಕಬೇಕು ಎಂಬುವುದು ವಾಡಿಕೆಯಾಗಿದೆ. ಅದನ್ನು ಮೀರಿದರೆ ಅವಳ ಸ್ಥಿತಿ ಹೇಗಿರುತ್ತದೆ ಎಂಬ ಅಂಶವನ್ನು ಗಾದೆಗಳ ಬೈಗುಳಗಳಲ್ಲಿ ಕಾಣಬಹುದು. ಹೆಂಡತಿಗೆ ಒಳ್ಳೆಯ ಗಂಡನಿದ್ದಾಗ ಮಾತ್ರ ಅವಳ ಬಾಳಿಗೆ ಒಂದು ಮಹತ್ವ ದೊರಕುತ್ತದೆ. ಗಂಡನೊಬ್ಬನೆ ಒಳ್ಳೆಯವನಾದರೆ ಸಾಲದು ಪತಿಗೆ ತಕ್ಕ ಪತ್ನಿ ಆಗುವುದು ಅವಶ್ಯಕವಾಗುತ್ತದೆ. ಸಂಸಾರದಲ್ಲಿ ಹೆಣ್ಣಿನ ಪಾತ್ರ ಗಂಡಿಗಿಂತ ಮುಖ್ಯವಾಗಿರುತ್ತದೆ. ಅದರ ವಿರುದ್ಧವಾಗಿ ಅಂದರೆ ಸಮಾಜದ ಮೌಲ್ಯವನ್ನು ತಿರಸ್ಕರಿಸಿ ತನ್ನ ಇಚ್ಚೆಯಂತೆ ಬದುಕಿದರೆ ಸಮಾಜದಲ್ಲಿ ಅವಳಿಗೆ ಸಿಗುವ ಸ್ಥಾನಮಾನ ಎಂತಹುದು ಮತ್ತು ತನ್ನ ಗಂಡನನ್ನು ಬಿಟ್ಟು ಪರ ಪುರುಷನ ಸಹವಾಸಕ್ಕೆ ಒಳಗಾದಾಗ ಅವಳ ಸ್ಥಿತಿ ಹೇಗಿರುತ್ತದೆ ಎಂಬುವುದನ್ನು ಕೆಲವು ಬೈಗುಳಗಳ ಗಾದೆಗಳಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು ಮತ್ತು ಒಂದು ಕುಟುಂಬದಲ್ಲಿ ಹೆಣ್ಣು ಹಿರಿಯಳಾಗಿದ್ದು ಅವಳ ನಡೆನುಡಿಯ ಆಧಾರದ ಮೇಲೆ ಚಿಕ್ಕವಳ ನಡೆ – ನುಡಿಯನ್ನು ಅಳೆಯುವುದು ಸಮಾಜದ ನಿಯಮಗಳಲ್ಲಿ ಒಂದಾಗಿದೆ. ಹಾಗೇಯೆ ಗಾದೆಗಳ ಬೈಗುಳಗಳಲ್ಲಿ ಕುಟುಂಬದ ಹೆಣ್ಣಿನ ಪರಿಸ್ಥಿತಿಯನ್ನು ಕಾಣಬಹುದು. ಅಕ್ಕ ಕೆಟ್ಟವಳಾಗಿದ್ದರೆ ತಂಗಿಯು ಕೂಡ ಹಾಗೆಯೇ ಇರುವಳು ಎಂಬ ಭಾವನೆ ಇರುತ್ತದೆ. ಅವಳ ಅಕ್ಕನೇ ಸರಿಯಿಲ್ಲ ಇನ್ನೂ ತಂಗಿ ಹೇಗೆ ಇರುತ್ತಾಳೆ ಎಂಬ ಅಂಶ ಗಾದೆಯ ಬೈಗುಗಳಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು.

ಉದಾ:–ಹೆಣ್ಣು ಮಕ್ಕಳ ಬುದ್ಧಿ ಮೊಣಕಾಲ ಕೆಳಗೆ

ನಗೋ ಹೆಂಗ್ಸನ್ನು ನಂಬಾರದು

ಹಂಡೆ ಬಾಯಿ ಕಟ್ಟಬಹುದು, ಮುಂಡೆ ಬಾಯಿ ಕಟ್ಟಲಾಗದು.

ಮಾತು ಮನೆಕೆಡಿಸಿತು ತೂತು ಒಲೆ ಕೆಡಿಸಿತು.

ಗಂಡನನ್ನು ಬಿಟ್ಟು ಮಿಂಡನ ಚಾಕರಿ ಮಾಡತ್ತಾಳೆ.

ಗಂಡನ ಹೆಸರು ಪರ ಮಿಂಡನ ಪಿಸುರು.

ಹಿರಿಯಕ್ಕನ ಚಾಳಿ ಮನಿಮಂದಿಗೆಲ್ಲ.

ಅಕ್ಕ ನೆಟ್ಟಗಿದ್ದರೆ ತಂಗಿ ನೆಟ್ಟಗಿರುತ್ತಾಳೆ.

ಮಾತು ಮನೆ ಕೆಡಿಸಿತು, ಸೂಳೆ ಓಣಿ ಹಾಳು ಮಾಡಿದಳು.

ಕುಣಿಯಲಾರದ ಸೂಳೆ ನೆಲ ಡೊಂಕು ಅಂದಳಂತೆ.

ಉದಾ:- **'ಹೆಣ್ಣು ಮಕ್ಕಳ ಬುದ್ಧಿ ಮೊಣಕಾಲ ಕೆಳಗೆ'**

ಈ ಗಾದೆ ನಿರೂಪಿಸುದೆನೆಂದರೆ ಹೆಣ್ಣು ಮಕ್ಕಳು ಗಂಡಿಗೆ ಸಮವಲ್ಲ. ಅವಳ ಆಲೋಚನೆ ಏನಿದ್ದರೂ ಮೊಣಕಾಲ ಕೆಳಗೆ ಎಂಬ ನಂಬಿಕೆ ಸಮಾಜದಲ್ಲಿದೆ. ಅಂದರೆ ಹೆಣ್ಣಿಗೆ ವ್ಯವಹಾರದ ಜ್ಞಾನವಾಗಲೀ, ವಿವೇಕವಾಗಲೀ ಗಂಡಿಗಿಂತ ಕಡಿಮೆ ಎಂಬ ಹಿನ್ನೆಲೆಯಲ್ಲಿ ಈ ಗಾದೆ ಹುಟ್ಟಿಕೊಂಡಿದೆ. ಆದರೆ ಈ ಗಾದೆ ಆಗಿನ ಕಾಲಕ್ಕೆ ಮಾತ್ರ ಸೀಮಿತ ಎಂದು ಹೇಳಬಹುದು. ಈಗಿನ ಹೆಣ್ಣು ಮಕ್ಕಳು ಯಾವುದರಲ್ಲೂ ಕಡಿಮೆ ಇಲ್ಲ ವ್ಯವಹಾರದ ಜ್ಞಾನ ಅವಳಿಗೂ ಇದೆ. ಅವಳು ಗಂಡಿಗೆ ಸಮವಾಗಿ ನಿಲ್ಲಬಲ್ಲಳು ಎಂದು ಹೇಳಬಹುದು.

ಗಂಡು ಮತ್ತು ಹೆಣ್ಣು ಇಬ್ಬರೂ ಹೆಣ್ಣನ್ನು ಬೈಯುವಾಗ ಈ ಗಾದೆಯನ್ನು ಬಳಕೆ ಮಾಡುತ್ತಾರೆ.

ಗಂಡು ಬೈಯುವಾಗ,

ಪ್ರ: 'ಲೇ ನಿಮ್ಮ ಬುದ್ದಿ ಇಷ್ಟೆ ಬಿಡು ನೀವು ಯಾವಾಗಲೂ ನಿಮ್ಮತರನೇ ಯೋಚನೆ ಮಾಡತ್ತಿರಾ ಹೇಗೆ ನೀವು ನಿಮ್ಮ ಮೊಣಕಾಲು ಕೆಳಗೆ ಸೀರೆ ಹುಟ್ಟುಕೋಳ್ಳುತ್ತಿರಾ ಹಾಗೆನೆ ನಿಮ್ಮ ಬುದ್ಧಿನೂ ಮೊಣಕಾಲು ಕೆಳಗೆ. ನೀವು ಯೋಚನೆ ಮಾಡುವುದು ಸಹ ಕೆಳಗಿನ ಮಟ್ಟಕ್ಕೆ ಯೋಚನೆ ಮಾಡತ್ತಿರಾ ಎನ್ನುವ ಸಂದರ್ಭದಲ್ಲಿ ಈ ಗಾದೆ ಬಳಕೆಯಾಗುತ್ತದೆ.

ಹೆಣ್ಣು-ಹೆಣ್ಣಿಗೆ ಬೈಯುವಾಗಲೂ ಈ ಗಾದೆ ಬಳಕೆಯಾಗುವುದನ್ನು ನೋಡಬಹುದು. ಅವರು ಅವರೇ ಮಾತಾನಾಡಿಕೊಳ್ಳುವಾಗ ಗಾದೆನೇ ಇದೆ ಅಲ್ಲ ಎಷ್ಟಿದ್ದರೂ ಹೆಣ್ಣುಮಕ್ಕಳು ಬುದ್ಧಿ ಮೊಣಕಾಲಿಗೆ ಅಂತ ಹಾಂಗೆ ನಿನ್ ಬುದ್ಧಿನೂ ಎಂದು ಹೇಳುತ್ತಾಳೆ ಮತ್ತು ಹೆಣ್ಣುಮಕ್ಕಳು ಎಷ್ಟಿದ್ದರೂ ಮೊಣಕಾಲು ಕೆಳಗೆ ಸಿರೆ ಉಟ್ಟುಕೊಳ್ಳೋದು ಗಂಡಸರು ತರ ಮೊಣಕಾಲು ಮೇಲೆ ಲುಂಗಿ ಕಟ್ಟಿಕೊಂಡ್ಯಾಂಗೆ ಸೀರೆ ಉಟ್ಟುಕೋಳ್ಳೊಕೆ ಆಗುತ್ತ ಎಂದು ಪ್ರಶ್ನೆ ಹಾಕಿಕೊಳ್ಳತ್ತಾರೆ? ಈ ಗಾದೆಯನ್ನು ಹೆಣ್ಣು ಒಪ್ಪಿಕೊಳ್ಳುವ ರೀತಿಯಲ್ಲಿ ಸಮಾಜ ಮಾಡಿದೆ ಎಂದು ಹೇಳಬಹುದು.

'ನಗೋ ಹೆಂಗ್ಸನ್ನು ನಂಬಾರದು'

ಈ ಗಾದೆಯು ಹೆಚ್ಚು ನಗುವ ಹೆಣ್ಣನ್ನು ಕುರಿತದ್ದಾಗಿದೆ. ಅಳು ಹೆಣ್ಣಿನ ಲಕ್ಷಣ ಎಂಬುದನ್ನು ಪುರುಷ ಪ್ರಧಾನ ವ್ಯವಸ್ಥೆ ನಿರೂಪಿಸಿದೆ. ಅಳು ಹೆಣ್ಣಿನ ಕೀಳರಿಮೆ ಎಂಬುದು ಸಮಾಜದ ನಂಬಿಕೆಯಾಗಿದೆ. ಯಾಕೆ ಹೆಣ್ಣು ಹೆಚ್ಚು ನಗಬಾರದು? ಅದು ತಪ್ಪು ಎಂದು ಯಾಕೆ ಹೇಳುತ್ತಾರೆ? ಅವಳು ಸೌಮ್ಯವಾಗಿರಬೇಕು ಎಂದು ಯಾಕೆ ಸಮಾಜ ಬಯಸುತ್ತದೆ? ನಗುವುದು ಅವಳ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದು ಸಮಾಜ ಯಾಕೆ ಅದನ್ನು ಕಿತ್ತುಕೊಳ್ಳಲು ಪ್ರಯತ್ನಸುತ್ತಿದೆ? ಎಂಬ ಪ್ರಶ್ನೆಗಳು ಕಾಡುತ್ತವೆ. ಆದರೆ ಮನಬಿಚ್ಚಿ ಅಳುವುದು ಮತ್ತು ನಗುವುದು ಗಂಡಾಗಲೀ, ಹೆಣ್ಣಾಗಲೀ ಅವರರವರ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದಾಗಿದೆ. ನಗುವುದು

ಅಥವಾ ಅಳುವುದು ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕೂ ಒಳ್ಳೆಯದು. ಅತೀ ಹೆಚ್ಚು ನಗೋ ಹೆಣ್ಣು ಒಳ್ಳೆಯವಳು ಅಲ್ಲ ಅವಳು ನಗುವುದರ ಮೂಲಕ ಮೋಸ ಮಾಡುತ್ತಾಳೆ ಮೋಸಗಾರ್ತಿ ಎಂಬ ಅರ್ಥದಲ್ಲಿ ಈ ಗಾದೆ ರೂಪದ ಬೈಗುಳ ಸಮಾಜದಲ್ಲಿ ಬಳಕೆಯಲ್ಲಿದೆ.

ಪ್ರ: 'ಅವಳು ಬೀಡು ನಕ್ಕು ನಕ್ಕೆ ಎಲ್ಲರನೂ ಮಳ್ಳು ಮಾಡಿಬಿಡತ್ತಾಳೆ. ಅವಳನ್ನ ನಂಬಬಾರದು' ಎಂದು ಹೆಣ್ಣನ್ನು ಬೈಯುತ್ತಾರೆ. ಅವಳು ಅವಶ್ಯಕತೆ ಮೀರಿ ನಗಬಾರದು ಎಂಬುದು ಸಮಾಜದ ಒಂದು ವಾಟಿಕೆಯಾಗಿದೆ.

'ಹಂಡೆ ಬಾಯಿ ಕಟ್ಟಬಹುದು, ಮುಂಡೆ ಬಾಯಿ ಕಟ್ಟಲಾಗದು'

ಇದರ ವಿವರಣೆಯನ್ನು ನೋಡುವುದಾದರೆ ಹಂಡೆ ಬಾಯಿ ಚಿಕ್ಕದಿರುವುದರಿಂದ ಅದನ್ನು ಮುಚ್ಚಬಹುದು. ಈ ಮಾತಿನ ಪ್ರಕಾರ ಇಲ್ಲಿ ಮುಂಡೆ ಎಂದರೆ ಹೆಣ್ಣು ಎಂದು ಅರ್ಥವಾಗುತ್ತದೆ. ಈ ಗಾದೆಗೆ ಹೋಲಿಸುವಂತೆ ಇನ್ನೊಂದು ಮಾತಿದೆ. ಮಡಕೆಯ ತೂತನ್ನು ಮುಚ್ಚಬಹುದು ಆದರೆ ಮುಂಡೆ ಬಾಯಿ ಮುಚ್ಚಲಾಗುವುದಿಲ್ಲ ಎಂಬುವುದು.

ಹಂಡೆ ಬಾಯಿ ಕಟ್ಟಬಹುದು, ಆದ್ರೆ ಮುಂಡೆಬಾಯಿ ಕಟ್ಟಲಾಗದು. ಈ ಗಾದೆ ಹೆಚ್ಚು ಮಾತಾನಾಡುವ ಹೆಣ್ಣಿಗೆ ಬೈಯುವಾಗ ಬಳಕೆ ಮಾಡುತ್ತಾರೆ. ಮಾತಿನ ಮಿತಿ ತಿಳಿಯದೆ ಇರುವವರಿಗೆ, ವಟಗುಟ್ಟುವಿಕೆಯ ಗುಣ ಹೆಚ್ಚು ಇರುವವರು ಯಾವುದೇ ಒಂದು ಮಾತನ್ನು ಸಹಿಸದೆ ಆ ಮಾತಿಗೆ ಪ್ರತಿರೋಧವನ್ನು ಒಡ್ಡುವವರಿಗೆ ಈ ಗಾದೆ ಹೆಚ್ಚು ಬಳಕೆಯಾಗುತ್ತದೆ. ದೊಡ್ಡದಿರುವ ಹಂಡೆ ಬಾಯಿ ಕಟ್ಟಬಹುದು ಹೆಚ್ಚು ಮಾತಾನಾಡುವ ಈ ನಿನ್ನ ಬಾಯಿ ಕಟ್ಟಲಾಗದು ಎಂದು ಹೇಳುತ್ತಾರೆ. ಯಾಕೆ ಗಂಡು ಮಾತಾನಾಡುವುದಿಲ್ಲವೇ ಅವ್ಯಶ್ಯಕತೆ ಇದ್ದಾಗ ಹೆಣ್ಣಾಗಲಿ ಗಂಡಾಗಲಿ ಮಾತಾಡಬೇಕಾಗುತ್ತದೆ. ಆದರೆ ಹೆಣ್ಣು ಮಾತಾನಾಡಿದರೆ ಸಮಾಜದಲ್ಲಿ ಅವಳು ಬೈಗುಳಕ್ಕೆ ಗುರಿಯಾಗುತ್ತಾಳೆ.

'ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು'

ಈ ಗಾದೆ ಮೇಲು ನೋಟಕ್ಕೆ ಬೈಗುಳವಲ್ಲ ಅನಿಸಿದರೂ ಇದು ಹೆಣ್ಣಿಗೆ ಸಂಬಂಧಿಸಿದ ಬೈಗುಳದ ಗಾದೆಯಾಗಿ ಕಂಡುಬರುತ್ತದೆ. ಸಮಾಜಿಕ ಸಂದರ್ಭದಲ್ಲಿ ಭಾಷೆಯನ್ನು ಕುರಿತು ಆಗಿರುವಂತಹ ನಂಬಿಕೆಯಿಂದ ಹುಟ್ಟಿದ ಗಾದೆಯಾಗಿದೆ. ಈ ಗಾದೆಯನ್ನು ಸಮಾಜ ಹೇಗೆ ಗ್ರಹಿಸುತ್ತದೆ ಎಂಬುವುದು ಬಹುಮುಖ್ಯವಾದ ಅಂಶವಾಗಿದೆ. ಈ ಗಾದೆಯ ಸ್ವರೂಪವನ್ನು ನೋಡುವುದಾದರೆ ಮಾತು ಒಲೆ ಕೆಡಿಸಿತು ಎಂಬುವುದು ಒಂದು ಅಂಶವಾದರೆ, ತೂತು ಒಲೆ ಕೆಡಿಸಿತು ಎಂಬುದು ಮತ್ತೊಂದು ಅಂಶವಾಗಿದೆ. ಈ ಎರಡು ಅಂಶಗಳಲ್ಲಿ ಎರಡನೆಯ ಅಂಶವನ್ನು ಗಮನಿಸುವುದು ನಮಗೆ ಅಗ್ಯತವಾಗಿದೆ. ಒಲೆ ಎಂದ ಕೂಡಲೆ ನಮಗೆ

ನೆನಪಾಗುವ ವಿಚಾರವೆಂದರೆ ಹೆಣ್ಣು. ಅಂದರೆ ಈ ಗಾದೆ ಹೆಣ್ಣನ್ನು ಉದ್ದೇಶಿಸಿ ಇರುವ ಗಾದೆಯಾಗಿದೆ ಮತ್ತು ಹೆಣ್ಣಿನ ಮಾತಿನಿಂದಾಗಿ ಮನೆ ಕೆಡುತ್ತೆ ಎಂಬ ನಂಬಿಕೆ ಇರುವಂತಹದ್ದು ಸಹ ತಿಳಿದುಬರುತ್ತದೆ.

ಪ್ರ: ಹೆಂಗಸರ ಮಾತೇನು ಕಟ್ಟಿಕೊಂಡಿಯಾ, ಅವರ ಮಾತನ್ನು ಕಟ್ಟಿಕೊಂಡು ಹೋದರೆ ಅಷ್ಟೆ ನೋಡು. ಮನೆ ಆಳಾಗುತ್ತೆ ಅದು ಏನೋ ಅಂತರೆ ಅಲ್ಲಾ 'ಮಾತು ಮನೆಕೆಡಿಸಿತು ತೂತು ಒಲೆಕೆಡಿಸಿತು' ಹಾಂಗೆ ಆಗುತ್ತೆ ಈ ಎಂದು ಬೈಯುತ್ತಾರೆ.

೩.೫.೨. ಗಂಡಿಗೆ ಸಂಬಂಧಿಸಿದ ಗಾದೆ ರೂಪದಲ್ಲಿರುವ ಬೈಗುಳಗಳು

ಗಾದೆ ರೂಪದಲ್ಲಿರುವ ಬೈಗುಳಗಳಲ್ಲಿ ಹೆಣ್ಣನ್ನು ಕೇಂದ್ರೀಕರಿಸಿ ರಚನೆಯಾದವುಗಳು ಇರುವಂತೆ ಗಂಡನ್ನು ಕೇಂದ್ರೀಕರಿಸಿ ರಚನೆಯಾಗಿರುವ ಬೈಗುಳಗಳು ಇವೆ. ಗಂಡು ಎಂದ ಮೇಲೆ ಅವನಿಗೆ ಪೌರುಷ, ಅಧಿಕಾರ ಜಾಸ್ತಿ ಇರುತ್ತದೆ. ಅವನು ಹೇಳಿದಂತೆ ಕೇಳಬೇಕು ಅವನೇ ಅಧಿಕಾರ ನಡೆಸಬೇಕು. ಅವನಿಗೆ ಜವಬ್ದಾರಿ ಮತ್ತು ಕರ್ತವ್ಯ ಹೆಚ್ಚಿರುತ್ತದೆ ಎಂಬುವುದು ಸಮಾಜದಲ್ಲಿನ ನಂಬಿಕೆಯಾಗಿದೆ. ಆದರೆ ಗಂಡು ಮೋಸಗಾರ ಅವನು ಇನ್ನೊಬ್ಬರ ಮನೆಗೆ ದ್ರೋಹ ಬಗೆಯುವ ಕೆಟ್ಟ ಮನಸ್ಥಿತಿ ಅವನಲ್ಲಿವೆ ಎಂಬುದನ್ನು ಸೂಚಿಸಲು ಅನ್ನ ಹಾಕಿದ ಮನೆಗೆ ಕನ್ನ ಹಾಕಿದ ಎಂಬ ಗಾದೆ ರಚನೆಯಾಗಿದೆ. ಈ ಗಾದೆಯಂತೆ ಗಂಡು ತನ್ನ ಗುಣವನ್ನು ತೋರಿಸುತ್ತಾನೆ. ಅನ್ನ ಹಾಕಿದ ಮನೆಗೆ ದ್ರೋಹ ಮಾಡುವ ಗುಣಗಳು ಇವೆ ಎಂಬುವುದನ್ನು ಕೆಲವು ಗಾದೆಗಳ ಬೈಗುಳಗಳಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು.

ಉದಾ:–

ಉಂಡ ಗಂಗಾಳದಾಗ ಹೇಲಾಂವ.

ಉಂಡ ಮನಿಗೆ ಜಂತಿ ಏಣ್ಸಾಂವ.

ಉಂಡ ಮನೆಗೆ ಎರಡು ಬಗ್ಯಾಂವ.

ಇರದ ಮನೆಗೆ ಉರದಾಡೋಕೆ ಹೋಗುತ್ತಾನೆ.

ಒಂದು ಮನಿನ ಮೂರು ಮನೆ ಮಾಡುವ.

ಉಪ್ಪು ತಿಂದ ಮನೆಗೆ ಎರಡು ಬಗೆಯೋನು.

ಉಚ್ಚೆಯಲ್ಲಿ ಮೀನು ಹಿಡಿಯುವವನು.

ಕೈಲಾಗದವನು ಮೈಯೆಲ್ಲಾ ಪರಚಿಕೊಂಡನಂತೆ.

ಸುಳ್ಳು ಹೇಳೋನು ಸೂಳೆಮಗ, ನಿಜ ಹೋಳೋನು ದೇವ್ರಮಗ.

ಉದಾ:- 'ಕೆಲಸವಿಲ್ಲದ ಬಡಗಿ ಮಗನ ಮುಕಳಿ ಕೆತ್ತಿದ'

ಈ ಗಾದೆ ಗಂಡಿಗೆ ಸಂಬಂಧಿಸಿದಾಗಿದ್ದೂ ಹೆಣ್ಣು ಮಕ್ಕಳು ಈ ಗಾದೆಯನ್ನು ಹೆಚ್ಚಾಗಿ ಬಳಕೆ ಮಾಡುತ್ತಾರೆ. ಹೆಣ್ಣು ಮಕ್ಕಳು ಗಂಡನಿಗೂ, ಮಕ್ಕಳಿಗೂ, ಪರಪುರುಷರಿಗೂ ಬೈಯುವಾಗ ಈ ಗಾದೆಯನ್ನು ಬಳಕೆ ಮಾಡುತ್ತಾರೆ. ಮಾಡುವ ಕೆಲಸ ಬಿಟ್ಟು ಬೇರೆ ಕೆಲಸ ಮಾಡುವ ಸಂದರ್ಭದಲ್ಲಿ ಈ ಗಾದೆ ಹುಟ್ಟಿಕೊಂಡಿದೆ ಎಂದು ಹೇಳಬಹುದು. ಈ ಗಾದೆಯು ಬಡಗಿ ಕೆಲಸ ಮಾಡುವ ವ್ಯಕ್ತಿಯನ್ನು ಸೂಚಿಸುತ್ತದೆ. ಈ ಕೆಲಸ ಮಾಡುವವರನ್ನು ಪಾಂಚಾಳರು ಎಂದು ಕರೆಯುತ್ತಾರೆ. ಆದರೆ ಈ ಗಾದೆ ಇದೆ ಸಮುದಾಯದವರನ್ನು ಬೈಯುವಾಗ ಬಳಸುವುದಿಲ್ಲ ಬೇರೆ ಸಮುದಾಯದವರನ್ನು ಬೈಯುವಾಗಲೂ ಈ ಗಾದೆ ಬಳಕೆಯಾಗುತ್ತದೆ. ಈ ಗಾದೆಯು ಒಂದು ಸಮುದಾಯ ಮತ್ತು ವೃತ್ತಿಯನ್ನು ಒಳಗೊಂಡ ಗಾದೆ ರೂಪದ ಬೈಗುಳವಾಗಿದೆ. 'ಇಲ್ಲಿ ಬಳಸಿದ ವ್ಯಕ್ತಿಗೂ ಹಾಗೂ ವಸ್ತುಗಳಿಗೂ ನೇರ ಸಂಬಂಧವಿಲ್ಲದಿದ್ದರೂ ಆ ವಸ್ತುವಿನಿಂದ ನಿರ್ವಹಿಸುವ ಕೆಲಸಕ್ಕೂ ವ್ಯಕ್ತಿಯ ನಡೆವಳಿಕೆಗೂ ಸಂಬಂಧವಿರುತ್ತದೆ. ಬಡಿಗಿಗೆ ಮಳೆಗಾಲದ ಸಂದರ್ಭದಲ್ಲಿ ರೈತಾಪಿ ಕೆಲಸಗಳು ಹೆಚ್ಚಾಗಿರುತ್ತವೆ. ಮಳೆಗಾಲ ಮುಗಿದ ನಂತರ ಈ ರೈತಾಪಿ ಕೆಲಸಗಳು ಸಾಧಾರಣ ರೀತಿಯಲ್ಲಿರುತ್ತವೆ. ಅಂತಹ ಸಂದರ್ಭಗಳಲ್ಲಿ ಬಡಗಿಯು ತನ್ನ ಜೀವನದ ನಿರ್ವಹಣೆಗೆ ಚಿಕ್ಕ ಪುಟ್ಟ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾನೆ. ಅಂದರೆ ಗೃಹೋಪಯೋಗಿ ಕೆಲಸಗಳಿಗೆ ಸಂಬಂಧಿಸಿದಂತೆ, ಅಂದರೆ ಮಣಿಗಳನ್ನು ಕೆತ್ತುವುದು, ಕಡಗಲ್ಲು ಕೆತ್ತುವುದು ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತಾನೆ. ಇಂತಹವುಗಳನ್ನು ಗಮನದಲ್ಲಿಟ್ಟುಕೊಂಡು ಈ ಬೈಗುಳಗಳನ್ನು ಕಟ್ಟಿದ್ದಾರೆ ಇದರಿಂದ ವ್ಯಕ್ತವಾಗುವ ವಿಷಯವೆಂದರೆ ಬಡಗಿಯ ಕೆಲಸದ ನಿರ್ವಹಣೆ ಹೇಗಿರುತ್ತದೆ ಎಂಬುದು ಗಮನಕ್ಕೆ ಬರುತ್ತದೆ ಇದನ್ನೇ ವ್ಯಂಗ್ಯಾರ್ಥವಾಗಿ ಅಂದರೆ ಹೇಳಿದ ಕೆಲಸವನ್ನು ಬಿಟ್ಟು ಬೇರೆ ಕೆಲಸದಲ್ಲಿ ನಿರತರಾದಗ ಇಂತಹ ವ್ಯಂಗ್ಯಾರ್ಥವಾದ ಬೈಗುಳಗಳನ್ನು ಉಪಯೋಗಿಸುವುದು ಕಂಡುಬರುತ್ತದೆ'. (ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ ಪು.೧೦೩)

'ಹಳೆ ಬಟ್ಟೆಗೆ ದಾರದಂಡ, ಮೈಗಳ್ಳಗೆ ಕೂಳುದಂಡ'

ಈ ಗಾದೆಯು ಗಂಡು ಮಕ್ಕಳಿಗೆ ಸಂಬಂಧಿಸಿದಾಗಿದ್ದು, ಇದನ್ನು ಎಲ್ಲರೂ ಅಂದರೆ ಹೆಣ್ಣು, ಗಂಡು ಇಬ್ಬರೂ ಬಳಕೆ ಮಾಡುತ್ತಾರೆ. ಹರಕು ಬಟ್ಟೆಯನ್ನು ಎಷ್ಟೂ ಹೊಲೆದರೂ ಅದು ಪದೆ ಪದೆ ಹರಿದುಹೋಗುತ್ತದೆ. ಅದಕ್ಕೆ ಅದನ್ನು ಎಷ್ಟೂ ಹೊಲೆದರೂ ದಾರ ದಂಡವೇ ಹೊರೆತು ಬಟ್ಟೆ ಸರಿಯಾಗುವುದಿಲ್ಲ. ಹಾಗೆ ಮೈಗಳ್ಳನಿಗೆ ಅಂದರೆ ಕೆಲಸ ಮಾಡಲು ಆಸಕ್ತಿ ಇಲ್ಲದ ವ್ಯಕ್ತಿ ಮತ್ತು ಯಾವುದೇ ಕೆಲಸ ಹೇಳಿದರೂ ಸೋಮಾರಿತನ ತೋರಿಸುವ ಮನುಷ್ಯನಿಗೆ ಊಟದಂಡ ಅಥವಾ ಕೂಳುದಂಡ. ಅವನಿಗೂ ಕೂಳು ಹಾಕಿದರೂ ದಂಡ, ಕೆಲಸ ಮಾಡದೆ ಇರುವವನಿಗೆ ಯಾಕೆ ಕೂಳು ಹಾಕಬೇಕು ಎಂಬ ಹಿನ್ನೆಲೆಯಲ್ಲಿ ಈ ಗಾದೆ ಹುಟ್ಟಿಕೊಂಡಿದೆ ಎಂದು ಹೇಳಬಹುದು. ಯಾವುದೇ ವಿಷಯ

ಅಥವಾ ಯಾವುದೇ ಕೆಲಸದಲ್ಲಿ ಆಸಕ್ತಿ ಇಲ್ಲದವನಿಗೆ/ಇಲ್ಲದವಳಿಗೆ ನೀನು ಬಾರಿ ಮೈಗಳ್ಳ ಇದ್ದಾಂಗೆ ಬೀಡು ಏನು ಸೋಮಾರಿ ಐದಿ ನೀನು ಗಂಡಸು/ಹೆಂಗಸು ನಿಮ್ಮಗೆ ಕೂಳುದಂಡ ಎಂದು ಹೆಣ್ಣುಮಕ್ಕಳಿಗೂ ಬೈಯುವಾಗ ಈ ಗಾದೆಯನ್ನು ಬಳಕೆ ಮಾಡುತ್ತಾರೆ.

'ಉಂಡ ಮನೆಗೆ ಎರಡು ಬಗ್ಯಾಂವ'

ಈ ಗಾದೆಯು ಗಂಡಸರಿಗೆ ಹೆಚ್ಚು ಬಳಕೆಯಾಗುತ್ತದೆ. ಅಂದರೆ ಚಾಡಿ ಹೇಳುವ ಗುಣ ಇರುವವನಿಗೆ ಈ ಬೈಗುಳ ಅನ್ವಯವಾಗುತ್ತದೆ. ಅವರು ತಿಂದು ಮನೆಗೆ ದ್ರೋಹ ಬಗೆದರೆ ಅವನ್ನು ಉಂಡ ಮನೇನ ಎರಡು ಮಾಡತ್ತಾನೆ ನೋಡು ಎಂದು ಬೈಯುವುದನ್ನು ನೋಡಬಹುದು.

ಸ್ನೇಹಿತ ಅಥವಾ ಸಂಬಂಧಿಕರ ಮನೆಯಲ್ಲಿ ತಿಂದು ಅಣ್ಣ ತಮ್ಮನ ನಡುವೆ ಇಲ್ಲ ಸಲ್ಲದ ಅಪವಾದವನ್ನು ಹೇಳಿ ಜಗಳ ಇಟ್ಟು ಅವರನ್ನು ದೂರ ಮಾಡಿದರೆ ಅವನನ್ನು ಉಂಡು ಮನೆಗೆ ಎರಡು ಬಗೆಯುವವನು ಎಂದು ಸಮಾಜ ದೂಷಿಸುತ್ತದೆ. ಎಂದು ಹೇಳಬಹುದು. ಇದು ಗೊತ್ತಿದ್ದು ತಪ್ಪು ಮಾಡುವವರಿಗೆ ಅನ್ವಯವಾದರೆ,

ಇನ್ನೊಂದು ಸಂದರ್ಭದಲ್ಲಿ ಇದರ ಬಳಕೆಯನ್ನು ನೋಡುವುದಾದರೆ, ಮಕ್ಕಳಿಗೆ ಏನು ತಿಳಿಯುವುದಿಲ್ಲ ಅಂತವರಿಗೆ ಬೈಯುವಾಗಲೂ ಈ ಗಾದೆ ಬಳಕೆಯಾಗುತ್ತದೆ. ತಮಾಷೆಗೆ ಪರಿಚಿತ ಹೆಣ್ಣು ಪರಿಚಿತ ಮಗುವಿಗೆ ಬೈಯುವಾಗ ನೀನು ಇದ್ಯಾ ನೋಡು ತಿಂದು ಮನೆನ ಎರಡು ಮಾಡತ್ತೀಯಾ ನೋಡು ಎಂಬ ಅರ್ಥದಲ್ಲಿ ಈ ಗಾದೆ ಬಳಕೆಯಾಗುತ್ತ ಇದೆ.

'ಕೈಲಾಗದವನು ಮೈಯಾಲ್ಲಾ ಪರಚಿಕೊಂಡನಂತೆ'

ಈ ಗಾದೆಯನ್ನು ಹೆಣ್ಣು ಗಂಡಿಗೆ ಹೆಚ್ಚು ಬಳಕೆಮಾಡುತ್ತಾಳೆ. ಈ ಗಾದೆಯ ಅರ್ಥ ತನ್ನ ಕೈಲಿ ಯಾವ ಕೆಲಸ ಮಾಡಲು ಆಗುವುದಿಲ್ಲ ಅಂತಹ ವ್ಯಕ್ತಿ ಸುಮ್ಮನೆ ಗಲಾಟೆ ಮಾಡುವುದನ್ನು ಕಂಡು ಬೈಯುವ ಸಂದರ್ಭದಲ್ಲಿ ಬಳಕೆಯಾಗುವ ಗಾದೆಯಾಗಿದೆ. ಈ ಗಾದೆ ಕೆಲವು ಸಂದರ್ಭದಲ್ಲಿ ಹೆಣ್ಣಿಗೂ ಬಳಕೆ ಮಾಡುವುದನ್ನು ಕಾಣಬಹುದು. ಕೈಲಾಗದ ಸೂಳೆ ಮೈ ಎಲ್ಲ ಪರಚಿಕೊಂಡಳಂತೆ ಎಂದು ಬೈಯುತ್ತಾರೆ. ಇದು ಗಂಡಿಗೆ ಸಂಬಂಧಿಸಿದ ಗಾದೆಯಾದರೂ ಸ್ತ್ರೀವಾಚಕ ಸೇರಿಸಿ ಇದನ್ನು ಹೆಣ್ಣಿಗೆ ಬೈಯುವಾಗ ಬಳಕೆಮಾಡುತ್ತಾರೆ.

ಪ್ರ: ಗಂಡಿಗೆ ಬಳಕೆ ಮಾಡುವಾಗ ಇವನು ತನ್ನ ಕೈಲೇ ಏನು ಮಾಡೋಕೆ ಆಗಲ್ಲ ಸೂಳೆಮಗನಿಗೆ ಎಷ್ಟು ಮಾಡತ್ತಾನೆ ನೋಡು ದರಿದ್ರ ಸೂಳೆಮಗ ಸುಮ್ಮನೆ ಎಗಾರಡುತ್ತಾನೆ ಎಂದು ಬೈಯುವಾಗ ಬಳಕೆ ಮಾಡುವುದನ್ನು ಕಾಣಬಹುದು.

ಇದು ಮೂಲ ಪುರುಷವಾಚಕವಾಗಿದ್ದರೂ ಸ್ತ್ರೀವಾಚಕವನ್ನಾಗಿ ಮಾಡಿ ಹೆಣ್ಣಿಗೆ ಬೈಯುವಾಗ ಬಳಕೆ ಮಾಡುತ್ತಾರೆ. ಅಷ್ಟೆ ಅಲ್ಲದೆ ಗಂಡಿಗೆ ಬೈಯುವಾಗಲೂ ಸೂಳೆಮಗ ಎಂದು ಹೆಣ್ಣಿನ ಮೂಲಕ ಬೈಯುವುದನ್ನು ಮೇಲಿನ ಪ್ರಯೋಗವನ್ನು ನೋಡಿದಾಗ ತಿಳಿದುಬರುತ್ತದೆ.

'ಸುಳ್ಳು ಹೇಳೋನು ಸೂಳೆಮಗ, ನಿಜ ಹೋಳೋನು ದೇವ್ರಮಗ'

ಈ ಗಾದೆಯು ಗಂಡಿಗೆ ಬೈಯುವಾಗ ಬಳಕೆ ಮಾಡಲಾಗುತ್ತದೆ. ಸುಳ್ಳು ಹೇಳುವವನು ಸೂಳೆಮಗ ಎಂದು, ನಿಜ ಹೇಳುವವನ್ನು ದೇವರಮಗ ಎಂದು ಸಮಾಜದಲ್ಲಿ ಕರೆಯುತ್ತಾರೆ. ಈ ಗಾದೆಯ ಅರ್ಥವನ್ನು ನೋಡಿದರೆ ಸುಳ್ಳು ಹೇಳುವವನು ಸೂಳೆಮಗ ಅಂದಾಗ ಅವನು ಅನೈತಿಕ ಸಂಬಂಧದಿಂದ ಹುಟ್ಟಿದವನು ಮತ್ತು ಅಂತಹವನು ಮಾತ್ರ ಸುಳ್ಳು ಹೇಳುತ್ತಾನೆ. ನಿಜ ಹೇಳುವವನು ಮಾತ್ರ ದೇವರ ಮಗ ಎಂದು ಹೇಳುತ್ತಾರೆ. ಅಂದರೆ ಸುಳ್ಳು ಎಲ್ಲರು ಹೇಳುತ್ತಾರೆ ಸುಳ್ಳು ಹೇಳದ ವ್ಯಕ್ತಿಯೇ ಇಲ್ಲ ಎಂದು ಹೇಳಬಹುದು. ಆದರೆ ಕೆಲವರು ಒಳ್ಳೆಯದಕ್ಕೆ ಸುಳ್ಳು ಹೇಳಿರಬಹುದು ಅಂತವರನ್ನು ಸೂಳೆಮಗ ಎಂದು ಕರೆದರೆ ಇದು ಸೂಕ್ತವಲ್ಲ ಎಂದು ಹೇಳಬಹುದು. ಅನಿವಾರ್ಯ ಪರಿಸಿತ್ಥಿಯ ಕಾರಣದಿಂದಲೂ ಸುಳ್ಳು ಹೇಳಲು ಸಾಧ್ಯವಿದೆ. ಸೂಳೆಮಗ ಎಂದು ಬೈಯುವುದರ ಮೂಲಕ ತಾಯಿ ನಡೆತೆಗೆಟ್ಟವಳು ಎಂದು ಬೈಯುವುದು ಎಷ್ಟು ಸೂಕ್ತ ಎಂದು ಎನಿಸುತ್ತದೆ.

೩.೫.೩.ಇಬ್ಬರಿಗೂ ಸಂಬಂಧಿಸಿದ ಗಾದೆ ರೂಪದಲ್ಲಿರುವ ಬೈಗುಳಗಳು

ಗಂಡು ಮತ್ತು ಹೆಣ್ಣು ಇಬ್ಬರು ಹೇಗಿರಬೇಕು ಮತ್ತು ಹೇಗೆ ಇದ್ದರೆ ಒಳಿತು ಎಂಬುವುದನ್ನು ಕೆಲವು ಗಾದೆ ರೂಪದಲ್ಲಿರುವ ಬೈಗುಳಗಳಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು. ಒಂದೇ ಗಾದೆಯಲ್ಲಿ ಹೆಣ್ಣು ಮತ್ತು ಗಂಡಿನ ಪಾತ್ರಗಳನ್ನು ಭಿನ್ನ ರೀತಿಯಲ್ಲಿ ಕಟ್ಟಿಕೊಡುತ್ತವೆ. ಗಾದೆ ರೂಪದಲ್ಲಿರುವ ಬೈಗುಳಗಳ ಮೂಲಕ ಸಮಾಜದಲ್ಲಿನ ಹೆಣ್ಣಿನ ಬಗೆಗಿನ ತಿಳುವಳಿಕೆ ಮತ್ತು ಗಂಡಿನ ಬಗೆಗಿನ ತಿಳುವಳಿಕೆಯನ್ನು ನೋಡಬಹುದು. ಗಂಡಿಗೆ ಮತ್ತು ಹೆಣ್ಣಿಗೆ ಹಠ ಇದ್ದರೆ ಏನಾಗುತ್ತದೆ, ಹಾಗೂ ಯಾವ ದಾರಿಗೆ ಹೋಗಿ ಅವರು ಕೆಟ್ಟು ಹೋಗುತ್ತಾರೆ ಎಂಬ ಅಂಶಗಳನ್ನು ಗಾದೆ ರೂಪದಲ್ಲಿರುವ ಬೈಗುಳಗಳಲ್ಲಿ ನೋಡಬಹುದು.

ಕೂತು ಗಂಡು ಕೆಟ್ಟ, ತಿರುಗಿ ಹೆಣ್ಣು ಕೆಟ್ಟಳು

ಕಳ್ಳತನ ಮಾಡಿ ಗಂಡು ಕೆಟ್ಟ, ಸೂಳೆಗಿರಿತನ ಮಾಡಿ ಹೆಣ್ಣು ಕೆಟ್ಟಳು.

ತಿಂದ ಮನೆಗೆ ಸಗಣಿ ಹೊಸಿಯುವವರು.

ಕಂಡದ್ದು ಮಿಂಡ್ರು ದೇವ್ರ ಅನ್ನೋರು.

ಉದಾ: 'ಹಠ ಮಾಡಿ ಹೆಣ್ಣು ಕೆಟ್ಟಳು, ಚಟ ಮಾಡಿ ಗಂಡು ಕೆಟ್ಟನು'.

ಈ ಗಾದೆಯು ಗಂಡು ಮತ್ತು ಹೆಣ್ಣಿನ ಪಾತ್ರ ನಿರ್ವಹಣೆಯ ಚಿತ್ರಣವನ್ನು ನೀಡುತ್ತದೆ. ಹೆಣ್ಣಿಗೆ ಹಠ ಒಳ್ಳೆದಲ್ಲ ಅವಳು ಹಠ ಮಾಡಿದರೆ ಮನೆಗೆ ಒಳ್ಳೆಯದಲ್ಲ ಎಂಬ ಮಾತು ಸಮಾಜದಲ್ಲಿ ತಲಾಂತರದಿಂದ ಬಳಕೆಯಲ್ಲಿದೆ. ಹಠದಿಂದ ಹೆಣ್ಣು ಕೆಡುತ್ತಾಳೆ ಎಂಬ ಭಾವನೆ ಜನರಲ್ಲಿದೆ. ಯಾವುದೆ ವಿಷಯ ಹೇಳಿದರೂ ರಂಟೆ ತೆಗಿಯುವ ಗುಣವುಳ್ಳವಳಿಗೆ ರೀತಿಯ ಗಾದೆಯನ್ನು ಬಳಕೆ ಮಾಡುತ್ತಾರೆ. ಬೇಡ ಅದು ಸರಿಯಲ್ಲ ನೀನು ಹೆಣ್ಣು ಆ ರೀತಿಯಲ್ಲಿ ಇರುವುದು ಸಮಾಜ ಅಥವಾ ಸಮುದಾಯ ಒಪ್ಪುಯುವುದಿಲ್ಲ ಎಂದರೂ ಇಲ್ಲ ತನ್ನ ಇಷ್ಟದಂತೆ ಇರುವವಳಿಗೆ ಹಠ ಮಾಡಿ ಹೆಣ್ಣು ಕೆಟ್ಟಳು ನಾವು ಹೇಳಿದ ಮಾತು ನೀನು ಕೇಳಲಿಲ್ಲ ಎಂದು ಬೈಯುವಾಗ ಈ ಗಾದೆ ಬಳಕೆಯಾಗುತ್ತದೆ ಹಾಗೆಯೇ ಚಟ ಹಿಡಿದ ಗಂಡು ಕೆಡುತ್ತಾನೆ ಎಂದು ಹೇಳಬಹುದು. ಕುಡಿಯುವ, ಸಿಗರೇಟು ಸೇದುವ ಇನ್ನೂ ಹಲವಾರು ಕೆಟ್ಟ ಚಟ ಇರುವವನು ಕೆಡುತ್ತಾನೆ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಈ ಗಾದೆ ಹುಟ್ಟಿಕೊಂಡಿದೆ.

'ಕೂತು ಗಂಡು ಕೆಟ್ಟ, ತಿರುಗಿ ಹೆಣ್ಣು ಕೆಟ್ಟಳು'

ಈ ಗಾದೆಯು ಹೆಣ್ಣು ಹೇಗಿರಬೇಕು, ಗಂಡು ಹೇಗಿರಬೇಕು ಯಾವ-ಯಾವ ಗುಣಗಳು ಇರಬೇಕು, ಯಾವ ಗುಣಗಳು ಇದ್ದರೆ ಅವರು ಹೆಣ್ಣು ಗಂಡು ಎಂದು ಕರೆಸಿಕೊಳ್ಳುತ್ತಾರೆ ಎಂಬಂಶಗಳನ್ನು ಒಳಗೊಂಡಿದೆ. ಗಂಡು ಎಂದರೆ ಅವನು ಮನೆಯಲ್ಲಿ ಕೂತುಕೊಂಡಿರಬಾರದು ಅವನು ದುಡಿಯಬೇಕು, ಕೆಲಸ ಮಾಡಬೇಕು ಎಂಬುದು ಸಮಾಜದಲ್ಲಿನ ಒಂದು ಪದ್ಧತಿಯಾಗಿದೆ. ಒಂದು ವೇಳೆ ಅವನು ಸುಮ್ಮನೆ ಕೂತರೆ ಬೈಗುಳಕ್ಕೆ ಒಳಗಾಗುತ್ತಾನೆ ಮತ್ತು ಅದು ಗಂಡಿನ ಅವಲಕ್ಷಣ ಎಂದು ಹೇಳುತ್ತಾರೆ. ಅವನು ಮನೆಯಲ್ಲಿ ಕೂತರೆ ಇಲ್ಲ ಸಲ್ಲದ ಕೆಟ್ಟ ಯೋಚನೆಗಳು ಮತ್ತು ಕೆಟ್ಟ ಚಟಗಳು ಬರುತ್ತವೆ ಹಾಗಾಗಿ ಗಂಡು ಕೂತು ಕೆಟ್ಟ ಎಂದು ಹೇಳುತ್ತಾರೆ. ಹಾಗೆಯೇ ಹೆಣ್ಣು ತಿರುಗಬಾರದು ಅವಳು ಕೆಟ್ಟವಳು ಎಂಬುದು ಸಮಾಜದ ನಂಬಿಕೆಯಾಗಿದೆ. ಒಂದು ವೇಳೆ ಅವಳು ತಿರಿಗಿದರೆ ಅದು ಅವಳ ಅಸಬ್ಯ ಲಕ್ಷಣ ಎಂದು ಸಮಾಜ ಅಭಿಪ್ರಾಯ ಪಡುತ್ತದೆ ಮತ್ತು ಸಮಾಜದ ದೃಷ್ಟಿಯಲ್ಲಿ ಅವಳು ಕೆಟ್ಟವಳು ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಹೆಣ್ಣು ತಿರುಗಿದೆ ಕೆಟ್ಟವಳು ಎಂದು ಹೇಗೆ ಸಮಾಜ ನಿರ್ಧಾರಿಸುತ್ತದೆ ಸಾಮಾಜಿಕವಾಗಿ ತೋಡಗಿಕೊಳ್ಳುವುದರಿಂದ ಅವಳು ಎಲ್ಲ ಜ್ಞಾನವನ್ನು ಪಡೆಯಬಹುದು. ಇದು ಆಗಿನ ಕಾಲಕ್ಕೆ ಸೀಮಿತ ಎಂದು ಹೇಳಬಹುದು ಈಗ ಈ ಗಾದೆ ಅನ್ವಯವಾಗುವುದು ಕಷ್ಟ ಎಂದು ಸಹ ಹೇಳಲು ಅವಕಾಶವಿದೆ.

'ಕಂಡದ್ದು ಮಿಂಡ್ರು ದೇವ್ವ ಅನ್ನೋರು'

ಈ ಗಾದೆಯು ಹೆಣ್ಣು ಮತ್ತು ಗಂಡಿಗೆ ಇಬ್ಬರಿಗೂ ಬಳಕೆಯಾಗುತ್ತದೆ. ನೋಡಿದ್ದು ಬೇಕು ಎಂಬ ಹಠ ಇದ್ದವರಿಗೂ ಕಂಡಿದ್ದು ಬೇಕು ಬೇಕು ನೋಡಿದ್ದಕ್ಕೆ ಎಂದು ಬೈಯುವಾಗ ಕಂಡಿದ್ದು ಮಿಂಡ್ರು ದೇವ್ವ ನೋಡು ಇದು ಎಂದು ಬೈಯುವುದನ್ನು

ನೋಡಬಹುದು. ಇಲ್ಲಿ ಹೆಣ್ಣಿಗೆ ಮತ್ತು ಗಂಡಿಗೆ ಬೈಯುವಾಗಲೂ ಮಿಂಡ್ರು ಎಂಬ ಪದ ಬಳಕೆಯಾಗುತ್ತದೆ. ಹಾಗಾಗಿ ಈ ಗಾದೆಯಲ್ಲಿ ಮಿಂಡ್ರು ಎಂಬ ಬೈಗುಳ ಮುಖ್ಯವಾಗುತ್ತದೆ. ಇಲ್ಲಿ ಗಮನಿಸಬೇಕಾದ ವಿಷಯ ಅಂದರೆ ಈ ಬೈಗುಳ ಪದ ಹೆಣ್ಣಿಗೆ ಅನ್ವಯವಾದಾಗ ಅವಳು ಬೇರೆಯವರ ಸಹವಾಸ ಮಾಡಿದ್ದಾಳೆ ಮತ್ತು ಅನೈತಿಕ ಸಂಬಂಧವುಳ್ಳವಳು ಎಂಬಾರ್ಥವನ್ನು ಸೂಚಿಸುತ್ತದೆ. ಹಾಗೆಯೇ ಗಂಡಿಗೆ ಅನ್ವಯವಾದಗ ಅವನು ಬೇರೆ ಹೆಣ್ಣಿನ ಜೋತೆ ಸಂಬಂಧ ಹೊಂದಿದ್ದವನು ಎಂಬಾರ್ಥದಲ್ಲಿ ಭಿನ್ನ ರೀತಿಯಲ್ಲಿ ಬಳಕೆಯಾಗುತ್ತದೆ. ಇಲ್ಲಿ ನಾವು ಲಿಂಗಭಿನ್ನತೆಯನ್ನು ಗುರುತಿಸಲು ಸಾಧ್ಯವಿದೆ.

೩.೫.೪. ಸಾಮಾನ್ಯವಾಗಿ ಎಲ್ಲರಿಗೂ ಸಂಬಂಧಿಸಿದ ಗಾದೆ ರೂಪದಲ್ಲಿರುವ ಬೈಗುಳಗಳು

ಸಾಮಾನ್ಯವಾಗಿ ಎಲ್ಲರಿಗೂ ಅನ್ವಯಿಸುವ ಗಾದೆ ರೂಪದಲ್ಲಿರುವ ಬೈಗುಳಗಳು ಇವೆ. ಈ ಗಾದೆ ರೂಪದಲ್ಲಿರುವ ಬೈಗುಳಗಳು ಸಾಮಾನ್ಯವಾಗಿ ಎಲ್ಲರಿಗೂ ಬುದ್ಧಿವಾದದ ಮಾತುಗಳನ್ನು ಹೇಳುವ ಮಾದರಿಗಳಲ್ಲಿ ರಚನೆಯಾಗಿವೆ. ಯಾರು ಎಷ್ಟೇ ಸಹಾಯ ಮಾಡಿದರು ಅವರ ಸಹವಾಸವೇ ಬೇಡ ಎಂಬ ಭಾವನೆ ಉಳ್ಳವರು ಹೇಗಿರುತ್ತಾರೆ ಎಂಬುವುದನ್ನು ಸಹ ಈ ಬೈಗುಳಗಳಲ್ಲಿ ನೋಡಬಹುದು. ಸಮಾಜದ ಬಗ್ಗೆ ಇರುವ ತೀವ್ರ ಕಳಕಳಿಯನ್ನು ಗಾದೆ ರೂಪದಲ್ಲಿರುವ ಬೈಗುಳಗಳು ಪ್ರಕಟಿಸುತ್ತವೆ ಮತ್ತು ಮನಸ್ಸಿನ ಒಳಗಿನ ಹುಳುಕನ್ನು, ಹೊರಗಿನ ವೈಭವದ ಆಡಂಬರವನ್ನು, ಮತ್ತೊಬ್ಬರ ಬದುಕಿನ ಮೇಲೆ ತಮ್ಮ ಬದುಕನ್ನು ಸಾಗಿಸಬೇಕೆನ್ನುವ ಜನರನ್ನು ಸಹ ಗಾದೆ ರೂಪದಲ್ಲಿರುವ ಬೈಗುಳಗಳಲ್ಲಿ ನಿರೂಪಿಸಿರುವುದನ್ನು ನೋಡಬಹುದು. ಸಾಮಾಜಿಕವಾಗಿ ಎಲ್ಲರಿಗೂ ಅನ್ವಯಾಗುವ ಗಾದೆಗಳಲ್ಲಿ ಗಂಡಸಿರಿಗೆ ಸಂಬಂಧಿಸಿದ ಗಾದೆಗಳೇ ಹೆಚ್ಚಾಗಿವೆ.

ಉದಾ : 'ಹೊಟ್ಟೆಗೆ ಹಿಟ್ಟಿರದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ'

ಈ ಗಾದೆಯು ಬಡತನ ಮತ್ತು ಸೊಕ್ಕಿನಿಂದ (ಸಿರಿತನದಿಂದ) ಮೆರೆಯುವವರನ್ನು ಕುರಿತು ಇರುವ ಗಾದೆ ಎಂದು ಹೇಳಬಹುದು. ಬಡವರು ಊಟಕ್ಕೆ ಅನ್ನ ಇಲ್ಲದೆ ಜಡೆಗೆ ಮಲ್ಲಿಗೆ ಹೂ ಇಟ್ಟುಕೊಂಡಾಗ ಅಥವಾ ವ್ಯಂಗ್ಯಾರ್ಥವಾಗಿ ಈ ಗಾದೆ ಹುಟ್ಟಿಕೊಂಡಿದೆ. ಹೆಚ್ಚು ಧಿಮಾಕ ಮಾಡುವ ಹೆಣ್ಣು ಮತ್ತು ಗಂಡಿಗೆ ಈ ಗಾದೆಯನ್ನು ಬಳಕೆ ಮಾಡುತ್ತಾರೆ. ತಿನ್ನೋಕೆ ಕೂಳು ಇಲ್ಲ ಎಷ್ಟು ಧಿಮಾಕು ಮಾಡತ್ತಾರೆ ಎನ್ನುವ ನೆಲೆಯಲ್ಲಿ ಈ ಗಾದೆ ಹುಟ್ಟಿಕೊಂಡಿದೆ.

ಕಚ್ಚೋ ನಾಯಿ ಬೊಗಳಲ್ಲಾ, ಬೊಗಳೋ ನಾಯಿ ಕಚ್ಚಲ್ಲ.

ಎಷ್ಟು ಜೀವಕ್ಕೆ ಜೀವ ಇದ್ದರೂ ಮೀನಿನ ಪಟ್ಟಿಯಲ್ಲಿ ಕೈ ಇಡಬೇಡ ಅನತೀಯಾ.

ಮಾಡ್ಕೊಂಡು ತಿನ್ನು ಅಂದ್ರೆ ತಿರಕ್ಕೊಂಡು ತಿಂತೀನಿ ಅಂದನಂತೆ.

ಹರೇದಾಗ ಇಲ್ಲದ್ದು ವಯಸ್ಸಾದಾಗ ಬಂದಂಗೆ ಕುಣಿದಾಡೋದು.

ಬೈದು ಹೇಳಿದವನು ಬುದ್ಧಿ ಹೇಳಿದ.

'ಕಚ್ಚೋ ನಾಯಿ ಬೊಗಳಲ್ಲಾ, ಬೊಗಳೋ ನಾಯಿ ಕಚ್ಚಲ್ಲ'

ಈ ಗಾದೆಯು ಸಾಮಾನ್ಯವಾಗಿ ಎಲ್ಲರಿಗೂ ಅನ್ವಯವಾಗುವಂತಹ ಗಾದೆಯಾಗಿದೆ. ಈ ಗಾದೆಯ ಅರ್ಥ ಅವರು ಸುಮ್ಮನೆ ಬೋಗಳೋದು ಅಷ್ಟೆ ಅವರ ಕೈಯಿಂದ ಏನು ಮಾಡೋಕೆ ಆಗಲ್ಲ ಎಂದು ಹೇಳುತ್ತಾರೆ. ಅಂದರೆ ಜಗಳವಾಡುವ ಸಂದರ್ಭದಲ್ಲಿ ಏ ಸೂಳೆಮಗ ನಿನ್ ಕಡಿದು ಬಿಡತ್ತಿನಿ, ನಿನ್ ಹುಟ್ಟಿಲ್ಲ ಅನಿಸಿಬಿಡತ್ತಿನಿ ಎಂದು ಬೈಯುವಾಗ ಅದಕ್ಕೆ ಮತ್ತೊಬ್ಬ ಪ್ರತಿಕ್ರೀಯಿಸುತ್ತ ಹೋಗಲೇ ಕಂಡಿನಿ ನಿನ್ ನಿನ್ ಕೈಲೆ ಏನು ಆಗಲ್ಲ ಸುಮ್ಮನೆ ಬೋಗಳೋದು ಅಷ್ಟೆ ಎಂದು ಬೈಯುವುದನ್ನು ನೋಡಬಹುದು. ಹೆಣ್ಣುಮಕ್ಕಳು ಬೈಯುವಾಗಲು ಈ ಗಾದೆಯನ್ನು ಬಳಕೆ ಮಾಡುತ್ತಾರೆ. ಹೋಗಲೇ ಕಂತ್ರಿಸೂಳೆ ಸುಮ್ಮನೆ ಬೋಗಳಿತ್ತಿಯಾ ಅಷ್ಟೆ ಅದು ಏನೋ ಅಂತಾರಾಲ್ಲ ಕಚ್ಚೊ ನಾಯಿ ಬೋಗಳಲ್ಲ, ಬೊಗಳೋ ನಾಯಿ ಕಚ್ಚಲ್ಲ ಅಂತ ಹಾಂಗೆ ನೀನು ಎಂದು ಬಳಕೆಮಾಡುತ್ತಾರೆ. ಮಕ್ಕಳು ಸಹ ಆಟವಾಡುವಾಗ ಜಗಳ ಮಾಡುವ ಸಂದರ್ಭದಲ್ಲಿ ಈ ಗಾದೆಯನ್ನು ಬಳಕೆ ಮಾಡುತ್ತಾರೆ. ಹೀಗೆ ಈ ಗಾದೆ ಎಲ್ಲರಿಗೂ ಅನ್ವಯವಾಗುತ್ತದೆ.

'ಬೈದು ಹೇಳಿದವನು ಬುದ್ಧಿ ಹೇಳಿದ'

ಈ ಗಾದೆಯು ಸಾಮಾನ್ಯವಾಗಿ ಎಲ್ಲರಿಗೂ ಬಳಕೆ ಮಾಡುತ್ತಾರೆ. ದೊಡ್ಡವರು ಚಿಕ್ಕವರಿಗೂ ಹೆಂಗಸರಿಗೆ, ಗಂಡಸರಿಗೆ, ಮಕ್ಕಳಿಗೆ ಅನ್ವಯವಾಗುವಂತ ಗಾದೆಯಾಗಿದೆ. ಈ ಗಾದೆಯ ಅರ್ಥ ಬೈಯುವವರು ನಮಗೆ ಒಳ್ಳೆಯದಾಗಲಿ ಎಂಬ ಉದ್ದೇಶವನ್ನು ಹೊಂದಿರುತ್ತಾರೆ. ಯಾರೇ ತಪ್ಪು ಮಾಡಲಿ ಅವರಿಗೆ ಯಾರೇ ಬೈದರೂ ಅದು ಒಳ್ಳೆದಕ್ಕೆ ಹೊರತು ಕೆಟ್ಟದಕ್ಕೆ ಅಲ್ಲ ಎಂಬುವುದನ್ನು ಬೈಯಿಸಕೊಳ್ಳುವವರು ತಿಳಿದುಕೊಳ್ಳಬೇಕು ಅಷ್ಟೇ ಎಂಬ ಉದ್ದೇಶವನ್ನು ಸಹ ಹೊಂದಿದೆ. ಬೈದರೆ ಅವರು ನಮಗೆ ಬುದ್ಧಿ ಹೇಳುತ್ತಾರೆ ಎಂಬುವುದನ್ನು ತಿಳಿಯಬೇಕಾಗುತ್ತದೆ. ಆಗ ಅವರು ನಮ್ಮ ಕ್ಷೇಮವನ್ನು ಬಯಸುತ್ತಾರೆ ಎಂದು ಅರ್ಥವಾಗುತ್ತದೆ. ಇದು ನಕಾರಾತ್ಮಕವಾಗಿ ಅರ್ಥವಾಗುದಕ್ಕಿಂತ ಸಕಾರಾತ್ಮಕವಾಗಿ ಹೆಚ್ಚು ಅರ್ಥವಾಗುತ್ತದೆ.

ಮೇಲಿನ ಈ ಎಲ್ಲಾ ಗಾದೆ ರೂಪದಲ್ಲಿರುವ ಬೈಗುಳಗಳಲ್ಲಿ ಗಂಡು ಮತ್ತು ಹೆಣ್ಣಿನ ಭಿನ್ನತೆಯನ್ನು ಹೇಗೆ ನಿರೂಪಿತವಾಗಿದೆ ಎಂಬುವುದನ್ನು ತಿಳಿಯಬಹುದು. ಸಮಾಜದಲ್ಲಿ ಅವರು ಹೇಗೆ ಇರಬೇಕು ಮತ್ತು ಸಮಾಜದಲ್ಲಿ ಅವರ ಹೇಗೆ ಇದ್ದರೆ ಅವರ ವ್ಯಕ್ತಿತ್ವಕ್ಕೆ ಬೆಲೆ ಇರುತ್ತದೆ ಎಂಬುವುದನ್ನು ಈ ಎಲ್ಲಾ ಗಾದೆ ರೂಪದಲ್ಲಿರುವ ಬೈಗುಳಗಳಲ್ಲಿ ಕಾಣಬಹುದು ಮತ್ತು ಯಾವುದೇ ಗಾದೆ ಗಂಡಿಗೆ ಬಳಕೆಯಾಗಲಿ, ಹೆಣ್ಣಿಗೆ ಬಳಕೆಯಾಗಲಿ

ಅದು ಹೆಣ್ಣಿನ ಮೂಲಕವೇ ಹೆಚ್ಚು ಬಳಕೆಯಾಗುವುದನ್ನು ಗುರುತಿಸಹುದು. ಹಾಗೆಯೇ ಬೈಯುವುದು ಸಹ ಅವರ ಒಳ್ಳೆದಕ್ಕೆ, ಬೈದರೆ ಅವರಿಗೆ ಬುದ್ಧಿ ಬರುತ್ತದೆ ಮತ್ತು ತಪ್ಪು ದಾರಿಗೆ ಹೋಗುವವರನ್ನು ಸರಿ ದಾರಿಗೆ ಹೇಗೆ ತರಬೇಕು ಎಂಬುವುದನ್ನು ಬೈಗುಳದ ಮೂಲಕ ಕೆಲವು ಗಾದೆಗಳಲ್ಲಿ ವ್ಯಕ್ತವಾಗಿರುವುದನ್ನು ನಾವು ಗಮನಿಸಬಹುದು.

೩.೬.ನುಡಿಗಟ್ಟು ರೂಪದ ಬೈಗುಳಗಳು:

ಭಾಷೆಯ ಬೆಳವಣಿಗೆಗೆ ನೆರವಾಗುವ ಮುಖ್ಯವಾದ ಅಂಶಗಳಲ್ಲಿ ನುಡಿಗಟ್ಟುಗಳು ಸೇರುತ್ತವೆ. ನುಡಿಗಟ್ಟುಗಳು ಗಾದೆಗಳಂತೆ ವಾಕ್ಯರೂಪದಲ್ಲಿ ಇರಬೇಕಾದ ಅವಶ್ಯಕತೆ ಇಲ್ಲ. ಇವು ಕೇವಲ ಪದಬಂಧಗಳಾಗಿಯೂ ಇರಬಹುದು. ಪದಗಳಿಗಿರುವ ಸಹಜವಾದ ಅರ್ಥವನ್ನು ಮರೆಮಾಚಿದ ವಿಲಕ್ಷಣವಾದ ಅರ್ಥವನ್ನು ನುಡಿಗಟ್ಟುಗಳು ಕೋಡುತ್ತವೆ. ಭಾಷೆಯ ಹಲವಾರು ರೀತಿಯ ಅಭಿವ್ಯಕ್ತಿಗಳನ್ನು ನುಡಿಗಟ್ಟುಗಳಲ್ಲಿ ಕಾಣುತ್ತೇವೆ. ನುಡಿಗಟ್ಟುಗಳನ್ನು ಪಡೆನುಡಿ, ಜೋಡಣೆ, ಒಕ್ಕಣಿ, ನುಡಿವಳಿ ಮೊದಲಾದ ಹೆಸರುಗಳಿಂದ ಗುರುತಿಸಲಾಗುವುದು. ಗಾದೆಗಳಂತೆ ಬೈಗುಳಗಳಲ್ಲಿ ನುಡಿಗಟ್ಟುಗಳನ್ನು ಕಾಣುತ್ತೇವೆ. ಇವುಗಳನ್ನು ಬಳಸಿಕೊಂಡು ಭಾಷೆ ಸಮೃದ್ಧವಾಗುತ್ತದೆ. ಜನಸಾಮಾನ್ಯರು ನುಡಿಗಳನ್ನು ತಮ್ಮ ದಿನನಿತ್ಯದ ಆಡುಭಾಷೆಯಲ್ಲಿ ಬಳಸಿಯೇ ಬಳಸುತ್ತಾರೆ. ಗಾದೆಯ ಮಾತುಗಳು ಆಯಾ ಜನಾಂಗದ, ಸಮಾಜದ ನಾಡಿನ ಸಂಸ್ಕೃತಿಯ ಪ್ರತೀಕಗಳಾಗಿರುತ್ತವೆ. ಈ ನುಡಿಗಟ್ಟುಗಳಲ್ಲಿ ಅಂದರೆ ದ್ರೋಹ, ವಂಚನೆ, ಮೋಸ ಮತ್ತು ಯಾರು ಎಷ್ಟೇ ಸಹಾಯ ಮಾಡಿದರು ಅವರನ್ನು ಲೆಕ್ಕಿಸದೇ ಇದ್ದಾಗ ಬರುವ ನುಡಿಗಟ್ಟುಗಳಲ್ಲಿ ಬೈಗುಳಗಳನ್ನು ಕಾಣಬಹುದು.

೩.೫.೬.ನುಡಿಗಟ್ಟು ರೂಪದ ಬೈಗುಳಗಳು:–

ಉದಾ:–

ಅಗಣಿಗೂಟ ಜಡಿ

ನಿಜವಾಗಿ ಅಪ್ಪನಿಗೆ ಹುಟ್ಟಿದ್ರೆ ಮಾತಾಡು

ಅಂತರಪಿಶಾಚಿಯಾಗು

ಉಚ್ಚೇಲಿ ಮೀನು ಇಡಿ

ಉಂಡ ಮನೆ ಜಂತೆ ಎಣಿಸು

ಕುಲಗೆಟ್ಟು ಹೋಗು

ಕುಂಡಿ ತಿರುವಿಕೊಂಡು ಹೋಗು

ಕೊಂಗನಂತಾಡು

ಜನ್ಮ ಜಾಲಾಡು

ಜೋಳಿಗೆ ಹಿಡಿದುಕೊಂಡು ಹೋಗು

ಗೂಳಿಯಂತೆ ತಿರುಗು

ಗಂಡನ್ನ ತಿಂದುಕೊಳ್ಳು

ತಾರತಿಗಿಡಿಮಾಡ

ಕಂತ್ರಿಬುದ್ಧಿ ತೋರಿಸು

ಗ್ರಾಚಾರ ಬಿಡಿಸು

ಅಗಣೆಗೂಟ ಜಡಿ:

ಈ ನುಡಿಗಟ್ಟಿನ ಬೈಗುಳವು ದ್ರೋಹ ಮಾಡಿದ ವ್ಯಕ್ತಿಗೆ ಬೈಯುವ ನುಡಿಗಟ್ಟಿನ ಬೈಗುಳವಾಗಿದೆ. ಈ ನುಡಿಗಟ್ಟಿನ ಬೈಗುಳದ ಅರ್ಥವೇನೆಂದರೆ ಅಯ್ಯೋ ಪಾಪ ಅಂತ ಸಹಾಯ ಮಾಡಿದರೆ ನನಗೆ ಅಗಣೆಗೂಟ ಜಡಿದರು ಎಂಬುವುದಾಗಿದೆ. 'ಅಗಣಿ' ಪದದ ಅರ್ಥ 'ಅಗುಳಿ' ಬಾಗಿಲನ್ನು ತೆಗೆಯಲಾಗದಂತೆ ತಡೆಯುವ ಅಡ್ಡ ಮರ ಅಥವಾ ಲೋಹದ ಸಾಧನ. 'ಅಗಣಿ ಮನೆಯನ್ನು ಹೊಕ್ಕು ಅಗಣಿ ಹಾಕಿಕೊಂಡು ಬಿಟ್ಟಳು'. (ಕನ್ನಡ ಜನಪದ ಕೋಶ ಪು.೧೨,೧೩) ಈ ನುಡಿಗಟ್ಟಿನಲ್ಲಿ ಗಮನಿಸಬೇಕಾದ ಅಂಶ ಈ ನುಡಿಗಟ್ಟನ್ನು ಹೆಣ್ಣು ಮತ್ತು ಗಂಡಿಗೆ ಇಬ್ಬರಿಗೂ ಬಳಸುತ್ತಾರೆ ಹಾಗೂ 'ಅಗಣಿ' ಎಂಬ ಪದವನ್ನು ಬಳಸಿ ಹೆಣ್ಣು ಮಕ್ಕಳಿಗೆ ಬೈಯುತ್ತಾರೆ. ಇನ್ನೂ ನುಡಿಗಟ್ಟಿನಲ್ಲಿ ಕಾಣುವ ಮತ್ತೊಂದು ಅಂಶ 'ಗೂಟ' ಎಂಬ ಪದ. ಇದು ಒಂದು ರೀತಿಯಲ್ಲಿ ವಸ್ತುವನ್ನು ಆಧಾರಿಸಿ ಇರುವಂತ ನುಡಿಗಟ್ಟಿನ ಬೈಗುಳವಾಗಿದೆ. ಹೆಣ್ಣು ಮಕ್ಕಳಿಗೆ ಬೈಯುವ ಬೈಗುಳ ಮತ್ತು ವಸ್ತುವನ್ನು ಆಧಾರಿಸಿ ಇರುವಂತಹ ಬೈಯುವ ಬೈಗುಳ ಎರಡು ಒಟ್ಟಿಗೆ ನುಡಿಗಟ್ಟಿನ ಬೈಗುಳಗಳಲ್ಲಿ ಬಳಕೆಯಾಗಿರುವುದನ್ನು ಕಾಣಬಹುದು.

ನಿಜವಾಗಿ ಅಪ್ಪನಿಗೆ ಹುಟ್ಟಿದ್ರೆ ಮಾತಾಡು:

ಸುಳ್ಳು ಹೇಳಬೇಡ, ಒಳ್ಳೆಯ ಮಾತುಗಳನ್ನು ಆಡು, ತಪ್ಪು ಮಾಡಿದರೆ ಅದನ್ನು ಒಪ್ಪಿಕೊಂಡು ಬಿಡು ಎಂಬ ಹಲವಾರು ಸಂದರ್ಭದಲ್ಲಿ ಈ ನುಡಿಗಟ್ಟಿನ ಬೈಗುಳವನ್ನು ಕಾಣಬಹುದು. ಈ ರೀತಿಯ ನುಡಿಗಟ್ಟು ಗಂಡಸರಿಗೆ ಮಾತ್ರ ಬಳಕೆಯಾಗಲು ಕಾರಣ, ಪುರುಷರನ್ನು ಮಾನಸಿಕವಾಗಿ ಘಾಸಿಗೊಳಿಸಲು ಮತ್ತು ಅವನನ್ನು ಮತ್ತಷ್ಟು ಸಿಟ್ಟಿಗೇಳಿಸಲು ಅವನಿಗೆ ಈ ರೀತಿಯ ನುಡಿಗಟ್ಟಿನ ಬೈಗುಳವನ್ನು ಬಳಸುವುದನ್ನು ಕಾಣಬಹುದು. ಈ ನುಡಿಗಟ್ಟಿನಲ್ಲಿ ತಾಯಿಯ ಅನೈತಿಕ ಸಂಬಂಧವನ್ನು ಎತ್ತಿ ತೋರಿಸುತ್ತದೆ. ಪುರುಷರಿಗೆ ಬೈಯುವಾಗ ಅವನು ತಪ್ಪು ಮಾಡಿದರೂ, ಮಾಡದೆ ಇದ್ದರೂ ಅವನ ತಾಯಿಯನ್ನು ಬೈಯುವುದು ಒಂದು ರೂಢಿಗತವಾಗಿ ಸಮಾಜದಲ್ಲಿ ಬಳಕೆಯಲ್ಲಿದೆ. ಅವನ ನಡುವಳಿಕೆಗೆ

ಹೆಣ್ಣೇ ಕಾರಣ ಅದು ಹೇಗೆ? ಎಂಬ ಪ್ರಶೆ ಕಾಡುತ್ತದೆ. ಹೀಗೆ ಪುರುಷ ಪ್ರಧಾನ ವ್ಯವಸ್ಥೆ ಇದನ್ನು ನಿರೂಪಿಸಿದೆ ಎಂದು ಹೇಳಬಹುದು. ಈ ನುಡಿಗಟ್ಟಿನ ಬಳಕೆಯನ್ನು ನೋಡುವುದಾದರೆ

ನಿಮ್ಮ ಅಪ್ಪನಿಗೆ ಹುಟ್ಟಿದ್ರೆ ಸುಳ್ಳು ಹೇಳಬೇಡ ನಿಜ ಹೇಳು

ನಿಮ್ಮ ಅಪ್ಪನಿಗೆ ಹುಟ್ಟಿದ್ರೆ ಸರಿಯಾಗಿ ಹೇಳು

ನಿಮ್ಮ ಅಪ್ಪನಿಗೆ ಹುಟ್ಟಿದ್ರೆ ಬಾರಲೇ.

ಅಂತರಪಿಶಾಚಿಯಾಗು:

ಈ ನುಡಿಗಟ್ಟಿನ ಬೈಗುಳವೂ ಎಲ್ಲರಿಗೂ ಅನ್ವಯವಾಗುವಂತಹ ನುಡಿಗಟ್ಟಾಗಿದೆ. ಶವಸಂಸ್ಕಾರ ಮಾಡದಿದ್ದರೆ ಆತ್ಮ ತನ್ನ ನೆಲೆಯನ್ನು ಸೇರದೆ ಮಧ್ಯಂತರದಲ್ಲಿ ಪರದಾಡುತ್ತದೆ ಎಂಬ ನಂಬಿಕೆ ಈ ನುಡಿಗಟ್ಟಿನ ಅರ್ಥವಾಗಿದೆ. ಗಂಡು, ಹೆಣ್ಣು, ಮಕ್ಕಳಿಗೆ ಎಲ್ಲರಿಗೂ ಇದನ್ನು ಬೈಯುವಾಗ ಬಳಸುವ ನುಡಿಗಟ್ಟಾಗಿದೆ ಆದರೆ ಸಂದರ್ಭಗಳು ಬೇರೆಯಾಗಿರುತ್ತೆ ಅಷ್ಟೇ. ಆದರೆ ಇದನ್ನು ಹೆಚ್ಚು ಹೆಣ್ಣು ಮಕ್ಕಳಿಗೆ ಬಳಸುತ್ತಾರೆ.

ಉದಾ: ಗಂಡ ಹೆಂಡತಿ ಜಗಳವಾಡಿದಾಗ ಅವಳಿಗೆ ತವರು ಇಲ್ಲದೆ ಇದ್ದಾಗ ಆ ಹೆಣ್ಣು ಅತ್ತ ತವರು ಮನೆಯು ಇಲ್ಲ ಇತ ಗಂಡನ ಮನೆಯು ಇಲ್ಲ ನಡುವೆ ಅಂತರ ಪಿಶಾಚಿಯಾಗಿದ್ದಾಳೆ ಎಂಬ ಸಂದರ್ಭದಲ್ಲಿ ಈ ಬೈಗುಳದ ನುಡಿಗಟ್ಟಿನ ಬಳಕೆಯನ್ನು ಕಾಣಬಹುದು.

ಹೆಣ್ಣನ್ನು ಬೈಯುವಾಗ ಈ ಬೈಗುಳದ ನುಡಿಗಟ್ಟನ್ನು ಹೆಚ್ಚು ಬಳಸುತ್ತಾರೆ. ಹೆಣ್ಣಿಗೆ ಮಾತ್ರ ಅತೀ ಆಸೆ ಇರುತ್ತದೆ ಎಂಬುದು ಸಮಾಜದ ಕಲ್ಪನೆ. 'ಆಸೆಯೇ ದುಖಃಕ್ಕೆ ಮೂಲ' ಎಂಬ ಗಾದೆ ಇದಯೇ ಹೊರತು 'ಹೆಣ್ಣಿಗೆ ಆಸೆಯೇ ದುಖಃಕ್ಕೆ ಮೂಲ' ಎಂದು ಇಲ್ಲ. ಈ ಗಾದೆ ಕೇವಲ ಹೆಣ್ಣಿಗೆ ಮಾತ್ರ ಅನ್ವಯವಾಗುವುದಿಲ್ಲ. ಅದು ಎಲ್ಲರಿಗೂ ಅನ್ವಯವಾಗುತ್ತದೆ. ಆಸೆ ಎಂಬುದು ಜೀವನದ ಒಂದು ಭಾಗ. ಅದು ಹೆಣ್ಣಿನಲ್ಲಿ ಇರಬಹುದು, ಗಂಡಿನಲ್ಲಿರಬಹುದು ಇಬ್ಬರಲ್ಲೂ ಇರುವುದು ಸಹಜ. ಹೆಂಡತಿ ಪ್ರೀತಿಯಿಂದ ಗಂಡನಿಗೆ ಒಡವೆ ಕೊಡಸಿ ಎಂದು ಕೇಳಿದಾಗ ಗಂಡ ಕೊಡಿಸದೆ ಇದ್ದರೆ 'ನೀನು ಅಂತರಪಿಶಾಚಿ ಇದಾಂಗೆ ಸುಮ್ಮನೆ ಬೀಡತ್ತಿಯಾ ನನ್ನ ಕೊಡಸದೇ ಇದ್ದರೆ' ಎನ್ನುವ ಸಂದರ್ಭದಲ್ಲಿ ಈ ಪದ ಬಳಕೆಯಾಗುವುದನ್ನು ನೋಡಬಹುದು. ಉದಾ: 'ಕೋಡಿಸದೆ ಇದ್ದರೆ ನೀನು ಸತ್ತರೂ ಅಂತರಪಿಶಾಚಿಯಾಗಿ ನನ್ನ ಕಾಡತ್ತೀಯಾ ನೋಡು' ಎಂದು ಬೈಯುವುದನ್ನು ನೋಡಬಹುದು. ಅಂದರೆ ಅವಳಿಗೆ ಗಂಡನ ಹತ್ತಿರ ಏನೂ ಕೇಳುವ ಅಧಿಕಾರ ಇರುವುದಿಲ್ಲ, ಕೇಳಿದ ತಕ್ಷಣ ಅವಳಿಗೆ ಅತೀ ಆಸೆ ಇದೆ ಎಂದು ಸಮಾಜ ಅವಳನ್ನು ದೂಷಿಸುತ್ತದೆ.

ಉಚ್ಚೇಲಿ ಮೀನು ಇಡಿ:

ವ್ಯಕ್ತಿ ದುರಾಸೆಯಿಂದ ವ್ಯರ್ಥ ಪ್ರಯತ್ನ ಮಾಡಿದಾಗ ಈ ರೀತಿಯ ಬೈಗುಳದ ನುಡಿಗಟ್ಟನ್ನು ಬಳಸುತ್ತಾರೆ. ಕೈಯಿಂದ ಕಾಸು ಬಿಚ್ಚುವುದಿಲ್ಲ ಆದರೆ ಆಸೆ ತೀರಬೇಕು ಎಂಬ ದುರಾಸೆ ಪಡುವ ವ್ಯಕ್ತಿಗೆ ತಾನು ಮಾಡುವ ಪ್ರಯತ್ನ ವ್ಯರ್ಥವಾಗುತ್ತದೆ ಎಂಬ ಸಂದರ್ಭದಲ್ಲಿ ಈ ಪದವನ್ನು ಬಳಕೆ ಮಾಡುತ್ತಾರೆ. ಹಾಗೆಯೇ ಜೀಪುಣತನವನ್ನು ಈ ನುಡಿಗಟ್ಟಿನಲ್ಲಿ ಕಾಣಬಹುದು. ಅಂದರೆ ಹೆಣ್ಣಾಗಲೀ ಗಂಡಾಲೀ ತರಕಾರಿ ಅಥವಾ ಇನ್ನೂ ಯಾವುದೇ ವಸ್ತುವನ್ನು ಕೊಂಡುಕೊಳ್ಳುವಾಗ ಜೀಪುಣತನ ಮಾಡುವುದು ಸಹಜ ಅಂತಹ ಸಂದರ್ಭದಲ್ಲಿ ಈ ರೀತಿಯ ಬೈಗುಳವನ್ನು ಬಳಸುತ್ತಾರೆ (ಅಂದರೆ ಸ್ವಲ್ಪ ಹಣದಲ್ಲಿ ತುಂಬಾ ತರಕಾರಿ ಅಥವಾ ವಸ್ತುಗಳು ಬರಬೇಕು ಎಂಬುದು ಅವರ ಬಯಕೆಯಾಗಿರುತ್ತದೆ). ಇತಂಹ ಸಂದರ್ಭದಲ್ಲಿ ಉಚ್ಚೇಲಿ ಮೀನು ಇಡಿಯೋಕೆ ಹೋಗತ್ತಾರೆ. ಆದರೆ ಈ ಬೈಗುಳದ ನುಡಿಗಟ್ಟು ಹೆಚ್ಚು ಬಳಕೆಯಾಗುವುದು ಹೆಣ್ಣಿಗೆ ಮಾತ್ರ.

ಉಂಡ ಮನೆ ಜಂತೆ ಎಣಿಸು:

ಈ ನುಡಿಗಟ್ಟು ಗಾದೆಗಳಲ್ಲಿರುವ ಬೈಗುಳದ ನುಡಿಗಟ್ಟು ಆಗಿದೆ. ಅಂದರೆ ತಿಂದ ಮನೆಗೆ ದ್ರೋಹ ಬಗೆಯೋದು ಮತ್ತು ಉಪಕಾರ ಇಲ್ಲದ ವ್ಯಕ್ತಿಯನ್ನು ಈ ರೀತಿಯಲ್ಲಿ ಬೈಯುವುದನ್ನು ಕಾಣಬಹುದು. ನೀನು ತಿಂದ ಮನೆಗೆ ಎಂಡೆ ಹೋಗಿಯೋನು/ಹೋಗಿಯೋಳು. ಅವಳಿಗೆ ಈ ರೀತಿಯ ಬುದ್ಧಿ ಕಡಿಮೆ ಇರುತ್ತದೆ. ಇನ್ನೊಬ್ಬರಿಗೆ ದ್ರೋಹ ಮಾಡುವ ಉದ್ದೇಶ ಅವಳಲ್ಲಿ ಇರುವುದು ಕಡಿಮೆ. ಸ್ವಲ್ಪ ಸಹಾಯ ಮಾಡಿದರೂ ಅವರ ಋಣ ನನ್ನ ಮೇಲೆ ಇದೆ ಎಂಬ ಭಾವನೆ ಇರುತ್ತದೆಯೇ ಹೊರತು ಅವಳಿಗೆ ಮೋಸ ಮಾಡುವ ಉದ್ದೇಶ ಇರುವುದಿಲ್ಲ. ಈ ರೀತಿ ಇರುವಾಗ ಈ ಬೈಗುಳದ ನುಡಿಗಟ್ಟು ಅವಳಿಗೆ ಹೋಲಿಸಿವುದು ತಪ್ಪು ಎಂದು ಹೇಳಬಹುದು. ಈ ಗುಣ ಗಂಡಸರಲ್ಲಿ ಹೆಚ್ಚು ಕಾಣಬಹುದು.

ಉದಾ:–ಸಂಬಂಧಿಕರ ಮನೆಯಲ್ಲಿ ಅಥವಾ ಹೆಂಡತಿಯ ತವರು ಮನೆಯಲ್ಲಿ ಎಷ್ಟೂ ತಿಂದರೂ ನಿನ್ನ ಅಪ್ಪನ ಮನೆಯಲ್ಲಿ ಏನೂ ಮಾಡಿ ಹಾಕಿದರೂ ಅಂತ ಧಿಮಾಕ ಮಾಡತ್ತೀಯಾ ಬೀಡು ಎಂದು ಹೆಂಡತಿಗೆ ಗಂಡ ಬೈಯುವುದನ್ನು ಕಾಣಬಹುದು. ಉಂಡು ಮನೆಗೆ ಜಂತೆ ಎಣಿಸೋನು ನೀನು ಎಂದು ಈ ರೀತಿಯ ಬೈಗುಳದ ನುಡಿಗಟ್ಟು ಗಂಡಸರಿಗೆ ಹೆಚ್ಚು ಅನ್ವಯವಾಗುತ್ತದೆ ಎಂದು ಹೇಳಬಹುದು. ಇನ್ನೂ ಹಲವಾರು ರೀತಿಯ ಬೈಗುಳವನ್ನು ಈ ನುಡಿಗಟ್ಟಿನ ರೂಪದಲ್ಲಿ ಕಾಣಬಹುದು. ಎಷ್ಟೇ ತಿಂದರೂ ನೀನು ತಿಂದಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ರೀತಿಯ ನುಡಿಗಟ್ಟನ್ನು ಬಳಸುವುದನ್ನು ಕಾಣಬಹುದು.

ಕುಲಗೆಟ್ಟು ಹೋಗು:

ಈ ನುಡಿಗಟ್ಟು ಹೆಣ್ಣಿಗೆ ಬಳಸುವುದನ್ನು ನೋಡಬಹುದು. ಹೆಣ್ಣು ಹೆಚ್ಚು ತಿರುಗಾಡಿದಾಗ ಹೆಂಗಸು ಕುಲಗೆಟ್ಟು ಹೋಗಿಬಿಟ್ಟಳು ಬೀಡು ಎಂದು ಬೈಯುತ್ತಾರೆ. ಸಮಾಜದಲ್ಲಿ ಇರುವ ಜಾತಿಗಳಲ್ಲಿ ಆಯಾ-ಆಯಾ ಜಾತಿಯ ಹೆಣ್ಣು ಮಕ್ಕಳು ಹೀಗೆ ಇರಬೇಕು ಎಂದು ಇದೆ. ಈ ನುಡಿಗಟ್ಟು ಮೇಲು ಜಾತಿ, ಕೀಳು ಜಾತಿ ಉತ್ತಮ ಕುಲ ಅಥವಾ ಅಧಮ ಕುಲ ಎನ್ನದೆ ಬೈಯುವ ನುಡಿಗಟ್ಟಾಗಿದೆ ಎಂದು ಹೇಳಬಹುದು.

ಈ ನುಡಿಗಟ್ಟು ಬಳಕೆಯಲ್ಲಿರುವುದನ್ನು ನೋಡುವುದಾದರೆ,

ಉದಾ: ಹೆಂಗಸು ಕುಲಗೆಟ್ಟು ಹೋಗಿಬಿಟ್ಟೀಯಾ ಬೀಡು.

ಆ ಹೆಂಗಸು ಕುಲಗೆಟ್ಟು ಹೋಗಿಬಿಟ್ಟಳಾ.

ಕುಲಗೆಟ್ಟಿದ ಹೆಂಗಸಿನ ಬಗ್ಗೆ ಏನು ಮಾತಡಾತ್ತೀಯಾ.

ನೀನು ಕುಲ ಗೆಟ್ಟು ಹೋಗುತ್ತೀಯಾ

ಸಂದರ್ಭವನ್ನು ಗಮನಿಸುವುದಾದರೆ ಹೆಣ್ಣು ಮನೆಯಲ್ಲಿ ಹೇಳಿದ ಮಾತನ್ನೇ ಸರಿಯಾಗಿ ಕೇಳಲ್ಲ ಇನ್ನೂ ನಮ್ಮ ಮಾತು ಕೇಳತಾಳಾ ಆ ಹೆಂಗಸು ಕುಲಗೆಟ್ಟು ಹೋಗಿಟಾಳ ಎಂದು ಹೇಳುವ ಸಂದರ್ಭದಲ್ಲಿ ಈ ಪದವನ್ನು ಬಳಕೆ ಮಾಡುವುದನ್ನು ನೋಡಬಹುದು.

ಸಮಾಜದಲ್ಲಿ ಹೆಣ್ಣು ತಮ್ಮ ಜಾತಿಯ ಗಂಡನ್ನೇ ಮದುವೆ ಮಾಡಿಕೊಳ್ಳಬೇಕು ಎಂಬ ಪದ್ಧತಿ ತಲೆ ತಲಾಂತರದಿಂದ ರೂಢಿಗತವಾಗಿ ಬೆಳೆದುಕೊಂಡು ಬಂದಿದೆ. ಒಂದು ವೇಳೆ ಅವಳು ಬೇರೆ ಜಾತಿಯ ಗಂಡನ್ನು ಮದುವೆ ಆದರೆ ಕುಲತಪ್ಪಿದ ಹೆಂಗಸು ಬೀಡು ಅವಳು ಬೇರೆ ಜಾತಿಯ ಹುಡುಗನನ್ನ ಮದುವೆ ಆಗ್ಯಾಳ ಎಂದು ಕುಲ ತಪ್ಪಿದ, ಕುಲಗೆಟ್ಟ ಹೆಂಗಸು ಎಂದು ಬೈಯುವ ಸಂದರ್ಭವನ್ನು ಕಾಣಬಹುದು. ಇದು ಈಗೀನ ಸಂದರ್ಭದಲ್ಲಿ ಅನ್ವಯವಾಗುದಿಲ್ಲ. ಅವಳ ಇಚ್ಛೆಯಂತೆ ಮದುವೆ ಆಗುವ ಅವಕಾಶಗಳು ಇವೆ. ಆದರೆ ಕೆಲವು ಜಾತಿಗಳು ಇಂತಂಹ ಪದ್ದತಿಯನ್ನು ಇಂದಿಗೂ ಒಪ್ಪಿಕೊಳ್ಳುವುದಿಲ್ಲ. ಮತ್ತು ಅಂತಹವರನ್ನು ತಮ್ಮ ಮನೆಯಿಂದ ಮತ್ತೆ ತಮ್ಮ ಸಮುದಾಯ ಅಥಾವ ಜಾತಿಯಿಂದ ದೂರ ಇಡುತ್ತಾರೆ.

ಕುಂಡಿ ತಿರುವಿಕೊಂಡು ಹೋಗು:

ಈ ನುಡಿಗಟ್ಟನ್ನು ತಮಾಷೆ ಮಾಡುವ ಸಂದರ್ಭದಲ್ಲಿ ಹೆಚ್ಚು ಬಳಸುತ್ತಾರೆ ಮತ್ತು ಸೊಕ್ಕಿನಿಂದ ಉರಿಯುವ ವ್ಯಕ್ತಿಯನ್ನು ಉದ್ದೇಶಿಸಿ ಬಯ್ಯುವ ಸಂದರ್ಭದಲ್ಲಿ ಬಳಸುತ್ತಾರೆ. ಅಂದರೆ ಒಬ್ಬ ಹೆಣ್ಣು ಮಗಳು ಅಥವಾ ಕುಟುಂಬದಲ್ಲಿ ಅಜ್ಜಿ (ಮಗಳ ಮಗ ಮತ್ತು ಮಗಳಿಗೆ) ಮೊಮ್ಮಗನಿಗೆ ಅಥವಾ ಮೊಮ್ಮಗಳಿಗೆ ನಮ್ಮ ಮನೆಯಲ್ಲಿ ಎಷ್ಟು ತಿಂದರೂ

ಕೊನೆಗೆ ನಿಮ್ಮ ಮನೆಗೆ ಹೋಗುವಾಗ ಕುಂಡಿ ತಿರುವಿಕೊಂಡು ಹೋಗುತ್ತೀಯಾ ಎಂಬ ಸಂದರ್ಭದಲ್ಲಿ ಈ ನುಡಿಗಟ್ಟನ್ನು ಬಳಕೆ ಮಾಡುತ್ತಾರೆ.

ಪ್ರ: 'ಎಷ್ಟು ಸೊಕ್ಕಿನಿಂದ ಉರಿಯುತ್ತಾಳೆ ನೋಡು ಅವಳನ್ನ ಮಾತನಾಡಿಸಿದರೂ ಹಾಗೆ ಕುಂಡಿ ತಿರುವಿಕೊಂಡು ಹೋಗುತ್ತಾಳೆ'.

ಹೀಗೆ ಈ ನುಡಿಗಟ್ಟು ಬಳಕೆಯಾಗಿದೆ. ಈ ನುಡಿಗಟ್ಟು ಹೆಣ್ಣು ಮತ್ತು ಗಂಡು ಇಬ್ಬರಿಗೂ ಮತ್ತು ಮಕ್ಕಳಿಗೂ ಅನ್ವಯವಾಗುವ ಬೈಗುಳದ ನುಡಿಗಟ್ಟು ಆಗಿದೆ.

ಕೊಂಗನಂತಾಡು:

ಈ ನುಡಿಗಟ್ಟು ಜಾತಿಯನ್ನು ಆಧರಿಸಿ ಇರುವಂತಹದಾಗಿದೆ. ಕೊಂಗಾ ಎಂದರೆ ತಮಿಳು ಜಾತಿಯವನು ಒರಟೊರಟಾಗಿ ನಡೆದುಕೊಳ್ಳುವವನು ಎಂದು ಅರ್ಥ ಕೊಂಗನಂತೆ ಆಡುತ್ತಿಯಲ್ಲ ಎಂದು ಬೈಯುತ್ತಾರೆ. ಗ್ರಾಮೀಣರಲ್ಲಿ ತಮಿಳರು ಎಂಬುದರ ಬದಲಿಗೆ ಕೊಂಗನವನು ಎಂಬ ಮಾತೆ ಹೆಚ್ಚು ಬಳಕೆಯಲ್ಲಿದೆ. ಮಕ್ಕಳನ್ನು ಸಹ ಬೈಯುವಾಗ ಕೊಂಗ ಮಾಡಿದಂಗೆ ಮಾಡುತ್ತೀಯಲ್ಲ ಎಂದು ಬೈಯುತ್ತಾರೆ. ಈ ನುಡಿಗಟ್ಟನ್ನು ಹೆಚ್ಚಾಗಿ ಗಂಡಸರಿಗೆ ಬಳಕೆ ಮಾಡುವುದನ್ನು ಕಾಣಬಹುದು ಮತ್ತು ಈ ನುಡಿಗಟ್ಟು ಎಲ್ಲರಿಗೂ ಅಂದರೆ ದೊಡ್ಡವರಿಗೆ, ಚಿಕ್ಕವರಿಗೆ ಅನ್ವಯವಾಗುವಂತಹ ಬೈಗುಳದ ನುಡಿಗಟ್ಟಾಗಿದೆ.

ಪ್ರ: ಕೊಂಗಸೂಳೆಮಗ ಇದಾಂಗೆ ಇದಿಯಲ್ಲ ಎಂದು ಸಹ ಬೈಯುತ್ತಾರೆ. ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ವಿಷಯವೆಂದರೆ ಅದೇ ಜಾತಿಯಲ್ಲದವನಿಗೆ ಹೆಚ್ಚು ಈ ಬೈಗುಳ ಬಳಕೆಯಾಗುವುದರಿಂದ ನೀನು ಕೊಂಗ ಜಾತಿಯವನಿಗೆ ಹುಟ್ಟಿದವನು ಮತ್ತು ಅನೈತಿಕತೆಯಿಂದ ಹುಟ್ಟಿದ ಮಗ ಎಂಬರ್ಥದಲ್ಲಿ ತಾಯಿ ಕೇಂದ್ರಿತವಾದ ಬೈಗುಳವಾಗಿ ಇದು ಕಂಡುಬರುತ್ತದೆ. ಇಲ್ಲಿ ಹೆಣ್ಣು ಮಾನಸಿಕವಾಗಿ ಕೊರಗುವ ರೀತಿಯಲ್ಲಿ ಈ ಬೈಗುಳ ರಚನೆಯಾಗಿದೆ ಎಂದು ಹೇಳಬಹುದು.

ಜನ್ಮ ಜಾಲಾಡು:

ಇದು ಎಲ್ಲರೂ ಬಳಸುವಂತಹ ನುಡಿಗಟ್ಟಾಗಿದೆ. ಹೆಚ್ಚಾಗಿ ಈ ನುಡಿಗಟ್ಟನ್ನು ಹೆಣ್ಣುಮಕ್ಕಳು ಬಳಸುತ್ತಾರೆ. ಈ ನುಡಿಗಟ್ಟನ್ನು ಬಳಕೆಮಾಡುವ ಸಂದರ್ಭ ನೋಡಿದಾಗ 'ನೀನು ಏನಾದರೂ ಸುಳ್ಳು ಹೇಳಿದರೆ ನಿನ್ನ ಜನ್ಮ ಜಾಲಾಡಿ ಬಿಡ್ತೀನಿ'. ತಾನು ಏನು ತಪ್ಪು ಮಾಡದೆ ಇದ್ದರೆ ತನ್ನ ಮೇಲೆ ಅಪವಾದ ಮಾಡಿಯಾ ನೀನು. ಸುಳ್ಳು ಹೇಳಿದರೆ ಇಲ್ಲದ ಚಾಡಿ ಹೇಳತ್ತಿಯಾ ನನ್ ಮೇಲೆ ಏನಿಲ್ಲ ನಿನ್ನ ಜನ್ಮ ಜಾಲಾಡುತ್ತೀನಿ ಇನ್ನೂ ಇಂತ ಕೆಲವು ಸಂದರ್ಭಗಳಲ್ಲಿ ಈ ನುಡಿಗಟ್ಟನ್ನು ಬಳಸುವುದನ್ನು ನೋಡಬಹುದು.

ಹೀಗೆ ನುಡಿಗಟ್ಟುಗಳ ಬೈಗುಳವನ್ನು ನೋಡಬಹುದು. ನುಡಿಗಟ್ಟುಗಳಲ್ಲಿ ಬೈಗುಳಗಳು ಬಳಕೆಯಾಗಿದೆಯೋ ಬೈಗುಳಗಳಲ್ಲಿ ನುಡಿಗಟ್ಟುಗಳಿವೆ ಎಂದು ಹೇಳಲು ಕಷ್ಟವಾಗುವ ಹಾಗೇ

ಇವುಗಳು ಬಳಕೆಯಲ್ಲಿವೆ ಮತ್ತು ಈ ನುಡಿಗಟ್ಟಗಳನ್ನು ಹೆಣ್ಣು, ಗಂಡು ಇಬ್ಬರೂ ಬಳಕೆ ಮಾಡುತ್ತಾರೆ. ಆದರೆ ಈ ನುಡಿಗಟ್ಟುಗಳು ಬೇಗ ಅರ್ಥವಾಗುದಿಲ್ಲ ಹಾಗೆ ಈ ನುಡಿಗಟ್ಟಗಳು ರಚನೆಯಾಗಿವೆ ಎಂದು ಈ ಎಲ್ಲ ನುಡಿಗಟ್ಟುಗಳಿಂದ ನಮಗೆ ತಿಳಿದುಬರುತ್ತದೆ.

೩.೭.ಹೇಳಿಕೆ ರೂಪದ ಬೈಗುಳಗಳು:–

ಬೈಗುಳಗಳಲ್ಲಿ ಕೆಲವು ಹೇಳಿಕೆ ರೂಪದ ಬೈಗುಳಗಳು ಇವೆ. ಇವು ಸಾಮಾನ್ಯವಾಗಿ ಎಲ್ಲರಿಗೂ ಅನ್ವಯವಾಗುವಂತಹ ಬೈಗುಳಗಳಾಗಿವೆ. ಇವುಗಳಲ್ಲಿ ಹೆಣ್ಣನ್ನು ಹೇಗೆ ಚಿತ್ರಿಕರಿಸಿದ್ದಾರೆ ಎಂಬುವುದನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ಹೇಳಿಕೆ ರೂಪದ ಬೈಗುಳಗಳು ಸಾಮಾಜಿಕ ವರ್ತನೆಯನ್ನು ಮತ್ತು ಸಮಾಜ ಪರಿಭಾವಿಸುವ ವರ್ತನೆಯನ್ನು ಹೇಳುತ್ತವೆ ಎಂಬುದನ್ನು ಸಹ ಇಲ್ಲಿ ನೋಡಬಹುದು. ಸಮಾಜದ ಹೇಳಿಕೆ ಏನಾಗಿದೆ ಹೇಳಿಕೆಯ ಮೂಲಕ ಹೆಣ್ಣಿಗೆ ಏನ್ನನ್ನು ಹೇಳಲು ಸಮಾಜ ಬಯಸುತ್ತದೆ ಎಂಬುದನ್ನು ಕುರಿತು ಇಲ್ಲಿ ವಿವರಿಸಲಾಗಿದೆ. ಹೇಳಿಕೆ ರೂಪದ ಬೈಗುಳಗಳು ಹೆಚ್ಚಾಗಿ ಯಾರನ್ನು ಕೇಂದ್ರೀಕರಿಸಿಕೊಂಡು ಅಂದರೆ ಗಂಡನ್ನು ಕೇಂದ್ರೀಕರಿಸಿಕೊಂಡು ರಚನೆಯಾಗಿವೋ ಇಲ್ಲ ಹೆಣ್ಣನ್ನು ಹೆಚ್ಚಾಗಿ ಕೇಂದ್ರೀಕರಿಸಿಕೊಂಡು ರಚನೆಯಾಗಿವೋ, ಒಂದು ವೇಳೆ ಹೆಚ್ಚಾಗಿ ಗಂಡನ್ನು ಕೇಂದ್ರೀಕರಿಸಿಕೊಂಡಿದ್ದರೆ ಅದರಲ್ಲಿ ಹೆಣ್ಣು ಹೇಗೆ ಬಳಕೆಯಾಗುತ್ತಾಳೆ ಎಂಬುದನ್ನು ಕುರಿತು ಈ ಭಾಗದಲ್ಲಿ ದಾಖಲಿಸಲಾಗಿದೆ.

೩.೭.ಹೇಳಿಕೆ ರೂಪದ ಬೈಗುಳಗಳು:–

ಉದಾ:–

ಬಂಡ

ಕಳ್ಳ

ಸೂಪನಾತಿ

ಸೂಪನಾತಿಗಿತ್ತಿ

ಸೂಳೆ

ಬಂಜೆ

ಮುಂಡೆ

ಹಾದರಗಿತ್ತಿ

ಬಡಿವಾರಗಿತ್ತಿ

ಸವತಿ

ಬೋಳಿ

ತುಡುಗಿ

ಕಳ್ಳಬಡ್ಡಿ

ರೊಳ್ಳಿ

ಮಳ್ಳಿ

ಅಗಣಗಿತ್ತಿ

ಬೆಡಕಿ

ಬಂಡ:–

ಸಮಾಜದ ದೃಷ್ಟಿಯಲ್ಲಿ ಇದೊಂದು ಹೇಳಿಕೆ ರೂಪದ ಬೈಗುಳ ಎಂದು ನಿರೂಪಿತವಾಗಿದೆ. ಬಂಡ ಎಂಬ ಪದ ಗಂಡಿಗೆ ಸಂಬಂಧಿಸಿದ ಬೈಗುಳ. ತುಂಬಾ ಹಠ ಮಾಡುವ ವ್ಯಕ್ತಿಯನ್ನು ಬಂಡ ಎಂದು ಕರೆಯುತ್ತಾರೆ ಮತ್ತು ಮತ್ತೊಂದು ಅರ್ಥ ಎಷ್ಟು ಬೈದರೂ ಅವನಿಗೆ ನಾಚಿಕೆನೇ ಇಲ್ಲ ಎಂದು ಹೇಳುವಾಗ ಬಂಡ, ಮಹಾನ್ ಬಂಡ ಎಂದು ಬೈಯುತ್ತಾರೆ. ತನಗೆ ಬೇಕು ಎಂದಿದ್ದನ್ನು ಹಠ ಮಾಡಿ ಪಡೆಯುವ ವ್ಯಕ್ತಿಯನ್ನು ಬೈಯುವಾಗಲೂ ಈ ಪದ ಬಳಕೆಯಾಗುತ್ತದೆ. ಇದಕ್ಕೆ ಸ್ತ್ರೀವಾಚಕ ಸೇರಿಸಿ ಹೆಣ್ಣಿಗೆ ಬೈಯುವಾಗಲೂ ಬಂಡಿ, ಬಂಡಿಸೂಳೆ ಎಂದು ಬೈಯುತ್ತಾರೆ. 'ಅ' ಕಾರಕ್ಕೆ 'ಇ' ಕಾರ ಸೇರಿಸಿ ಸ್ತ್ರೀವಾಚಕವಾಗಿ ರಚನೆಯಾಗಿದೆ.

ಪ್ರ: 'ಲೇ ಬಂಡಸೂಳೆಮಗನೇ ನಿನಗೆ ಎಷ್ಟು ಉಗಿದರೂ ನಾಚಿಕೆ ಇಲ್ಲ ಬೀಡು ಬಂಡುಗೆಟ್ಟು ಬಿಟ್ಟಿಯಾ ಗಂಡಸು' ಎಂದು ಬೈಯುವುದನ್ನು ನಾವು ನೋಡಬಹುದು.

ಇಲ್ಲಿ ಗಮನಿಸಬೇಕಾದದ್ದು ಗಂಡಿಗೆ ಬೈದರೂ ಹೆಣ್ಣಿನ ಮೂಲಕ ಬೈಯುವುದು ಪ್ರಮುಖವಾಗಿ ಕಂಡುಬರುವ ವಿಷಯವಾಗಿದೆ.

ಸೂಪನಾತಿಗಿತ್ತಿ:–

ಇದೊಂದು ಹೆಣ್ಣಿಗೆ ಸಂಬಂಧಿಸಿದ ಹೇಳಿಕೆ ರೂಪದ ಬೈಗುಳವಾಗಿದೆ. ಸೂಪನಾತಿಗತ್ತಿ ಅಂದರೆ ತುಂಬಾ ಅಲಂಕರಿಸುಕೊಳ್ಳುವ ಹೆಣ್ಣು ಮತ್ತು ತುಂಬಾ ಆಕರ್ಷಕವಾಗಿರುವ ಹೆಣ್ಣು ಎಂದು ಅರ್ಥವಾಗುತ್ತದೆ. ಅಂದರೆ ೨೪ ಘಂಟೆಗಳ ಕಾಲ ಅಲಂಕಾರ ಭೂಷಿತಳಾದ ಹೆಣ್ಣಿಗೆ ಸೂಪನಾತಿಗತ್ತಿ ಎಂದು ಕರೆಯುತ್ತಾರೆ. ಇದೊಂದು ಹೆಣ್ಣಿಗೆ ಸಂಬಂಧಿಸಿದ ಹೇಳಿಕೆಯಾಗಿದೆ.

ಸೂಪನಾತಿಗತ್ತಿ ಎಂಬಲ್ಲಿ ಎರಡು ಸ್ತ್ರೀವಾಚಕಗಳನ್ನು ಗುರುತಿಸಬಹುದು. ಒಂದು 'ಸೂಪನಾತಿ' ಮತ್ತು ಇನ್ನೊಂದು 'ಗಿತ್ತಿ'. ಈ ಎರಡು ಸ್ತ್ರೀವಾಚಕ ಸೇರಿಸಿ ಸೂಪನಾತಿಗಿತ್ತಿ ಎಂದು ರಚನೆಯಾಗಿದೆ.

ಪ್ರ: ಅವಳದು ಏನು ಹೇಳತ್ತಿಯಾ ಬೀಡು ಸೂಪನಾತಿಗಿತ್ತಿದು ಬಳು ಧಿಮಾಕ ಮಾಡೋದನ್ನು ಕಲಿತು ಬಿಟ್ಬಳಾ ಅವಳು ಎಂದು ಬೈಯುವಾಗ ಈ ಪದ ಬಳಕೆಯಾಗುತ್ತದೆ.

ರೊಳ್ಳಿ:-

ಇದು ಸಹ ಒಂದು ಹೇಳಿಕೆಯಾಗಿದೆ. ಇದರ ಅರ್ಥ ಯಾವ ಕೆಲಸ ಹೇಳಿದರೂ ಮಾಡದ ವ್ಯಕ್ತಿ ಹಾಗೂ ಹೆಣ್ಣಿಗೆ ಬೈಯುವ ಬೈಗುಳವಾಗಿದೆ ಮತ್ತು ಸೋಮಾರಿ ಎಂಬ ಅರ್ಥವೂ ಇದಕ್ಕಿದೆ. ಏನಾದರೂ ಕೆಲಸ ಹೇಳಿದರೆ ನನಗೆ ತಲೆ ನೋವು, ಹೊಟ್ಟೆ ನೋವು ನನಗೆ ಬೇರೆ ಕೆಲಸ ಇದೆ ಎಂದು ನೆಪ ಹೇಳುವವರಿಗೆ ರೊಳ್ಳಿ ಎಂದು ಬೈಯುತ್ತಾರೆ. ಇದು ಗಂಡು, ಹೆಣ್ಣಿಗೆ, ಮಕ್ಕಳಿಗೂ ಬಳಕೆಯಾಗುತ್ತದೆ.

ಹೀಗೆ ಹೇಳಿಕೆ ರೂಪದ ಬೈಗುಳಗಳನ್ನು ನಾವು ನೋಡಬಹುದು. ಹೆಣ್ಣಿಗೆ ನೀಡಿದ ಹೇಳಿಕೆ ರೂಪದ ಬೈಗುಳವಾದರೂ ಅದಕ್ಕೆ ಪುರುಷವಾಚಕ ಸೇರಿಸಿ ಗಂಡಿಗೂ ಬಳಕೆ ಮಾಡುತ್ತಾರೆ. ಹಾಗೆಯೇ ಗಂಡಿಗೆ ಸಂಬಂಧಿಸಿದ ಹೇಳಿಕೆಗೆ ಸ್ತ್ರೀವಾಚಕ ಸೇರಿಸಿ ಹೆಣ್ಣಿಗೂ ಬಳಕೆ ಮಾಡುವುದನ್ನು ನೋಡಬಹುದು.

* * *

ಅಧ್ಯಾಯ : ೪

ಬೈಗುಳ ಮತ್ತು ಹೆಣ್ಣು-ವಸ್ತು ವಿಷಯ

ಅಧ್ಯಾಯ–೪

ಬೈಗುಳ ಮತ್ತು ಹೆಣ್ಣು–ವಸ್ತು ವಿಷಯ

ಬೈಯುವ ಸಂದರ್ಭದಲ್ಲಿ ಅದು ಯಾವ ವ್ಯಕ್ತಿಗಳೇ ಪ್ರಯೋಗಿಸುತ್ತಿರಲಿ, ಯಾರ ಮೇಲೆ ಪ್ರಯೋಗವಾಗುತ್ತಿದ್ದರೂ, ಯಾವ ಸಂದರ್ಭದಲ್ಲಿ ಪ್ರಯೋಗವಾಗುತ್ತಿದ್ದರೂ 'ಹೆಣ್ಣು' ಹೇಗೆ ಬೈಗುಳದೊಳಗೆ ವಸ್ತುವಾಗಿ, ಬೈಗುಳದ ವಿಷಯವಾಗಿ ಬಳಕೆಯಾಗುತ್ತಾಳೆ ಎಂಬುದನ್ನು ದಾಖಲಿಸುವುದು ಈ ಅಧ್ಯಾಯದ ಉದ್ದೇಶವಾಗಿದೆ.

ಬೈಗುಳವಾಗಿ ಬಳಕೆಯಾಗುವ ಜಾತಿ, ವೃತ್ತಿ, ಮಾನವ ವರ್ತನೆ, ನಡೆವಳಿಕೆಯಂತಹ ವಿಷಯಗಳಲ್ಲಿಯೂ 'ಹೆಣ್ಣು' ವಸ್ತುವಾಗಿ ಕೇಂದ್ರವಾಗಿರುತ್ತಾಳೆ. ವಾಸ್ತವವಾಗಿ ಸಾಮಾಜಿಕ ಸಂರಚನೆಯಲ್ಲಿ ಹೆಣ್ಣಿಗೆ ಅಧಿಕಾರ ಹಾಗೂ ಆರ್ಥಿಕವಾಗಿ ಲಾಭದಾಯಕವಾದ ವೃತ್ತಿಗಳಲ್ಲಿ ಪ್ರಾಧಾನ್ಯತೆಯಿರದೆ ಅದು ಕೇವಲ ಪೂರಕನೆಲೆಯಷ್ಟೇ ಆಗಿದ್ದರೂ ಬೈಗುಳದ ನೆಲೆಯಲ್ಲಿ ಹೆಣ್ಣನ್ನು ಕೇಂದ್ರವಾಗಿರಿಸಿರುವುದು ಪುರುಷಾದಿಪತ್ಯದ ಗುರುತಾಗಿಯೂ ಹೆಣ್ಣಿನ ನಡೆವಳಿಕೆಯನ್ನು ಸಾಂಕೇತಿಕವಾಗಿ ನಿರ್ದೇಶಿಸುವ ಉದ್ದೇಶದ್ದಾಗಿಯೂ ಕಾಣುತ್ತದೆ.

ಬೈಗುಳಕ್ಕೆ ವಸ್ತುವಾಗಿ ಹೆಣ್ಣಿನ ಅಥವಾ ಗಂಡಿನ ವ್ಯಕ್ತಿತ್ವ, ಅವರ ನಡತೆ, ಅವರ ಆಕಾರ, ಅವರ ಆಕೃತಿ, ಅವರು ಮಾಡುವ ವೃತ್ತಿ, ಅವರ ಕುಟುಂಬ, ಅವರ ಕೌಟಂಬಿಕ ಪರಂಪರೆ ಇವುಗಳನ್ನು ಹೇಗೆ ಪ್ರವೃತ್ತವಾಗುತ್ತವೆ ಎಂಬುವುದನ್ನು ಈ ಭಾಗದಲ್ಲಿ ದಾಖಲಿಸಿದೆ.

೪.೧.ವೃತ್ತಿಗೆ ಸಂಬಂಧಿಸಿದ ಬೈಗುಳ

ನಮ್ಮ ಸಮಾಜದಲ್ಲಿ ಬ್ರಾಹ್ಮಣ ಅಥವಾ ಮೇಲ್ವರ್ಗದ ಜಾತಿಯೇ ಉತ್ತಮವಾದದ್ದು. ಏಕೆಂದರೆ, ಅವರು ಮಾಡುವ ವೃತ್ತಿ ಶ್ರೇಷ್ಠವಾದದ್ದು. ಕೆಳವರ್ಗದವರು ಅಂದರೆ ಹೊಲೆಯರು – ಮಾದಿಗರು ಅತ್ಯಂತ ಕೀಳು. ಏಕೆಂದರೆ ಅವರು ಮಾಡುವ ವೃತ್ತಿ 'ಮಲ ಹೊರುವ ಕ್ರಿಯೆ' 'ಚಪ್ಪಲಿ ಹೊಲಿಯುವ' ಹೊಲಸನ್ನು ಸ್ವಚ್ಚಗೊಳಿಸುವ ಅತ್ಯಂತ ಕೀಳು ಕಾರ್ಯಗಳು ಎಂದು ಜನರು ಭಾವಿಸಿದ್ದಾರೆ. ಸಮಾಜದ ಜನಗಳಲ್ಲಿ ಕೆಲವು ಜಾತಿಯನ್ನು ಎಷ್ಟು ದ್ವೇಷಿಸುತ್ತಾರೆಯೋ ಹಾಗೆಯೇ ಕೆಲವು ವೃತ್ತಿಯನ್ನು ದ್ವೇಷಿಸುತ್ತಾರೆ. ಈ ಮೂಲಕ ಆ

ವೃತ್ತಿಯನ್ನು ಮಾಡುವ ವ್ಯಕ್ತಿಗಳನ್ನು ಸಹ ಹಾಗೆಯೇ ದ್ವೇಷ ಮಾಡುವುದನ್ನು ಬೈಗುಳಗಳಲ್ಲಿ ಕಾಣಬಹುದು.

ವೃತ್ತಿಯನ್ನು ಆಧಾರಿಸಿ ಇರುವಂತಹ ಬೈಗುಳಗಳನ್ನು ಎರಡು ರೀತಿಯಲ್ಲಿ ನೋಡಬಹುದು.

೪.೧.೧.ವೃತ್ತಿಯ ಮೂಲಕ ವ್ಯಕ್ತಿಯನ್ನು ಬೈಯುವ ಬೈಗುಳ

೪.೧.೨.ವ್ಯಕ್ತಿಯ ಮೂಲಕ ವೃತ್ತಿಯನ್ನು ಬೈಯುವ ಬೈಗುಳ

೪.೧.೧.ವೃತ್ತಿಯ ಮೂಲಕ ವ್ಯಕ್ತಿಯನ್ನು ಬೈಯುವ ಬೈಗುಳ:-

ಈ ವೃತ್ತಿಯ ಮೂಲಕ ವ್ಯಕ್ತಿಯನ್ನು ಬೈಯುವ ಬೈಗುಳಗಳಲ್ಲಿ ಯಾರು-ಯಾರಿಗೆ ಬೈಯುತ್ತಾರೆ, ಯಾವ-ಯಾವ ಸಂದರ್ಭದಲ್ಲಿ ವೃತ್ತಿಯನ್ನು ಇಟ್ಟುಕೊಂಡು ಬೈಯುತ್ತಾರೆ, ಯಾವ ಉದ್ದೇಶವನ್ನು ಇಟ್ಟುಕೊಂಡು ಬೈಯುತ್ತಾರೆ, ಯಾವ ಸಂದರ್ಭದಲ್ಲಿ ಬೈಯುತ್ತಾರೆ, ಜನರಲ್ಲಿ ಯಾವ ವೃತ್ತಿ ಮೇಲು, ಯಾವ ವೃತ್ತಿ ಕೀಳು ಎಂಬ ಮನೋಭಾವವಿದೆ ಮತ್ತು ವ್ಯಕ್ತಿಯನ್ನು ಬೈಯುವಾಗ ಯಾವ ವೃತ್ತಿಯು ಮೇಲಾಲ್ಲ ಎಂಬ ಸಂದರ್ಭ ಯಾವಾಗ ಬರುತ್ತದೆ, ವೃತ್ತಿಯ ಮೂಲಕ ವ್ಯಕ್ತಿಯನ್ನು ಬೈಯುವಾಗ ಹೆಣ್ಣು ಹೇಗೆ ಬೈಗುಳಕ್ಕೆ ಒಳಗಾಗುತ್ತಾಳೆ. ಮತ್ತು ವೃತ್ತಿಯ ಮೂಲಕ ಗಂಡಸರಿಗೆ ಬೈಯುವಾಗಲೂ ಅಲ್ಲಿ ಹೆಣ್ಣನ್ನು ಕೇಂದ್ರೀಕರಿಸಿ ಹೇಗೆ ಬೈಯುತ್ತಾರೆ ಎಂಬುವುದನ್ನು ಇಲ್ಲಿ ದಾಖಲಿಸಲಾಗಿದೆ.

ಉದಾ:-ದನಕಾಯೋದು

ದನಕಾಯುವ ವೃತ್ತಿ ಬೈಗುಳಕ್ಕೆ ಒಳಗಾದಾಗ ಯಾರು-ಯಾರಿಗೆ ಹೇಗೆ ಬೈಯುತ್ತಾರೆ ಎಂಬುವುದನ್ನು ನೋಡುವುದಾದರೆ,

ಗಂಡು-ಹೆಣ್ಣಿಗೆ

ಹೆಣ್ಣು-ಗಂಡಿಗೆ

ಹೆಣ್ಣು-ಮಕ್ಕಳಿಗೆ

ಗಂಡು-ಮಕ್ಕಳಿಗೆ

ಹೆಂಡತಿ-ಗಂಡನಿಗೆ

ಗಂಡ-ಹೆಂಡತಿಗೆ

ಗಂಡಸರು-ಹೆಂಗಸರಿಗೆ

ಹೆಣ್ಣು-ಹೆಣ್ಣಿಗೆ

ಮಕ್ಕಳು-ಹಿರಿಯರಿಗೆ

ಎಲ್ಲರೂ ಈ ಬೈಗುಳವನ್ನು ಬಳಕೆ ಮಾಡುತ್ತಾರೆ. ಆದರೆ ಸಂದರ್ಭಗಳು ಬೇರೆಯಾಗಿರುತ್ತವೆ.

ಉದಾ: ಗಂಡು–ಹೆಣ್ಣಿಗೆ: ದನಕಾಯೋಸೂಳೆ:–

ಈ ಬೈಗುಳವು ಕೆಲವು ಸಲ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬಳಕೆ ಆಗುವುದನ್ನು ನೋಡಬಹುದು. ಗಂಡು ತನ್ನ ಹೊಲದಲ್ಲಿ ಕೆಲಸ ಮಾಡಲು ಹೋದಾಗ ದನಕಾಯುವವಳು ಅವರ ಹೊಲದಲ್ಲಿ ದನಗಳನ್ನು ಬಿಟ್ಟು ಅವರ ಬೆಳೆ ನಾಶವಾದಾಗ ಹೊಲದ ಮಾಲಿಕ ಅವಳಿಗೆ,

ಪ್ರ: ಲೇ ದನಕಾಯೋಸೂಳೆ ಏನು ನಿಮ್ಮ ಅಮ್ಮಂದು ಹೊಲ ಹಾಂಗೇ ದನಗಳನ್ನು ಹೊಲದಲ್ಲಿ ಬಿಟ್ಟಿಯಲ್ಲಾ ಹೇಂಗೆ ಐತಿ ನಿನ್ ಮೈಯಾಗ ಎಂದು ಪ್ರತ್ಯಕ್ಷವಾಗಿ ಬೈಯುವುದನ್ನು ನೋಡಬಹುದು.

ಇದೇ ಬೈಗುಳವನ್ನು ಪರೋಕ್ಷವಾಗಿ ಬೈಯುವುದನ್ನು ನೋಡುವುದಾದರೆ, ಪ್ರತ್ಯಕ್ಷವಾಗಿ ಬೈದ ವ್ಯಕ್ತಿ ಅಥವಾ ಹೊಲದ ಮಾಲಿಕ ಮನೆಯಲ್ಲಿ ತನ್ನ ಮನೆಯವರ ಹತ್ತಿರ ಹೇಳುವಾಗ ದನಕಾಯೋ ಸೂಳೆಯ ದನಗಳು ಹೊಲದ ಎಲ್ಲಾ ಫಸಲು (ಬೆಳೆ) ಗಳನ್ನು ತಿಂದು ಹಾಳು ಮಾಡಿಬಿಟ್ಟವಾ ಎಂದು ಹೇಳುತ್ತಾನೆ. ಇಲ್ಲಿ ಆ ಹೆಣ್ಣು ಪರೋಕ್ಷವಾಗಿ ಬೈಗುಳದಲ್ಲಿ ಬಳಕೆಯಾಗುತ್ತಿದ್ದಾಳೆ ಎಂಬ ಅಂಶವನ್ನು ಗಮನಿಸಬೇಕಾಗುತ್ತದೆ.

ಹೆಣ್ಣು–ಗಂಡಿಗೆ: ದನಕಾಯೋ ಸೂಳೆಮಗ:–

ಈ ಬೈಗುಳವನ್ನು ಹೆಣ್ಣು–ಗಂಡಿಗೆ ಬೈಯುವುದನ್ನು ಕಾಣಬಹುದು. ಆದರೆ ಈ ಬೈಗುಳವನ್ನು ಹೆಣ್ಣು ಪರಿಚಿತವಾದ ಗಂಡಿಗೂ ಮತ್ತು ಅಪರಿಚಿತ ಗಂಡಿಗೂ ಬಳಕೆ ಮಾಡುತ್ತಾಳೆ. ಹಾಗೆಯೇ ಯಾವ–ಯಾವ ಸಂದರ್ಭಗಳಲ್ಲಿ ಈ ರೀತಿಯ ಬೈಗುಳ ಬಳಕೆಯಾಗುತ್ತವೆ ಎಂಬುವುದನ್ನು ನೋಡುವುದಾದರೆ,

ಪರಿಚಿತ ವ್ಯಕ್ತಿಗೆ:–

ಪ್ರ: ದನಕಾಯೋ ಸೂಳೆಮಗ ಬರತ್ತಿನಿ ತಗೊಂಡು ಹೋಗೊಕೆ ಎಂದು ಹೇಳಿ ಹೋದ ಇನ್ನೂ ಬರಲಿಲ್ಲ. ಇವನು ಮಾಡೋ ಕೆಲಸಾನೇ ಇಷ್ಟು ಹೇಳೋದು ಒಂದು, ಮಾಡೋದು ಒಂದು. ಎಂತ ಗಂಡಸು ಆದನಪ್ಪ ಇವನು ತು ನಿನ್ನ ಬಾಯಾಕ ಕಸ ಹಾಕ ಎಂದು ಬೈಯುವ ಸಂದರ್ಭದಲ್ಲಿ ಬಳಕೆಯಾಗುತ್ತದೆ. (ಪರಿಚಿತ ವ್ಯಕ್ತಿ ಮನೆ ತೆರಿಗೆ ಪತ್ರವನ್ನು ತೆಗೆದುಕೊಂಡು ಹೋಗುತ್ತಿನಿ ಎಂದು ಹೇಳಿ ಬರದೇ ಇದ್ದ ಸಂದರ್ಭದಲ್ಲಿ ಈ ಬೈಗುಳ ಬಳಕೆಯಾಗುತ್ತದೆ.)

ಅಪರಿಚಿತ ವ್ಯಕ್ತಿಗೆ ಬೈಯುವಾಗ:–

ಪ್ರ: ರೋಡ್‌ನಲ್ಲಿ ನಡೆದುಕೊಂಡು ಹೋಗುವಾಗ ದನಕಾಯೋ ಸೂಳೆಮಗ ಗಾಡಿನ ತಂದು ತಿವಿದು ಬಿಟ್ಟ ದರಿದ್ರದೋನು ಅವನ ಟೈಮ್ ಚೆನ್ನಾಗೈತಿ. ಇನ್ನೂ ಅಷ್ಟು ಏಟು

ಬಿದ್ದಿಲ್ಲ ಇಲ್ಲಾಂದಿದರೆ ಅವಾಗ ಇತ್ತು ಅವನ ಗಾಚಾರ ಬಿಡಿಸಿ ಬಿಡತ್ತಿದ್ದೆ ಎಂದು ಮನೆಯಲ್ಲಿ ಹೇಳುವ ಸಂದರ್ಭವನ್ನು ನೋಡಬಹುದು.

ಒಂದು ಅಂಶವನ್ನು ಗಮನಿಸುವುದಾದರೆ ಪರಿಚಿತ ವ್ಯಕ್ತಿ ಮತ್ತು ಅಪರಿಚಿತ ವ್ಯಕ್ತಿ ಇಬ್ಬರೂ ದನಕಾಯೋ ವೃತ್ತಿ ಮಾಡದೇ ಇದ್ದರೂ ಸಹ ಆ ವೃತ್ತಿಯ ಮೂಲಕ ಬೈಗುಳಕ್ಕೆ ಒಳಗಾಗುತ್ತಾರೆ ಮತ್ತು ಹೆಣ್ಣನ್ನು ಒಳಗೊಂಡಂತೆ ಬೈಗುಳವನ್ನು ಬಳಸುವುದನ್ನು ಕಾಣಬಹುದು.

ಹೆಣ್ಣು-ಮಕ್ಕಳಿಗೆ:

ಹೆಣ್ಣು-ಮಗನಿಗೆ:-

ಈ ಪದವನ್ನು ತಾಯಿ ಮಗನಿಗೆ ಬೈಯುವಾಗಲೂ ಬಳಸುತ್ತಾಳೆ.

ಪ್ರ: ದನಕಾಯೋ ಸೂಳೆಮಗನಿಗೆ ಏನು ಕೆಲಸ ಬರೀ ತಿನ್ನೋದು, ತಿರೋಗೊದು. ದುಡಿಬೇಕು, ತಿನ್ನಬೇಕು ಅನ್ನೊದೇ ಇಲ್ಲ ಇವನಿಗೆ. ಅವರ ಅಪ್ಪ ಇದ್ದಿದರೆ ನನಗೆ ಯಾಕ ಇಷ್ಟು ಕಷ್ಟ. ಇವನ ಕಾಲಾಗ ಸಾಕಾಗಿ ಹೋಗಿಬಿಟ್ಯೆತಿ ಎಷ್ಟು ಅಂತ ಹೇಳಬೇಕು ಇವನಿಗೆ ಸಣ್ಣೋನಾ ಇವನು ಒಡಿದು-ಬಡಿದು ಹೇಳೋಕೆ ಮದುವೆ ಮಾಡಿದ್ದರೆ ನಾಕು ಕೂಸಿನ ತಂದೆ ಆಗೋನಂಗೆ ಇದಾನ. ಗೊತ್ತಾಗಲ್ವಾ ಇವನಿಗೆ. ನಾನು ಸತ್ತರೆ ನಿನಗೆ ಅವಾಗ ಅರಿವು ಆಗತ್ಯೆತಿ ಎಂದು ಬೈಯುವ ಸಂದರ್ಭದಲ್ಲೂ ಈ ಪದ ಬಳಕೆಯಾಗುತ್ತದೆ.

ಹೆಣ್ಣು-ಮಗಳಿಗೆ: ದನಕಾಯೋಸೂಳೆ:-

ಪ್ರ: ದನಕಾಯೋಸೂಳೆ ಕೆಲಸನೇ ಮಾಡಲ್ಲ ನೋಡು. ಕಾಲೇಜಿಗೆ ಹೋದ್ಲೇನೊ ಬಂದು ತಿಂದ್ಲಿನೋ, ಟಿ.ವಿ.ನೋಡಕುತ್ತಾ ಕುಂತ್ಲೆನೋ ಇಷ್ಟೆ ಇವಳ ಕೆಲಸ. ಮನೆ ಕೆಲಸನ ಇವರವ್ವನ್ ಮಿಂಡ್ರು ಮಾಡತ್ತಾರೇನೊ. ನಾನದರೂ ಎಷ್ಟು ಅಂತಾ ಮಾಡ್ಲಿ ಕೆಲಸನ ಎಂದು ತಾಯಿ-ಮಗಳಿಗೆ ಬೈಯುವ ಸಂದರ್ಭದಲ್ಲಿ ಈ ಪದ ಬಳಕೆಯಾಗುವುದನ್ನು ನೋಡಬಹುದು.

ಹೆಣ್ಣು ತಮ್ಮ ಮಕ್ಕಳಿಗೆ ಅಷ್ಟೇ ಅಲ್ಲದೆ ಬೇರೆ ಮಕ್ಕಳಿಗೆ ಗಂಡು ಅಥವಾ ಹೆಣ್ಣು ಇಬ್ಬರಿಗೂ ಚೇಷ್ಟ ಮಾಡಿದಾಗ, ಹೇಳಿದ ಮಾತು ಕೇಳದೆ ಇದ್ದಾಗ ಬೈಯುವ ಸಂದರ್ಭದಲ್ಲಿ ಈ ಬೈಗುಳವನ್ನು ಬಳಸುವುದನ್ನು ಕಾಣಬಹುದು.

ಗಂಡು-ಮಕ್ಕಳಿಗೆ:-

ತಂದೆ-ಮಗನಿಗೆ: ದನಕಾಯೋ ಸೂಳೆಮಗ:-

ಪ್ರ: ದನಕಾಯೋ ಸೂಳೆಮಗನಿಗೆ ದುಡಿಯೋದು ಗೊತ್ತಿಲ್ಲ. ಗಾಡಿ ಕೊಡಸು, ಅದು ಕೊಡಸು ಇದು ಕೊಡಸು ಅಂತ ಕೇಳತ್ತಾನಾ, ಇವನ್ ಅವ್ವ ಹಾಂಗೆ ತವರು ಮನೆಯಿಂದ ತಂದು-ತಂದು ಕೊಟ್ಟಳಾ ನೋಡು ಇವನಿಗೆ ಕೊಡಿಸಿ ಬಿಡತ್ತಿನಿ ಹಾಂಗೆ. ಪಸ್ಟ್ ದುಡಿಯೋದು

ಕಲಿ ಆಮೇಲೆ ನೋಡೋನಾ ಕೊಡಸೋದು–ಬಿಡಿಸೋದು. ಈ ಸಂದರ್ಭದಲ್ಲೂ ಈ ಬೈಗುಳ ಬಳಕೆಯಾಗುವುದನ್ನು ನೋಡಬಹುದು.

ಮತ್ತೊಂದು ಸಂದರ್ಭವನ್ನು ಗಮನಿಸುವುದಾದರೆ, ಮಗ ಶಾಲೆಗೆ ಹೋಗಿಲ್ಲ ಎಂದು ತಂದೆ ಮಗನಿಗೆ ದನಕಾಯೋ ಸೂಳೆಮಗ ದನಕಾಯೋಕೆ ಹೋಗು ಶಾಲೆಗೆ ಹೋಗೋಕೆ ಏನು ದಾಡಿ ನಿನಗೆ ನಮ್ಮ ತರ ಹಾಗೋದು ಬೇಡ ಚೆನ್ನಾಗಿ ಓದುಬೇಕು ಎಲ್ಲತೂಗಿಂತ ನನ್ನ ಮಗ ಮಾರ್ಕ್ಸ್ ಜಾಸ್ತಿ ತರಬೇಕು ಅಂತ ಇದ್ರೆ ಇವನು ನೋಡಿದ್ರೆ ದನಕಾಯೋಕೆ ಹೋಗತ್ತಿನಿ ಅಂದಾಂಗೆ ಆಯ್ತು ದನಕ್ಕೆ ಬಡಿದಾಂಗೆ ಬಡಿಬೇಕು ನಿನಗೆ ಆಗ ಬುದ್ಧಿ ಬರುತ್ತೆ ಎನ್ನುವ ಸಂದರ್ಭದಲ್ಲೂ ಈ ಪದ ಬಳಕೆಯಾಗುವುದನ್ನು ಗಮನಿಸಬಹುದು.

ಮಕ್ಕಳು–ಮಕ್ಕಳಿಗೆ:–

ಗಂಡುಮಕ್ಕಳು–ಗಂಡುಮಕ್ಕಳಿಗೆ: ದನಕಾಯೋ ಸೂಳೆಮಗ:–

ಆಟ ಆಡುವ ಸಂದರ್ಭದಲ್ಲಿ ಮಕ್ಕಳು ಜಗಳ ಆಡುವುದು ಸಹಜ.

ಪ್ರ: ದನಕಾಯೋ ಸೂಳೆಮಗ ನನಗೆ ಒಡಿತ್ತಾನೆ. ನಮ್ಮಪ್ಪನಿಗೆ ಹೇಳಿತ್ತಿನಿ ಬಾ ಎನ್ನುವ ಸಂದರ್ಭದಲ್ಲಿ ಈ ಬೈಗುಳ ಬಳಕೆಯಾಗುತ್ತದೆ.

ಮತ್ತೊಂದು ಸಂದರ್ಭವನ್ನು ನೋಡುವುದಾದರೆ ತಮಾಷೆಗೆ,

ಪ್ರ: ದನಕಾಯೋ ಸೂಳೆಮಗ ಬೇಗ ಬಾರಲೇ ಬಸ್ಸು ಹೋಗುತ್ತೆ ಅಥವಾ ಆಟ ಆಡೋನ ಬಾ ಎನ್ನುವ ಸಂದರ್ಭದಲ್ಲೂ ಈ ಬೈಗುಳವನ್ನು ಬಳಸುವುದನ್ನು ಕಾಣಬಹುದು.

ಹೆಣ್ಣುಮಕ್ಕಳು–ಹೆಣ್ಣುಮಕ್ಕಳಿಗೆ: ದನಕಾಯೋಸೂಳೆ:–

ಗಂಡುಮಕ್ಕಳು ಆಟವಾಡುವ ಸಂದರ್ಭದಲ್ಲಿ ಹೇಗೆ ಬಳಸುತ್ತಾರೆಯೋ ಹಾಗೆಯೇ ಹೆಣ್ಣುಮಕ್ಕಳು ಸಹ ಆಟವಾಡುವ ಸಂದರ್ಭದಲ್ಲಿ ದನಕಾಯೋಸೂಳೆ ಜಲ್ದಿ ಆಡೋಕೆ ಬಾ ಅಂದರೆ ಬರೋಕೆ ಹೆಂಗೇ ಮಾಡತ್ತಾಳೆ ಎಂಬ ಸಂದರ್ಭದಲ್ಲಿ ಮತ್ತು ದನಕಾಯೋಕೆ ಹೋಗು ನೀನು ಓದೋಕೆ ಬರಲಿಲ್ಲ ಎಂದು ಅಕ್ಕ–ತಂಗಿಗೆ ಬೈಯುವಾಗ ಈ ಪದ ಬಳಕೆಯಾಗುವುದನ್ನು ನೋಡಬಹುದು.

ಹೆಂಡತಿ–ಗಂಡನಿಗೆ: ದನಕಾಯೋ ಸೂಳೆಮಗ:–

ಪ್ರ: ಕುಡುಕ ಗಂಡನಿಗೆ ಹೆಂಡತಿ ದನಕಾಯೋ ಸೂಳೆಮಗ ಕುಡಿದು ಬಂದು ತಿಂದು ಸುಮ್ಮನೆ ಮಲಕ್ಕೋನೋದು ಬಿಟ್ಟು ವದರಾಡತ್ತಾನೆ. ಇವನಿಗೆ ಏನು ಬಂದ್ಯೆತಿ ಹೋತ್ಕೊಂಡು ಹೋಗುವುದು ನನ್ನ ಜನ್ಮಾನ ಯಾಕ ಇಷ್ಟು ಆಯ್ ಅನಿಸಿತ್ತಿಯಾ. ನೀನು ಇರೋದುಕ್ಕಿಂತ ಸಾಯೋದೆ ವಾಸಿ ಎಂದು ಬೈಯುತ್ತಾಳೆ.

ಇನ್ನೊಂದು ಸಂದರ್ಭವನ್ನು ಗಮನಿಸುವುದಾದರೆ, ಗಂಡ–ಹೆಂಡತಿ ಜಗಳವಾಡುವಾಗ ಹೆಂಡತಿಯ ಸಿಟ್ಟು ಅತೀರೇಕಕ್ಕೆ ಹೋದಾಗ,

ಪ್ರ: ದನಕಾಯೋ ಸೂಳೆಮಗನದು ಧಿಮಾಕ ಜಾಸ್ತಿ ಆಗ್ಯೆತಿ ಅಲ್ಲ. ಮಾಡಿ ಆಕತ್ತಿನಿ ಅಲ್ಲ ತಿಂದು ಸುಮ್ಮನೆ ಇರಲಾರದೆ ಈ ತರ ಧಿಮಾಕ ಮಾಡತ್ತಿಯಾ. ಆ ಸಾಮಾನನ ಹೋಗಿಯೋದು, ಈ ಸಾಮಾನನ ಹೋಗಿಯೋದು ಇದೆಲ್ಲಾ ಸರಿ ಇರಲ್ಲ ನೋಡು ಎಂದು ಬೈಯುವ ಸಂದರ್ಭದಲ್ಲೂ ಈ ಬೈಗುಳವನ್ನು ಬಳಸುತ್ತಾಳೆ.

ಗಂಡ–ಹೆಂಡತಿಗೆ: ದನಕಾಯೋಸೂಳೆ:–

ಗಂಡ–ಹೆಂಡತಿಗೆ ತವರು ಮನೆಗೆ ಹೋಗಬೇಡ ಎಂದು ಹೇಳಿದರೂ ಅವಳು ಮಾತು ಮೀರಿ ಹೋದಾಗ ಈ ಪದ ಬಳಕೆಯಾಗುವ ಸಂದರ್ಭವನ್ನು ನೋಡುವುದಾದರೆ,

ಪ್ರ: ದನಕಾಯೋ ಸೂಳೆಗೆ ಎಷ್ಟು ಸೊಕ್ಕು ಇರಬೇಡ ಇವಳಿಗೆ ಹೋಗಬೇಡ ನಿನ್ನ ತವರು ಮನೆಗೆ ಅಂದ್ರು ನನ್ ಮಾತು ಮೀರಿ ಹೋಗ್ಯಾಳ. ಬರಲೀ ಅವಳು ಬೋಸುಡಿ ಸೂಳೆನಾಡ ಕುಣುಕುತ್ತಾ ಕುಣುಕುತ್ತಾ ಹೋಗಿ ಬಿಡತ್ತಾಳ ಹಾಂಗೇ. ಅವರ ಅಮ್ಮನಾಡ ಬರಲೀ ಇವತ್ತು ಅವಳಿಗೆ ಐತಿ ಎಂಬ ಸಂದರ್ಭದಲ್ಲಿ ಈ ಪದ ಬಳಕೆಯಾಗುವುದನ್ನು ನೋಡಬಹುದು.

ದನಕಾಯುವುದು ಸಮಾಜದಲ್ಲಿ ಉತ್ತಮವಾದ ಕೆಲಸವಲ್ಲ ಎಂಬ ಭಾವನೆ ಜನಸಾಮಾನ್ಯರಲ್ಲಿದೆ. ಹೆಣ್ಣು ಸರಿಯಾಗಿ ಕೆಲಸ ಮಾಡಲು ಬಾರದೇ ಇದ್ದ ಸಂದರ್ಭದಲ್ಲಿ ಮತ್ತು ಗಂಡನ ಮಾತು ಹೆಂಡತಿ ಕೇಳದೆ ಇದ್ದ ಸಂದರ್ಭದಲ್ಲಿ ಇಂತ ಬೈಗುಳ ಬಳಕೆ ಯಾಗುವುದನ್ನು ಕಾಣಬಹುದು. ಹಾಗೂ ಮಕ್ಕಳು ತಂದೆ–ತಾಯಿಯ ಮಾತು ಕೇಳದೆ ಇದ್ದ ಸಂದರ್ಭದಲ್ಲೂ ಬಳಕೆಯಾಗುವುದನ್ನು ಪ್ರಯೋಗದಲ್ಲಿ ನೀಡಲಾಗಿದೆ. ಇದೇ ಬೈಗುಳ ಗಂಡಿಗೆ ಅನ್ವಯವಾದಾಗಲೂ ದನಕಾಯೋ ಸೂಳೆಮಗ ಎಂದು ಬೈಯುತ್ತಾರೆ. ಅಲ್ಲಿಯೂ ಹೆಣ್ಣು ಬಳಕೆಯಾಗುವುದನ್ನು ನೋಡಬಹುದು. ಗಂಡನ್ನು ಬೈಯುವಾಗಲೂ ಅದು ಹೆಣ್ಣಿನ ಮೂಲಕ ಬೈಯುತ್ತಾರೆ. ಇದೊಂದು ಪುರುಷ ಕೇಂದ್ರಿತ ಬೈಗುಳವೆಂದು ಹೇಳಬಹುದು.

ಈ ವೃತ್ತಿಯನ್ನು ಹೆಚ್ಚಾಗಿ ಕೆಳವರ್ಗದವರು ಮಾಡುತ್ತಾರೆ ಹಾಗೂ ಈ ರೀತಿಯ ಬೈಗುಳವನ್ನು ಸಹ ಹೆಚ್ಚಾಗಿ ಕೆಳವರ್ಗದವರೆ ಬಳಕೆ ಮಾಡುತ್ತಾರೆ. ದಡ್ಡ ಅಥವಾ ದಡ್ಡಿ, ಇವನಿಗೆ ಅಥವಾ ಇವಳಿಗೆ ಏನು ತಿಳಿಯುವುದಿಲ್ಲ ಎಂಬ ಕಾರಣಕ್ಕೆ ಹಾಗೂ ಹಿಂದೆ ಮಕ್ಕಳನ್ನು ಶಾಲೆಗೆ ಕಳಸುವ ಬದಲು ಆರ್ಥಿಕ ದೃಷ್ಟಿಯಿಂದ ತಾವು ದನಕಾಯೋಕೆ ಹೋಗುವುದರ ಜೊತೆಗೆ ತಮ್ಮ ಮಕ್ಕಳನ್ನು ಸಹ ಕಳಿಸುತ್ತಿದ್ದರು. ಆ ವೃತ್ತಿ ಈಗ ಬೈಗುಳವಾಗಿ ಬಳಕೆಯಾಗುತ್ತಿದೆ.

ತೋಟರ ಸೂಳೆ:

ಈ ಪದವು ಹೆಣ್ಣಿಗೆ ಸಂಬಂಧಿಸಿದ ಬೈಗುಳವಾಗಿದೆ. ಈ ವೃತ್ತಿಯೂ ಕೀಳು ಎಂಬ ಭಾವನೆ ಜನರಲ್ಲಿದೆ. ಆದರೆ ಅವರು ಈ ವೃತ್ತಿಯನ್ನು ಮಾಡದೇ ಇದ್ದರೆ ಸಮಾಜ ಹೇಗೆ ಇರುತ್ತಿತ್ತು ಎಂದು ಊಹಿಸಲು ಸಾಧ್ಯವಿಲ್ಲ. ಈ ವೃತ್ತಿಯು ಮಲ ಹೋರುವ ಮತ್ತು ಬೀದಿಯ ಕಸವನ್ನು ಸ್ವಚ್ಛಗೊಳಿಸುವುದಾಗಿದೆ. ಈ ಬೈಗುಳದ ಪದವನ್ನು ಮೇಲ್ವರ್ಗದವರು ಕೆಳವರ್ಗದವರಿಗೆ ಬಳಸುತ್ತಾರೆ. ಕೆಲವು ಸಂದರ್ಭದಲ್ಲಿ ಕೆಳವರ್ಗದವರು ಸಹ ಕೆಳವರ್ಗದವರಿಗೆ ಬೈಯುವುದನ್ನು ನೋಡಬಹುದು. ಈ ಬೈಗುಳವು ಕೆಲವೊಮ್ಮೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಬಳಕೆಯಾಗುತ್ತದೆ.

ಗಂಡು–ಹೆಣ್ಣಿಗೆ: ತೋಟರಸೂಳೆ:–

ಗಂಡಸು ಈ ವೃತ್ತಿಯನ್ನು ಮಾಡುವ ಹೆಂಗಸು ಅಥವಾ ಗಂಡಸಿಗೆ ಅವರ ಓಣಿಯಲ್ಲಿ ಬಂದು ಕಸಗೂಡಿಸಿ ಸ್ವಚ್ಛ ಮಾಡಿಲ್ಲ ಎಂದು ತಿಳಿದಾಗ,

ಪ್ರ: ಆ ತೋಟರಸೂಳೆ ಅಥವಾ ಸೂಳೆಮಗನಿಗೆ ಹೇಳಿದ್ದೆ ಅಲ್ಲಿ ನಮ್ಮ ಓಣಿಯಲ್ಲಿ ಬಹಳ ವಲಸು ಆಗ್ಯೆತಿ ಹೋಗಿ ವಾಣ (ಸ್ವಚ್ಛ) ಮಾಡಿ ಎಂದು ಆ ಸೂಳೆಯರು ಅಥವಾ ಆ ಸೂಳೆಮಕ್ಕಳು ಬಂದಿಲ್ಲ ಅಲ್ಲಾ ಎಂದು ಪರೋಕ್ಷವಾಗಿ ಬೈಯುವುದನ್ನು ಕಾಣಬಹುದು.

ಗಂಡ–ಹೆಂಡತಿಗೆ: ತೋಟರಸೂಳೆ:–

ಪ್ರ: ಗಂಡ–ಹೆಂಡತಿಗೆ ಬೈಯುವಾಗ ತೋಟರಸೂಳೆ ಮಾಡಿದಾಂಗ ಮಾಡಿತ್ತಿಯಲ್ಲಾ ನೀನು. ನೀನೇನು ತೋಟರಿಗೆ ಹುಟ್ಟಿಯೇನು ಹೇಳಿದ್ದು. ಕೆಲಸ ಒಂದನೂ ನೆಟ್‌ಗೆ ಮಾಡಲ್ಲ ಅಲ್ಲ ನೀನು ಎಂದು ಪ್ರತ್ಯಕ್ಷವಾಗಿ ಬೈಯುವುದನ್ನು ಕಾಣಬಹುದು.

ಮೇಲಿನ ಪ್ರಯೋಗದಲ್ಲಿ ಅದೇ ಕೆಲಸ ಮಾಡದೇ ಇದ್ದರೂ ಸಹ ಆ ವೃತ್ತಿ ಕೀಳು ಎಂದು ತಿಳಿದು ಈ ಪದವನ್ನು ಬೈಯುವಾಗ ಬಳಕೆ ಮಾಡುತ್ತಾರೆ. ಹೆಂಡತಿಯನ್ನು ಬೈಯುವುದರ ಜೊತೆಗೆ ಅವಳ ತಾಯಿಯನ್ನು ಬೈಯುವುದರ ಮೂಲಕ ಅನೈತಿಕ ಸಂಬಂಧದಿಂದ ಹುಟ್ಟಿದವಳು ಎಂದು ಬೈಯುವುದನ್ನು ನೋಡಬಹುದು.

ಹೆಣ್ಣು–ಹೆಣ್ಣಿಗೆ: ತೋಟರಸೂಳೆ:–

ಇದು ಮೇಲ್ವರ್ಗದ ಹೆಂಗಸು ಕೆಳವರ್ಗದ ಹೆಂಗಸಿಗೆ ಬೈಯುವಾಗ ಬಳಸುವ ಬೈಗುಳವಾಗಿದೆ.

ಪ್ರ: ಅವಳು ಬಂದು ವಾಣ (ಸ್ವಚ್ಛ) ಮಾಡ್ಯಾಳ ಆದರೆ ಇನ್ನೂ ಸ್ವಲ್ಪ–ಸ್ವಲ್ಪ ಕಸನ ಹಾಂಗೇ ಬಿಟ್ಟು ಹೊಗ್ಯಾಳ ಅವಳು ತೋಟರಸೂಳೆ ಎಂದು ಪರೋಕ್ಷವಾಗಿ ಬೈಯುವ ಸಂದರ್ಭವನ್ನು ನೋಡಬಹುದು.

ಇನ್ನೊಂದು ಸಂದರ್ಭವನ್ನು ಗಮನಿಸುವುದಾದರೆ,

ಪ್ರ: ಕೆಳವರ್ಗದ ಹೆಂಗಸು-ಕೆಳವರ್ಗದ ಹೆಂಗಸಿಗೆ ಬೈಯುವಾಗ: ಅವಳು ನೋಡು ತೋಟರಸೂಳೆ ಹೆಂಗೆ ಹೋಗತ್ತಾಳೆ. ಸ್ವಲ್ಪನಾದರೂ ಮಾನ-ಮಾರ್ಯಾದೆ ಐತಿ ಏನು ಆ ಹೆಂಗಸಿಗೆ ಹೆಂಗೇ ಎದೆ ನಿಗ್ರಿಸಿಕೊಂಡು ಹೋಗತ್ತಾಳೆ ನೋಡು ಗಂಡುಮಕ್ಕು ಅದರ ಅನ್ನದೇ ಅರಿವು ಇಲ್ಲ ಅವಳಿಗೆ. ಅರಿವುಗೇಡಿಸೂಳೆ ಎಂದು ಬೈಯುವುದನ್ನು ನೋಡಬಹುದು.

ಹೆಣ್ಣು-ಮಕ್ಕಳಿಗೆ: ತೋಟರಸೂಳೆ:-

ಪ್ರ: ಅಜ್ಜಿ-ಮೊಮ್ಮಗಳಿಗೆ: ಲೇ ತೋಟರಸೂಳೆ ಸುಮ್ಮನೆ ಆಡೋದು ಬಿಟ್ಟು ತೋಟರ ಕಸ ಬಳಕೊಂಡು ಹೋಗತ್ತಾರೆ. ಅಲ್ಲಾ ಹಾಂಗೆ ನೀನು ಕಸ ವಡಿತೇನು ತೋಟರ ಹಿಂದೆ ಹೋಗಿಬಿಡು ಬೇಸ ಆಗ್ಯೆತಿ ಎಂದು ಬೈಯುವಾಗ ಈ ಪದ ಬಳಕೆಯಾಗುವುದನ್ನು ನೋಡಬಹುದು.

ಗಂಡು-ಗಂಡಿಗೆ: ತೋಟರಸೂಳೆಮಗ:-

ಪ್ರ: ಸ್ನೇಹಿತರು-ಸ್ನೇಹಿತರೊಡನೆ ಮಾತಾನಾಡುವಾಗ ಅವನು ಯಾವನು ಲೇ ತೋಟರ ಸೂಳೆಮಗ ಬರತ್ತಿನಿ ಅಂತ ಹೇಳಿ ಇನ್ನೂ ಬರಲಿಲ್ಲ. ಅಲ್ಲಾ ಲೇ ಅವನು ತಿಕ್ಕ ಇದ್ದಾಗ ಇದಾನ ಬೀಡು ಅವನು ಹೇಳಿದ್ದ ಟೈಮ್‌ಗೆ ಒಂದು ದಿನನೂ ಸರಿಯಾಗಿ ಬರಲ್ಲ ನೋಡು ಎಂದು ಬೈಯುವ ಸಂದರ್ಭದಲ್ಲಿ ಈ ಪದ ಬಳಕೆಯಾಗುತ್ತದೆ.

ಇನ್ನೊಂದು ಸಂದರ್ಭದಲ್ಲಿ ಸ್ನೇಹಿತರು-ಸ್ನೇಹಿತರಿಗೆ ತಮಾಷೆಗೆ ಆ ತೋಟರಸೂಳೆಮಗನಿಗೆ ಸೊಕ್ಕು ಜಾಸ್ತಿ ಲೇ ಎನ್ನುವ ಸಂದರ್ಭದಲ್ಲಿ ಮತ್ತು ನೋಡು ಲೇ ಅವನು ತೋಟರವನು ಮಾಡಿದಾಂಗ ಮಾಡತ್ತಾನ ಎಂದು ಮಾತನಾಡುವ ಸಂದರ್ಭದಲ್ಲಿ ಈ ಪದ ಬಳಕೆಯಾಗುತ್ತದೆ.

ಈ ಬೈಗುಳದ ಪದವು ಕೆಳವರ್ಗದವರು ಮಾಡುವ ವೃತ್ತಿಗೆ ಸಂಬಂಧಿಸಿದ್ದಾಗಿದೆ. ಈ ವೃತಿಯನ್ನು ಮಾಡುವ ಹೆಂಗಸು ಅಥವಾ ಗಂಡಸಿಗೆ ಬೈಯುವಾಗ ಈ ಪದವನ್ನು ಬಳಸುತ್ತಾರೆ. ಹೆಣ್ಣು ತನ್ನ ಸಂಸಾರ ನಿಭಾಯಿಸುವ ಸಲುವಾಗಿ ಇಂತಹ ಕೆಲಸವನ್ನು ಮಾಡುತ್ತಾಳೆ. ಈ ಬೈಗುಳವನ್ನು ಹೆಚ್ಚಾಗಿ ಬಳಸುವವರು ಮೇಲ್ವರ್ಗದವರು. ಈ ಪದವನ್ನು ಗಂಡಸರು-ಹೆಂಗಸರು ಎಲ್ಲರೂ ಬೈಯುವಾಗ ಬಳಕೆ ಮಾಡುತ್ತಾರೆ. ಒಂದು ಅಂಶವನ್ನು ಗಮನಿಸುವುದಾದರೆ ಈ ಪದವನ್ನು ಅದೇ ಸಮುದಾಯದವರಿಗೆ ಬಳಸುವುದಿಲ್ಲ ಎಲ್ಲಾ ಸಮುದಾಯದವರು ಎಲ್ಲರಿಗೂ ಬೈಯುವಾಗ ಈ ಪದವನ್ನು ಬಳಸುತ್ತಾರೆ. ಈ ಪದ ಗಂಡಿಗೆ ಅನ್ವಯವಾದಾಗಲೂ ಅಲ್ಲಿ ಹೆಣ್ಣಿನ ಮೂಲಕವೇ ಅವನನ್ನು ಬೈಯುವುದನ್ನು ಕಾಣಬಹುದು.

ಕುರಿಕಾಯೋ ಮುಂಡೆ:

ಗಂಡು–ಹೆಣ್ಣಿಗೆ: ಕುರಿಕಾಯೋ ಮುಂಡೆ:–

ಇದೊಂದು ವೃತ್ತಿಯಾಗಿದೆ ಮತ್ತು ಈ ವೃತ್ತಿಯನ್ನು ಮಾಡುವವರು ಕುರುಬರು. ಬೇರೆ ಜನಾಂಗದವರು ಸಹ ಈ ವೃತ್ತಿಯನ್ನು ಮಾಡುತ್ತಾರೆ. ಆದರೆ ಕಡಿಮೆ ಸಂಖ್ಯೆಯಲ್ಲಿ. ದಾರಿಯಲ್ಲಿ ಕುರಿಕಾಯುವವಳು ಕುರಿಗಳನ್ನು ಬಿಟ್ಟು ಹೋದಾಗ ಅದೇ ದಾರಿಯಲ್ಲಿ ಗಂಡಸು ಗಾಡಿಯಲ್ಲಿ ಬರುವ ಸಂದರ್ಭದಲ್ಲಿ ಅದೇ ರೋಡಿನಲ್ಲಿ ಅಡ್ಡವಾಗಿರುವ ಕುರಿಗಳನ್ನು ಕಂಡು ಮಾತಾನಾಡುವುದನ್ನು ನೋಡುವುದಾದರೆ,

ಪ್ರ: ಆ ಕುರಿಕಾಯೋ ಮುಂಡೆ ಎತ್ಲಾಗ ಆಳಾಗಿ ಹೋಗ್ಯಾಳ ರೋಡಿಲ್ಲಿ ಕುರಿಗಳನ್ನು ಬಿಟ್ಟು ಅವನಾತಕ ಅಡಿಸಿಕೋಳ್ಳೋಕೆ ಹೋಗ್ಯಾಳ ಏನೋ ಕಂರ್ತಿಸೂಳೆಗೆ ಕುರಿಕಾಯೋದು ಒಂದು ನೆಪ ಅಷ್ಟೆ ಅವಳು ಮಿಂಡ್ರು ಮಾಡೋಕೆ ಹೋಗಿರತ್ತಾಳೆ ಎಂದು ಮಾತಾನಾಡುತ್ತಾರೆ. ಇದು ಒಂದು ರೀತಿಯಲ್ಲಿ ಅಸಹಾಯಕ ಹೆಣ್ಣನ್ನು ಬೈಗುಳದ ಮೂಲಕ ಆರೋಪಿಸುವುದನ್ನು ಕಾಣಬಹುದು. ಹೀಗೆ ಹೆಣ್ಣಿನ ಬಗ್ಗೆ ಕೀಳು ಭಾವನೆ ಅವರಲ್ಲಿದೆ. ಕುರಿಗಳನ್ನು ಬಿಟ್ಟು ನೀರು ಕುಡಿಯೋಕೆ ಹೋಗಿದ್ದ ಹೆಣ್ಣಿಗೆ ಗಂಡಸು ಈ ರೀತಿಯಲ್ಲಿ ಆರೋಪ ಮಾಡಿ ಅಶ್ಲೀಲವಾಗಿ ಬೈಯುತ್ತಾರೆ ಎಂಬುವುದನ್ನು ಈ ಪ್ರಯೋಗದಲ್ಲಿ ನೋಡಬಹುದು.

ಗಂಡು–ಗಂಡಿಗೆ: ಕುರಿಕಾಯೋ ಸೂಳೆಮಕ್ಳು:–

ಪ್ರ: ಕುರಿಕಾಯೋ ಸೂಳೆಮಕ್ಳು ಹೊಲಸು ಸೂಳೆಮಕ್ಳು. ಅವನು ಇದಾನಲ್ಲಾ ಕುರಿಕಾಯೋನು ಹೊಲದಲ್ಲಿ ಕುರಿ ಓಡೆದು ಸ್ವಲ್ಪ ದಿನ ಇದ್ದು ಗೊಬ್ಬರ ಎಲ್ಲ ಕೂಡಿ ಹಾಕು ಎಂದು ಹೇಳಿದ್ರು ನನ್ನ ಮಾತು ಕೇಳಿಲ್ಲ ನೋಡು ದುಡ್ಡು ಒಂದು ಇಸಕೊಂಡು ಹೋಗಿಬಿಟ್ರು. ಸ್ವಲ್ಪ ದಿನದ ಮಟ್ಟಿಗೆ ಕುರಿಗಳನ್ನು ಅಲ್ಲೆ ಹೊಲದಲ್ಲಿ ತಬಿದ್ರೆ ಈ ಸಲ ಬೆಳೆಯಾದರೂ ಚೆನ್ನಾಗಿ ಬರುತ್ತಿತ್ತು. ಅದನ್ನು ಆಳು ಮಾಡಿಬಿಟ್ರು ಆ ಕುರಿಕಾಯೋ ಸೂಳೆಮಕ್ಳು ಎಂದು ಬೈಯುವುದನ್ನು ಕಾಣಬಹುದು.

ಗಂಡು–ಮಕ್ಕಳಿಗೆ: ಕುರಿಕಾಯೋ ಸೂಳೆಮಕ್ಳು:–

ಪ್ರ: ನೀವು ಎಷ್ಟಿದರೂ ಕುರಿಕಾಯೋ ಸೂಳೆಮಕ್ಳು. ನಿಮ್ಮ ಬುದ್ಧಿ ಎಲ್ಲಿ ಬೀಡತ್ತಿರಾ. ನಾಯಿ ಕರಕೊಂಡು ಬಂದು ಸಿಂಹಾಸನದ ಮೇಲೆ ಕೂಡಿಸಿದ್ರೆ ಅದರ ನೀಚ ಬುದ್ದಿ ಎಲ್ಲಿ ಬಿಡುತ್ತೆ. ಹಾಂಗೆ ನಿಮ್ಮನ್ ಕರಕೊಂಡು ಬಂದು ಮನೆಲ್ಲಿ ಕೆಲಸ ಕೊಟ್ಟರೆ ಕುರಿಕಾಯೋ ಬುದ್ದಿ ಬಿಡಲ್ಲ ಅಂತಿರಲ್ಲ ಎಂದು ಬೈಯುವಾಗ ಈ ಪದವನ್ನು ಬಳಕೆ ಮಾಡುತ್ತಾರೆ.

ಹೆಣ್ಣು–ಹೆಣ್ಣಿಗೆ: ಕುರಿಕಾಯೋಸೂಳೆ:–

ಇಬ್ಬರೂ ಹೆಣ್ಣು ಮಕ್ಳು ಕುರಿಕಾಯುವವಳ ಬಗ್ಗೆ ಮಾತನಾಡುವಾಗ ಈ ಬೈಗುಳವನ್ನು ಬಳಕೆ ಮಾಡುವುದನ್ನು ಕಾಣಬಹುದು.

ಪ್ರ: ಪಕ್ಕದ ಮನೆಯಲ್ಲಿ ಇದಾಳಲ್ಲ ಅವಳು ಕುರಿಕಾಯೋಳು. ಅವಳ ಗಂಡ ಸತ್ತಾಗಿನಿಂದ ಧಿಮಾಕ ಜಾಸ್ತಿ ಆಗೈತಿ. ಹೇ ಹೋಳೋರು ಇಲ್ಲ ಕೋಳೋರು ಇಲ್ಲ ಲೇ ಅವಳಿಗೆ ಪಾಪ ಅವಳ ಗಂಡ ಎಷ್ಟು ಒಳ್ಳೆಯವನು ಆದ್ರೆ ಆ ಚಿಂತೆ ಅವಳಿಗೆ ಇಲ್ಲ. ಸೂಳೆ ಮಾಡಿದಾಂಗ ಮಾಡತ್ತಾಳೆ ಸೂಳೆಯರು ತಿರಿಗಿದಾಂಗ ತಿರಗತ್ತಾಳೆ ಎಂದು ಬೈಯುವುದನ್ನು ಈ ಸಂದರ್ಭದಲ್ಲಿ ಕಾಣಬಹುದು.

ಹೆಣ್ಣು-ಮಕ್ಕಳಿಗೆ: ಕುರಿಕಾಯೋಕೆ ಹೋಗು:-

ತಾಯಿ-ಮಕ್ಕಳಿಗೆ:-

ಮಗ ಮತ್ತು ಮಗಳಿಗೆ ಇಬ್ಬರಿಗೂ ಬೈಯುವಾಗ ಈ ಪದವನ್ನು ಬಳಸಿ ಬೈಯುವುದನ್ನು ನೋಡಬಹುದು. ಮಕ್ಕಳು ಶಾಲೆಗೆ ಸರಿಯಾಗಿ ಹೋಗುತ್ತಿಲ್ಲ, ಚೆನ್ನಾಗಿ ಓದುತ್ತಿಲ್ಲ, ಹೇಳಿದ ಮಾತು ಕೇಳುತ್ತಿಲ್ಲ ಎಂದು ತಾಯಿ ನಿಮಗೆ ಶಾಲೆ-ಗಿಲೆ ಯಾಕೆ ಸುಮ್ಮನೆ ಕುರಿಕಾಯೋಕೆ ಹೋಗಿ ಇಲ್ಲಾ ಅಂದರೆ ಒಂದು ನಾಲ್ಕು ಕುರಿ ಕೊಡಿಸಿತ್ತಿನಿ ಮೇಯಿಸೋಕೆ ಹೋಗ್ರಿ ಎಂದು ಬೈಯುತ್ತಾಳೆ.

ಯಾವ ವೃತ್ತಿ ಆದರೆ ಏನು ದೊಡ್ಡದಾಗಲಿ, ಚಿಕ್ಕದಾಗಲಿ ಈ ವೃತ್ತಿಗೆ ಅದರದೆ ಆದ ಗೌರವ ಇರುತ್ತೆ. ಈ ವೃತ್ತಿಯನ್ನು ಮಾಡಿದರೆ ನಿಮ್ಮನ್ನು ಕೇವಲವಾಗಿ ನೋಡುತ್ತಾರೆ ಗೌರವ ಕೊಡಲ್ಲ ಎಂಬ ಭಾವನೆ ಸಮಾಜದಲ್ಲಿದೆ. ಯಾವ ವೃತ್ತಿಯಾದರೂ ಕೇವಲ ಹೊಟ್ಟೆ, ಬಟ್ಟೆಗಾಗಿ ಮಾತ್ರ ಮಾಡಲಾಗುತ್ತದೆ. ಈ ವೃತ್ತಿಯ ಬಗ್ಗೆ ಕೀಳು ಭಾವನೆ ಇರುವುದರ ಜೊತೆಗೆ ಬೈಯುವಾಗಲೂ ಹೆಣ್ಣನ್ನು ಅನುಸರಿಸಿಯೇ ಬೈಯುವುದನ್ನು ಈ ಎಲ್ಲ ಪ್ರಯೋಗದಲ್ಲಿ ನೋಡಲಾಗಿದೆ.

೪.೧.೨.ವ್ಯಕ್ತಿಯ ಮೂಲಕ ವೃತ್ತಿಯನ್ನು ಬೈಯುವ ಬೈಗುಳಗಳು:-

ವೃತ್ತಿ ಆಧಾರಿಸಿ ಇರುವಂತಹ ಬೈಗುಳಗಳು ಹಲವಾರು ಇವೆ. ಈ ಎಲ್ಲ ಬೈಗುಳಗಳು ಹೆಣ್ಣನ್ನೆ ಆಧರಿಸಿ ರಚನೆಯಾಗಿವೆ.

ಉದಾ:-

ಹಜಾಮ ನನ್ ಮಗನೇ

ಹಜಾಮ ಇದಾಂಗೆ ಇದಾನ ನೋಡು ಆ ಸೂಳೆಮಗ

ಲೇ ಅಗಸ ಸೂಳೆಮಗ

ಕ್ಷೌರಿಕ ನನ್ ಮಗ

ಕ್ಷೌರಿಕ ಸೂಳೆಮಗ

ಅಕ್ಕಸಾಲಿಗ ನನ್ ಮಗ

ಅಕ್ಕಸಾಲಿಗ ಸೂಳೆಮಗ

ಬಡಿಗರ ಸೂಳೆಮಗ

ಬಡಿಗ ನನ್ ಮಗ

ಪೂಜಾರಿ ಸೂಳೆಮಗ

ಪೂಜಾರಿನ ಇಟ್ಟುಕೊಂಡ ಸೂಳೆ

ಕ್ಷೌರಿಕನ ಸೂಳೆ

ನೀನು ಪುಜಾರಿಗೆ ಹುಟ್ಟಿದ ಸೂಳೆಮಗ

ಲೇ ಅಗಸ ಸೂಳೆಮಗನೇ ಹೊಟ್ಟೆಗೆ ಏನು ತಿನ್ನುತ್ತಿಯಾ ಸ್ವಲ್ಪನಾದರೂ ಗೊತ್ತಾಗಲ್ವ ನಿನಗೆ ಎಂದು ವ್ಯಕ್ತಿಯನ್ನು ಬೈಯುವಾಗ ಇಲ್ಲಿ ವ್ಯಕ್ತಿಯನ್ನು ಬಿಟ್ಟು ಅವರು ಮಾಡುವ ವೃತ್ತಿಯ ಮೂಲಕ ಹೆಣ್ಣನ್ನು ಸೇರಿಸಿ ಬೈಯುವುದು ಒಂದು ಮಾದರಿಯಾಗಿ ಕಾಣಬಹುದು.

ವಡ್ಡ ಎಂಬ ವೃತ್ತಿಯನ್ನು ಆಧರಿಸಿ ವ್ಯಕ್ತಿಗೆ ಬೈಯುವಾಗ ಬಳಕೆಯಾಗುವ ವಿಧಾನ,

ಲೇ ವಡ್ಡ

ವಡ್ಡ ಇದಾಂಗೆ ಇದಿಯಾಲ್ಲ

ವಡ್ಡ ಸೂಳೆಮಗನೆ

ವಡ್ಡನ ಸೂಳೆ

ವಡ್ಡಸೂಳೆ

ವಡ್ಡಮುಂಡೆದು

ಎಂದು ಹೆಣ್ಣು ಗಂಡಿಗೆ ಇಬ್ಬರಿಗೂ ಬೈಯುವುದನ್ನು ನೋಡಬಹದು.

ವಡ್ಡ ಎಂಬ ಪದದ ಅರ್ಥವನ್ನು ನೋಡುವುದಾದರೆ ಇದು ಪ್ರಾಕೃತದ 'ವೊಡ್ಡ' ಎಂಬ ಪದದ ಕನ್ನಡ ರೂಪವಾಗಿದೆ. ಇದಕ್ಕೆ ಮೂರ್ಖ, ದಡ್ಡ, ಪೆದ್ದ, ಎಂಬ ಹಲವಾರು ಅರ್ಥಗಳು ಇವೆ. ಇನ್ನೊಂದು ವಡ್ಡ ಇದೆ. ಇದು ಸಂಸ್ಕೃತದ 'ಓಡ್ರದ' ತದ್ಭವ. ಇದಕ್ಕೆ ಕಲ್ಲಿನ ಕೆಲಸ ಮಾಡುವವನು ಎಂದರ್ಥ. ಪ್ರಸ್ತುದಲ್ಲಿ ಇದೇ ಅರ್ಥದಲ್ಲಿ ಬಳಕೆಯಾಗುತ್ತಿದೆ. ಈ ಕಾರಣದಿಂದ ಇದಕ್ಕೆ ಒರಟ, ಸೂಕ್ಷ್ಮತೆಯನ್ನು ತಿಳಿಯದವನು ಎಂಬ ಅರ್ಥವೂ ಇದೆ. ನಾಜೂಕು ಇಲ್ಲದವನನ್ನು ವಡ್ಡ, ವಡ್ಡಸೂಳೆಮಗ ಎಂದು ಕರೆಯುತ್ತಾರೆ. ಇದೊಂದು ಬೈಗುಳವಾಗಿ ಈಗ ಬಳಕೆಯಾಗುತ್ತಿದೆ. ಯಾವ ಕೆಲಸವನ್ನಾದರೂ ಮಾಡುವ ಸಮಯದಲ್ಲಿ

ಹೆಚ್ಚು ಕಮ್ಮಿ ಆದರೆ ಹಾಗೆ ಕೆಲಸ ಮಾಡುವವನನ್ನು ವಡ್ಡ ಎಂದು ಬೈಯುತ್ತಾರೆ. ಪ್ರೀತಿಯಿಂದ ಕರೆದರೆ ಅದು ಸಲಿಗೆಯನ್ನು ತಿಳಿಸುತ್ತದೆ. ಕೋಪದಿಂದ ಕರೆದರೆ ಅದು ಬಹಳ ತೀವ್ರವಾದ ಬೈಗುಳವಾಗುತ್ತದೆ.

ವಡ್ಡಸೂಳೆಮಗ:–

ಇಲ್ಲಿ ವಡ್ಡ ಎಂಬ ಪದ ವೃತ್ತಿವಾಚಕವಾಗಿದೆ, ಸೂಳೆ ಎಂಬ ಪದ ಸ್ತ್ರಿವಾಚಕವಾಗಿದೆ. ಈ ಎರಡರ ಜೋತೆ ಮಗ ಎಂಬ ಪುರುಷ ವಾಚಕವನ್ನು ಸೇರಿಸಿ ವಡ್ಡಸೂಳೆಮಗ ಎಂದು ಪರುಷರಿಗೆ ಬೈಯುವಾಗ ಬಳಕೆ ಮಾಡುತ್ತಾರೆ. ಇಲ್ಲಿ ಗಮನಿಸಬೇಕಾದ ವಿಷಯ ಬೈಯಿಸಿಕೊಳ್ಳುವವರು ಅದೇ ಜಾತಿಯವರು ಆಗಬೇಕಾಗಿಲ್ಲ. ಯಾವ ಜಾತಿಯವರನ್ನು ಬೈದರೂ ಈ ಪದ ಬಳಕೆ ಮಾಡುತ್ತಾರೆ. ವಡ್ಡರು ಎಂದರೆ ಅವರು ಗಲಿಜು ಆದ ವ್ಯಕ್ತಿಗಳು ಎಂದು ಸಮಾಜ ತಿಳಿದುಕೊಂಡಿದೆ. ಹಾಗಾಗಿ ಗಲಿಜಾಗಿರುವ ವ್ಯಕ್ತಿಗಳನ್ನು ಬೈಯುವಾಗ ಲೇ ವಡ್ಡ ಇದಾಂಗೆ ಇದಿಯಾಲ್ಲ ವಡ್ಡಸೂಳೆಮಗ ಎಂದು ಬೈಯುತ್ತಾರೆ. ಆದರ ಸೂಳೆ ಎಂಬ ಪದ ಹೆಣ್ಣಿಗೆ ಸಂಬಂಧಿಸಿದ ಬೈಗುಳವಾಗಿರುವುದರಿಂದ ಗಂಡಿಗೆ ಬೈಯುವಾಗ ಆ ಪದವನ್ನು ಸೇರಿಸಿ ನೀನು ಅನೈತಿಕತೆಯಿಂದ ಹುಟ್ಟಿದ ಮಗ ಎಂದು ಹೆಣ್ಣಿನ ಮೂಲಕ ಬೈಯುವುದನ್ನು ನೋಡಬಹುದು. ಮನೆಯನ್ನು ಕಟ್ಟುವ ಕೆಲಸ ಮಾಡುವವರನ್ನು ವಡ್ಡರು ಎಂದು ಕರೆಯುತ್ತಾರೆ. ವ್ಯಕ್ತಿಗೆ ಬೈಯುವಾಗ ವೃತ್ತಿಯನ್ನು ಸೇರಿಸಿ ಬೈಯುವುದು ಒಂದು ಮಾದರಿ.

ವಡ್ಡಮುಂಡೇದು:–

ಹೆಣ್ಣಿಗೆ ಬೈಯುವಾಗ ವಡ್ಡಮುಂಡೆದು ಎಂದು ಬೈಯುತ್ತಾರೆ. ಮುಂಡೆ ಎಂದರೆ ವಿಧವೆ, ಗಂಡನಿಲ್ಲದವಳು. ಮುಂಡೆಯದು ಎಂದರೆ ಮುಂಡೆಗೆ ಹುಟ್ಟಿದ ಮಗ ಎಂಬರ್ಥವನ್ನು ನೀಡುತ್ತದೆ. ಹಾಗೂ ಅನೀತಿಯಲ್ಲಿ ಹುಟ್ಟಿದ ಮಗ ಎಂಬರ್ಥವನ್ನು ಸಹ ನೀಡುತ್ತದೆ. ಮುಂಡೆಯದು ಎನ್ನುವುದೇ ಆಡುಮಾತಿನಲ್ಲಿ ಮುಂಡೇದು ಎಂದು ಸಂಕ್ಷಿಪ್ತವಾಗಿ ಬಳಕೆಯಾಗುತ್ತದೆ. ಇಲ್ಲಿಯೂ ವೃತ್ತಿಯನ್ನು ಆಧಾರಿಸಿ ಬೈಯುವ ಬೈಗುಳವಾಗಿ ಬಳಕೆಯಾಗುತ್ತದೆ. ಇದು ನಕಾರಾತ್ಮಕವಾಗಿ ಬಳಕೆಯಾಗುತ್ತದೆ. ಸಕಾರಾತ್ಮಕವಾಗಿ ಬಳಕೆಯಾದರೆ ಮುಂಡೆಯರು ಎಂದರೆ ಗಂಡ ಇಲ್ಲದವಳು, ಸಾಮಾನ್ಯವಾಗಿ ದಿಕ್ಕಿಲ್ಲದವಳು ಎಂಬಾರ್ಥವನ್ನು ನೀಡುತ್ತದೆ. ಹೀಗೆ ಯೋಚನೆ ಮಾಡಿದರೆ ಇದು ಬೈಗುಳ ಪದವಾಗಿ ಬಳಕೆಯಾಗುವುದಿಲ್ಲ ಎಂದು ಹೇಳಬಹುದು.

ಪೂಜಾರಿಸೂಳೆ:–

ಇಲ್ಲಿ ಪೂಜಾರಿಕೆ ಒಂದು ವೃತ್ತಿಯಾಗಿದೆ. ಹೆಣ್ಣು ಹೆಣ್ಣಿಗೆ ಬೈಯುವಾಗ ಇಬ್ಬರೂ ಜಗಳವಾಡುವ ಸಂದರ್ಭದಲ್ಲಿ ಇಬ್ಬರೂ ಒಬ್ಬರಿಗೆ ಒಬ್ಬರೂ ಬೈದುಕೊಳ್ಳುವಾಗ,

ಪ್ರ: ನೀನು ಏನೂ ಹೇಳತ್ತಿಯಾ ಲೇ ಬೋಸುಡಿಸೂಳೆ ನೀನೇನು ಸರಿ ಇದಿಯಾ ಅಂತ ನನಗೆ ಹೇಳತ್ತಿಯಾ ಪೂಜಾರಿಸೂಳೆ ಪೂಜಾರಿನ ಇಟ್ಟುಕೊಂಡೋಳೇ ಎಂದು ಬೈಯುವುದನ್ನು ನೋಡಬಹುದು.

ಈ ಬೈಗುಳದ ಅರ್ಥ ನೀನೆ ಸರಿಯಿಲ್ಲ ನನಗೆ ಏನು ನೀತಿ ಹೇಳೋಕೆ ಬರುತ್ತೀಯಾ ಎಂಬುವುದು ಒಂದು ಅರ್ಥ ಆದರೆ ಇನ್ನೊಂದು ನೀನು ನಡೆತೆಗೆಟ್ಟೋಳು ಎಂದು ಬೈಗುಳದ ಮೂಲಕ ಹೇಳುವುದನ್ನು ಗಮನಿಸಬಹುದು.

ಹೀಗೆ ವೃತ್ತಿಗೆ ಸಂಬಂಧಿಸಿದ ಬೈಗುಳಗಳಲ್ಲಿ ಹೆಣ್ಣನ್ನು ಕೇಂದ್ರೀಕರಿಸಿ ಬೈಗುಳಗಳು ರಚನೆಯಾಗಿರುವುದನ್ನು ನೋಡಬಹುದು ಮತ್ತು ವ್ಯಕ್ತಿಯ ಮೂಲಕ ವೃತ್ತಿಯನ್ನು ಬೈಯುವುದು, ವೃತ್ತಿಯ ಮೂಲಕ ವ್ಯಕ್ತಿಯನ್ನು ಬೈಯುವುದರ ಜೊತೆಗೆ ಹೆಣ್ಣನ್ನು ಬೈಯುವುದನ್ನು ಇಲ್ಲಿ ನೋಡಬಹುದು. ಯಾರು-ಯಾರಿಗೆ ಹೇಗೆ ವೃತ್ತಿಯನ್ನು ಆಧಾರಿಸಿ ಬೈಯುತ್ತಾರೆ ಎಂಬುವುದನ್ನು ಈ ಭಾಗದಲ್ಲಿ ದಾಖಲಿಸಲಾಗಿದೆ.

೪.೨.ಆರೋಪ ರೂಪದ ಬೈಗುಳಗಳು:-

ಆರೋಪ ಮಾಡಿ ಬೈಯುವ ಬೈಗುಳಗಳು ಇವೆ. ಆದರೆ ಕಡಿಮೆ ಸಂಖ್ಯೆಯಲ್ಲಿವೆ. ಆರೋಪಿಸಿ ಬೈಯುವ ಬೈಗುಳಗಳ ಸ್ವರೂಪ ನೋಡುವುದಾದರೆ, ವ್ಯಕ್ತಿ ತಪ್ಪು ಮಾಡಲಿ ಮಾಡದೇ ಇರಲಿ ಆರೋಪಿಸಿ ಬೈಯುವಂತಹದನ್ನು ನೋಡಬಹುದು. ಒಂದು ಅಂಶವನ್ನು ಗಮನಿಸುವುದಾದರೆ ಪ್ರೀತಿಯಿಂದ ಬೈಯುವಾಗಲೂ ಮತ್ತು ಮಗುವನ್ನು ಮುದ್ದಾಡುವ ಸಂದರ್ಭದಲ್ಲಿ ಈ ರೀತಿಯ ಬೈಗುಳಗಳ ರೂಪವನ್ನು ಕಾಣಬಹುದು. ಆದರೆ ಅವರ ಮೇಲೆ ಆರೋಪ ಮಾಡುತ್ತಿಲ್ಲ ಎಂಬಂಶವನ್ನು ಗಮನಿಸಬೇಕಾಗುತ್ತದೆ. ಇನ್ನೊಂದು ಅಂಶವನ್ನು ನೋಡುವುದಾದರೆ ತಪ್ಪು ಮಾಡದೇ ಇದ್ದರೂ ಅವರ ಮೇಲೆ ಆರೋಪಿಸಿ ಬೈಯುವುದನ್ನು ನೋಡಬಹುದು. ಇಂತಹ ಸಂದರ್ಭ ಬರಲು ಕಾರಣ ಅವರಿಗೆ ಸರಿಯಾದ ಮಾಹಿತಿ ಇಲ್ಲದೇ ಇದ್ದಾಗ ಈ ರೀತಿಯ ಘಟನೆಗಳು ಆಗುತ್ತವೆ. ಆರೋಪ ಮಾಡಿ ಬೈಯುವಂತಹ ಬೈಗುಳಗಳು ಕೆಲವೊಮ್ಮೆ ತೀವ್ರ ಅಥವಾ ಭಯಹಂಕರ ಘಟನೆಗಳಿಗೆ ಕಾರಣವಾಗುತ್ತವೆ.

ಆರೋಪ ರೂಪದಲ್ಲಿರುವ ಬೈಗುಳಗಳನ್ನು ೩ ನೆಲೆಯಲ್ಲಿ ನೋಡಬಹುದು.

೪.೨.೧. ಪ್ರೀತಿಯಿಂದ ಆರೋಪ ಮಾಡಿ ಬೈಯುವಂತಹ ಬೈಗುಳಗಳ ರೂಪ

೪.೨.೨. ತಪ್ಪು ಮಾಡದೇ ಇದ್ದಾಗ ಆರೋಪ ಮಾಡಿ ಬೈಯುವಂತಹ ಬೈಗುಳಗಳ ರೂಪ

೪.೨.೩. ತಪ್ಪು ಮಾಡಿದಾಗ ಆರೋಪ ಮಾಡಿ ಬೈಯುವಂತಹ ಬೈಗುಳಗಳ

ರೂಪ

೪.೨.೧. ಪ್ರೀತಿಯಿಂದ ಆರೋಪ ಮಾಡಿ ಬೈಯುವಂತಹ ಬೈಗುಳಗಳ ರೂಪ:–

ತಾಯಿ–ಮಕ್ಕಳಿಗೆ–ಮಗ

ಮಗಳಿಗೆ

ತಂದೆ–ಮಕ್ಕಳಿಗೆ–ಮಗ

ಮಗಳಿಗೆ

ಅಜ್ಜಿ–ಮೊಮ್ಮಕ್ಕಳಿಗೆ

ತಾಯಿ–ಮಕ್ಕಳಿಗೆ:–

ತಾಯಿ–ಮಗನಿಗೆ : ಕಳ್ಳ:–

ಕಳ್ಳ ಎಂಬ ಪದ ಎರಡು ಅರ್ಥದಲ್ಲಿ ಬಳಕೆಯಾಗುತ್ತದೆ.

೧. ಕಳುವು ಮಾಡುವವರು, ಕದಿಯುವವರು

೨. ಕದ್ದು ಕೈಗೆಸಿಗದೆ ತಪ್ಪಿಸಿಕೊಳ್ಳುವವರು

ಕಳ್ಳ ಪದದ ಮೊದಲ ಹಂತದ ಅರ್ಥ ಕದಿಯುವುದು. ಇದರ ಮುಂದುವರಿದ ಎರಡನೇ ಹಂತ ಕದ್ದು ಕೈಗೆಸಿಗದೆ ಓಡಿಹೋಗುವವರು. ಈ ಎರಡು ಕ್ರಿಯೆಗಳು ಕಳ್ಳ ಎಂಬ ಅರ್ಥದ ವ್ಯಾಪ್ತಿಗೆ ಒಳಪಡುತ್ತವೆ. ಹೋಲಿಕೆ ರೂಪದ ಬೈಗುಳದಲ್ಲಿ ತಾಯಿ ಮಕ್ಕಳಿಗೆ ಅಥವಾ ಅಜ್ಜಿಮೊಮ್ಮಕ್ಕಳಿಗೆ ಬೈಯುವ ಸಂದರ್ಭದಲ್ಲಿ ಇದರ ಎರಡನೇ ಹಂತದ ಅರ್ಥ ಆರೋಪವಾಗುತ್ತಿದೆ. ಅಂದರೆ ಕೆಲಸ ಹೇಳಿದರೆ ತಪ್ಪಿಸಿಕೊಳ್ಳುವ, ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ.

ಪ್ರ: ತಾಯಿ–ಮಗನನ್ನು ಮುದಾಡ್ಡುವಾಗ ನೀನು 'ಕಳ್ಳ' ಎಷ್ಟು ಚೇಷ್ಟೆ ಮಾಡೋದನ್ನು ಕಲಿತು ಬಿಟ್ಟಿಯಾ. ಲೇ ಕಳ್ಳ, ಚೀ ಕಳ್ಳ ಎಂದು ಮುದ್ದಾಡುವ ಸಂದರ್ಭದಲ್ಲಿ ಈ ಪದವನ್ನು ಬಳಕೆ ಮಾಡುತ್ತಾರೆ. ಇಲ್ಲಿ ತಾಯಿ ಮಗನನ್ನು ನೀನು ಕಳ್ಳ ಎಂದು ಆರೋಪಿಸುತ್ತಿಲ್ಲ.

ಆದರೆ ಸಂತೋಷವಾಗಿ ಅಥವ ಮುದ್ದಾಡುವ ಸಂದರ್ಭದಲ್ಲಿ ಬಳಸುವಾಗ ಈ ಪದ ಬೈಗುಳ ಪದವಾಗಿ ಬಳಕೆಯಾಗುವುದಿಲ್ಲ. ಇದು ಒಂದು ಪ್ರತೀಮೆಯಾಗಿ ಬಳಕೆಯಾಗುತ್ತದೆ. ಒಂದು ವೇಳೆ ಇದೇ ಪದ ಕೋಪದಲ್ಲಿ ಬಳಸುವಾಗ ಬೈಗುಳ ಪದವಾಗಿ ಬಳಕೆಯಾಗುತ್ತದೆ ಎಂದು ಹೇಳಬಹುದು.

ತಾಯಿ–ಮಗಳಿಗೆ : ಕಳ್ಳಿ:–

ತಾಯಿ ಮಗಳಿಗೆ ಕೆಲಸ ಮಾಡು ಎಂದಾಗ ಅವಳು ನಾನು ಮಾಡಲ್ಲ ಎಂದು ಹೇಳಿದಾಗ ಅಥವಾ ಮಾಡದೆ ಇದ್ದಾಗ ನೀನು ಕಳ್ಳಿ ಅಲ್ಲಾ ಕೆಲಸ ಹೇಳಿದರೆ ಮಾಡಲ್ಲ ಎಂದು ಹೇಳುವಾಗ ಸಹ ಈ ಪದವನ್ನು ಬಳಕೆ ಮಾಡುತ್ತಾರೆ. ಆದರೆ ತಾಯಿ ಮಗಳಿಗೆ ಸಿಟ್ಟಿನಲ್ಲಿ ಬೈದರೂ ಮತ್ತು ಪ್ರೀತಿಯಿಂದ ಹೇಳಿದರೂ ಇದು ಆರೋಪದ ಬೈಗುಳ ಆಗುವುದಿಲ್ಲ. ಮತ್ತು ತಾಯಿ ಮಗಳ ಮೇಲೆ ಆರೋಪಿಸುತ್ತಿಲ್ಲ ಎಂಬ ಅಂಶವನ್ನು ಗಮನಿಸಹುದು.

ಪ್ರ: ಲೇ ಕಳ್ಳಿ ಕೆಲಸ ಹೇಳಿದರೆ ಒಂದು ದಿನನೂ ಮಾಡಲ್ಲ ಅಲ್ಲಾ ಸೋಮಾರಿತರ ಮಾಡತ್ತಿಯಾ ನೀನು ಮೈಗಳ್ಳಿ ಇದ್ದಾಂಗೆ ನೀನು ಎಂದು ತಾಯಿ ಮಗಳಿಗೆ ಬೈಯುವುದನ್ನು ಕಾಣಬಹುದು.

ಅಜ್ಜಿ–ಮೊಮ್ಮಕ್ಕಳಿಗೆ : ಕಳ್ಳಿ:–

ಮೆಮ್ಮಗಳು ಶಾಲೆಗೆ ಹೋಗದೆ ಇದ್ದಾಗ ಅಜ್ಜಿ ಈ ಪದವನ್ನು ಬಳಸುವುದನ್ನು ನೋಡಬಹುದು.

ಪ್ರ: ಅವರ ಅಮ್ಮ ನೋಡಿದರೆ ನನ್ ಮಗಳನ್ನ ಶಾಲೆಗೆ ಕಳಸು ಅಂತಾ ಹೇಳಿ ಕೆಲಸಕ್ಕೆ ಹೋಗ್ಯಾಳ. ಇವಳು ನೋಡಿದರೆ ಕಳ್ಳಿ ಶಾಲೆಗೆ ಹೋಗಲ್ಲ ಅಂತಾ ಅಳತಾಳ ಎಂಬ ಸಂದರ್ಭದಲ್ಲಿ ಈ ಪದ ಬಳಕೆಯಾಗುತ್ತದೆ. ಆದರೆ ಅಜ್ಜಿ ಮೊಮ್ಮಗಳ ಮೇಲೆ ಆರೋಪ ಮಾಡುತ್ತಿಲ್ಲ. ನೀನು ಕಳ್ಳಿ ಆಗಬೇಡ ಶಾಲೆಗೆ ಹೋಗಿ ಚೆನ್ನಾಗಿ ಓದಿ ಒಳ್ಳೆ ಹುಡುಗಿ ಆಗಬೇಕು ಎಂಬುವುದು ಅಜ್ಜಿಯ ಆಸೆ ಆಗಿದೆ. ಹೀಗೆ ಬುದ್ಧಿ ಹೇಳುವಾಗ ಈ ಅರ್ಥದಲ್ಲಿ ಈ ಪದ ಬಳಕೆಯಾಗುತ್ತದೆ ಹೋರತು ಅಜ್ಜಿ ಮೊಮ್ಮಗಳ ಮೇಲೆ ಆರೋಪ ಮಾಡುತ್ತಿಲ್ಲಾ ಎಂಬ ಅಂಶವನ್ನು ತಿಳಿಯಬೇಕಾಗುತ್ತದೆ.

೪.೨.೨ ತಪ್ಪು ಮಾಡದೆ ಇದ್ದಾಗ ಆರೋಪ ಮಾಡಿ ಬೈಯುವಂತಹ ಬೈಗುಳಗಳ ರೂಪ:–

ಗಂಡು–ಗಂಡಿಗೆ : ಕಳ್ಳಸೂಳೆಮಗ:–

ಮನೆಯಲ್ಲಿ ವಸ್ತು ಕಳ್ಳತನ ಆಗಿದೆ. ಆದರೆ ಕಳ್ಳತನ ಮಾಡಿದ ವ್ಯಕ್ತಿ ತಾನು ನಿರಪರಾಧಿ ಎಂದು ಸಾಬಿತು ಮಾಡಲು ತಪ್ಪು ಮಾಡದೆ ಇರುವ ವ್ಯಕ್ತಿಯ ಮೇಲೆ ಅಪರಾಧ ಮಾಡುವಾಗಲೂ ಈ ಬೈಗುಳ ಬಳಕೆಯಾಗುವುದನ್ನು ನೋಡಬಹುದು. ಆದರೆ ಇಲ್ಲಿ ತಪ್ಪು ಮಾಡಿದ್ದು ಗಂಡು ಆಗಿದ್ದರೂ ಇಲ್ಲಿ ಹೆಣ್ಣಿನ ಮೂಲಕವೇ ಬೈಯುವುದು ಒಂದು ಮುಖ್ಯವಾದ ಅಂಶವಾಗಿ ಕಂಡುಬರುತ್ತದೆ.

ಪ್ರ: ನಾನು ದುಡ್ಡು ಕಳ್ಳತನ ಮಾಡಿಲ್ಲ ಅವನು ಇದನಲ್ಲ ನಿನ್ನ ಪ್ರೀತಿಯ ಮಗ ಅವನೇ ಆ ಕಳ್ಳಸೂಳೆಮಗ ತಗೊಂಡಿದ್ದು ನಾನಲ್ಲ ಹಾಂಗೆ ನನ್ನ ಮೇಲೆ ಬಂದು

ಬಿಡತ್ತಾರೆ. ಬರೀ ಯಾವಾಗಲೂ ಹಿಂಗೆ ಎಂದು ತಪ್ಪು ಮಾಡದೆ ಇದ್ದರೂ ಅನಿವಾರ್ಯವಾಗಿ ಕಳ್ಳತನ ಮಾಡದೇ ಇದ್ದರೂ ಅವನೇ ಕಳ್ಳ ಎಂದು ಆರೋಪ ಮಾಡುವುದನ್ನು ನೋಡಬಹುದು.

ಹೆಣ್ಣು-ಹೆಣ್ಣಿಗೆ : ಮೋಸಗಾರಸೂಳೆ:-

ಹೆಣ್ಣು ಮಕ್ಕಳು ಮಾತಾನಾಡುವಾಗ,

ಪ್ರ: 'ಅವಳದು ಏನು ಹೇಳತಿ ಬೀಡು ಅವಳು ಮೋಸಗಾರ ಸೂಳೆ. ಬಲು ಧಿಮಾಕಿನ ಸೂಳೆ ಅವಳು ನಾವು ಏನಾದರೂ ಹೇಳಿದರೆ ಅವಳು ಒಂದು ಹೇಳತ್ತಾಳೆ. ಅವಳು ನಾವಾಗಿ ಮಾತಾಡಿಸಿದರೆ ಮಾತ್ರ ಮಾತಾಡಸತ್ತಾಳೆ. ಇಲ್ಲ ಅಂದರೆ ಇಲ್ಲ. ಅವಳಿಗೆ ಏನು ಮೋಸ ಮಾಡತ್ತಿವಿ ಅವ್ವ ಹಾಂಗೆ ನಾವು ಏನು ಮೋಸಗಾರರ' ಎಂದು ಹೆಣ್ಣಿಮಕ್ಕಳು-ಹೆಣ್ಣುಮಕ್ಕಳು ಮಾತಾನಾಡುವ ಸಂದರ್ಭದಲ್ಲಿ ಬೇರೆ ಮಾಡದೆ ಇದ್ದರೂ ತಮ್ಮಗೆ ಗೊತ್ತಿಲ್ಲದ ಹಾಂಗೆ ತಾವೇ ಆರೋಪ ಮಾಡಿಕೊಂಡು ಬೈದುಕೊಳ್ಳುವುದನ್ನು ಸಹ ನೋಡಬಹುದು.

ಹೆಣ್ಣು-ಮಕ್ಕಳಿಗೆ: ಮೋಸಗಾರ ಸೂಳೆಮಗ:-

ಮಗುವನ್ನು ತಮಾಷೆಗೆ ಬೈಯುವಾಗ ಈ ಬೈಗುಳದ ಬಳಕೆಯ ರೂಪವನ್ನು ನೋಡುವುದಾದರೆ,

ಪ್ರ: ನಿನ್ನ ಮಗ ಏನು ಮೋಸಗಾರ ಸೂಳೆಮಗ ಇದ್ದಾನ ಕೈಯಾಗ ಇದ್ದ ಬಾಳೆಹಣ್ಣು ಕೊಟ್ಯಾಂಗೆ ಮಾಡಿ ಹಿಂದೆ ಸರಿತಾನ ನೋಡು ಎಷ್ಟು ಧಿಮಾಕ ಇರಬೇಡ ಇವನಿಗೆ ತುನ್ನಿಯಾಕ ಒದಿಬೇಕು ನೋಡು ತಿಂದ ಮನೆಗೆ ಎಂಡೆ ಹೋಗಿಯೋ ಸೂಳೆಮಗ ನೋಡು ನಿನ್ನ ಮಗ ಧಿಮಾಕದವನು ಎಂದು ಬೈಯುವುದನ್ನು ನೋಡಬಹುದು.

ಪರಿಚಿತ ಮಗುವಿಗೆ ಬೈಯುವಾಗ ಅದು ಏನು ತಪ್ಪು ಮಾಡದೇ ಇದ್ದರೂ ಮೋಸಗಾರ ಸೂಳೆಮಗ ಎಂದು ಆರೋಪ ಮಾಡಿ ಬೈಯುವುದನ್ನು ನೋಡಬಹುದು. ಆದರೆ ಉದ್ದೇಶಪೂರ್ವಕವಾಗಿ ಆರೋಪಿಸುತ್ತಿಲ್ಲ. ತಮಾಷೆಗೆ ಈ ಪದ ಬಳಕೆಯಾಗುತ್ತದೆ ಅಷ್ಟೆ. ಆದರೂ ತಮಾಷೆಗೆ ಬಳಕೆ ಮಾಡಿದರೂ ಅನೈತಿಕ ಸಂಬಂಧಿದಿಂದ ಹುಟ್ಟಿದ ಮಗ ಎಂದು ಸಂಬೋಧಿಸುತ್ತಾರೆ. ಅಲ್ಲಿಯೂ ಆ ಮಗುವಿನ ತಾಯಿ ಬೈಗುಳಕ್ಕೆ ಒಳಗಾಗುತ್ತಾಳೆ. ಒಂದಂಶವನ್ನು ಗಮನಿಸುವುದಾದರೆ ಬೈಯುವ ಹೆಣ್ಣು ಕೆಳವರ್ಗದವಳು ಮಗು ಮೇಲ್ವರ್ಗದವರದು. ಅವರ ಪ್ರೀತಿಯ ಒಡನಾಟದ ಆಧಾರದ ಮೇಲೆ ಮೇಲ್ವರ್ಗದ ಮಗುವಿಗೆ ಈ ರೀತಿಯಲ್ಲಿ ಆರೋಪ ಮಾಡಿ ಬೈಯುವುದನ್ನು ನೋಡಬಹುದು.

೪.೨.೩ ತಪ್ಪು ಮಾಡಿದಾಗ ಆರೋಪ ಮಾಡಿ ಬೈಯುವ ಬೈಗುಳಗಳ ರೂಪ:-

ಉದಾ: ಮನೆಮುರ್ಖ:-

ತಾಯಿ-ಮಗನಿಗೆ: ಮನೆಮುರ್ಖ ಸೂಳೆಮಗನೆ:

ಪ್ರ: ಲೋ ಮನೆಮುರ್ಖ ಸೂಳೆಮಗನೆ ದುಡಿದಿದ್ದ ಕೂಲಿನ ತಿಂದು ಏತು ಬಿಟ್ಟಿಯಾಲ್ಲಾ ಮನೆ ಬಾಳ್ವೆ ಯಾರು ನಡಸತ್ತಾರೆ. ನಿಮ್ಮ ಅಮ್ಮನ್ ಮಿಂಡ್ರು ನಡಸ್ತಾರಾ. ಮೋಸಗಾರ ಸೂಳೆಮಗನ್ ತಂದು ಎಂದು ತಾಯಿ ಮಗನ ಮೇಲೆ ಆರೋಪ ಮಾಡಿ ಬೈಯುತ್ತಾಳೆ. ಆಳಾಗಿ ಹೋಗು ಎಲ್ಲಾದ್ದಾರೂ ಹೋಗಿ ಸಾಯಿ ಯಾಕ ಬದುಕಿದಿಯಾ ನನ್ನ ಜೀವ ತಿನ್ನೋಕೆ ಎಂದು ಬೈಯುವುದನ್ನು ಈ ಪ್ರಯೋಗದಲ್ಲಿ ನೋಡಬಹುದು.

ಅಂದರೆ ತಾಯಿ ಮಗನಿಗೆ ಆರೋಪಿಸುವ ಉದ್ದೇಶವಿಲ್ಲದೆ ಇದ್ದರೂ ತಪ್ಪು ಮಾಡಿದಾಗ ಆರೋಪ ಮಾಡಿ ಬೈಯುವುದು ಸಹಜ. ಮಗ ಕೂಲಿ ಕೆಲಸ ಮಾಡಿ ಕೂಲಿ ತೆಗೆದುಕೊಂಡು ಮನೆಗೆ ಬರತ್ತಾನೆ ಎಂದು ತಾಯಿ ನಿರೀಕ್ಷೆಯಲ್ಲಿ ಇದ್ದಾಗ ಮಗ ಆ ಹಣವನ್ನು ಖರ್ಚು ಮಾಡಿ ಮನೆಗೆ ಬಂದಾಗ ಈ ರೀತಿಯ ಆರೋಪದ ಬೈಗುಳವನ್ನು ಕಾಣಬಹುದು. ಮನೆಯ ಜವಾಬ್ದಾರಿಯನ್ನು ನಡೆಸಿಕೊಂಡು ಹೋಗಬೇಕಾದ ಮಗನೇ ಈ ರೀತಿಯಲ್ಲಿ ಹಣವನ್ನು ದುಂದುವೆಚ್ಚ ಮಾಡುವುದನ್ನು ಕಂಡು ತಾಯಿ ರೋದನೆ ಪಡೆಯುತ್ತ ಮಗನಿಗೆ ಆರೋಪ ಮಾಡುವುದರ ಜೊತೆಗೆ ಶಾಪಿಸುವುದನ್ನು ಕಾಣಬಹುದು. ಹಾಗೂ ತನ್ನನ್ನು ತಾನೆ ಅಶ್ಲೀಲವಾಗಿ ಬೈದುಕೊಳ್ಳುವುದನ್ನು ಸಹ ಈ ಪ್ರಯೋಗದಲ್ಲಿ ನೋಡಬಹುದು.

ಗಂಡು–ಗಂಡಿಗೆ : ಕಳ್ಳಸೂಳೆಮಗ:–

ಒಬ್ಬ ವ್ಯಕ್ತಿ ಕಳ್ಳತನ ಮಾಡಿ ನಾನು ಕಳ್ಳತನ ಮಾಡಿಲ್ಲ ಎಂದು ವಾದ ಮಾಡುವುದರ ಮೂಲಕ ಬೇರೆ ವ್ಯಕ್ತಿಯ ಮೇಲೆ ಆರೋಪಿಸಿ ಹೇಳಿದರೂ ಅಲ್ಲಿ ಆ ವ್ಯಕ್ತಿ ಸಾಕ್ಷಿ ಸಮೇತ ಸಿಕ್ಕಿ ಹಾಕಿಕೊಂಡಾಗ,

ಪ್ರ: ಲೇ ಕಳ್ಳಸೂಳೆಮಗನೆ ನೀನು ಕಳ್ಳತನ ಮಾಡಿ ಬೇರೆಯವರ ಮೇಲೆ ಹಾಕಿತ್ತಿಯಲ್ಲಾ ನಾಚಿಕೆ ಆಗಲ್ವಾ ನಿನಗೆ. ನಿನ್ನ ಮುಖ ನೋಡಿದರೆ ಗೋತ್ತಾಗಲ್ವಾ ನೀನೆ ಕಳ್ಳ ಅಂತಾ. ಕಳ್ಳ ಯಾರು ಅಂತಾ ಗೊತ್ತಾಗದೇ ಇರುವ ಸೂಳೆಮಕ್ಳು ಅನ್ನಕೊಂಡಿಯಾ ನಮ್ಮನ್ನ ನೀನು ಎಂದು ತಪ್ಪು ಮಾಡಿದ ವ್ಯಕ್ತಿಯನ್ನು ಬೈಯುವಾಗ ಈ ಆರೋಪ ಮಾಡುವುದರ ಜೋತೆಗೆ ಏನು ತಿಳಿಯದ ಅವನ ತಾಯಿಯನ್ನು ಅನೈತಿಕ ಚಟುವಟಿಕೆಯುಳ್ಳವಳು ಎಂದು ಆರೋಪ ಮಾಡುವುದನ್ನು ಸಹ ಕಾಣಬಹುದು.

ಹೆಣ್ಣು–ಹೆಣ್ಣಿಗೆ : ಮೋಸಗಾರ ಸೂಳೆ:

ಪ್ರ: ಮೋಸಗಾರಸೂಳೆ ಅವಳು ಕೆಟ್ಟು ಹೋದ ಹಣ್ಣು ತಂದು ಚೆನ್ನಾಗಿ ಇದ್ದವಾ ಎಂದು ಹೇಳಿ ನಮಗೆ ಅಬ್ಬರಿಸಿ ಹೋಗಿಬಿಟ್ಳು ನೋಡು ಇತ್ತ ಹಣ ಹೋಗೋದು ತಪ್ಪಲಿಲ್ಲ ಇತ್ತ ಹಣ್ಣೂನೂ ಬೇಸ್ ಇಲ್ಲಾ ಮೋಸಮಾಡಿ ಬಿಟ್ಳು. ಇತ್ಲಾಗ ಇನ್ನೊಂದು ಸಲ ಬರಲಿ ಅವಳು ಮೋಸಗಾರಸೂಳೆ ಆಗ ಮಾಡತ್ತಿನಿ ಎಂದು ಪರೋಕ್ಷವಾಗಿ ಆರೋಪ ಮಾಡುವುದನ್ನು ಕಾಣಬಹುದು.

ಇನ್ನೊಂದು ಸಂದರ್ಭದಲ್ಲಿ ಅದೇ ಹೆಣ್ಣು ಮತ್ತೆ ಮಾರಾಟ ಮಾಡಲು ಬಂದಾಗ ಪ್ರತ್ಯಕ್ಷವಾಗಿ ಏನು ಮೋಸಗಾರಸೂಳೆ ಐದಿ ಅವ್ವ ನೀನು ಆವತ್ತು ಸರಿಯಿಲ್ಲ ಏನಿಲ್ಲ ಹಣ್ಣು ನಮಗೆ ಕೊಟ್ಟು ಹೋಗಿಬಿಟ್ಟಿಯಾ ಹೆಂಗೆ ತಿಳಿತೈತಿ ನಿನಗೆ ರೊಕ್ಕ ಏನು ಪುಗ್ಸಟ್ಟೆ ಬರತ್ತಾವ ನಮಗೆ ಕೆಟ್ಟು ಹೋದ ಹಣ್ಣೆಲ್ಲ ತಗೋನೊಕೆ ಎಂದು ಬೈಯುವುದನ್ನು ಕಾಣಬಹುದು.

ಅಂದರೆ ಕೆಟ್ಟು ಹೋದ ಹಣ್ಣುಗಳನ್ನು ಮಾರಿದ ಹೆಣ್ಣನ್ನು ಕುರಿತು ಆರೋಪ ಮಾಡಿ ಬೈಯುವ ರೂಪವನ್ನು ನೋಡಬಹುದು. ಹಣ್ಣುಗಳು ವ್ಯಾಪಾರ ಮಾಡುವ ದೃಷ್ಟಿಯಿಂದ ಆ ಹಣ್ಣು ಚೆನ್ನಾಗಿ ಇದ್ದಾವೆ ಎಂದು ಸುಳ್ಳು ಹೇಳಿರಬಹುದು. ಮತ್ತು ಹಣ್ಣು ಕೆಟ್ಟು ಹೋಗಿರುವ ವಿಷಯ ಅವಳಿಗೂ ತಿಳಿಯದೇ ಇರಬಹುದು ನಕಾರತ್ಮವಾಗಿ ಯೋಚನೆ ಮಾಡುವ ಬದಲು ಸಕಾರತ್ಮಕವಾಗಿ ಯೋಚನೆ ಮಾಡಿದರೆ ಅವಳದು ತಪ್ಪು ಇಲ್ಲ ಎನ್ನುವುದು ತಿಳಿಯುತ್ತದೆ. ಆದರೆ ನಕಾರತ್ಮಕವಾಗಿ ಯೋಚನೆ ಮಾಡಿದರೆ ಅವಳು ಆರೋಪದ ಬೈಗುಳಕ್ಕೆ ಒಳಪಡುತ್ತಾಳೆ ಎಂಬುವುದನ್ನು ತಿಳಿಯಬಹುದು.

ಮೋಸಗಾರ ಎಂಬ ಪುರುಷವಾಚಕ ಬೈಗುಳದ ರೂಪಕ್ಕೆ 'ಸೂಳೆ' ಅಥವಾ 'ಗಾರತಿ' (ಗಾರ್ತಿ) ಎಂಬ ಪದಗಳನ್ನು ಸೇರಿಸಿ ಹೆಣ್ಣಿಗೆ ಬೈಯುವಾಗ ಬಳಸುವುದನ್ನು ಕಾಣಬಹುದು.

ಉದಾ:– ಮೋಸಗಾರತಿ

ಮೋಸಗಾರಸೂಳೆ

ಈ ಪದವನ್ನು ಜನಸಾಮಾನ್ಯರು ದಿನನಿತ್ಯ ನಡೆಯುವ ವ್ಯವಹಾರದ ಸಂದರ್ಭದಲ್ಲಿ ಬಳಕೆ ಮಾಡುತ್ತಾರೆ. ಬಟ್ಟೆ ಮಾರುವವರೋ, ತರಕಾರಿ ಮಾರುವವರೋ ಇನ್ನೂ ಯಾವುದೇ ವ್ಯಾಪರ ಮಾಡುವವರನ್ನು ಕುರಿತು ಬೈಯುವಾಗ ಬೆಲೆ ಜಾಸ್ತಿ ಹೇಳಿ ಅವು ಸರಿಯಿಲ್ಲದಿದ್ದರೂ ನಮ್ಮಗೆ ವ್ಯಾಪಾರ ಮಾಡಿ ಮೋಸ ಮಾಡಿದರೂ ಅವರು ಮೋಸಗಾರರು ಎಂದು ಆರೋಪಿಸಿ ಬೈಯುವುದನ್ನು ನೋಡಬಹುದು. ಇಂತಹ ದಿನನಿತ್ಯದ ವ್ಯಾಪಾರವಹಿವಾಟಿನ ಸಂದರ್ಭದಲ್ಲಿ ಈ ಪದ ಬಳಕೆ ಮಾಡುವುದನ್ನು ಕಾಣಬಹುದು.

ತಂದೆ–ಮಗನಿಗೆ–ಮನೆಮುರ್ಖಸೂಳೆಮಗ:–

ಪ್ರ: ಲೇ ಮನೆಮುರ್ಖ ಸೂಳೆಮಗ ನಾನು ಏನು ಹೇಳಿದ್ದೇ ನಿನಗೆ ಆ ಗಂಗಪ್ಪ ಅವರ ಮನೆಗೆ ಹೋಗಿ ಗದ್ದಿಗೆ ಆಳು ಕಳಸು ಎಂದು ಹೇಳಿ ಹಾಂಗೆ ಬರುವ ದಾರಿಯಲ್ಲಿ ಅಂಗಡಿ ಇದೆ ಹಾಂಗೆ ಬೀಡಿ ತಗೊಂಡು ಬಾ ಅಂತ ಹೇಳಿದರೆ ಹಾಂಗೆ ನಿಗ್ರಿಕೊಂಡು ಬಂದಿಯಾಲ್ಲ. ಯಾವಾಗ ಬುದ್ದಿ ಬರುತ್ತೆ ಲೇ ನಿನಗೆ ಮನೆಮುರ್ಖಸೂಳೆಮಗನೆ ನನ್ನ ಮನೆ ಮುರಿದು ಬಿಡತ್ತಿಯಾ ನೀನು. ನಾನು ಸತ್ತ ಮೇಲೆ ನಿನಗೆ ಬುದ್ದಿ ಬರುತ್ತೆ. ಮನೆಮುರ್ಖಸೂಳೆಮಗನೆ ಹೆಂಗೆ ಇದಿಯಾ ನೋಡು ದನ ಇದಾಂಗೆ ಇದ್ದಿಯಾ ಸ್ವಲ್ಪನಾದರೂ ಬುದ್ದಿ ಬೇಡವಾ ನಿನಗೆ. ಕಡಿದರೆ ನಾಲ್ಕು ತುಂಡು ಆಗತ್ತಿಯಾ ಹೇಳಿದ್ದು ಕೆಲಸ ಮಾಡೋಕೆ ಆಗಲ್ಲಾ ಇವನಿಗೆ ಎಂದು ಬೈಯುವುದರ ಜೊತೆಗೆ ಅವನ ತಾಯಿಯನ್ನು

ಬೈಯುತ್ತಾನೆ. ಅನೈತಿಕ ಸಂಬಂಧದಿಂದ ಹುಟ್ಟಿದ ಮಗ ಎಂದು ಆರೋಪ ಮಾಡುವುದನ್ನು ಕಾಣಬಹುದು.

ತಪ್ಪು ಮಾಡಿದ ಮಗನನ್ನು ತಂದೆ ಬೈಯುವಾಗ ಆರೋಪದ ಬೈಗುಳಗಳನ್ನು ಬಳಸುತ್ತಾರೆ. ಆದರೆ ಗಮನಿಸಬೇಕಾದ ವಿಷಯ ತಾಯಿಯನ್ನು 'ಸೂಳೆ' ಎಂದು ಆರೋಪಿಸುವುದರ ಮೂಲಕ ಮಗನನ್ನು ಬೈಯುವುದನ್ನು ಕಾಣಬಹುದು. ಏನು ತಪ್ಪು ಮಾಡದೇ ಇದ್ದ ಹೆಣ್ಣು ತಪ್ಪು ಮಾಡಿದ ಮಗನನ್ನು ಬೈಯುವಾಗ ಆರೋಪಕ್ಕೆ ಒಳಗಾಗುವುದನ್ನು ನೋಡಬಹುದು. ಗಂಡನೇ ನೇರವಾಗಿ ಹೆಂಡತಿಯನ್ನು ಆರೋಪಿಸಿ ಮಗನನ್ನು ಬೈಯುವುದನ್ನು ಕಾಣಬಹುದು. ಸಮಾಜದಲ್ಲಿ ಈ ರೀತಿಯ ಆರೋಪದ ಬೈಗುಳದ ರೂಪಗಳು ಹುಟ್ಟಿಕೊಂಡಿವೆ ಅಥವಾ ಪುರುಷರು ಈ ರೀತಿಯ ಆರೋಪದ ಬೈಗುಳಗಳನ್ನು ಹುಟ್ಟಿ ಹಾಕಿದ್ದಾರೆ ಎಂದು ಹೇಳಬಹುದು.

ಹೀಗೆ ಆರೋಪಿಸಿ ಬೈಯುವುದನ್ನು ಮತ್ತು ಆರೋಪಿಸಿ ಆರೋಪ ಮಾಡುವುದನ್ನು ಕಾಣಬಹುದು. ಈ ಎಲ್ಲಾ ಬೈಗುಳಗಳು ಸಾಮಾನ್ಯವಾಗಿ ಎಲ್ಲರಿಗೂ ಅನ್ವವಾಗುವಂತಹ ಆರೋಪದ ಬೈಗುಳಗಳಾಗಿವೆ ಗಂಡಿಗೆ ಆರೋಪ ಮಾಡಿ ಬೈಯುವುದು ಸಹ ಅದು ಹೆಣ್ಣಿನ ಮೂಲಕವೇ ಎಂಬ ಅಂಶವನ್ನು ತಿಳಿಯಬೇಕಾಗುತ್ತದೆ. ಹೆಣ್ಣು, ಗಂಡು, ಹಿರಿಯರು, ಕಿರಿಯರು ಎಲ್ಲರೂ ಈ ಆರೋಪ ರೂಪದ ಬೈಗುಳಗಳನ್ನು ಬಳಕೆ ಮಾಡುತ್ತಾರೆ. ಅವರ ಉದ್ದೇಶ ಮತ್ತು ಸಂದರ್ಭಗಳು ಬೇರೆಯಾಗಿರುತ್ತವೆ ಎಂಬುದನ್ನು ಈ ಎಲ್ಲ ಪ್ರಯೋಗದ ಮೂಲಕ ತಿಳಿಯಬಹುದು.

೪.೩.ಹೋಲಿಕೆ ರೂಪದ ಬೈಗುಳಗಳು:-

ಹೋಲಿಕೆ ರೂಪದಲ್ಲಿ ಬೈಯುವಂತಹ ಬೈಗುಳಗಳು ಸಮಾಜದಲ್ಲಿ ಬಳಕೆಯಲ್ಲಿವೆ. ಪ್ರಾಣಿಗಳನ್ನು ಉದ್ದೇಶಿಸಿ ಬೈಯುವ ಬೈಗುಳಗಳೇ ಹೆಚ್ಚಾಗಿವೆ. ಅದರಲ್ಲೂ ಮಂದಗತಿಯಲ್ಲಿ ಇರುವ ಪ್ರಾಣಿಗಳನ್ನು ಹೋಲಿಕೆ ಮಾಡಿ ಬೈಯುವ ಬೈಗುಳಗಳೇ ಹೆಚ್ಚಾಗಿವೆ. ಚುರುಕಿನ ಪ್ರಾಣಿಗಳನ್ನು ಹೋಲಿಕೆ ಮಾಡಿ ಬೈಯುವ ಬೈಗುಳ ಕಡಿಮೆ. ಇಷ್ಟೇ ಅಲ್ಲದೆ ತಮ್ಮ ಕಣ್ಣಮುಂದೆ ಕಂಡುಬರುವ ಪಕ್ಷಿಗಳ ಮತ್ತು ಮನುಷ್ಯರ ದೇಹದ ಅಂಗಾಂಗ, ರೂಪ, ಗುಣ, ಬಣ್ಣ, ಗಾತ್ರಗಳನ್ನು ಅವುಗಳಲ್ಲಿರುವ ವಿಶೇಷತೆಗಳನ್ನು ಮತ್ತು ಸಾಮಾಜಿಕ ಜೀವನದಲ್ಲಿ ಕಂಡ ದೃಶ್ಯ ವಿಶೇಷಗಳನ್ನು ಸಂಕೇತವನ್ನಾಗಿ ಮಾಡಿಕೊಂಡ ಬೈಗುಳಗಳು ಹೋಲಿಕೆ ರೂಪದ ಬೈಗುಳಗಳಾಗಿವೆ. ದುಷ್ಟ, ಕೆಟ್ಟ ವ್ಯಕ್ತಿಗಳ ಗುಣಗಳಿಗೆ ಹೋಲಿಕೆ ಮಾಡಿ ಬೈಯುವ ಬೈಗುಳಗಳು ಇವೆ. ಈ ಹಿನ್ನೆಲೆಯಲ್ಲಿ ಇವುಗಳನ್ನು ಆರು ನೆಲೆಯಲ್ಲಿ ಚರ್ಚಿಸಲಾಗಿದೆ.

೪.೩.೧. ಪ್ರಾಣಿಗಳ ಗುಣ ಸ್ವಭಾವಗಳನ್ನು ನೇರವಾಗಿ ಹೋಲಿಕೆ ಮಾಡಿ ಬೈಯುವ ಬೈಗುಳ.

೪.೩.೨. ದುಷ್ಟ ವ್ಯಕ್ತಿಗಳನ್ನು ಹೋಲಿಕೆ ಮಾಡಿ ಬೈಯುವ ಬೈಗುಳ.

೪.೩.೩. ಉಗ್ರ ಸ್ವರೂಪವುಳ್ಳ ದೇವತೆಗಳಿಗೆ ಹೋಲಿಕೆ ಮಾಡಿ ಬೈಯುವ ಬೈಗುಳ.

೪.೩.೪. ವ್ಯಕ್ತಿಯ ದೈಹಿಕ ಅಂಗಾಂಗ ಹೀನತೆಗೆ ಹೋಲಿಕೆ ಮಾಡಿ ಬೈಯುವ ಬೈಗುಳ.

೪.೩.೫. ಕೆಟ್ಟ ಸ್ವಭಾವವುಳ್ಳ ವ್ಯಕ್ತಿಗೆ ಹೋಲಿಕೆ ಮಾಡಿ ಬೈಯುವ ಬೈಗುಳ.

೪.೩.೬. ವ್ಯಕ್ತಿಯ ಅಸಹಾಯಕತೆಯನ್ನು ಹೋಲಿಕೆ ಮಾಡಿ ಬೈಯುವ ಬೈಗುಳ.

೪.೩.೧. ಪ್ರಾಣಿಗಳ ಗುಣ ಸ್ವಭಾವಗಳನ್ನು ನೇರವಾಗಿ ಹೋಲಿಕೆ ಮಾಡಿ ಬೈಯುವ ಬೈಗುಳ.

ಹೆಂಗಸರಿಗೆ	ಗಂಡಸರಿಗೆ
ಎಮ್ಮೆ ಅಂತಾಸೂಳೆ	ಎಮ್ಮೆ ಅಂತಾ ಸೂಳೆಮಗ
ದನ ಇದ್ದಾಂಗೆ ಇದಳಾ	ದನ ಇದ್ದಾಂಗೆ ಇದನಾ
ಕತ್ತೆಸೂಳೆ	ಕತ್ತೆಗೆ ಹುಟ್ಟಿಯಾ
ಕತ್ತೆರಂಡೆ	ಕತ್ತೆ ಇದ್ದಾಂಗ ಇದಿಯಾ
ಹಂದಿ ಅಂತಾದು	ಹಂದಿ ಅಂತಾ ಸೂಳೆಮಗ
ನಾಯಿಮುಂಡೆದು	ನಾಯಿಅಂತೋನು
ಕೋತಿ ಇದ್ದಾಂಗ ಇದಿಯಾ	ಕೋತಿ ಮಾಡಿದಾಂಗೆ ಮಾಡತ್ತಾನೆ
ಗೂಬೆ ಅಂತದು	ಗೂಬೆ ಸೂಳೆಮಗ
ಗೂಳಿ ತಿರಿಗಿದಾಂಗೆ ತಿರುಗುತ್ತಾಳೆ	ಗೂಳಿ ಇದಾಂಗ ಇದಿಯಾ
ಕತ್ತೆಲೌಡಿ	ಮಂಗ ಸೂಳೆಮಗನೆ
ಹೆಗ್ಣ ಅಂತಾಸೂಳೆ	ಹೆಗ್ಣ ಅಂತಾ ಸೂಳೆಮಗ
ಕರಿಹೆಗ್ಣ ಇದ್ದಾಂಗೆ ಇದಳಾ	ಕರಿಹೆಗ್ಣ ಇದ್ದಾಂಗೆ ಇದನಾ
ಕೋಳಿ ತಿಂದಾಂಗೆ ತಿನ್ನತ್ತಾಳೆ	ಕೋಳಿ ತಿಂದಾಂಗೆ ತಿನ್ನತ್ತಾನೆ
ದನ ತಿಂದಾಂಗೆ ತಿನ್ನತ್ತಾಳೆ	ದನ ತಿಂದಾಂಗೆ ತಿನ್ನತ್ತಾನೆ

ಬಳಕೆ ಮಾಡುವ ವಿಧಾನಗಳು:–

ಉದಾ: **ತಂದೆ–ಮಗನಿಗೆ:–**

ಲೇ ಹಂದಿ ನನ್ಮಗ್ನೆ

ಹಂದಿ ಅಂತಾ ಸೂಳೆಮಗನೆ

ಈ ಬೈಗುಳವನ್ನು ತಂದೆ ಮಗನಿಗೆ ಬೈಯುವಾಗ ಬಳಕೆ ಮಾಡುತ್ತಾನೆ. ಮಗ ಏನಾದರೂ ಚೇಷ್ಟೆ ಮಾಡಿದಾಗ ಮತ್ತು ಧಿಮಾಕು ಮಾಡಿದಾಗ ಹೋಲಿಕೆ ಮಾಡಿ ಬೈಯುವ ಬೈಗುಳವನ್ನು ನೋಡುವುದಾದರೆ,

ಪ್ರ: ತಂದೆ ಮಗನಿಗೆ ಲೇ ಹಂದಿ ಅಂತಾ ಸೂಳೆಮಗನೆ ಬಾರಲೇ ಇಲ್ಲಿ ಸಾಕು ಇಲ್ಲದ ಧಿಮಾಕ ಮಾಡುವಂತೆ ಏನು ನಿನಗೆ ಒಬ್ಬನಿಗೆ ಗೊತ್ತಿದೆ ಅನ್ನೊತರ ಇಲ್ಲದ ಬಡಿವಾರ ಮಾಡತ್ತಿಯಾ ನಿಮ್ಮ ಅವ್ವನ್ ಮುಂದೆ ಎಂದು ತಂದೆ ಮಗನಿಗೆ ಬೈಯುತ್ತಾನೆ. ಆದರೆ ಇಲ್ಲಿ ಅವನ ತಾಯಿ ಬೈಗುಳಕ್ಕೆ ಒಳಗಾಗುತ್ತಾಳೆ. ಒಂದು ಅಂಶವನ್ನು ನೋಡುವುದಾದರೆ ಪ್ರಾಣಿಗೆ ಹೋಲಿಕೆ ಮಾಡಿ ಬೈಯುತ್ತಿದ್ದರೂ ಅಲ್ಲಿ ಪರೋಕ್ಷವಾಗಿ ಹೆಣ್ಣು ಬೈಗುಳಕ್ಕೆ ಒಳಗಾಗುತ್ತಾಳೆ. ಒಂದು ಸಮುದಾಯದ ರೂಢಿಗತ ಗ್ರಹಿಕೆಯಲ್ಲಿ ಹೇಗೆ ಹೆಣ್ಣು ಬಲಿಪಶು ಆಗುತ್ತಿದ್ದಾಳೆ ಎಂಬುದನ್ನು ಈ ಮೇಲಿನ ಬೈಗುಳವನ್ನು ನೋಡಿದರೆ ತಿಳಿಯುತ್ತದೆ.

ಗಂಡ–ಹೆಂಡತಿಗೆ:–

ಹಂದಿ ಅಂತಾ ಸೂಳೆ

ಹಂದಿ ಇದಾಂಗ ಇದಿಯಾ ಸ್ವಲ್ಪನಾದರೂ ಬುದ್ಧಿ ಇಲ್ಲ

ಹೆಂಡತಿಗೆ ಬೈಯುವಾಗ ಗಂಡ ಬಳಕೆ ಮಾಡುವ ವಿಧಾನವನ್ನು ನೋಡುವುದಾದರೆ,

ಪ್ರ: ಹಂದಿ ಇದಾಂಗ ಇದಿಯಾ ಮನೆ ಕೆಲಸ ಮಾಡೋಕೆ ಆಗಲ್ವಾ ನಿನಗೆ. ನನ್ನ ಕೈಲೇ ಆಗಲ್ಲಾ ಅಂತಾ ವೈಕುತ್ತಿಯಾ ಅಲ್ಲಾ ಮತ್ತೆ ಯಾರ ಮಾಡತ್ತಾರೆ ನಿಮ್ಮವ್ವನ್ ಮಿಂಡ್ರು ಮಾಡತ್ತರಾ ಹಂದಿ ಅಂತಾ ಸೂಳೆ ಸುಮ್ಮನೆ ಮುಂಚಿಕೊಂಡು ಮಾಡು ಇಲ್ಲದ ಧಿಮಾಕ ಮಾಡಬೇಡ ನನ್ನ ಹತ್ರ, ನಿನ್ನ ನಾಟಕ ನನ್ನ ಹತ್ರ ನಡಿಯಲ್ಲಾ ಎಂದು ಬೈಯುವಾಗ ಈ ಬೈಗುಳ ಬಳಕೆಯಾಗುತ್ತದೆ ಮತ್ತು ಇಲ್ಲಿ ಮತ್ತೊಂದು ಹೆಣ್ಣು ಪರೋಕ್ಷವಾಗಿ ಬೈಗುಳಕ್ಕೆ ತುತ್ತಾಗಾಗುತ್ತಾಳೆ.

ಹೆಂಡತಿ–ಗಂಡನಿಗೆ: ಹಂದಿ ನನ್ ಮಗನೆ:–

ಪ್ರ: ಗಂಡ ಕುಡಿದು ಮನೆಗೆ ಬಂದಾಗ ಹಂದಿ ನನ್ ಮಗನೆ ಇವತ್ತು ಮತ್ತೆ ಕುಡಿದು ಬಂದಿಯಾ ನೀನು ಕುಡಿಯಲ್ಲಾ ಇನ್ಮುಂದೆ ಅಂತಾ ಹೇಳಿ ನನಗಂತೂ ನಿನಗೆ ಕುಡಿಬೇಡ ಅಂತಾ ಹೇಳಿ–ಹೇಳಿ ಸಾಕಾಗಿ ಹೋಗ್ಯೆತಿ. ಏನು ಮಾಡಲಿ ನನ್ ಹಣೆಬರಕ್ಕ ನೀನು ಗಂಡನಾಗಿ ಸಿಕ್ಕಿಯಾ ನನಗೆ ಹಂದಿ ಇದಾಂಗ ಇದಿಯಾ ಸ್ವಲ್ಪನೂ ಬುದ್ಧಿ ಇಲ್ವಾ ನಿನಗೆ. ಮಕ್ಕಳು ಮರಿ ಇದಾವ ಮನೆಯಲ್ಲಿ ಕುಡಿಬಾರದು ಅಂತಾ ಗೊತ್ತಾಗಲ್ವಾ ನಿನಗೆ. ಸ್ವಲ್ಪ ನೋಡಕೋ ಹೇಂಗಿದಿಯಾ ಅಂತಾ. ಒಳ್ಳೆ ರೋಗಿಸ್ಟ ಇದ್ದಾಂಗ ಇದಿಯಾ ನೋಡು ಎಂದು ಹೆಂಡತಿ ಗಂಡನಿಗೆ ಬೈಯುವಾಗಲೂ ಈ ಬೈಗುಳದವನ್ನು ಬಳಕೆ ಮಾಡುತ್ತಾಳೆ. ಆದರೆ ಗಂಡನಿಗೆ ಬೈದರೂ ಅದು ಹೆಣ್ಣಿನ ಮೂಲಕವೇ ಆ ರೀತಿಯಲ್ಲಿ ಸಮಾಜ ಬೈಗುಳಗಳನ್ನು ರೂಪಿಸಿವೆ. ಇಲ್ಲಿ ಗಂಡನಿಗೆ ಬೈದರೂ ಕಾಳಜಿ ಇಂದ ಬೈಯುತ್ತಾಳೆ.

ಕುಡಿದು-ಕುಡಿದು ಹಾಳಾಗುವ ಗಂಡನಿಗೆ ಕುಡಿಬೇಡ ಆರೋಗ್ಯ ಕೇಡುತ್ತೆ ಎಂದು ಎಚ್ಚರಿಕೆಯ ಮಾತುಗಳನ್ನು ಸಹ ಈ ಬೈಗುಳದ ಮೂಲಕವೇ ಅವಳು ಹೇಳುತ್ತಾಳೆ ಎಂಬ ಅಂಶವು ಕಂಡುಬರುತ್ತದೆ.

ಹೆಂಗಸರು-ಹೆಂಗಸರಿಗೆ: ಹಂದಿ ಅಂತಾ ಸೂಳೆ:-

ಸಂತೆಯಲ್ಲಿ ಹೆಂಗಸು ತರಕಾರಿಯನ್ನು ಕದ್ದು ಬ್ಯಾಗಿನಲ್ಲಿ ಹಾಕಿಕೊಂಡಿದ್ದನ್ನು ತರಕಾರಿ ಮಾಲಕಿ ನೋಡಿದಾಗ ಬೈಯುವ ಬೈಗುಳಗಳ ಸ್ವರೂಪ,

ಪ್ರ: ಹಂದಿ ಅಂತಾ ಸೂಳೆ ನಮಗೇನು ಪುಗ್ಸಟ್ಟೆ ಬರತಾವ ಏನು ಹಾಂಗೆ ಬ್ಯಾಗನಲ್ಲಿ ಹಾಕಂತ್ತಿಯಾ ಅಲ್ಲಾ ಮೊದಲು ಎದ್ದು ಹೋಗು ಇಲ್ಲಿಂದ ಹಂದಿ ಇದಾಂಗ ಇದಿಯಾ ಕಳ್ಳತನ ಮಾಡಬಾರದು ಅಂತಾ ಗೊತ್ತಿಲ್ವಾ ನಿನಗೆ, ಸ್ವಲ್ಪನೂ ಬುದ್ಧಿ ಇಲ್ವಾ ನಿನಗೆ ಎಂದು ಬೈಯುವುದನ್ನು ನೋಡಬಹುದು.

ವ್ಯಕ್ತಿಗೆ ಬೈಯುವಾಗ ಹಂದಿಗೆ ಹೋಲಿಕೆ ಮಾಡಿ ಬೈಯುತ್ತಾರೆ. ಆ ಪ್ರಾಣಿಯ ಸ್ವರೂಪವನ್ನು ನೋಡುವುದಾದರೆ ಈ ಪ್ರಾಣಿಯು ಹೇಸಿಗೆ ತಿನ್ನುತ್ತದೆ, ಹೊಲಸು ತಿನ್ನುತ್ತದೆ. ಇದು ಯಾವುದೇ ನಿರ್ಬಂಧವಿಲ್ಲದ ಪ್ರಾಣಿಯಾಗಿದೆ. ಈ ಪ್ರಾಣಿಯನ್ನು ಯಾರು ಇಷ್ಟಪಡುವುದಿಲ್ಲ. ಈ ಪ್ರಾಣಿಯನ್ನು ಹೋಲಿಕೆ ಮಾಡಿ ಬೈಯುವಾಗ 'ಸೂಳೆ', 'ಸೂಳೆಮಗ' ಹಂದಿ ಇದಾಂಗೆ ಇದಿಯಲ್ಲ ಎಂದು ಆ ಪ್ರಾಣಿಯ ಹೆಸರಿನ ಜೊತೆಗೆ ಈ ಪದಗಳನ್ನು ಸೇರಿಸಿ ಬೈಯುವುದನ್ನು ಮೇಲಿನ ಪ್ರಯೋಗದ ಮೂಲಕ ನೋಡಿದ್ದೇವೆ. ಪ್ರಾಣಿಗೆ ಹೋಲಿಕೆ ಮಾಡಿ ಬೈಯುವುದು ಅದು ಹೆಣ್ಣಿನ ಮೂಲಕವೇ. ಅದು ಹೆಂಗಸರಿಗೆ ಆದರೂ ಸರಿ ಗಂಡಸರಿಗೆ ಆದರೂ ಅದು ಹೆಣ್ಣಿನ ಮೂಲಕವೇ ಬೈಯುವುದನ್ನು ಕಾಣಬಹುದು.

ಎಮ್ಮೆ ಅಂತಾ ಸೂಳೆ:-

ಈ ಬೈಗುಳ ಪದವು ಎಮ್ಮೆಗೆ ಹೋಲಿಕೆ ಮಾಡಿ ಬೈಯುವ ಬೈಗುಳವಾಗಿದೆ. ಎಮ್ಮೆ ಅಂದರೆ ಮಂದಗತಿಯಲ್ಲಿರುವ ಪ್ರಾಣಿ, ನಿಧಾನವಾಗಿ ಚಲಿಸುತ್ತದೆ. ಮಬ್ಬು, ಇದರ ಬಣ್ಣ ಕಪ್ಪು, ಗ್ರಾತ್ರದಲ್ಲಿಯೂ ದೊಡ್ಡದು ಈ ಎಲ್ಲ ಲಕ್ಷಣಗಳು ಈ ಪ್ರಾಣಿಯಲ್ಲಿವೆ.

ಹೆಣ್ಣು-ಹೆಣ್ಣಿಗೆ: ಎಮ್ಮೆ ಅಂತಾ ಸೂಳೆ:-

ಪ್ರ: ಲೇ ಎಮ್ಮೆ ಅಂತಾಸೂಳೆ ಸ್ವಲ್ಪನಾದರೂ ಮಾನ-ಮಾರ್ಯಾದೆ ಇದಿಯಾ ನಿನಗೆ. ಹಾಂಗೆ ಗಂಡುಬೀರಿ ಮಾಡಿದಾಂಗ ಮಾಡಿತ್ತಿಯಲ್ಲಾ ನೀನು. ಹೆಂಗಸು ಅಂದ ಮೇಲೆ ಸ್ವಲ್ಪ ತಗ್ಗಿ-ಬಗ್ಗಿ ನಡಿಬೇಕು. ಅದು ಬಿಟ್ಟು ಒಳ್ಳೆ ಗಂಡಸು ಮಾಡಿದಾಂಗ ಮಾಡಿತ್ತಿಯಾಲ್ಲಾ ಎಂದು ಬೈಯುವ ಸಂದರ್ಭದಲ್ಲಿ ಈ ಬೈಗುಳ ಬಳಕೆಯಾಗುತ್ತದೆ.

ಹೆಣ್ಣು-ಗಂಡಿಗೆ: ಎಮ್ಮೆ ಅಂತಾ ಸೂಳೆಮಗ:-

ದಾರಿಯಲ್ಲಿ ಹೆಂಗಸು ನಡೆದುಕೊಂಡು ಹೋಗುವಾಗ ಗಂಡಸು ತಿವಿದು ಹೋಗುವ ಸಂದರ್ಭದಲ್ಲಿ ಬಳಕೆಯಾಗುವ ಹೋಲಿಕೆ ರೂಪದ ಬೈಗುಳಗಳನ್ನು ನೋಡುವುದಾದರೆ,

ಪ್ರ: ಎಮ್ಮೆ ಅಂತಾ ಸೂಳೆಮಗನಿಗೆ ಕಣ್ಣು ಕಾಣತಾವ ಇಲ್ಲಾ ಹಾಂಗೇ ಎಮ್ಮೆ ತಿವಿಕೊಂಡು ಹೋದಾಂಗ ಹೋಗುತ್ತಾನೆ. ದರಿದ್ರ ಸೂಳೆಮಗನದು ತಂದು ಎಂದು ಬೈಯುವಾಗಲೂ ಇಲ್ಲಿ ಹೆಣ್ಣು ಬೈಗುಳಕ್ಕೆ ಒಳಗಾಗುತ್ತಾಳೆ.

ತಾಯಿ–ಮಗನಿಗೆ: ಎಮ್ಮೆ ಅಂತಾ ಸೂಳೆಮಗ:–

ಮಗ ಮಲಗಿದ್ದಾಗ ಬೇಗ ಏಳದೆ ಇದ್ದ ಸಂದರ್ಭದಲ್ಲಿ,

ಪ್ರ: ಎಮ್ಮೆ ಮಲದಾಂಗ ಮಲಿತ್ತಿಯಲ್ಲಾ ಎಮ್ಮೆ ಅಂತಾ ಸೂಳೆಮಗನೆ ಬೇಗ ಎದ್ದೊಳಿಕೆ ಏನು ದಾಡಿ ನಿನಗೆ. ಎಮ್ಮೆ ತಿಂದಾಗ ತಿಂದು ಎಮ್ಮೆ ಆದಾಂಗ ಆಗ್ಯಾನ ನೋಡು ಎಂದು ತಾಯಿ ಮಗನಿಗೆ ಬೈಯುವಾಗಲೂ ಈ ಹೋಲಿಕೆ ರೂಪದ ಬೈಗುಳವನ್ನು ಬಳಕೆ ಮಾಡುತ್ತಾಳೆ

ತಾಯಿ–ಮಗಳಿಗೆ: ಎಮ್ಮೆ ಅಂತಾ ಸೂಳೆ:–

ಮಗಳು ಪ್ರೀತಿಯಿಂದ ತಾಯಿಯ ಹತ್ತಿರ ಬಂದು ಅಂಟಿಕೊಂಡು ಕೂತುಕೊಂಡ ಸಂದರ್ಭದಲ್ಲಿ ಬೈಗುಳಗಳ ಬಳಕೆಯ ವಿಧಾನ,

ಪ್ರ: ತಾಯಿ ಇವಳು ನೋಡು ಎಮ್ಮೆ ಅಂತಾಸೂಳೆ ಹಾಂಗೆ ಬಂದು ಎಮ್ಮೆ ತಿಕ್ಕಿದಾಂಗ ತಿಕ್ಕಿಡಾತ್ತಾಳೆ ಮೈನ. ನೀನು ಏನು ಸಣ್ಣ ಹುಡುಗಿ ಅನ್ನಕೊಂಡಿಯಾ ಏನು. ಎಮ್ಮೆ ಇದಾಂಗ ಇದಿಯಾ ಎಂಬ ಸಂದರ್ಭದಲ್ಲಿ ಈ ಬೈಗುಳವನ್ನು ಬಳಕೆ ಮಾಡುವುದನ್ನು ನೋಡಬಹುದು.

ಗಂಡು–ಹೆಣ್ಣಿಗೆ: ಎಮ್ಮೆ ಇದಾಂಗ ಇದಾಳೆ:–

ಗಂಡಸರು–ಹೆಣ್ಣಿನ ಬಗ್ಗೆ ಮಾತಾನಾಡುವ ಸಂದರ್ಭದಲ್ಲಿ,

ಪ್ರ: ಬೀಡಲೇ ಅವಳನ್ನು ಯಾಕೆ ಮದುವೆ ಆಗತ್ತಿಯಾ ಎಮ್ಮೆ ಇದಾಂಗ ಇದಾಳ ನೋಡೊಕೆ ಬೇಡಲೇ ಮದುವೆ ಆಗಬೇಡ ಬೇರೆ ಎಲ್ಲಿ ಆದರೂ ನೋಡೋಣ ಎಂಬ ಸಂದರ್ಭದಲ್ಲಿ ಈ ಪದ ಬಳಕೆಯಾಗುತ್ತದೆ. ಅವಳ ತಪ್ಪು ಇರದೇ ಇದ್ದರನೂ ಪ್ರಾಣಿಗೆ ಹೋಲಿಕೆ ಮಾಡಿ ಬೈಯುವುದನ್ನು ಕಾಣಬಹುದು.

ಕತ್ತೆರಂಡೆ:–

ಕತ್ತೆಗೆ ಹೋಲಿಕೆ ಮಾಡಿ ಬೈಯುವಂತಹ ಬೈಗುಳವಾಗಿದೆ. ಈ ಬೈಗುಳವನ್ನು ಹೆಂಗಸು–ಹೆಂಗಸರಿಗೆ, ಹೆಂಗಸರು–ಮಕ್ಕಳಿಗೆ, ಗಂಡಸರು–ಹೆಂಗಸರಿಗೆ, ಬೈಯುವಾಗ ಬಳಸುವಂತಹ

ಬೈಗುಳವಾಗಿದೆ. ಕತ್ತೆ ಕೆಲಸ ಮಾಡುತ್ತದೆ ಅದಕ್ಕೆ ಎಷ್ಟೇ ಬಾರ ಹೋರಿಸಿದರೂ ಅದು ಸುಮ್ಮನೆ ಇರುತ್ತೆ ಅಂದೊಂದು ರೀತಿಯಲ್ಲಿ ಸಾದು ಪ್ರಾಣಿ. ಇದು ಈ ಪ್ರಾಣಿಯ ಲಕ್ಷಣವಾಗಿದೆ. ಈ ಪ್ರಾಣಿಗೆ ಹೋಲಿಕೆ ಮಾಡಿ ಹೆಣ್ಣಿನ ಮೂಲಕ ಎಲ್ಲರಿಗೂ ಬೈಯುವುದನ್ನು ಕಾಣಬಹುದು.

ಗಂಡ–ಹೆಂಡತಿಗೆ: ಕತ್ತೆರಂಡೆ:–

ಕತ್ತೆ ಕೆಲಸ ಮಾಡಿದಾಂಗ ಮಾಡತ್ತಿಯಾ ಸ್ವಲ್ಪನಾದರೂ ಬುದ್ಧಿ ಇದಿಯಾ ನಿನಗೆ ಕತ್ತೆರಂಡೆ ತಂದು ಎಂದು ಬೈಯುತ್ತಾನೆ. ಏನು ಕೆಲಸ ಮಾಡಿದರೆ ಏನು ಬಂತು ನಿನಗೆ ಏನು ಪ್ರಯೋಜನವಿಲ್ಲ ತು ನಿನ್ನ ಬಾಯಾಕ ಮಣ್ಣಾಕಾ ಎಂದು ಗಂಡ ಹೆಂಡತಿಗೆ ಬೈಯುತ್ತಾನೆ. ಹೆಣ್ಣು ತನ್ನ ಸಂಸಾರ ನನ್ನ ಗಂಡ–ಮಕ್ಕಳು ಚೆನ್ನಾಗಿ ಇರಬೇಕು ಎಂದು ಎಲ್ಲಾ ಭಾರವನ್ನು ತಾನೆ ತಲೆ ಮೇಲೆ ಹಾಕಿಕೊಂಡು ಕೆಲಸ ಮಾಡುತ್ತಾಳೆ. ನನಗೆ ಏನಾದರೂ ಪರವಾಗಿಲ್ಲ ನನ್ನ ಗಂಡ–ಮಕ್ಕಳು ಚೆನ್ನಾಗಿ ಇರಬೇಕು ಎಂಬ ಉದ್ದೇಶ ಅವಳಿಗಿರುತ್ತದೆ. ಇದು ಹೆಣ್ಣಿನ ಹೃದಯತನ ಎಂದು ಹೇಳಬಹುದು. ಇಂತಹ ಹೆಣ್ಣನ್ನು ಕತ್ತೆಗೆ ಹೋಲಿಕೆ ಮಾಡಿ ಬೈಯುತ್ತಾರೆ. ಹೀಗೆ ಸಮಾಜದಲ್ಲಿ ರೂಢಿಗತವಾಗಿ ಬೆಳೆದುಕೊಂಡು ಬಂದಿದೆ ಎಂದು ಹೇಳಬಹುದು ಮತ್ತು ಈ ರೀತಿಯಲ್ಲಿ ಪುರುಷರು ಹೆಣ್ಣನ್ನು ಬೈಗುಳಕ್ಕೆ ಒಳಪಡಿಸುವ ಹಾಗೆ ಸಮಾಜ ನಿರೂಪಿಸಿದೆ.

ತಂದೆ–ಮಗನಿಗೆ: ಕತ್ತೆಸೂಳೆಮಗ:–

ಪ್ರ: ಲೇ ಕತ್ತೆಸೂಳೇಮಗನೆ ನಾನು ಏನು ಹೇಳಿದೆ ನಿನಗೆ ಹೋಗಿ ದನಕ್ಕೆ ನೀರು ಕುಡಿಸಿ ಬಾ ಅಂತಾ ಹೇಳಿರಲಿಲ್ವಾ ನಿನಗೆ. ನೀನು ನೋಡಿದರೆ ಇನ್ನೂ ಇಲ್ಲೇ ಇದಿಯಾ ಹೆಂಗೆ ಐತಿ ನಿನಗೆ ಕತ್ತೆ ನನ್ನ ಮಗನೆ ಗೊತ್ತಾಗಲ್ಲಾ ನಿನಗೆ ಹೇಳಿದ್ದು ಕೆಲಸ ಮಾಡಬೇಕು ಅಂತಾ. ಕತ್ತೆ ಬೆಳೆದಾಂಗೆ ಬೆಳದಿಯಾ ಸ್ವಲ್ಪನಾದರೂ ನಿನ್ನ ತಲೆಯಲ್ಲಿ ಬುದ್ಧಿ ಐತಾ ಎಂದು ತಂದೆ ಮಗನಿಗೆ ಬೈದರೂ ಏನು ತಪ್ಪು ಮಾಡದ ಹೆಣ್ಣು ಬೈಗುಳಕ್ಕೆ ಒಳಗಾಗುತ್ತಾಳೆ.

ಗಂಡು–ಹೆಣ್ಣಿಗೆ: ಕತ್ತೆರಂಡೆ:–

ಪ್ರ: ಲೇ ಕತ್ತೆರಂಡೆ ಏನು ನನ್ ಹೆಂಡತಿ ಹತ್ತಿರ ಜಗಳ ಆಡತ್ತಿಯಂತೆ ಎದಕ ಏನ ಆಗೈತಿ ನಿನಗೆ ಸುಮ್ಮನೆ–ಸುಮ್ಮನೆ ಜಗಳ ಆಡತಿ ಅಂತೆ ನಾನು ಇಲ್ಲದಾಗ. ಹೀಗಾ ಬಾ ನನ್ನ ಹತ್ತಿರ ನಿನದೇನು ಅಂತಾ ವಿಚಾರಸತ್ತಿನಿ ನಿನ್ನದೆ ತಪ್ಪು ಇಟ್ಟುಕೊಂಡು ನನ್ ಹೆಂಡತಿನ ಬೈತ್ತಿಯಾ ಅಲ್ಲಾ ನೀನು ಸಾಮಾನ್ಯದ ಹೆಂಗಸಲ್ಲ ಬೀಡು ಊರ್ ಬಜಾರಿ ಇದಾಂಗೆ ನೀನು ಎಂದು ಗಂಡು ಹೆಣ್ಣಿಗೆ ಬೈಯುವಾಗಲೂ ಕತ್ತೆಗೆ ಹೋಲಿಸಿ ನಿಂದಿಸುವುದನ್ನು ಕಾಣಬಹುದು.

೪.೩.೨.ದುಷ್ಟ ವ್ಯಕ್ತಿಗಳನ್ನು ಹೋಲಿಕೆ ಮಾಡಿ ಬೈಯುವ ಬೈಗುಳ.

ಪ್ರಾಣಿಗಳನ್ನು ಅಷ್ಟೆ ಅಲ್ಲದೆ ಪುರಾಣಗಳಲ್ಲಿ ಬರುವ ದುಷ್ಟ ವ್ಯಕ್ತಿಗಳಿಗೆ ಹೋಲಿಕೆ ಮಾಡಿ ಬೈಯುವುದನ್ನು ನೋಡಬಹುದು. ದುಷ್ಟ ವ್ಯಕ್ತಿಗಳಿಗೆ ಹೋಲಿಕೆ ಮಾಡಿ ಬೈಯಲು ಕಾರಣ ಅವರಲ್ಲಿ ಇರುವ ಕೆಟ್ಟ ಸ್ವಭಾವ. ವ್ಯಕಿಗಳಲ್ಲಿ ಆ ಕೆಟ್ಟ ಸ್ವಭಾವಗಳು ಇದ್ದರೆ ದುಷ್ಟ ವ್ಯಕ್ತಿಗಳಿಗೆ ಹೋಲಿಕೆ ಮಾಡಿ ಅದು ಹೆಣ್ಣಿನ ಮೂಲಕವೇ ಬೈಯುವುದನ್ನು ನೋಡಬಹುದು.

ಬಕಾಸುರ:

ಬಕಾಸುರನ ಪೌರಾಣಿಕ ಹಿನ್ನೆಲೆಯನ್ನು ನೋಡುವುದಾದರೆ ಏಕಚಕ್ರ ನಗರದ ಹತ್ತಿರದ ಬೆಟ್ಟದಲ್ಲಿ ವಾಸವಾಗಿದ್ದ ಒಬ್ಬ ರಾಕ್ಷಸ. ವೇತ್ರಕೀಯಗೃವೆಂಬ ಒಂದು ಸಣ್ಣ ಪಟ್ಟಣದ ರಾಜನೂ ದುರ್ಬಲನಾದುದರಿಂದ ಈ ರಕ್ಕಸನೊಡನೆ ಹೋರಾಡಲಾರದೆ ಪ್ರತಿದಿನ ಆತನ ಊಟದ ವೇಳೆಗೆ ಸರಿಯಾಗಿ ಉಪಸ್ಕರ ಸಹಿತವಾದ ಒಂದು ಬಂಡಿ ಅನ್ನ, ಆ ಬಂಡಿಗೆ ಒಂದು ಜೊತೆ ಕೋಣಗಳನ್ನು ಹೂಡಿ ಒಬ್ಬ ಆಳು ಆ ಬಂಡಿಯನ್ನು ಹೊಡೆದುಕೊಂಡು ಆ ರಾಕ್ಷಸನ ಸಮೀಪಿಕ್ಕೆ ಹೋಗಬೇಕಿತ್ತು. ಹೋದ ವಸ್ತು ಮತ್ತು ಪ್ರಾಣಿಗಳಲ್ಲಿ ಬಂಡಿ ಮಾತ್ರ ವಾಪಸ್ಸು ಬರುತ್ತಿತ್ತು ಎಲ್ಲವನ್ನು ಬಕಸುರ ಎಂಬ ರಾಕ್ಷಸ ತಿನ್ನುತ್ತಿದ್ದನು. ಈ ಹಿನ್ನೆಲೆಯಲ್ಲಿ ಈ ಬೈಗುಳ ಹುಟ್ಟಿಕೊಂಡಿದೆ ಎಂದು ಹೇಳಬಹುದು. (ಪುರಾಣ ಭಾರತಕೋಶ ಪು.೧೫೩)

ತಾಯಿ–ಮಗನಿಗೆ:–

ಸಮುದಾಯದಲ್ಲಿ ಬೈಗುಳಗಳು ಬಳಕೆಯಲ್ಲಿರುವುದು ನೋಡಿದರೆ ಹೆಂಗಸಿನ ಬೈಗುಳಗಳೇ ಹೆಚ್ಚಾಗಿ ಇರುವುದು ಕಂಡುಬರುತ್ತವೆ.

ಪ್ರ: ಹಸಿವು ಎಂದು ಪದೇ–ಪದೇ ಹೇಳುವ ಮಗುವಿಗೆ ತಾಯಿ, ಅದೆಂಥ ಬಕಸುರ ನೀನು ಈಗ ತಾನೇ ಒಂದು ತಟ್ಟೆ ಕೂಳ್ ತಿಂದಿಯಾ ಮತ್ತೆ ಹೊಟ್ಟೆ ಹಸಿತೈತಿ ಅಂತಿಯಲ್ಲಾ ನೀನು. ನಿನದು ಹೊಟ್ಟೆನೋ ಇಲ್ಲಾ ಕೆರೆಕಟ್ಟೆನೋ ಎಂದು ಬೈಯುತ್ತಾಳೆ.

ಇನ್ನೊಂದು ಸಂದರ್ಭದಲ್ಲಿ ತಿಂದರೂ ಇನ್ನೂ ತಿನ್ನಬೇಕು ಎಂದು ಆಸೆ ಪಡುವ ಮಕ್ಕಳನ್ನು ಬೈಯುವಾಗಲೂ ಈ ಪದ ಬಳಕೆಯಾಗುತ್ತದೆ.

ಉದಾ:– ಲೇ ಬಕಸುರ ಅಂತಾ ಸೂಳೆಮಗನೆ ಈಗ ತಾನೇ ಕುತ್ತಿಗೆ ಬರುವರೆಗೂ ತಿಂದಿಯಾ ಮತ್ತೆ ತಿನ್ನತಿನಿ ಅಂತಾ ಆಸೆ ಪಡೆತ್ತಿಯಲ್ಲಾ ಕಂತ್ರಿಸೂಳೆಮಗನೆ ಕ್ಯರಾ ತಗೊಂಡು ಒಡಿತಿನಿ ಎಂದು ಬೈಯುವುದನ್ನು ನೋಡಬಹುದು.

ಬಕಾಸುರ ಒಬ್ಬ ಗಂಡು. ಗಂಡನ್ನು ಬೈಯುವಾಗ ಆ ವ್ಯಕ್ತಿಗೆ ಹೋಲಿಕೆ ಮಾಡಿ ಬೈಯುತ್ತಾರೆ. ಬಕಸುರ ಒಬ್ಬ ಗಂಡಾಗಿದ್ದರೂ ಇನ್ನೊಂದು ಗಂಡಿಗೆ ಹೋಲಿಕೆ ಮಾಡಿ

ಬೈಯುವುದು ಸಹ ಅದು ಹೆಣ್ಣಿನಿಂದಲೇ ಎಂಬ ವಿಷಯವನ್ನು ತಿಳಿಯಬಹುದು.

ಹೆಣ್ಣಿಗೆ ಬೈಯುವಾಗಲೂ ಒಳ್ಳೆ ಬಕಾಸುರಿ ಅಲ್ಲಾ ಎಂದು ಸಹ ಬೈಯುತ್ತಾರೆ. 'ಅ'ಕಾರಕ್ಕೆ 'ಇ'ಕಾರ ಸೇರಿಸಿ ಹೆಣ್ಣಿಗೆ ಬೈಯುವಾಗಲೂ ಈ ಪದ ಬಳಕೆಯಾಗುವುದನ್ನು ನೋಡಬಹುದು.

ಉದಾ:- ಬಕಾಸುರಿ ಸೂಳೆ ಅಂತೋಳೆ ತಿಂದು-ತಿಂದು ಒಳ್ಳೆ ಎಮ್ಮೆ ಆದಾಂಗ ಆಗಿಯಲ್ಲಾ ಕಂತ್ರೋಳೆ ಸ್ವಲ್ಪ ಮೈ ಕರಿಗಿಸಿಕೋ ಇಲ್ಲ ಅಂದರೆ ಕಷ್ಟ ಆಗತೈತಿ ನೋಡು ಎಂದು ಹೆಣ್ಣಿಗೆ ಬೈಯುವಾಗಲೂ ಸೂಳೆ ಎಂಬ ಪದವನ್ನು ಸೇರಿಸಿ ಬೈಯುವುದನ್ನು ಕಾಣಬಹುದು.

ಕುಂಭಕರ್ಣ:

ಪೌರಾಣಿಕ ಹಿನ್ನೆಲೆಯಲ್ಲಿ ಕುಂಭಕರ್ಣ ಒಬ್ಬ ರಾಕ್ಷಸ. ಪುಲಸ್ತ್ಯನ ಮಗನಾದ ವಿಶ್ರವಸನಿಂದ ಕೈಕಸಿಯೆಂಬವಳಲ್ಲಿ ಜನಿಸಿದ ಎರಡನೆಯ ಮಗ. ಬ್ರಹ್ಮ ಕುಂಭಕರ್ಣನು ಯಾವಾಗಲೂ ಗಾಢ ನಿದ್ರೆಯಲ್ಲಿರುವ ಹಾಗೆ ಶಾಪವಿತ್ತ. ವಿಶ್ರವಸನು ಬ್ರಹ್ಮನ ಬಳಿಗೆ ಹೋಗಿ ಬೇಡಿಕೊಳ್ಳಲಾಗಿ, ಬ್ರಹ್ಮ ವಿಶ್ರವಸನನ್ನು ಕುರಿತು ನಿನ್ನ ಮಗನು ವರ್ಷಕ್ಕೆ ಒಂದು ದಿನದ ಮಟ್ಟಿಗೆ ಎಚ್ಚರದಿಂದಿರಲಿ ಎಂಬುದಾಗಿ ಅನುಗ್ರಹಿಸಿದ ಈ ಹಿನ್ನೆಲೆಯಲ್ಲಿ ಈ ಪದ ಬೈಗುಳ ಪದವಾಗಿ ಬಳಕೆಯಾಗುತ್ತಾ ಇದೆ. (ಪುರಾಣನಾಮ ಚೂಡಾಮಣಿ ಪು.೧೧೬)

ತಾಯಿ-ಮಗನಿಗೆ: ಕುಂಭಕರ್ಣ ಅಂತಾ ಸೂಳೆಮಗ:-

ಹೆಚ್ಚು ಮಲಗುವ ಮಗನನ್ನು ಕುರಿತು ತಾಯಿ ಬೈಯುವುದನ್ನು ನೋಡುವುದಾದರೆ,

ಪ್ರ: ಕುಂಭಕುರ್ಣ ಅಂತಾ ಸೂಳೆಮಗ ಎದ್ದೇಳು ಸಾಕು ಮಕೊಂಡ್ರೆ ಆಯ್ತು ನೋಡು ದರಿದ್ರದೋನು ಕುಂಭಕರ್ಣನೇ ಸರಿ. ರಾತ್ರಿ ಮಕ್ಕತ್ತಿಂಯಾ ಈಗ ಮಕ್ಕತಿಂಯಾ ಅಲ್ಲಾ ನೀನೇನು ಕುಂಭಕರ್ಣ ವಂಶದೋನಾ ಎಂದು ಬೈಯುವುದನ್ನು ನೋಡಬಹುದು.

ತಾಯಿ-ಮಗಳಿಗೆ: ಕುಂಭಕರ್ಣ ಅಂತಾಸೂಳೆ:-

ತಾಯಿ ಮಗನಿಗೆ ಬೈದಾಂಗೆ ಮಗಳಿಗೂ ಬೈಯುತ್ತಾಳೆ.

ಪ್ರ: ಕುಂಭಕರ್ಣ ಅಂತಾ ಸೂಳೆ ಸಾಕು ಎಷ್ಟು ಅಂತಾ ಮಲಗಿತ್ತಿಯಾ. ಎದ್ದು ಓದ್ಕೋ ಇಲ್ಲಾ ಕೆಲಸ ಮಾಡು ಅದು ಬಿಟ್ಟು ಕುಂಭಕರ್ಣ ಮಕೊಂಡಾಂಗ ಮಕೊಂಡಿಯಾ ಅಲ್ಲಾ ಎಂದು ಬೈಯುವುದನ್ನು ನೋಡಬಹುದು.

ಶಕುನಿ:

ಪೌರಣಿಕ ಹಿನ್ನೆಲೆಯಲ್ಲಿ ಶಕುನಿ ಪಾಂಡವರನ್ನು ಪರಾಕ್ರಮದಿಂದ ಗೆಲ್ಲುವುದು ಅಸಾಧ್ಯವೆಂತಲೂ, ಜೂಜಿನಲ್ಲಿ ಮೋಸದಿಂದ ಸೋಲಿಸಿ ಅವರನ್ನು ಭಂಗಗೊಳಿಸುವುದೇ ಶಕ್ಯವೆಂತಲೂ ಹೇಳಿದ. ಯುದಿಷ್ಠಿರ ಒಡ್ಡಿದ ಪಣಗಳನ್ನೆಲ್ಲ ಶಕುನಿ ಗೆದ್ದ. (ಪುರಾಣನಾಮ ಚೂಡಾಮಣಿ ಪು.೫೫೬) ಮೋಸ ಮಾಡಿ ಗೆಲ್ಲುವ ಗುಣವುಳ್ಳ ವ್ಯಕ್ತಿಯನ್ನು ಬೈಯುವಾಗ ಶಕುನಿಗೆ ಹೋಲಿಸಿ ಹೆಣ್ಣಿನ ಮೂಲಕ ಬೈಯುವುದು ಒಂದು ಮಾದರಿಯಾಗಿ ಕಾಣುತ್ತದೆ. (ಪುರಾಣನಾಮ ಚೂಡಾಮಣಿ ಪು.೫೫೬)

ಗಂಡು-ಗಂಡಿಗೆ : ಶಕುನಿ ನನ್ನ ಮಗನೆ:-

ಚಾಡಿಹೇಳುವುದು, ಭಿನ್ನಾಭಿಪ್ರಾಯವನ್ನು ಮೂಡಿಸುವುದು, ಮೋಸ ಮಾಡುವುದು ಶಕುನಿಯ ಕೆಲಸ. ಈ ಲಕ್ಷಣವನ್ನುವುಳ್ಳ ಮತ್ತು ಇಲ್ಲದೆ ಇರುವ ವ್ಯಕ್ತಿಯನ್ನು ಬೈಯುವಾಗ ಹೋಲಿಕೆ ಮಾಡಿ ಬೈಯುವುದನ್ನು ನೋಡಬಹುದು.

ಪ್ರ: ಲೇ ಶಕುನಿ ನನ್ನ ಮಗನೆ ಈಗ ಬಂದು ನಮ್ಮ ಇಬ್ಬರ ನಡುವೆ ಜಗಳ ಇಡಬೇಡ ನೀನು. ಶಕುನಿ ಬುದ್ಧಿ ತೋರಿಸಬೇಡ ಎಂದು ಹೆಣ್ಣಿನ ಮೂಲಕ ಬೈಯುವುದನ್ನು ನೋಡಬಹುದು. ಈ ಲಕ್ಷಣ ಗಂಡಿನಲ್ಲಿ ಇದ್ದರೂ ಅದು ಹೆಣ್ಣಿನ ಮೂಲಕ ಗಂಡಿಗೆ ಬೈಯುವುದನ್ನು ಕಾಣಬಹುದು. ಅಂದರೆ ನನ್ ಮಗ ಎಂಬ ಪದ ಅನೈತಿಕ ಸಂಬಂಧದಿಂದ ಹುಟ್ಟಿದ ಮಗ ಎಂಬುವುದನ್ನು ಸೂಚಿಸುತ್ತದೆ.

ಅಪ್ಸರೆ:-

ಅಪ್ಸರೆಯರ ಪೌರಣಿಕ ಹಿನ್ನೆಲೆಯನ್ನು ನೋಡುವುದಾದರೆ ಅಪ್ಸರೆಯರು ದೇವಲೋಕದ ವೇಶ್ಯೆರಾಗಿದ್ದರು. ಬ್ರಹ್ಮನ ಅಂಗೈಯಿಂದ ಜನಿಸಿದವಳೆಂದು ಭಾಗವತದಲ್ಲಿ ಹೇಳಿದೆ. ಇಂದ್ರನ ಸಭೆಯಲ್ಲಿ ನರ್ತಿಸುವುದು, ಸಂತೋಷಪಡಿಸುವುದೇ ಇವರ ಕರ್ತವ್ಯ. ಈ ಪಂಗಡದವರಿಗೆ ಸಾಮಾನ್ಯವಾಗಿ ಮದುವೆಯೇ ಇಲ್ಲ. ಊರ್ವಶಿ, ಮೇನಕೆ, ರಂಭೆ, ತಿಲೋತ್ತಮೆ ಮುಂತಾದವರು ಇವರೆಲ್ಲಾ ಅಪ್ಸರೆಯರು. (ಪುರಾಣ ಭಾರತಕೋಶ ಪು.೨೦)

ಗಂಡು-ಹೆಣ್ಣಿಗೆ: ದೊಡ್ಡು ಅಪ್ಸರೆ ಇಕಿ ಹಾಂಗೆ

ಗಂಡು ಹೆಣ್ಣಿನ ರೂಪವನ್ನು ಕುರಿತು ಬೈಯುವಾಗ,

ಪ್ರ: ದೊಡ್ಡು ಅಪ್ಸರೆ ಇಕಿ ಎಷ್ಟು ಧಿಮಾಕ ಮಡತ್ತಿಯಾ ಬೋಸುಡಿ ಸೂಳೆ. ಇನ್ನೂ ಚೆನ್ನಾಗಿ ಇದಿದ್ದರೆ ಎಷ್ಟು ಮಾಡತ್ತಿದ್ದೆ ನೀನು ಎಂದು ಬೈಯುವುದನ್ನು ನೋಡಬಹುದು.

ಗಂಡು ಹೆಣ್ಣಿನ ರೂಪದ ಬಗ್ಗೆ ಹೇಳುವಾಗ ಈ ಪದವನ್ನು ಬಳಸಿ ಬೈಗುಳದ ಪದವಾಗಿ ಬಳಕೆ ಮಾಡುವುದನ್ನು ನೋಡಬಹುದು. ಅವಳು ಎಷ್ಟೇ ಚೆನ್ನಾಗಿದ್ದರೂ ನಿನೇನು ಅಪ್ಸರೆನಾ ಎಂದು ಬೈಯುತ್ತಾನೆ. ಹಾಗೂ ರೂಪದಲ್ಲಿ ಹೆಣ್ಣು ಚೆನ್ನಾಗಿಲ್ಲ ಅಂದರೂ

ಅವಳಿಗೆ ಅಪ್ಸರೆಗೆ ಹೋಲಿಕೆ ಮಾಡಿ ಬೈಯುವುದನ್ನು ನೋಡಬಹುದು.

ಅಪ್ಸರೆಯ ನಿಜವಾದ ಅರ್ಥವೇ ಬೇರೆ. ಆದರೆ ಇದು ಈಗ ಬಳಕೆಯಾಗುವ ಅರ್ಥವೇ ಬೇರೆಯಾಗಿದೆ. ಅತೀ ಸುಂದರವಾಗಿರುವ ಹೆಣ್ಣಿಗೆ ಅಪ್ಸರೆ ಎಂದು ಕರೆಯುತ್ತಾರೆ. ಆದರೆ ಈಗ ಈ ಪದ ಸುಂದರವಾಗಿ ಇಲ್ಲದ ಹೆಣ್ಣಿಗೆ ಬಳಕೆ ಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಅರ್ಥ ಗೊತ್ತಿಲ್ಲದೆ ಈ ಪದವನ್ನು ಬೈಗುಳವಾಗಿ ಬಳಕೆ ಮಾಡುತ್ತಾರೆ. ಅಪ್ಸರೆ ಎಂಬ ಪದ ಈಗ ಹೆಣ್ಣಿಗೆ ಹೀಯಾಳಿಸುವ ಸಂದರ್ಭದಲ್ಲಿ ಸಹ ಈ ಪದವನ್ನು ಬೈಗುಳವಾಗಿ ಬಳಕೆ ಮಾಡುತ್ತಾರೆ. ಈ ಪದ ಈಗ ತನ್ನ ನಿಜ ಅರ್ಥವನ್ನು ಕಳೆದುಕೊಂಡು ಬೇರೆ ಅರ್ಥದಲ್ಲಿ ಬಳಕೆಯಾಗುತ್ತದೆ.

೪.೩.೩.ಉಗ್ರ ಸ್ವರೂಪವುಳ್ಳ ದೇವತೆಗಳಿಗೆ ಹೋಲಿಕೆ ಮಾಡಿ ಬೈಯುವ ಬೈಗುಳ.

ಊರಮ್ಮ:

ಹೆಣ್ಣು–ಹೆಣ್ಣಿಗೆ: ಊರಮ್ಮನಂತೋಳು:–

ಈ ಬೈಗುಳವು ಒಂದು ರೀತಿಯಲ್ಲಿ ಉಗ್ರಸ್ವರೂಪವುಳ್ಳ ದೇವತೆಗೆ ಹೋಲಿಕೆ ಮಾಡಿ ಬೈಯುವ ಬೈಗುಳವಾಗಿದೆ.

ಊರಮ್ಮ ಅಂದರೆ ಅವಳು ದುಷ್ಟ ದೇವತೆ. ಆ ದೇವತೆಯನ್ನು ನೋಡಿದರೆ ಭಯ ಬರುವ ಹಾಗೆ ಇದ್ದಾಳೆ. ಗಂಡಸರು ಮತ್ತು ಹೆಂಗಸರು ನೋಡಲಿಕ್ಕೆ ಗಂಭೀರವಾಗಿದ್ದರೆ ಅವರನ್ನು ಈ ದುಷ್ಟ ದೇವತೆಗೆ ಹೋಲಿಕೆ ಮಾಡಿ ಬೈಯುವುದನ್ನು ನೋಡಬಹುದು.

ಪ್ರ: ಲೇ ಊರಮ್ಮನಂತೋಳೆ ಹೆಂಗೆ ಇದ್ದಿಯಾ ನೋಡು ಸೇಮ್ ಊರಮ್ಮ ಇದಾಂಗ ಇದ್ದಿಯಾ ಆ ಸೀರಿಗಿ, ನಿನ್ನ ಮುಕಕ್ಕೆ ಹಾಂಗೆ ಕಾಣತ್ತಿಯಾ ನೋಡು ಎಂದು ಬೈಯುವುದನ್ನು ಕಾಣಬಹುದು.

ಒಂದು ಹೆಣ್ಣು ತನ್ನ ರೂಪಕ್ಕೆ ತಕ್ಕಂತೆ ಸೀರೆ, ಬಳೆ, ಕುಂಕುಮ, ಒಡವೆ ಹಾಕಿಕೊಂಡರೆ ಮಾತ್ರ ಅವಳು ನೋಡಲಿಕ್ಕೆ ಚೆನ್ನಾಗಿದ್ದಾಳೆ ಎಂದು ಸಮಾಜದ ಮೆಚ್ಚುಗೆಗೆ ಪಾತ್ರಳಾಗುತ್ತಾಳೆ. ಇಲ್ಲ ಅದನ್ನು ಬಿಟ್ಟು ತನ್ನ ರೂಪಕ್ಕೆ ವಿರುದ್ಧವಾಗಿ ಅಲಂಕಾರ ಮಾಡಿಕೊಂಡರೆ ಅವಳನ್ನು ದುಷ್ಟ ದೇವತೆಗೆ ಹೋಲಿಕೆ ಮಾಡಿ ಬೈಯುವುದನ್ನು ನೋಡಬಹುದು. ಇದು ಸಮಾಜದ ಒಂದು ಪರಿಸ್ಥಿತಿ ಎಂದು ಹೇಳಬಹುದು.

ಶನಿ:

ಗಂಡು–ಹೆಣ್ಣಿಗೆ: ಶನಿ ಮುಂಡೆದು:–

ಇದರ ಬಳಕೆಯ ನೆಲೆಯನ್ನು ನೋಡುವುದಾದರೆ ಹೆಣ್ಣಿಗೆ ಬೈಯುವ ಬೈಗುಳವಾಗಿ ಕಂಡುಬರುತ್ತದೆ.

ಪ್ರ: ಯಾವುದಾದರೂ ಕೆಲಸ ಮಾಡಲು ಮುಂದುದಾಗ ಕೆಲಸಕ್ಕೆ ಅಡ್ಡಿ ಮಾಡುವ ಹೆಣ್ಣನ್ನು ಶನಿಮುಂಡೆದು ತಂದು ಹಾಂಗೆ ಬಂದು ಬಿಡತ್ತಿ ಅಲ್ಲಾ ಎದುರಿಗೆ ಎಂದು ಬೈಯುವುದನ್ನು ನೋಡಬಹುದು. ಕೆಲಸಕ್ಕೆ ಏನೇ ಅಡ್ಡಿ ಆತಂಕವಾದರೂ ಅದಕ್ಕೆ ಹೆಣ್ಣೆ ಕಾರಣ ಎಂದು ಸಮಾಜ ದೂಷಿಸುತ್ತದೆ.

ಗಂಡ–ಹೆಂಡತಿಗೆ: ಶನಿ ಅಂತಾ ಸೂಳೆ:–

ಪ್ರ: ನೀನು ಎದುರಿಗೆ ಬಂದರೆ ಆಗುವ ಕೆಲಸ ಯಾವುದೂ ಆಗುವುದಿಲ್ಲ ಎಂದು ಬೈಯುತ್ತಾನೆ. ಮತ್ತೊಂದು ಸಂದರ್ಭದಲ್ಲಿ ಮೊದಲೇ ಶನಿ ಬಾಯಿ ಆಕಿದಾಂಗೆ ಆಕಬೇಡ ನೀನು ಏನು ಕೆಲಸ ಆಗಲ್ಲ ಶನಿ ಅಂತಾ ಸೂಳೆ ಎಂದು ಗಂಡ ಹೆಂಡತಿಯನ್ನು ದೂಷಿಸುತ್ತಾನೆ.

ಅವಳ ಉದ್ದೇಶ ಕೇಡಾಗಲಿ ಎಂದಲ್ಲ. ಯಾವುದೇ ಕೆಲಸ ಮಾಡಲಿ ಉಷಾರ್ ಆಗಿ ಇರಬೇಕು ಎಂಬುದು ಅವಳ ಉದ್ದೇಶವಾಗಿರುತ್ತದೆ. ಯಾವುದೇ ಹೆಣ್ಣಾಗಲಿ ತಮ್ಮ ಕುಟುಂಬಕ್ಕೆ ಕೇಡಾಗಲಿ ಎಂದು ಬಯಸುವುದಿಲ್ಲ. ಆದರೆ ಗಂಡು ಅವಳನ್ನು ಈ ರೀತಿಯಲ್ಲಿ ಅರ್ಥಮಾಡಿಕೊಂಡಿದ್ದಾನೆ. ಇದು ಬರೀ ಗಂಡ–ಹೆಂಡತಿಯ ನಡುವೆ ಅಷ್ಟೇ ಇಲ್ಲ ಇಡೀ ಸಮಾಜದ ಭಾವನೆ ಎಂದು ಹೇಳಬಹುದು.

ಗಂಡು–ಗಂಡಿಗೆ: ಇವನು ಶನಿ ಸೂಳೆಮಗ ಹೆಗಲೇರಿದ್ರೆ ಬಿಡೊಲ್ಲಾ:–

ಸ್ನೇಹಿತರ ನಡುವೆ ತಮಾಷೆಗೆ ಈ ಬೈಗುಳವನ್ನು ಬಳಕೆ ಮಾಡವುದನ್ನು ನೋಡಬಹುದು.

ಪ್ರ: ಇವನಿಗೆ ಯಾವುದಾದರೂ ವಿಷಯ ಹೇಳಿತಿನಿ ಅಂತಾ ಹೇಳಿ ಹೇಳದೆ ಇದ್ದರೆ ಶನಿ ಅಂತಾ ಸೂಳೆಮಗ ಹೆಗಲೇರಿದ್ರೆ ಬಿಡೊಲ್ಲಾ ವಿಷಯ ಹೇಳೊವರಿಗೆ ಎಂದು ಬೈಯುವುದನ್ನು ನೋಡಬಹುದು.

ತಂದೆ–ಮಗನಿಗೆ: ಶನಿ ಅಂತಾ ಸೂಳೆಮಗ:–

ಇವನು ಎಲ್ಲಿಗಾದರೂ ಹೋಗಬೇಕು ಅಂತಾ ಇದ್ರೆ ಬಿಡೊಲ್ಲಾ ನೋಡು ಶನಿ ಸೂಳೆಮಗ ಶನಿ ಅಂಟಿಕೊಂಡಾಗ ಅಂಟಿಕೊಳ್ಳತ್ತಾನೆ ಎಂದು ಬೈಯುವುದನ್ನು ನೋಡಬಹುದು.

ಕೆಲವು ಪ್ರಯೋಗದಲ್ಲಿ ಗಂಡಿಗೆ ಬೈದರೂ ಅದು ಹೆಣ್ಣಿನ ಮೂಲಕವೇ ವ್ಯಕ್ತವಾಗುತ್ತದೆ ಎಂಬ ಅಂಶವನ್ನು ಇಲ್ಲಿ ಗಮನಿಸಬಹುದು.

೪.೩.೪.ವ್ಯಕ್ತಿಯ ದೈಹಿಕ ಅಂಗಾಂಗಗಳ ಹೀನತೆಗೆ ಹೋಲಿಕೆ ಮಾಡಿ ಬೈಯುವ ಬೈಗುಳ.

ಉದಾ:– ಚೊಚ್ಚಸೂಳೆಮಗನೆ

ಕುಂಟಸೂಳೆ

ಕುಂಟನನ್ಮಗ್ನೆ

ಕಿವುಡಸೂಳೆ

ಕಿವುಡಸೂಳೆಮಗ

ಕರಿಯವ್ವ

ಹೆಣ್ಣಿಗ

ಷಂಡ

ಬಂಜೆ

ಗೊಡ್ಡಿ

ಚೊಚ್ಚಕೈಸೂಳೆ

ವ್ಯಕ್ತಿಯ ದೈಹಿಕ ಅಗಾಂಗಗಳ ಹೀನತೆಗೆ ಹೋಲಿಕೆ ಮಾಡಿ ಬೈಯುವ ಬೈಗುಳಗಳೂ ಇವು. ದೈಹಿಕ ಅಂಗಾಂಗ ಹೀನತೆಯನ್ನು ಹೊಂದಿದ ವ್ಯಕ್ತಿಯನ್ನು ಬೈಯುವಾಗ ಅವರ ಅಂಗಾಂಗಗಳನ್ನು ಕುರಿತು ಬೈಯುತ್ತಾರೆ. ಹಾಗೆಯೇ ವ್ಯಕ್ತಿಯ ಯಾವುದೇ ದೈಹಿಕ ಅಂಗಾಂಗ ಹೀನತೆ ಇಲ್ಲದೆ ಇದ್ದರೂ ಸಹ ಅಂಗಾಂಗ ಹೀನತೆಗಳಿಗೆ ಹೋಲಿಕೆ ಮಾಡಿ ಬೈಯುವುದನ್ನು ನೋಡಬಹುದು. ಹೆಂಗಸರಿಗೆ, ಗಂಡಸರಿಗೆ, ಮಕ್ಕಳಿಗೆ ಎಲ್ಲರಿಗೂ ಈ ರೀತಿಯ ಹೋಲಿಕೆ ರೂಪದ ಬೈಗುಳಗಳನ್ನು ಬಳಕೆ ಮಾಡುತ್ತಾರೆ.

ಚೊಚ್ಚಸೂಳೆಮಗನೆ

ಗಂಡು–ಗಂಡಿಗೆ: ಚೊಚ್ಚಸೂಳೆಮಗನೆ:–

ಕೈ ಇಲ್ಲದ ವ್ಯಕ್ತಿ ತಾನು ಸುಮ್ಮನೆ ಇರಬೇಕು. ಕೈ ಇರುವ ಹಾಗೆ ಮಾಡಿದರೆ ಅಥವಾ ಕೈ ಇರುವವರ ಮುಂದೆ ಧಿಮಾಕು ಮಾಡಿದರೆ ಅವನು ಹೇಗೆ ಬೈಗುಳಕ್ಕೆ ಒಳಗಾಗುತ್ತಾನೆ ಎಂಬುವುದನ್ನು ನೋಡುವುದಾದರೆ,

ಪ್ರ: ಚೊಚ್ಚಸೂಳೆಮಗನೆ ಕೈ ನೆಟ್ಟಗೆ ಇಲ್ಲಾ ಏನಿಲ್ಲ ಎಷ್ಟು ಧಿಮಾಕ ಮಾಡತ್ತಿಯಾ ನೀನು. ಇನ್ನು ಎಲ್ಲಾ ನೆಟ್ಟಗೆ ಇದ್ದಿದ್ದರೆ ಇನ್ನೂ ಎಷ್ಟು ಮಾಡತ್ತ ಇದ್ದೆ ಲೇ ನೀನು ಎಂದು ಅವನ ಅಂಗಾಂಗ ಹೀನತೆಯನ್ನು ಕುರಿತು ಬೈಯುವ ಬೈಗುಳವಾಗಿದೆ. ಬೈಯುವವನು ಗಂಡು ಬೈಯಿಸಿಕೊಳ್ಳುವವನು ಗಂಡು ಆದರೆ ತಾಯಿ ಅಥವಾ ಹೆಣ್ಣು ಬೈಗುಳಕ್ಕೆ ಒಳಗಾಗುತ್ತಾಳೆ.

ಕೆಲವು ಸಂದರ್ಭಗಳಲ್ಲಿ ಯಾವುದೇ ಅಂಗ ಹೀನತೆ ಇಲ್ಲದ ವ್ಯಕ್ತಿಯನ್ನು ಬೈಯುವಾಗಲೂ ಈ ಹೋಲಿಕೆ ರೂಪದ ಬೈಗುಳವನ್ನು ಬಳಕೆ ಮಾಡುತ್ತಾರೆ. ಚೊಚ್ಚ ಮಾಡಿದಾಂಗ ಮಾಡಿತ್ತಿಯಾ ಅಲ್ಲಾ ಲೇ ಚೊಚ್ಚಸೂಳೆಮಗನೆ ಎಂದು ಬೈಯುತ್ತಾರೆ. ಇಲ್ಲಿಯೂ ಅವನ

ತಾಯಿಯು ಅನೈತಿಕತೆಯುಳ್ಳವಳು ಎಂದು ಬೈಯುತ್ತಾರೆ. ಇದು ಮೇಲು ನೋಟಕ್ಕೆ ಪುರುಷ ಬೈಗುಳವಾಗಿ ಕಂಡರೂ ವ್ಯಕ್ತಿಯ ಅಂಗಹಿನತೆಗೆ ಹೆಣ್ಣು ಅಥವಾ ತಾಯಿ ಕಾರಣವಲ್ಲ ಆದರೂ ಬೈಯುವಾಗ ತಾಯಿಯನ್ನು ಸಹ ಬೈಯುತ್ತಾರೆ ಹೀಗೆ ಸಮಾಜದಲ್ಲಿ ಬೈಗುಳಗಳು ಬಳಕೆಯಲ್ಲಿವೆ.

ಹೆಣ್ಣು-ಗಂಡಿಗೆ: ಚೊಚ್ಚಸೂಳೆಮಗ:-

ತರಕಾರಿ ಮಾರುವವನು ತೂಕ ಸರಿಯಾಗಿ ಮಾಡಿಲ್ಲ ಮತ್ತು ಒಂದು ಟಮಟೋ ಸಹ ಹೆಚ್ಚಿಗೆ ಹಾಕಿಲ್ಲ ಎಂದು ಹೆಣ್ಣು ಗಂಡಿಗೆ ಬೈಯುವುದನ್ನು ನೋಡುವುದಾದರೆ,

ಪ್ರ: ಚೊಚ್ಚ ಕೈ ಸೂಳೆಮಗ ಒಂದು ಟಮಟೋ ಜಾಸ್ತಿ ಹಾಕಲಿಲ್ಲಾ ನೋಡು ಚೊಚ್ಚ ಮಾಡಿದಾಂಗ ಮಾಡತ್ತಾನೆ. ಕಂತ್ರನೋ ಅವನು ಬಲು ಧಿಮಾಕು ಅವನಿಗೆ ಒಂದು ಜಾಸ್ತಿ ಹಾಕಿದ್ರೆ ಏನು ಅವರ ಅಮ್ಮನ್ ಗಂಟು ಹೊದಾಂಗೆ ಮಾಡಿದಾಂಗ ಮಾಡತ್ತಾನೆ. ಎಂದು ಹೋಲಿಕೆ ಮಾಡಿ ಬೈಯುವುದರ ಜೊತೆಗೆ ಅವನ ತಾಯಿಯನ್ನು ಬೈಯುವುದನ್ನು ಕಾಣಬಹುದು.

ಹೆಣ್ಣು-ಹೆಣ್ಣಿಗೆ: ಕುಂಟ್ಸೂಳೆ:-

'ಕುಂಟು' ಎಂಬುದು ಅಂಗಹೀನತೆಗೆ ಸಂಬಂಧಿಸಿದ ತಟಸ್ಥ ಪದ. ಈ ಪದಕ್ಕೆ 'ಅ' ಸೇರಿದರೆ ಪುರುಷವಾಚಕವಾಗಿಯೂ ಮತ್ತು 'ಇ' ಸೇರಿದರೆ ಸ್ತ್ರೀವಾಚಕವಾಗಿಯೂ ಬಳಕೆಯಾಗುತ್ತದೆ. ಕುಂಟಿ ಎಂಬ ಪದಕ್ಕೆ ಸೂಳೆ ಎಂಬ ಪದ ಸೇರಿ ಕುಂಟ್ಸೂಳೆ ಆಗಿ ಬೈಯುವಾಗ ಬಳಕೆ ಮಾಡುತ್ತಾರೆ.

ಪ್ರ: ಕುಂಟಸೂಳೆಗೆ ಎಷ್ಟು ಸೊಕ್ಕು ಐತಿ ನೋಡು. ಎಷ್ಟೆ ಹೇಳಿದ್ರು ತನ್ನ ಅಲ್ಕ ಬುದ್ಧಿ ಬೀಡಲ್ಲ ಅಂತಾಳೆ. ಕುಂಟ್ಸೂಳೆ ಕಾಲಾಗ ಸಾಕಾಗಿ ಹೊಗ್ಯೆತಿ ತನ್ನದೆ ನಡಿಬೇಕು ಅಂತಾಳೆ ಕತ್ತೆರಂಡೆ. ಏನೋ ಹೋಗ್ಲಿ ಕಾಲು ಇಲ್ಲಾದಕಿ ಅಂತಾ ಸುಮ್ಮನೆ ಇದ್ರೆ ನಮ್ಮನ್ನೆ ಆಟ ಆಡಿಸಿತ್ತಾಳೆ ಅವಳು ಕುಂಟಸೂಳೆನಾಡ ಎಂದು ಬೈಯುವುದನ್ನು ನೋಡಬಹುದು.

ಗಂಡು-ಗಂಡಿಗೆ: ಕುಂಟಸೂಳೆಮಗ:-

ಪ್ರ: ಲೇ ಕುಂಟಸೂಳೆಮಗನೆ ಬೇಗ ಬಾರಲೇ ಹೆಂಗಾ ಮಾಡತ್ತಿಯಾ ಬರೋಕೆ ಏನು ದಾಡಿ ನಿನಗೆ ಎಂದು ಸ್ನೇಹಿತ ಬೈಯುವುದನ್ನು ನೋಡಬಹುದು.

ಇನ್ನೊಂದು ಸಂದರ್ಭದಲ್ಲಿ ಕುಂಟಸೂಳೆಮಗನಿಗೆ ಬಲು ಸೊಕ್ಕು ಐತಿ ಬೀಡು. ಅವನಿಗೆ ನಾವು ಪಾಪ ಅಂತಿವಿ ಅವನು ಬರಿ ಲಂಚ ಬರೋದನ್ನ ನೋಡತ್ತಾನೆ. ನಾವು ಏನಾದರೂ ಬಾ ಅಂತ ಕರದ್ರೆ ಅವನು ಹೊದ್ರೆ ಏನು ಸಿಗುತ್ತೆ ಅಂತಾ ಮೊದಲೇ ಯೋಚನೆ ಮಾಡತ್ತಾನೆ. ಕುಂಟರಸನಾಡ ಎಂದು ಅವಾಚ್ಯ ರೂಪದ ಬೈಗುಳ ಬಳಕೆ

ಮಾಡುವುದನ್ನು ನೋಡಬಹುದು. ಆದರೆ ಯಾವುದೇ ಬೈಗುಳವಾದರೂ ಅಲ್ಲಿ ಹೆಣ್ಣು ಕೇಂದ್ರವಾಗಿರುತ್ತಾಳೆ ಎಂಬ ಸಂಗತಿಯನ್ನು ತಿಳಿಯಬಹುದು.

೪.೩.೫.ವ್ಯಕ್ತಿಯ ಅಸಹಾಯಕತೆಯನ್ನು ಹೋಲಿಕೆ ಮಾಡಿ ಬೈಯುವ ಬೈಗುಳ.

ಉದಾ:- ದರಿದ್ರ ನನ್ಮಗ್ನೆ

ದರಿದ್ರಸೂಳೆಮಗ

ಪುಟಗೋಸಿ ನನ್ಮಗ್ನೆ

ಪುಟಗೋಸಿ ಸೂಳೆಮಗ

ಪರದೇಸಿ ನನ್ಮಗ್ನೆ

ಪಾಪರ್ ನನ್ಮಗ್ನೆ

ಪರದೇಸಿಸೂಳೆ

ಅಡ್ನಾಡಿಸೂಳೆ

ಅಡ್ನಾಡಿಸೂಳೆಮಗ

ಅಡ್ನಾಡಿ ನನ್ಮಗ್ನೆ

ಮೈಗಳ್ಳ ನನ್ಮಗ್ನೆ

ಸೋಮಾರಿಸೂಳೆ

ಸೋಮಾರಿಸೂಳೆಮಗ

ಮೈಗಳ್ಳಿಸೂಳೆ

ವ್ಯಕ್ತಿಯು ತನ್ನ ಕೈಲಿ ಏನು ಮಾಡಲು ಆಗದೆ ಇದ್ದ ಸಂದರ್ಭದಲ್ಲಿ ಇಂತಹ ಹೋಲಿಕೆ ರೂಪದ ಬೈಗುಳಗಳಿಗೆ ಪಾತ್ರವಾಗುತ್ತಾರೆ.

ಗಂಡು-ಗಂಡಿಗೆ: ದರಿದ್ರ ನನ್ಮಗ:-

ಪ್ರ: ಈ ದರಿದ್ರ ನನ್ಮಗನ್ನ ಕಳಿಸಿದ್ರೆ ಇಷ್ಟೇ ನೋಡು ಯಾವ ಕೆಲಸನೂ ನೆಟ್ಗೆ ಆಗಲ್ಲ ಎಂತ ದರಿದ್ರ ಸೂಳೆಮಗ ಆಗಿರಬೇಡ ಇವನು. ಇಂತ್ತೋನು ನಮ್ಮ ಹತ್ರ ಕೆಲಸಕ್ಕೆ ಇದಾನ ತೂ ನಮ್ಮ ಗಾಚರಕ್ಕೆ ಇಷ್ಟು ಎಂದು ಒಬ್ಬ ಅಧಿಕಾರಿ ತನ್ನ ಕೆಳಗೆ ಕೆಲಸ ಮಾಡುವವನ್ನು ಕುರಿತು ಬೈಯುವುದನ್ನು ನೋಡಬಹುದು. ಇಲ್ಲಿಯೂ ಸಹ ಹೆಣ್ಣು ಅಸಹಾಯತೆಯುಳ್ಳವಳು ಎಂಬ ಅರ್ಥದಲ್ಲಿ ಈ ಬೈಗುಳ ಬಳಕೆಯಾಗುತ್ತದೆ. ಆದರೆ ಇಲ್ಲಿ

ಹೆಣ್ಣಿನ ಯಾವುದೇ ಪಾತ್ರ ಇಲ್ಲದೆ ಇದ್ದರೂ ಅವಳ ಮೂಲಕವೇ ಗಂಡಿಗೆ ಬೈಯುವಾಗ ಬೈಯುವುದನ್ನು ನೋಡಬಹುದು.

ಇನ್ನೊಂದು ಸಂದರ್ಭದಲ್ಲಿ ಇವನು ಯಾವನು ದರಿದ್ರಸೂಳೆಮಗನ ತಂದು ಇನ್ನೂ ಬರಲಿಲ್ಲ ಅಲ್ಲಾ ಎಷ್ಟು ವತ್ತು ಕಾಯಿಬೇಕು ಇವನಿಗಾಗಿ ಎಂದು ವ್ಯಕ್ತಿಯ ಅಸಹಾಯತೆಗೆ ಹೋಲಿಕೆ ಮಾಡಿ ಅದರಲ್ಲೂ ಹೆಣ್ಣಿನ ಮೂಲಕವೇ ಬೈಯುವುದನ್ನು ಕಾಣಬಹುದು.

ಗಂಡು-ಗಂಡಿಗೆ: ಪರದೇಸಿ ನನ್ಮಗ:-

ಯಾರು ಇಲ್ಲದವನಿಗೆ ಪರದೇಸಿ ಎಂದು ಕರೆಯುತ್ತಾರೆ. ಅದೇ ಪದ ಬೈಗುಳಕ್ಕೆ ಒಳಗಾದಾಗ ಅದರ ಬಳಕೆಯ ವಿಧಾನವನ್ನು ನೋಡುವುದಾದರೆ,

ಪ್ರ: ಪರದೇಸಿ ನನ್ಮಗನೆ ನಿನಗೆ ಯಾರು ಇದಾರೆ ಅಂತಾ ಇಷ್ಟು ಎಗರಾಡತ್ತಿಯಾ ನೀನು. ಹೇಳೋರು ಇಲ್ಲಾ ಕೇಳೋರು ಇಲ್ಲ ಅದಕ್ಕೆ ಇಷ್ಟು ಧಿಮಾಕ ನಿನಗೆ ಪರದೇಸಿ ಸೂಳೆಮಗನ್ನ ತಂದು ಎಂದು ಬೈಯುವುದನ್ನು ನೋಡಬಹುದು.

ಪಾಪರ್ ನನ್ ಮಗನೆ:-

ಈ ಬೈಗುಳದ ಅರ್ಥ ಅವನು ಇದ್ದ ಎಲ್ಲ ದುಡ್ಡು, ಮನೆ ಎಲ್ಲವನ್ನು ಕಳೆದುಕೊಂಡು ಭೀಕಾರಿಯಾಗಿದ್ದಾನೆ ಎಂಬುವುದಾಗಿದೆ. ಬೈಯುವಾಗ ಅವನು ಬೀಡು ಲೇ ಈಗ ಎಲ್ಲ ಪಾಪರ್ ಆಗ್ಯಾನ ಅವನ ಹತ್ತಿರ ಈಗ ಏನು ಇಲ್ಲ ಎಲ್ಲ ಕಳೆದುಕೊಂಡು ಪಾಪರ್ ಆಗಿಬಿಟ್ಟನಾ ಆ ನನ್ ಮಗ ಎಂದು ಬೈಯುವುದನ್ನು ನೋಡಬಹುದು.

ಹೀಗೆ ಆರೋಪದ ಬೈಗುಳಗಳಲ್ಲಿ ಹೆಣ್ಣನ್ನು ಒಳಗೊಂಡು ರಚನೆಯಾಗಿರುವುದನ್ನು ಬೈಗುಳಗಳನ್ನು ಗುರಿತಿಸಬಹುದು.

೪.೪.ಶಾಪ ರೂಪದ ಬೈಗುಳಗಳು:-

ಬೇರೆಯವರಿಗೆ ಕೆಟ್ಟದಾಗಲಿ ಎಂದು ನುಡಿಯುವ ನುಡಿಗಳೇ ಶಾಪರೂಪದ ಬೈಗುಳಗಳಾಗಿವೆ. ಶಾಪರೂಪದ ಬೈಗುಳಗಳು ಜನ ಸಾಮಾನ್ಯರ ಬಾಯಿಯಲ್ಲಿ ಅಷ್ಟೆ ಅಲ್ಲದೆ ಮಾಹಾಕಾವ್ಯಗಳಲ್ಲಿ ಬಂದಿರುವ ಕೆಲವು ಶಾಪ ಪ್ರಸಂಗಗಳನ್ನು ನೋಡಿದಾಗ ಅದಕ್ಕೆ ಕಾರಣವಾದ ಹಿನ್ನೆಲೆಯನ್ನು ನಾವು ಕಾಣಬಹುದು. ಶಾಪವನ್ನು ಕುರಿತಂತೆ ಕನ್ನಡ ಜಾನಪದ ವಿಶ್ವಕೋಶದಲ್ಲಿ ಈ ಕೆಳಕಂಡಂತೆ ವಿವರಣೆ ನೀಡಲಾಗಿದೆ. 'ಒಬ್ಬ ವ್ಯಕ್ತಿಗೆ ಕೆಟ್ಟದ್ದನ್ನು ಹಾರೈಸುವುದು, ಹಾಗೆಯೇ ಅಂತಹ ಹಾರೈಕೆಯ ಪರಿಣಾಮ ಮತ್ತು ಸಡಿಲ ಅರ್ಥದಲ್ಲಿ ಅಲ್ಲಿರುವ ಯಾವುದೇ ಕೇಡು ಈ ಪದದ ಅರ್ಥ ವ್ಯಾಪ್ತಿಗೆ ಸೇರುತ್ತದೆ'. ಜಗತ್ತಿನ ಎಲ್ಲ ಜನರಲ್ಲೂ ಶಾಪದ ಪದ್ಧತಿ ಪ್ರಚಲಿತವಾಗಿದೆ. ಶಾಪ, ದೈವಿಕವಾದ,

ಭೂತಪರವಾದ ಅಥವಾ ಮಾಂತ್ರಿಕ ಶಕ್ತಿಯನ್ನು ಆವಾಹನೆ ಮಾಡುತ್ತದೆ.

ಶಾಪ ಹಾಕುವುದು ಸಾಮಾನ್ಯವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ ಎಲ್ಲಾ ರೀತಿಯಿಂದಲೂ ಶೋಷಣೆಗೆ ಗುರಿಯಾಗಿರುವವರು ಮತ್ತು ಶಾಪ ಹಾಕುವುದು ಅತೀ ಹೆಚ್ಚಾಗಿ ಹೆಣ್ಣು ಮಕ್ಕಳೇ ಅವರು ತಮ್ಮ ಎದುರಾಳಿಯನ್ನು ತಮ್ಮ ಕೈಯಿಂದ ಸೇದೆಬಡಿಯಲು ಆಗದ ಕಾರಣ ತಾವು ಅಪಮಾನಕ್ಕೆ ಅಥವಾ ಅವಮಾನಕ್ಕೆ ಗುರಿಯಾಗಿರುತ್ತಾರೆ. ಸಮಾಜದಲ್ಲಿ ಎಲ್ಲಾ ರೀತಿಯಿಂದಲೂ ಶೋಷಣೆಗೆ ಒಳಗಾಗಿರುತ್ತಾರೆ. ಹೆಣ್ಣು ಮಕ್ಕಳು ತಮ್ಮ ಕೈಯಲ್ಲಿ ಆಗದೇ ಇರುವುದರಿಂದ ತಮ್ಮ ಶತ್ರುಗಳನ್ನು ಸದೆಬಡಿಯಲು ಶಾಪರೂಪದ ಬೈಗುಳಗಳನ್ನು ಹೆಚ್ಚಿನ ರೀತಿಯಲ್ಲಿ ಬಳಸುತ್ತಾರೆ. ಅವರಿಗೆ ತೊಂದರೆ (ಕಷ್ಟ) ತಾವೇ ಕೋಡುತ್ತವೆ ಎಂದು ಹೇಳುವುದಿಲ್ಲ, ಯಾರಿಂದಲೋ ಅಥವಾ ಯಾವುದೋ ಮೂಲದಿಂದ ತಮ್ಮ ಶತ್ರುಗಳಿಗೆ ಕಷ್ಟ ಸಂಭವಿಸಲಿ ಎಂಬರ್ಥದಲ್ಲಿ ಮಾತನಾಡುತ್ತಾರೆ. ಸಮಾಜದಲ್ಲಿ ಶಾಪಗಳಿಗೆ ಒಂದು ಶಕ್ತಿಯಿದೆ. ಆ ಶಾಪಗಳು ಕೆಲವೊಮ್ಮೆ ನಿಜವಾಗುತ್ತವೆ ಎಂದು ಜನರ ನಂಬಿಕೆಯಾಗಿದೆ. ಶಾಪರೂಪದ ಬೈಗುಳಗಳ ಉದ್ದೇಶ ತಮ್ಮ ಶತ್ರುಗಳನ್ನು ನಾಶಪಡಿಸುವುದಾಗಿದೆ.

ಶಾಪರೂಪದ ಬೈಗುಳಗಳನ್ನು ಐದು ರೀತಿಯಲ್ಲಿ ವರ್ಗೀಕರಣ ಮಾಡಿಕೊಳ್ಳಬಹುದು :

೪.೪.೧. ತಾಯಿ ಮಗನಿಗೆ ಹಾಕುವ ಶಾಪರೂಪದ ಬೈಗುಳಗಳು

೪.೪.೨. ಹೆಂಗಸು ಗಂಡಸರಿಗೆ ಹಾಕುವ ಶಾಪರೂಪದ ಬೈಗುಳಗಳು

೪.೪೩. ಸಾವನ್ನು ಹಾರೈಸುವ ಹಾಕುವ ಶಾಪರೂಪದ ಬೈಗುಳಗಳು

೪.೪.೪. ಪ್ರಾಣೀ ಪಕ್ಷಿಗಳಿಗೆ ಹಾಕುವ ಶಾಪರೂಪದ ಬೈಗುಳಗಳು

೪.೪.೫. ದೇಹದ ಅಂಗಾಂಗಳನ್ನು ಕುರಿತು ಹಾಕುವ ಶಾಪರೂಪದ ಬೈಗುಳಗಳು

೪.೪.೧.ತಾಯಿ ಮಗನಿಗೆ ಹಾಕುವ ಶಾಪರೂಪದ ಬೈಗುಳಗಳು

ಆಕ್ಸಿಡೆಂಟ್ ಆಗ:–

ಈ ಶಾಪರೂಪದ ಬೈಗುಳದಲ್ಲಿ ತಾಯಿ ತನ್ನ ರೋದನೆಯನ್ನು ವ್ಯಕ್ತಪಡಿಸುತ್ತಾಳೆ. ಮಗನಿಗೆ ಸಾವು ಬರಲಿ ಎಂಬುದು ಅವಳ ಉದ್ದೇಶವಾಗಿರುವುದಿಲ್ಲ. ತನ್ನ ಸಿಟ್ಟು ಮತ್ತು ನೋವನ್ನು ಈ ರೀತಿಯಲ್ಲಿ ವ್ಯಕ್ತಪಡಿಸುತ್ತಾಳೆ. ಅವಳಿಗೆ ತುಂಬಾ ತೊಂದರೆ ಕೊಡುವ ಮಗನಿಗೆ ಈ ರೀತಿಯ ಬೈಗುಳದ ಮೂಲಕ ಶಾಪ ಹಾಕುತ್ತಾಳೆ ಹೊರತು ಅವಳ ಬಯಕೆ ಮಗ ಚೆನ್ನಾಗಿ ಇರಬೇಕು ಎಂಬುದಾಗಿರುತ್ತೆ. ಮಗನಿಗೆ ಆಕ್ಸಿಡೆಂಟ್ ಆಗಿ ಸಾಯಿಲಿ ಎಂಬುವುದು ಅವಳ ಉದ್ದೇಶವಾಗಿರುವುದಿಲ್ಲ.

ಆಳಾಗಿ ಹೋಗು:–

ಮಗ ತಂದೆ ತಾಯಿಯ ಮಾತು ಕೇಳದೆ ತನ್ನ ಇಚ್ಚೆಯಂತೆ ಬದುಕುವ ಮತ್ತು ತಪ್ಪು ದಾರಿಗೆ ಹೋದಾಗ ತಾಯಿಯು ಮಗನಿಗೆ ನಾನು ಹೇಳಿದ ಮಾತು ಕೇಳುವುದಿಲ್ಲ ನೀನು ಆಳಾಗಿ ಹೋಗುತ್ತಿಯಾ ಎಂದು ತನ್ನ ಮನಸ್ಸಿನ ನೋವನ್ನು, ಸಂಕಟವನ್ನು ಈ ರೀತಿಯಲ್ಲಿ ಹೇಳುತ್ತಾಳೆ. ಹೀಗೆ ಇನ್ನೂ ಕೆಲವು ಶಾಪ ರೂಪದ ಬೈಗುಳಗಳಿವೆ. ಇವುಗಳನ್ನು ತಾನು ನೋವನ್ನು ಅನುಭವಿಸುವುದರಿಂದ ಹೇಳುತ್ತಾಳೆ ಹೊರತು ಇವು ಯಾವುವು ಶಾಪಗಳಾಗಿ ಮಗನಿಗೆ ನಿಜವಾಗಿ ಸಂಭವಿಸಲಿ ಎಂಬುವುದು ಅವಳ ಉದ್ದೇಶವಾಗಿರುವುದಿಲ್ಲ.

ಉದಾ: ಆಳಾಗಿ ಹೋಗುತ್ತಿಯಾ ಉದ್ದಾರ ಆಗಲ್ಲಾ

ಸತ್ತನಂತ ಸುದ್ದಿ ಬರಲಿ

ನಿನಗೆ ಸಾವು ಬರುವಲತ್ತೆ

ನಿನು ಬಕ್‌ಬರಲು ಬಿಳಾ

ನಿನಗೆ ಕರಿನಾಗರ ಹಾವು ಕಚ್ಚಲ್ಲ

ಎಂತ್ತಂತ್ತೋರಿಗೆ ಸಾವು ಬರುತ್ತೆ ನಿನಗೆ ಬರುವಲತ್ತೆ

೪.೪.೨.ಹೆಂಗಸರು ಗಂಡಸರಿಗೆ ಹಾಕುವ ಶಾಪರೂಪದ ಬೈಗುಳಗಳು

ಇವರ ಮನೆಗೆ ಬೆಂಕಿ ಬೀಳಾ:-

ಈ ಶಾಪರೂಪದ ಬೈಗುಳವು, ಹೆಂಗಸರು - ಗಂಡಸರಿಗೆ ಹಾಕುವ ಶಾಪವಾಗಿದೆ. ಗಂಡಸರನ್ನು ಎದುರಿಸಲು ಆಗದೇ ತಾನು ಅಸಮರ್ಥಗಳು ಎಂದು ತಿಳಿದು ಈ ಶಾಪಗಳನ್ನು ಹಾಕುತ್ತಾಳೆ. ತಾವೇ ಬೆಂಕಿ ಹಚ್ಚುತ್ತೇವೆ ಎಂಬುದು ಇದರ ಅರ್ಥವಲ್ಲ. ಯಾವುದೋ ಬಗೆಯಿಂದ ಇವರ ಮನೆಗೆ ಬೆಂಕಿ ಬೀಳಲಿ ಎಂಬುವುದಾಗಿದೆ. ಇಂತಹ ಒಂದು ಘಟನೆಯು ಹೇಗಾದರು ಮತ್ತು ಯಾರಿಂದಲಾದರೂ ಆಗಲಿ ಎಂಬುದು ಈ ಶಾಪರೂಪದ ಬೈಗುಳದ ಹಿಂದಿನ ಉದ್ದೇಶವಾಗಿದೆ. ಒಟ್ಟಿನಲ್ಲಿ ಇವರ ಮನೆ ನಾಶವಾಗಿ ಹೋಗಬೇಕು ಎಂಬುದೇ ಅವಳ ಉದ್ದೇಶವಾಗಿದೆ. ಇದೇ ರೀತಿಯಲ್ಲಿ ಇನ್ನು ಕೆಲವು ಶಾಪರೂಪದ ಬೈಗುಳಗಳು ಇವೆ.

ಮನೆ ನಾಶವಾಗಿ ಹೋಗ್ಲಿ:-

ಈ ಶಾಪರೂಪದ ಬೈಗುಳವು ಹೆಣ್ಣು ಗಂಡಿಗೆ ಬೈಯುವ ಶಾಪವಾಗಿದೆ. ತನಗೆ ತನ್ನ ಕೈಲೇ ಅವನಿಗೆ ಏನು ಮಾಡೋಕೆ ಆಗಲ್ಲ ಅಂತ ತಿಳಿದು ಈ ಶಾಪವನ್ನು ಒಂದು ಅಸ್ತ್ರವಾಗಿ ಪ್ರಯೋಗ ಮಾಡುತ್ತಾಳೆ. ತನ್ನ ವೈರಿಯ ಮನೆ ನಾಶವಾಗಲಿ, ಹಾಳಲಾಗಲಿ ಎಂಬುದು ಅವಳ ಉದ್ದೇಶವಾಗಿರುತ್ತದೆ. ಕಾರಣ ಅವನು ತನಗೆ ಕೇಡನ್ನು ಮಾಡಿದ್ದಾನೆ ಅಥವಾ ನನಗೆ ಮತ್ತು ನನ್ನ ಕುಟುಂಬಕ್ಕೆ ಕೇಡು ಮಾಡುತ್ತಾನೆ ಎಂದು ತಿಳಿದು ಅವನನ್ನು ಶಾಪರೂಪದ ಬೈಗುಳದ ಮೂಲಕ ತಡೆಯಲು ಪ್ರಯತ್ನಿಸುತ್ತಾಳೆ. ತನಗೆ ಮತ್ತು ತನ್ನ

ಕುಂಟುಬಕ್ಕೆ ಕೇಡು ಬಯಸಿದ್ದರೆ ಅವಳು ಅವರ ಕುಂಟುಂಬಾನೂ ನಾಶವಾಗಲಿ ಎಂದು ಶಾಪ ಹಾಕುವುದು ಸಾಮಾನ್ಯ ವಿಷಯವಾಗಿ ಕಂಡುಬರುತ್ತದೆ.

ಮನೆ ನಾಶವಾಗಿ ಹೋಗಲಿ

ಇವರ ಮನೆಗೆ ಬೇಲಿ ಬಡಿಲಿ

ಇವರ ಮನೆ ದೀಪ ಹಾರಲಿ

ಇವರ ಮನೆಯಲ್ಲಿ ದೀಪ ಹಚ್ಚೋಕೆ ಯಾರು ಇರಬಾರದು

೪.೪.೩.ಸಾವನ್ನು ಹಾರೈಸುವ ಶಾಪರೂಪದ ಬೈಗುಳಗಳು:

ನಿನ್ನ ಹೆಣ ಸಿಂಗಾರ ಮಾಡ:–

ಈ ಶಾಪವು ಸಾವನ್ನು ಹಾರೈಸುವಂಥ ಬೈಗುಳವಾಗಿದೆ. ಶತ್ರುಗಳಿಗೆ ಸಾವು ಬರಲಿ ಎಂಬುವುದು ಈ ಶಾಪರೂಪದ ಬೈಗುಳದ ಉದ್ದೇಶವಾಗಿದೆ. ಹೆಣ್ಣು ಮಕ್ಕಳು ತಮ್ಮ ಎದುರಾಳಿಯನ್ನು ಎದುರಿಸಲು ಆಗದೆ ಈ ರೀತಿಯ ಶಾಪವನ್ನು ಹಾಕುತ್ತಾರೆ. ಇನ್ನೂ ವಿಚಿತ್ರವೆಂದರೆ ಕೆಲವು ಹೆಂಗಸರು ಬಾಯಿ–ಬಾಯಿ ಬಡಿದುಕೊಂಡು ಈ ರೀತಿಯ ಶಾಪವನ್ನು ಹಾಕುತ್ತಾರೆ. ಹಾಗೂ ಇನ್ನೂ ಕೆಲವು ಹೆಂಗಸರು ಮಣ್ಣು ತೂರಿ ಇವರಿಗೆ ಸಾವು ಸಂಭವಿಸಲಿ ಎಂದು ಬೈಯುತ್ತಾರೆ. ಈ ರೀತಿಯ ಶಾಪರೂಪದ ಬೈಗುಳಗಳು ಇನ್ನೂ ಹಲವಾರು ಇವೆ.

ನಿನ್ನ ಬಾಯಕ ಮಣ್ಣಕಾ:–

ಇದು ಸಾವನ್ನು ಹಾರೈಸುವ ಶಾಪರೂಪದ ಬೈಗುಳವಾಗಿದೆ. ಇಲ್ಲಿ ಈ ಬೈಗುಳದ ಅರ್ಥವನ್ನು ತಿಳಿಯುವುದಾದರೆ, ನಿನ್ನ ಬಾಯಿಗೆ ಮಣ್ಣಕಾ ಎಂದರೆ ಸತ್ತ ಮೇಲೆ ಹೆಣಕ್ಕೆ ಹೇಗೆ ಮಣ್ಣು ಹಾಕುತ್ತಾರೋ ಹಾಗೆಯೇ ನಿನ್ ಬಾಯಿಗೂ ಮಣ್ಣು ಹಾಕಬೇಕು ಎಂದು ಜೀವಂತ ವ್ಯಕ್ತಿಗೆ ಸಾವು ಬರಲಿ ಎಂಬ ಉದ್ದೇಶ ಈ ಶಾಪ ಒಳಗೊಂಡಿದೆ. ಹೆಣ್ಣು ಹೆಚ್ಚಾಗಿ ಈ ರೀತಿಯ ಶಾಪವನ್ನು ಹಾಕುತ್ತಾಳೆ. ಕಾರಣ ತನಗೆ ಮೋಸ ಮಾಡಿದ ವ್ಯಕ್ತಿಯನ್ನು ಕುರಿತು ಈ ರೀತಿಯ ಶಾಪ ಹಾಕುತ್ತಾಳೆ. ಹಾಗೂ ಮಗ ಅಥವಾ ಮಗಳು ತನ್ನ ಮಾತು ಕೇಳುತ್ತಿಲ್ಲ ಎಂದು ಈ ಶಾಪದ ಬೈಗುಳವನ್ನು ಬಳಕೆ ಮಾಡುತ್ತಾಳೆ. ಗಂಡ ನನ್ನ ಕಾಳಜಿನೇ ಮಾಡುತ್ತಿಲ್ಲ ಎಂದಾಗ ಅಂತಹ ಸಂದರ್ಭದಲ್ಲಿಯೂ ಈ ಶಾಪ ಬಳಕೆಯಾಗುತ್ತದೆ. ಹಾಗೆ ಈ ಶಾಪ ಭಿನ್ನ ರೀತಿಯಲ್ಲಿ ಅಂದರೆ ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗುತ್ತದೆ.

ಉದಾ: ಕರಿ ನಾಗರ ಹಾವು ಕಡಿಲಾ

ಇವನ ಬಾಯಿಗೆ ಮಣ್ಣಾಕಾ

ನಿನ್ನ ಬಾಯಕ ಕಸ ಹಾಕ್ಲಾ

ನಿನ್ನ ಮುಖಕ್ಕೆ ಬೆಂಕಿ ಹಚ್ಚಲ

ಅಂತ್-ಇಂತ್ ಸಾವು ಬರಲ್ಲಾ ನೋಡು ನಿನಗೆ

ಬರಬಾರದ್ದು ಬರಾ

೪.೪.೪. ದೇಹದ ಅಂಗಾಂಗಳನ್ನು ಕುರಿತ ಶಾಪರೂಪದ ಬೈಗುಳಗಳು:

ನಿನ್ನ ಕೈ ಸೇದೋಗ:-

ಈ ಶಾಪವು ವ್ಯಕ್ತಿಯ ಅಂಗಾಂಗಳನ್ನು ಕುರಿತು ಹಾಕುವ ಶಾಪವಾಗಿದೆ. ವ್ಯಕ್ತಿಯ ಅಂಗಾಂಗಳು ಹಾಳಾಗಿ ಹೋಗ್ಲಿ ಅವುಗಳಿಗೆ ಆಪತ್ತು ಬಂದು ತೊಂದರೆ ಆಗಲಿ ಎಂಬುವುದಾಗಿದೆ. ಶತ್ರುಗಳ ದೇಹದ ಅಂಗಾಂಗಳು ಯಾವುದಕ್ಕೂ ಬರಬಾರದು ಎಂಬುವುದೇ ಈ ಶಾಪರೂಪದ ಬೈಗುಳದ ಉದ್ದೇಶವಾಗಿದೆ. ಈ ಶಾಪ ಅಷ್ಟೇ ಅಲ್ಲದೆ ಇದಕ್ಕೆ ಸಂಬಂಧಿಸಿದ ಇನ್ನೂ ಹಲವಾರು ಶಾಪಗಳು ಇವೆ.

ಉದಾ: ನಿನ್ನ ಕಾಲು ಸೇದೋಗ

ಇವನ ನಾಲಿಗೆ ಸೇದೋಗ

ಇವನ ಕಾಲಿಗೆ ಹುಳ ಬೀಳಾ

ನಿನ್ ಬಾಯಗ ಹುಳ ಬೀಳಾ

ನಿನ್ ನಾಲಿಗೆ ಬಿದ್ದೋಗ

ನಿನ್ ನಾಲಿಗೆಗೆ ಹುಳ ಬೀಳಾ

ನಿನ್ ಕಾಲು ಮುರ್ದೋಗ

ನಿನ್ ನಾಲಿಗೆ ಸೇದೋಗ:-

ಇದು ಸಹ ಹೆಣ್ಣು ಎಲ್ಲರಿಗೂ ಬಳಸುವಂತಹ ಶಾಪವಾಗಿದೆ. ತನ್ನ ಶತ್ರುವನ್ನು ಶಾಪದ ಮೂಲಕ ಅವಳಿಗೆ ಅಥವಾ ಅವನಿಗೆ ಕೇಡಾಗುತ್ತೆ ಎಂಬ ನಂಬಿಕೆ ಅವಳಲ್ಲಿ ಇರುವುದರಿಂದ ಈ ರೀತಿಯ ಶಾಪಗಳು ಬಳಕೆಯಾಗುತ್ತವೆ. ನನ್ನ ಶತ್ರುವಿನ ನಾಲಿಗೆ ಸೇದೋಗಲಿ ಅವನಿಗೆ/ಅವಳಿಗೆ ತಿನ್ನಲಿಕ್ಕೂ ಮಾತಾನಾಡುವುದಕ್ಕೂ ಬರಬಾರದು ಎಂಬುವುದು ಅವಳ ಉದ್ದೇಶವಾಗಿರುತ್ತದೆ. ಹಾಗಾಗಿ ಅವಳು ತನ್ನ ಶತ್ರುವನ್ನು ಎದುರಿಸಲು ಆಗುವುದಿಲ್ಲ ಎಂದು ತಿಳಿದು ಈ ರೀತಿಯ ಶಾಪಗಳನ್ನು ಪ್ರಯೋಗಿಸುತ್ತಾಳೆ ಎಂದು ಹೇಳಬಹುದು.

೪.೪.೫.ಪ್ರಾಣಿ-ಪಕ್ಷಿಗಳಿಗೆ ಹಾಕುವ ಶಾಪರೂಪದ ಬೈಗುಳಗಳು:

ಮನುಷ್ಯರಿಗೆ ಅಷ್ಟೇ ಅಲ್ಲದೆ ಪ್ರಾಣಿಗಳಿಗೂ ಶಾಪರೂಪದ ಬೈಗುಳಗಳನ್ನು ಬಳಕೆ ಮಾಡುವುದನ್ನು ಕಾಣಬಹುದು. ವ್ಯಕ್ತಿಗಳಿಗೆ ಯಾವ ರೀತಿಯಲ್ಲಿ ಶಾಪರೂಪದ ಬೈಗುಳಗಳನ್ನು ಬಳಸುತ್ತಾರೆಯೋ ಹಾಗೆಯೇ ಪ್ರಾಣಿಗಳಿಗೂ ಬಳಸುವುದನ್ನು ಕಾಣಬಹುದು.

ಉದಾ: ಹಾಳಾಗಿ ಹೋಗ

ನಾಲ್ಗೆ ಸೇದ್ಕೋಂಡ್ ಹೋಗಾ

ಬರ್ಲ್ ಬಡಿಯಾ

ನಾಲ್ಗೆ ಸೇದ

ಬಾಯಾಗ ಮಣ್ಣಾಕ್ಲ

ಇದಕ್ಕೆ ಏನು ಬಂದ್ಯೆತಿ ಹೊತ್ಕೋಂಡು ಹೋಗದು.

ಹಾಳಾಗಿ ಹೋಗ:–

ಪ್ರ:– ಇವತ್ತು ಈ ನಾಯಿಗೆ ಏನು ಬಂದ್ಯೆತಿ ಯಾವಾಗಿನಿಂದ ಹಿಂಗೆ ವೈಕುತ್ತದೆ ದರಿದ್ರಸೂಳೆಮಗನದು ಇದು ಎಲ್ಲಿ ಆದರೂ ಹಾಳಾಗಿ ಹೋಗಬಾರದ ಎಂದು ನಾಯಿಗೆ ಶಾಪ ಹಾಕುವುದನ್ನು ನೋಡಬಹುದು.

ನಾಯಿ ಯಾವುದೋ ಕಾರಣಕ್ಕೆ ಅಂದರೆ ಯಾರು ಪರಿಚಯ ಇಲ್ಲದವರು ಬಂದ ಕಾರಣಕ್ಕೆ ಬೋಗಳುತ್ತ ಇದ್ದರೆ ತಿಳಿಯದೆ ಈ ರೀತಿ ಶಾಪ ಹಾಕುವುದನ್ನು ನೋಡಬಹುದು. ಕೆಲವು ಸಂದರ್ಭದಲ್ಲಿ ಯಾಕೆ ಬೋಗುಳುತ್ತೆ ಅಂತ ಗೊತ್ತಿದ್ದರೂ ಶಾಪ ಹಾಕುವುದನ್ನು ನಾವು ನೋಡಬಹುದು.

ಹೀಗೆ ಮನುಷ್ಯರಿಗೆ ಅಷ್ಟೇ ಅಲ್ಲದೆ ಪ್ರಾಣಿಗಳಿಗೂ ಶಾಪ ಹಾಕುವುದನ್ನು ನಾವು ಗಮನಿಸಬಹುದು. ಹೀಗೆ ಶಾಪರೂಪದ ಬೈಗುಳಗಳನ್ನು ಹೆಂಗಸರೇ ಹೆಚ್ಚು ಬಳಸುತ್ತಾರೆ. ಈ ಶಾಪರೂಪದ ಬೈಗುಳಗಳನ್ನು ಬಳಸಲು ಕಾರಣ ವ್ಯಕ್ತಿ ಅನುಭವಿಸಿರುವ ತೀವ್ರವಾದ ನೋವು ಕಾರಣವಾಗಿರುತ್ತದೆ. ತಮ್ಮ ಎದುರಾಳಿಯನ್ನು ಸದೆ ಬಡಿಯಲು ದೈಹಿಕ ಶಕ್ತಿಗಿಂತ ಹೆಚ್ಚಾಗಿ ಮಾತಿನ ಶಕ್ತಿಯನ್ನು ಹೆಂಗಸರು ಅವಲಂಬಿಸಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ.

* * *

ಅಧ್ಯಾಯ : ೫

ಹೆಣ್ಣು ಮತ್ತು ಬೈಗುಳ–ಸಂದರ್ಭ ಮತ್ತು ಅಭಿವ್ಯಕ್ತಿ ವಿಧಾನಗಳು

ಅಧ್ಯಾಯ–೫

ಹೆಣ್ಣು ಮತ್ತು ಬೈಗುಳ–ಸಂದರ್ಭ ಮತ್ತು ಅಭಿವ್ಯಕ್ತಿ ವಿಧಾನಗಳು

ಬೈಗುಳ ಅಭಿವ್ಯಕ್ತಿಯ ಸ್ವರೂಪ ಮತ್ತು ಬೈಗುಳಕ್ಕೆ ಬಳಕೆಯಾಗುವ ಭಾಷಿಕ ಸಾಮಗ್ರಿಯ ಸ್ವರೂಪವನ್ನು ಬೈಯುವ ವ್ಯಕ್ತಿ ಮತ್ತು ಬೈಗುಳಕ್ಕೆ ಒಳಗಾಗುವ ವ್ಯಕ್ತಿಗಳ ಸಾಮಾಜಿಕ ನೆಲೆಗಳು, ಸಾಮಾಜಿಕ ಕೌಟುಂಬಿಕ ಸ್ಥಾನಮಾನ, ಸಾಂಸ್ಕೃತಿಕ, ಶೈಕ್ಷಣಿಕ, ಆರ್ಥಿಕ ಹಿನ್ನೆಲೆಗಳು ಮತ್ತು ವಯಸ್ಸು, ಲಿಂಗ, ಕೌಟುಂಬಿಕ ಸಂಬಂಧದ ಸ್ವರೂಪದಂತಹ ಸಮಾಜೊಭಾಷಿಕ ಮಾನಕಗಳು ಪ್ರಭಾವಿಸುವ, ನಿರ್ದೇಶಿಸುವ ಈ ಸಂಬಂಧಗಳು ವ್ಯಕ್ತಿ ನೆಲೆಯವು ಮಾತ್ರವಾಗಿರದೇ ಸಾಮುದಾಯಿಕ ನೆಲೆಯ ಹಿನ್ನೆಲೆಯಲ್ಲಿ ಪ್ರವೃತ್ತವಾಗಿರಬಹುದಾದ ಸಾಧ್ಯತೆಗಳಿವೆ. ವ್ಯಕ್ತಿ?ಸಮುದಾಯ, ಸಮುದಾಯ?ಸಮುದಾಯದ ಪರಸ್ಪರ ಮನೋಭಾವ, ವ್ಯಕ್ತಿ, ಸಾಂಸ್ಕೃತಿಕ, ಆರ್ಥಿಕ, ವ್ಯಾವಹಾರಿಕ ನೆಲೆಗಳು ಸಹಾ ಬೈಗುಳ ಅಭಿವ್ಯಕ್ತಿ ವಿಧಾನವನ್ನು ಅಂತಸ್ಥಿನ ನೆಲೆಯಲ್ಲಿ ಪ್ರಭಾವಿಸಬಹುದು.

ಕನ್ನಡದ ಕರ್ನಾಟಕ ಸಂದರ್ಭವನ್ನೆಷ್ಟೇ ಅಲ್ಲ ಇದೇ ಭಾರತೀಯ ಸಾಮಾಜಿಕ ಸಂರಚನೆಯಲ್ಲಿ ವೈವಿಧ್ಯತೆಯಷ್ಟೆ ಅಲ್ಲದೆ ಪರಸ್ಪರ ವಿರೋಧದ ಭಿನ್ನತೆಗಳಿದ್ದರೂ ಈ ಹೊತ್ತಿನ ವಾಸ್ತವ ಪುರುಷ ಪ್ರಾಬಲ್ಯದ ಹಾಗೂ ಸ್ತ್ರೀ ಅಧೀನ ನೆಲೆಯ ಸ್ಥಿತಿಗಳು ಬೈಗುಳ ಅಭಿವ್ಯಕ್ತಿಯ ಸ್ವರೂಪ ಮತ್ತು ಬೈಗುಳ ಭಾಷಿಕ ಸಾಮಗ್ರಿಯನ್ನು ಬೈಯುವವರು ಮತ್ತು ಬೈಗುಳಕ್ಕೆ ಒಳಗಾಗುವ ವ್ಯಕ್ತಿಗಳು ಹೆಚ್ಚಾಗಿವೆ. ಆಕಾರದಿಂದಲೇ ವಿನ್ಯಾಸಗೊಂಡಿರುವ ಕೌಟುಂಬಿಕ, ಸಾಮಾಜಿಕ, ಘಟಕಗಳು ರೂಪತಳೆಯುವ ಸಾಂಸ್ಕೃತಿಯ ಸ್ವರೂಪಗಳು ಭಾಷಿಕ ಸಂಕಥನಗಳನ್ನು ರೂಪಿಸಿರುತ್ತವೆ. ಈ ಎಲ್ಲಾ ಕಾರಣಗಳಿಂದ ರೂಪುತಳೆಯುವ ವ್ಯಕ್ತಿಯ ಪಾತ್ರಗಳು ಸ್ಥಾನಗಳು ಅದಕ್ಕಾಗಿ ನಿರ್ದೇಶಿಸಲ್ಪಡುವ ನಡೆವಳಿಕೆಗಳು ಭಾಷಿಕ ಸಂಕಥನಗಳಲ್ಲಿ ವ್ಯಕ್ತವಾಗುತ್ತವೆ.

ಸಮಾಜದಲ್ಲಿ ಬೈಗುಳದ ಸಂದರ್ಭ ಮತ್ತು ಅಭಿವ್ಯಕ್ತಿ ವಿಧಾನಗಳು ಭಿನ್ನ ರೀತಿಯಲ್ಲಿ ಇರುವುದನ್ನು ನಾವು ಗಮನಿಸಬಹುದು. ಬೈಗುಳದ ಅಭಿವ್ಯಕ್ತಿ ವಿಧಾನಗಳನ್ನು ಗಮನಿಸುವುದಾದರೆ

ತಾಯಿ ಮಗನಿಗೆ ಮತ್ತು ಮಗಳಿಗೆ ಬೈಯುವಾಗ ಬಳಸುವ ಬೈಗುಳಗಳು ಬೇರೆಯಾಗಿರುತ್ತದೆ. ತಾಯಿ ವಿದ್ಯಾವಂತಳಾಗಿದ್ದರೆ ಮಗನಿಗೆ ಬೈಯುವ ಬೈಗುಳಗಳು ಬೇರೆಯಾಗಿರುತ್ತದೆ. ಕೆಲವು ಅವಾಚ್ಯ ಬೈಗುಳಗಳನ್ನು ಮಗನಿಗೆ ಬೈದರೂ ಮಗಳಿಗೆ ಆ ರೀತಿಯ ಅವಾಚ್ಯ ಬೈಗುಳಗಳನ್ನು ಬಳಸುವುದಿಲ್ಲ. ಆದರೆ ಅನಕ್ಷರಸ್ಥ ತಾಯಿ ಮಗನಾಗಲಿ, ಮಗಳಾಗಲಿ ಯಾವುದೇ ಮುಚ್ಚು ಮರೆ ಇಲ್ಲದೆ ನೇರವಾಗಿ ಅವಾಚ್ಯ ಬೈಗುಳಗಳನ್ನು ಬಳಕೆ ಮಾಡುತ್ತಾಳೆ. ಹಾಗೆಯೇ ತಂದೆ ವಿದ್ಯಾವಂತನಾಗಿರಲಿ, ಅನಕ್ಷರಸ್ಥನಾಗಿರಲಿ ಮಗನಿಗೆ ಅವಾಚ್ಯ ರೀತಿಯ ಬೈಗುಳಗಳನ್ನು ಬಳಕೆ ಮಾಡುತ್ತಾನೆ. ಆದರೆ ಮಗಳಿಗೆ ಮಾತ್ರ ಈ ರೀತಿಯ ಅವಾಚ್ಯ ಬೈಗುಳಗಳನ್ನು ಬಳಕೆ ಮಾಡುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು.

ಸಮಾಜದಲ್ಲಿ ಬೈಗುಳಗಳ ಅಭಿವ್ಯಕ್ತಿ ವಿಧಾನ ಎಲ್ಲರಿಗೂ ಒಂದೇ ರೀತಿಯಲ್ಲಿ ಬಳಸುವುದಿಲ್ಲ. ಸಂಬಂಧಿಕರಿಗೆ ಸಂಬಂಧಿಸಿದ ಬೈಗುಳವನ್ನು ಗಮನಿಸುವುದಾದರೆ ಕೆಲವು ನಿರ್ಬಂಧಗಳು ಇರುತ್ತವೆ. ಎಲ್ಲರೂ–ಎಲ್ಲರಿಗೂ ಒಂದೇ ರೀತಿಯಲ್ಲಿ ಬೈಯುವುದಿಲ್ಲ. ಆ ಬೈಗುಳದ ರೂಪ ಬೇರೆ ಇರುತ್ತದೆ. ಯಾರು–ಯಾರಿಗೆ, ಹೇಗೆ, ಯಾಕೆ, ಬೈಯುತ್ತಾರೆ ಎಂಬುವುದನ್ನು ಸಂದರ್ಭ ಮತ್ತು ಕಾರಣಗಳನ್ನು ವ್ಯಕ್ತಪಡಿಸುವ ವಿಧಾನವನ್ನು ನೋಡುವುದಾದರೆ,

ಉದಾ:–

ತಾಯಿ–ಮಗನಿಗೆ, ಮಗಳಿಗೆ

ತಂದೆ–ಮಗನಿಗೆ, ಮಗಳಿಗೆ

ಅತ್ತೆ–ಸೊಸೆಗೆ

ಸೊಸೆ–ಅತ್ತೆಗೆ

ಗಂಡ–ಹೆಂಡತಿಗೆ

ಹೆಂಡತಿ–ಗಂಡನಿಗೆ

ಪರಿಚಿತರು–ಪರಿಚಿತರಿಗೆ

ಪರಿಚಿತರು–ಅಪರಿಚಿತರಿಗೆ

ಈ ಎಲ್ಲರ ನಡುವೆ ಅಭಿವ್ಯಕ್ತಪಡಿಸುವ ಬೈಗುಳದ ವಿಧಾನಗಳು ಬೇರೆ–ಬೇರೆ ನೆಲೆಯಲ್ಲಿರುತ್ತವೆ ಮತ್ತು ಸಂದರ್ಭ, ಕಾರಣಗಳು ಸಹ ಭಿನ್ನರೀತಿಯಲ್ಲಿರುತ್ತವೆ.

೫.೧.ಬೈಗುಳಗಳಿಗೆ ಕಾರಣವಾಗುವ ಅಂಶಗಳು:–

ಬೈಗುಳಗಳಿಗೆ ಕಾರಣವಾಗುವ ಅಂಶಗಳು ಹಲವಾರು ನೆಲೆಗಳಲ್ಲಿ ಕಾಣಬಹುದು. ಬೈಗುಳಗಳಿಗೆ ಇದೇ ಕಾರಣ ಎಂದು ಹೇಳಲು ಆಗುವುದಿಲ್ಲ. ಯಾಕೆಂದರೆ ಆ ರೀತಿಯಲ್ಲಿ

ಬೈಗುಳಗಳು ಬಳಕೆಯಾಗುತ್ತವೆ. ಬೈಯಲು ಚಿಕ್ಕ ಕಾರಣ ಆದರೂ ಸರಿ, ದೊಡ್ಡ ಕಾರಣವಾದರೂ ಸರಿಯೇ ಬೈಗುಳಗಳು ತನ್ನಷ್ಟಕ್ಕೆ ತಾನೆ ವ್ಯಕ್ತವಾಗುತ್ತವೆ. ಬೈಗುಳಗಳಿಗೆ ಇದೇ ಕಾರಣವಾಗಿರಬೇಕಾಗಿರುವುದಿಲ್ಲ. ಯಾರಾದರೂ ಯಾವ ಕ್ಷಣದಲ್ಲಿ ಆದರೂ ಅಂದರೆ ಮಾತಿನ ನಡು-ನಡುವೆ ಬೈಗುಳಗಳು ವ್ಯಕ್ತವಾಗುತ್ತ ಇರುತ್ತವೆ. ಬೈಗುಳಗಳಿಗೆ ಕಾರಣವಾಗುವ ಅಂಶವನ್ನು ಒಂದು ಗಾದೆಯ ಮೂಲಕ ಗಮನಿಸುವುದಾದರೆ 'ಮೊಸರಿನಲ್ಲಿ ಕಲ್ಲು ಹುಡಿಕಿದ ಹಾಗೆ' ಕೆಲಸಕ್ಕೆ ಹೋದ ಗಂಡನಿಗಾಗಿ ಹೆಂಡತಿ ಅಡುಗೆ ಮಾಡಿ ಊಟ ಮಾಡದೆ ಅವನಿಗಾಗಿ ಕಾಯುತ್ತ ಇದ್ದರೆ ಗಂಡ ಇಷ್ಟವಿಲ್ಲದೆ ಮೋಸರಿನಲ್ಲಿ ಕಲ್ಲು ಎಂದು ಜಗಳವಾಡುತ್ತಾನೆ. ಬೇಡವಾದ ಹೆಂಡತಿಯ ಜೊತೆಗೆ ಬಾಳ್ವೆ ಮಾಡಿದಾಂಗೆ ಎಂಬ ಅರ್ಥದಲ್ಲಿ (ಇಷ್ಟವಿಲ್ಲದ ಹೆಂಡತಿಯ ಜೊತೆಗೆ) ಈ ಗಾದೆ ಹುಟ್ಟಿಕೊಂಡಿದೆ ಎಂದು ಜನಪದರ ಅಭಿಪ್ರಾಯವಾಗಿದೆ. ಹೀಗೆ ಚಿಕ್ಕ-ಚಿಕ್ಕ ಕಾರಣಗಳು ಬೈಗುಳಗಳಿಗೆ ಕಾರಣವಾಗುತ್ತವೆ ಎಂದು ಹೇಳಬಹುದು.

೫.೧.ಬೈಗುಳಗಳಿಗೆ ಕಾರಣವಾಗುವ ಅಂಶಗಳು:-

೫.೧.೧. ದನಕರುಗಳೂ ಇನ್ನೊಬ್ಬರ ಹೊಲದಲ್ಲಿ ಬೆಳೆದ ಬೆಳೆಯನ್ನು ತಿಂದ ಕಾರಣಕ್ಕಾಗಿ.

೫.೧.೨. ಅನ್ಯರ ಹೊಲವನ್ನು ಒತ್ತುವರಿ ಮಾಡಿಕೊಂಡ ಕಾರಣಕ್ಕಾಗಿ.

೫.೧.೩. ಬೇರೆಯವರ ತೋಟದಲ್ಲಿ ಕಳ್ಳತನ ಮಾಡಿದ ಕಾರಣಕ್ಕಾಗಿ.

೫.೧.೪. ಕೊಟ್ಟ ಸಾಲವನ್ನು ವಾಪಸ್ಸು ಕೊಡದ ಕಾರಣಕ್ಕಾಗಿ.

೫.೧.೫. ಅಕ್ಕಪಕ್ಕದ ಮನೆಯ ಮಕ್ಕಳು ಆಟವಾಡುತ್ತಾ ಹೊಡೆದಾಡಿದ ಕಾರಣಕ್ಕಾಗಿ.

೫.೧.೬. ಬೇರೆಯವರ ಕೋಳಿ ಕಳ್ಳತನ ಮಾಡಿದಕ್ಕಾಗಿ.

೫.೧.೭. ಅಣ್ಣ-ತಮ್ಮಂದಿರು ಆಸ್ತಿ ಹಂಚಿಕೊಳ್ಳುವಾಗ ಜಗಳ ಮಾಡಿದ ಕಾರಣಕ್ಕಾಗಿ.

೫.೧.೮. ಆಕಳು ಬೇರೆಯವರ ಮನೆಯಲ್ಲಿ ತರಕಾರಿಯನ್ನು ತಿಂದ ಕಾರಣಕ್ಕಾಗಿ.

೫.೧.೯. ಬಸ್ಸಿನಲ್ಲಿ ಬೇರೆಯವರು ಹಿಡಿದ ಸೀಟಿನಲ್ಲಿ ಕುಳಿತ ಕಾರಣಕ್ಕಾಗಿ.

೫.೧.೧೦. ಮಗ ಶಾಲೆಗೆ ಹೋಗಿಲ್ಲ ಎಂಬ ಕಾರಣಕ್ಕಾಗಿ.

೫.೧.೧೧. ಮಗಳು ಮನೆಯಲ್ಲಿ ಕೆಲಸ ಮಾಡಲ್ಲ ಎಂಬ ಕಾರಣಕ್ಕಾಗಿ.

೫.೧.೧೨. ಗಂಡ ಕುಡಿದು ಬಂದ ಕಾರಣಕ್ಕಾಗಿ.

೫.೧.೧೩. ಹೆಂಡತಿ ಗಂಡನ ಮಾತು ಕೇಳಲ್ಲ ಎಂಬ ಕಾರಣಕ್ಕಾಗಿ.

೫.೧.೧೪. ಸೊಸೆ ಅತ್ತೆಯ ಮಾತಿಗೆ ಎದುರಾಡಿದ ಕಾರಣಕ್ಕಾಗಿ.

೫.೧.೧೫. ಹೆಂಗಸು ಬೇರೆಯವರ ಮನೆ ಹತ್ತಿರ ನೀರು ಹಿಡಿಯಲು ಹೋದಾಗ ಎಲೆ-ಅಡಿಕೆ ಉಗಿದ ಕಾರಣಕ್ಕಾಗಿ.

೫.೧.೧೬. ಅತ್ತೆ-ಸೊಸೆಯನ್ನು ಸೇರದ ಕಾರಣಕ್ಕಾಗಿ.

೫.೧.೧೭. ಹೊಲದಲ್ಲಿ ಆಳು ಕೆಲಸ ಮಾಡಿಲ್ಲ ಎಂಬ ಕಾರಣಕ್ಕಾಗಿ.

೫.೧.೧೮. ಮನೆ ಕೆಲಸದವಳು ಸರಿಯಾಗಿ ಪಾತ್ರೆಗಳನ್ನು ತೊಳೆದಿಲ್ಲ ಎಂಬ ಕಾರಣಕ್ಕಾಗಿ.

೫.೧.೧೯. ಪಕ್ಕದ ಮನೆಯವರ ಅಂಗಳದಲ್ಲಿ ಕಸ ಚೆಲ್ಲಿದ ಕಾರಣಕ್ಕಾಗಿ.

೫.೧.೨೦. ಮಗ/ಮಗಳಿಗೆ ಸರಿಂ ಮಾಗಿ ಊಟ ಮಾಡಲ್ಲ ಎಂಬ ಕಾರಣಕ್ಕಾಗಿ.

೫.೧.೧. ದನಕರುಗಳು ಇನ್ನೊಬ್ಬರ ಹೊಲದಲ್ಲಿ ಬೆಳೆದ ಬೆಳೆಯನ್ನು ತಿಂದ ಕಾರಣಕ್ಕಾಗಿ:-

ಬೈಗುಳಗಳಿಗೆ ಹಲವಾರು ಕಾರಣಗಳಿವೆ. ಕಾರಣ ಇಲ್ಲದೆ ಇದ್ದರೂ ಬೈಯುವುದನ್ನು ನೋಡಬಹುದು. ದನಕರುಗಳು ಬೇರೆಯವರ ಹೊಲದಲ್ಲಿ ಹೋಗಿ ಬೆಳೆಯನ್ನು ತಿಂದು ನಾಶ ಮಾಡಿದ್ದನ್ನು ಕಂಡು ಹೊಲದ ಮಾಲಿಕ ದನಕರುಗಳನ್ನು ಬೈಯುವುದು ಒಂದು ಕಾರಣವಾಗಿದೆ. ದನಕರುಗಳನ್ನು ಬೈಯುವುದರ ಜೊತೆಗೆ ಅವುಗಳ ಮಾಲಿಕನನ್ನು ಮತ್ತು ಅವನ ಹೆಂಡತಿ, ತಾಯಿ, ಅಕ್ಕ ಇವರುಗಳನ್ನು ಸೇರಿಸಿ ಬೈಯುವುದನ್ನು ನೋಡಬಹುದು.

ಪ್ರ: ಇವು ಯಾವು ದರಿದ್ರ ಸೂಳೆಮಗನವು ಬಂದು ಹೊಲದಲ್ಲಿ ತಿನ್ನತ್ತವೆ. ಅಲ್ಲ ಇವನ ಅವ್ವನ್‌ನಾಡ ಕಂತ್ರಿಸೂಳೆಮಗನವು. ಇವನು ಯಾವನು ಹೊಲದಲ್ಲಿ ಬಿಟ್ಟಿದ್ದು ಅವನ್ ಹೆಂಡತಿ ರಸನಾಡ ಹೇಳೋರು ಕೇಳೋರು ಯಾರು ಇಲ್ಲ ಏನು ಇವನಿಗೆ. ಎಲ್ಲ ತಿಂದು ಹಾಳು ಮಾಡಿ ಬಿಟ್ಟವಾ ಅಲ್ಲ ನೋಡೆಕೆ ಆಗಲ್ಲ ಏನು ನಿನಗೆ ಬಿಟ್ಟು ಏತ್ಲಾಗ ಹಾಳಾಗಿ ಹೋಗಿದ್ದೆ ಲೇ ಬೋಸುಡಿ ಸೂಳೆಮಗನೆ ನೋಡು ಹೀಗ ಹೇಂಗೆ ತಿನ್ನತಾವಾ ಅಂತಾ ಎಂದು ಅವಾಚ್ಯ ರೂಪದ ಬೈಗುಳಗಳು ಬಳಕೆಯಾಗಿರುವುದನ್ನು ನೋಡಬಹುದು.

ಹೊಲದಲ್ಲಿ ಬೆಳೆಯನ್ನು ತಿಂದು ಹಾಳು ಮಾಡಿದ್ದು ದನಕರುಗಳು ಆದರೆ ಬೈಯುವುದು ಹೆಣ್ಣಿಗೆ. ದನಕರುಗಳನ್ನು ಕಾಯಲು ಹೋದ ವ್ಯಕ್ತಿ ಅವುಗಳನ್ನು ಬೇರೆಯವರ ಹೊಲದಲ್ಲಿ ಬಿಟ್ಟು ಎಲ್ಲಿಗೋ ಹೋದ ಕಾರಣಕ್ಕಾಗಿ ಅವನನ್ನು ಅವಾಚ್ಯ ಬೈಗುಳದ ಮೂಲಕ ಬೈಯುವುದನ್ನು ಪ್ರಯೋಗದಲ್ಲಿ ನೋಡಿದ್ದೇವೆ. ಅವನು ಬೇಕು ಅಂತಾ ಮಾಡದೆ ಇದ್ದರೂ ದನಕರುಗಳು ಹೋದ ಕಾರಣಕ್ಕಾಗಿ ಹೊಲದ ಮಾಲಿಕ ದನಗಳನ್ನು ಬೈಯುವುದರ ಮೂಲಕ ಅವುಗಳ ಮಾಲಿಕನ ಹೆಂಡತಿ, ತಾಯಿಯನ್ನು ಅಶ್ಲೀವಾಗಿ ಬೈಯುವುದನ್ನು ಕಾಣಬಹುದು. ಅವರು ಕಾರಣ ಅಲ್ಲದೆ ಇದ್ದರೂ ಸಹ ಬೈಗುಳಕ್ಕೆ ಪಾತ್ರರಾಗುತ್ತಾರೆ. ಈ ರೀತಿಯಲ್ಲಿ ಸಮಾಜದಲ್ಲಿ ಬೈಗುಳಗಳು ಬಳಕೆಯಲ್ಲಿವೆ.

೫.೧.೨. ಅನ್ಯರ ಹೊಲವನ್ನು ಒತ್ತುವರಿ ಮಾಡಿಕೊಂಡ ಕಾರಣಕ್ಕಾಗಿ:-

ಬೇರೆಯವರ ಹೊಲವನ್ನು ತಮ್ಮ ಕಡೆ ಮಾಡಿಕೊಂಡು ಹೊಲವನ್ನು ಹೂಡಿ ಬೆಳೆಯನ್ನು ತೆಗೆದುಕೊಳ್ಳುವವರನ್ನು ಕುರಿತು ಬೈಯುವುದನ್ನು ನೋಡಬಹುದು. ತಮಗೆ ಗೊತ್ತಿದ್ದು ಹೊಲವನ್ನು ಒತ್ತುವರಿ ಮಾಡಿಕೊಂಡವರನ್ನು ಕುರಿತು ಬೈಯುವುದನ್ನು ನೋಡುವುದಾದರೆ,

ಪ್ರ: ವ್ಯಕ್ತಿ-೧: ಲೇ ನಿಮ್ಮ ಅಪ್ಪಂದು ಹೊಲ ಅನ್ನೊಂಗೆ ನಮ್ಮ ಹೊಲಾನು ಹತ್ತಿಕ್ಕಿ ಬಿತ್ತಿ ಬಿಟ್ಟಿಯಲ್ಲಾ ಇಲ್ಲಿವರೆಗೂ ನಮ್ಮದು ತಾನೆ ಇರೋದು ನೀನು ನೋಡಿದ್ರೆ ಇಲ್ಲಿವರೆಗೂ ಬಿತ್ತಿ ಬಿಟ್ಟಿಯಲ್ಲಾ ಹೆಂಗೆ ಐತಿ ಲೇ ಮೈಯಾಗ ಸೂಳೆಮಗನೆ.

ವ್ಯಕ್ತಿ-೨ ಏನ್ ಲೇ ಸೂಳೆಮಗ ಅಗಂತಿಯಾ ನಿನ್ ಮೈಯಾಗ ಹೆಂಗೆ ಐತಿ ಸಣ್ಣಿಗಿ ಕಡಿತ್ಯೆತ.

ವ್ಯಕ್ತಿ-೧ ಹೆಂಗ್ಸಂತನೋ ಹೆಂಡತಿ ಸೇರಗನಾ ಹಿಡಕೊಂಡು ಓಡಾಡೋನಿಗೆ ಇದೆಲ್ಲಾ ಹೆಂಗೆ ಗೊತ್ತಾಗುತ್ತೆ ಅಲ್ಲಾ.

ವ್ಯಕ್ತಿ-೨ ನಾನು ಅಲ್ಲ ಲೇ ಹೆಂಡತಿ ಸೇರಗನಾ ಹಿಡಕೊಂಡು ಒಡಾಡೋದು ನೀನು ಲೇ ಹೆಂಡತಿ ಮಾತು ಮೀರಲಾರದನು.

ವ್ಯಕ್ತಿ-೧ ನಿನ್ ಹೆಂಡತಿನ ಆಳೋಕೆ ಆಗಲಿಲ್ಲದ್ರೆ ನನ್ ಹತ್ರ ಕಳಸು ಲೇ ನಾನು ಆಳತ್ತಿನಿ.

ವ್ಯಕ್ತಿ-೨ ಲೇ ಕಂತ್ರಿಸೂಳೆಮಗ ಏನು ಲೇ ನನ್ ಹೆಂಡತಿ ತಂಟ್ಟಿಗೆ ಬರತ್ತಿಯಾ ಸೂಳೆಮಗ ಫಸ್ಟ್ ನಿನ್ ಹೆಂಡತಿನ ಆಳೋಕೆ ಆಗತ್ಯೆತ ಅಂತಾ ನೋಡೊಕಾ ಆಮೇಲೆ ಮಾತಾಡುವಂತೆ ಗಂಡಸುತನ ಇಲ್ಲದವನೇ ಇಲ್ಲದ ಧಿಮಾಕ ಮಾತಾಡತ್ತಿಯಾ ನೀನು ಕಂತ್ರಿಸೂಳೆಮಗ ಕಡಿದು ಹಾಕಿಬಿಡಿತಿನಿ ನನ್ನ ಹೆಂಡತಿ ತಂಟ್ಟಿಗೆ ಬಂದ್ರೆ

ಎಂದು ಸಂಭಾಷಣೆಯ ಮೂಲಕ ಬೈಗುಳಗಳು ಬಳಕೆಯಾಗುವುದನ್ನು ನೋಡಬಹುದು. ಹೊಲ ಒತ್ತುವರಿ ಮಾಡಿದಷ್ಟೆ ಕಾರಣ ಎಷ್ಟೆಲ್ಲ ಅವಾಚ್ಯ ಬೈಗುಳಗಳು ಬಳಕೆಯಾಗುತ್ತವೆ. ಆದರೆ ಏನು ಕಾರಣವಲ್ಲದ ಹೆಣ್ಣನ್ನು ನಾನು ಆಳತ್ತಿನಿ, ನೀನು ಆಳತ್ತಿನಿ ಎಂದು ಬೈಗುಳದ ಮೂಲಕ ಮಾನಸಿಕವಾಗಿ ನೋವುಂಟು ಮಾಡುವುದನ್ನು ನೋಡಬಹುದು.

೫.೧.೩ ಬೇರೆಯವರ ತೋಟದಲ್ಲಿ ಕಳ್ಳತನ ಮಾಡಿದ ಕಾರಣಕ್ಕಾಗಿ:-

ತಿನ್ನುವ ಆಸೆಯಿಂದ ಮಕ್ಕಳು ಬೇರೆಯವರ ತೋಟದಲ್ಲಿ ಕಳ್ಳತನ ಮಾಡಿ ಹಣ್ಣುಗಳನ್ನು ತಿಂದಿದಕ್ಕಾಗಿ ತೋಟದ ಮಾಲಿಕ ಮಕ್ಕಳನ್ನು ಬೈಯುವುದನ್ನು ನೋಡುವುದಾದರೆ,

ಪ್ರ: ಲೇ ಕಳ್ಳ ನನ್ ಮಗನೇ ಕಳ್ಳತನ ಮಾಡತ್ತಿಯಾ. ಸೂಳೆಮಕ್ಳು ನೋಡೊಕೆ ತಟಗು ಐದರಾ ಕಳ್ಳತನ ಮಾಡತ್ತಿಯಾ ನೀವು ನಿಮ್ಮ ಅವ್ವ ಸರಿಯಾಗಿ ಇದಿದ್ರೆ ನೀನು ಯಾಕೆ ಇಂತಾ ಕೆಲಸ ಮಡತ್ತಿದೆ ಅಲ್ಲಾ. ಎಂದು ಕಳ್ಳತನ ಮಾಡಿದ ಮಗನನ್ನು ಬೈಯುವುದರ ಮೂಲಕ ಏನು ತಪ್ಪು ಮಾಡದ ಅವನ ತಾಯಿಯನ್ನು ಬೈಯುತ್ತಾನೆ. ನೀನು ಅನೈತಿಕತೆಯಿಂದ ಹುಟ್ಟಿದ ಮಗ ಎಂಬ ಅರ್ಥದಲ್ಲಿ ಮಗನನ್ನು ಬೈಯುವುದರ ಮೂಲಕ ಅವನ ತಾಯಿ ಅಥವಾ ಹೆಣ್ಣಿನ ನಡತೆಯ ಬಗ್ಗೆ ಮಾತಾನಾಡುವುದನ್ನು ನೋಡಬಹುದು. ಅವಳಿಗೆ ತನ್ನ ಮಗ ಏನು ಮಾಡುತ್ತಾನೆ ಎಂಬುವುದು ಗೊತ್ತಿಲ್ಲದೆ

ಇದ್ದರೂ ಅವಳಿಗೆ ಮಾನಸಿಕವಾಗಿ ನೋವುಂಟು ಮಾಡುವ ರೀತಿಯಲ್ಲಿ ಬೈಗುಳಗಳೂ ಬಳಕೆಯಲ್ಲಿವೆ.

೫.೧.೪ ಕೊಟ್ಟ ಸಾಲವನ್ನು ವಾಪಸ್ಸು ಕೊಡದ ಕಾರಣಕ್ಕಾಗಿ:–

ವ್ಯಕ್ತಿ ತನ್ನ ಕಷ್ಟಕ್ಕಾಗಿ ಯಜಮಾನನ ಹತ್ತಿರ ಸಾಲವನ್ನು ಪಡೆದಿರುತ್ತಾನೆ. ಅವನು ಕೇಳಿದ ಅವಧಿ ಮುಗಿದಿದ್ದರೂ ಸಾಲ ವಾಪಸ್ಸು ಕೊಡದೆ ಇದ್ದ ಕಾರಣಕ್ಕಾಗಿ ಯಜಮಾನ ಹಣ ಪಡೆದಿರುವವನಿಗೆ ಬೈಯುವುದನ್ನು ನೋಡುವುದಾದರೆ,

ಪ್ರ: ಲೇ ಮಗನೆ ನೀನು ದುಡ್ಡು ತಗೊಂಡು ಎಷ್ಟು ದಿನ ಆಯ್ತು ಇನ್ನು ವಾಪಸ್ಸು ಕೊಟ್ಟಿಲ್ಲ. ಯಾವಾಗ ಕೊಡತ್ತಿಯಾ ಲೇ ನಿನಗೆ ಕೊಟ್ಟ ಟೈಮೂನೂ ಮುಗಿತು. ಕೊಡತಿಯಾ ಇಲ್ಲಾ ನಿನ್ನ ಅಕ್ಕ–ತಂಗಿ ಕಳಸ್ತಿಯಾ ಎಂದು ಯಾಜಮಾನ ಬೈದರೂ ಹಣ ಪಡೆದ ವ್ಯಕ್ತಿ ಅಸಹಾಯಕನಾದ ವ್ಯಕ್ತಿ ಬೈಯಿಸಿಕೊಂಡು ಸುಮ್ಮನೆ ಇರುವುದನ್ನು ನೋಡಬಹುದು.

೫.೧.೫ ಆಕಳು ಬೇರೆಯವರ ಮನೆಯಲ್ಲಿ ತರಕಾರಿಯನ್ನು ತಿಂದ ಕಾರಣಕ್ಕಾಗಿ:–

ಮೇಲ್ವರ್ಗದವರ ಮನೆಯಲ್ಲಿ ಕೆಳವರ್ಗದವರ ಆಕಳು ತರಕಾರಿಯನ್ನು ತಿಂದು ಹೋದಾಗ ಆ ಮನೆಯ ಯಜಮಾನಿ ಆಕಳ ಯಾಜಮಾನಿಯ ಜೊತೆ ಜಗಳವಾಡುವುದು ಸಾಮಾನ್ಯವಾಗಿದೆ. ಬೈಯುವುದಕ್ಕೆ ಆಕಳು ಒಂದು ಕಾರಣವಾಗುತ್ತದೆ. ಜಗಳ ಮಾಡುವಾಗ ಸಾಮಾನ್ಯವಾಗಿ ಎಲ್ಲಾ ರೀತಿಯ ಬೈಗುಳಗಳೂ ಬಳಕೆಯಾಗುತ್ತವೆ. ಅವು ಶೀಲ ಮತ್ತು ಅಶ್ಲೀಲವಾದ ಬೈಗುಳಗಳಾಗಿರಬಹುದು.

ಪ್ರ: ಲೇ ಕಂತ್ರಿಸೂಳೆ ಆಕಳನ್ನ ಕಟ್ಟಿ ಹಾಕಾಕಾ ಆಗಲ್ಲ ನಿನಗೆ ಏನು ತಿನ್ನತ್ತಿಯಾ ಹೊಟ್ಟಿಗೆ. ಬೇರೆಯವರ ಮನೆ ಒಳಗೆ ಹೊಗತೈತಿ ಅನ್ನೊದು ಅರಿವು ಇಲ್ಲಾ ನಿನಗೆ. ಅರಿವುಗೇಡಿ ಸೂಳೆ. ಈಗ ಎಲ್ಲ ತರಕಾರಿ ತಿಂದು ಹೊಗೈತಿ ಅಲ್ಲಾ ನಿಮ್ಮವ್ವನ್ ಮಿಂಡ್ರು ಕೊಡಸ್ರರಾ ಬೋಸುಡಿ ಸೂಳೆ ಮೊದಲು ಆಕಳನ್ನು ಕಟ್ಟಿ ಹಾಕು ಇಲ್ಲದಿದ್ರೆ ನೋಡು ಎಂದು ಬೈಯುವುದನ್ನು ನೋಡಬಹುದು.

ಆಕಳು ಕಾರಣವಾಗಿದ್ದು ಅದರ ಯಜಮಾನಿಗೆ ಅವಾಚ್ಯ ಶಬ್ದಗಳಿಂದ ಬೈಯುವುದರ ಮೂಲಕ ಇನ್ನೊಂದು ಹೆಣ್ಣು ಪರೋಕ್ಷವಾಗಿ ಬೈಗುಳದಲ್ಲಿ ಬಳಕೆ ಆಗುತ್ತಾಳೆ.

೫.೧.೬ ಸೊಸೆ ಅತ್ತೆಯ ಮಾತಿಗೆ ಎದುರಾಡಿದ ಕಾರಣಕ್ಕಾಗಿ:–

ಸಮಾಜದಲ್ಲಿ ಅತ್ತೆಯ ಮಾತು ಸೊಸೆ ಕೇಳಲೆಬೇಕು. ಅವಳು ಯಾವುದೇ ಕಾರಣಕ್ಕೂ ಅತ್ತೆಯ ಮಾತಿಗೆ ಎದುರಾಡಬಾರದು ಎಂಬುದು ಪಾರಂಪರಿಕವಾಗಿ ಮತ್ತು ರೂಢಿಗತವಾಗಿ ಬೆಳೆದುಕೊಂಡು ಬಂದಿದೆ. ಇತ್ತೀಚಿನ ದಿನಮಾನಗಳಲ್ಲಿ ಈ ಮಾತು ಅಷ್ಟಾಗಿ ನಡೆಯುವುದಿಲ್ಲ ಎಂಬ ಅಂಶ ಈಗಿನ ಸಂದರ್ಭಗಳನ್ನು ನೋಡಿದರೆ ತಿಳಿದುಬರುತ್ತದೆ.

ಪ್ರ: ಲೇ ನೀನು ಹೇಳಿದ್ದೆ ನಡಿಬೇಕು ಅಲ್ಲಾ. ನನ್ನ ಮಾತು ಏನು ಕೇಳತ್ತಿರಾ ನೀವು ಗಂಡ-ಹೆಂಡತಿ. ನೀನು ಇದಿಯಲ್ಲಾ ಮನೆಗೆ ಬಂದು ಮೂರು ದಿನ ಆಗಲಿಲ್ಲಾ ನನ್ನ ಮಗನ್ನ ಬುಟ್ಟಿಗೆ ಹಾಕೊಂಡು ಬಿಟ್ಟಿಯಾ ನೀನು ತಾಟಗಿತ್ತಿ ಸೂಳೆ ಇಂದಾಗ. ನನ್ನ ಮಗ ಮುಂಚೆ ನನ್ನ ಬಗ್ಗೆ ಎಲ್ಲಾ ವಿಚಾರಸತ್ತ ಇದ್ದ ನೀನು ಬಂದು ಬಿಟ್ಟೆ ಅಲ್ಲಾ ಬೋಸುಡಿಸೂಳೆ ಆವಾಗ್ಲಿಂದ ನನ್ನ ಮಗ ಯಾವೂರು ಅಂತಾನೂ ಕೇಳಲ್ಲ ಹಾಂಗೆ ಮಾಡಿ ಬಿಟ್ಟಿಯಾ ನೀನು ಮಾಟಗಾತಿ ಸೂಳೆ ಎಂದು ಅತ್ತೆ ಸೊಸೆಗೆ ಬೈಯುವುದನ್ನು ನೋಡಬಹುದು.

ಈ ಬೈಗುಳಗಳಲ್ಲಿ ಅತ್ತೆ-ಸೊಸೆಯ ಅಭಿವ್ಯಕ್ತಿ ವಿಧಾನವನ್ನು ನೋಡಬಹುದು. ಅತ್ತೆ-ಸೊಸೆಗೆ ಯಾವೆಲ್ಲ ಬೈಗುಳಗಳನ್ನು ಬಳಕೆ ಮಾಡುತ್ತಾಳೆ. ತನ್ನ ಸೊಸೆ ಮಗನನ್ನು ಅವಳಿಂದ ದೂರ ಮಾಡಿದಳು ಎಂಬ ಕಾರಣದಿಂದ ಎಂತಹ ಅಶ್ಲೀವಾದ ಬೈಗುಳಗಳನ್ನು ಬಳಕೆ ಮಾಡುತ್ತಾಳೆ. ಇದಕ್ಕೆ ಅವಳಷ್ಟೇ ಕಾರಣ ಮಗ ಕಾರಣನಾಗಿದ್ದರು ಸೊಸೆಗೆ ಬೈಯುವುದನ್ನು ನೋಡಬಹುದು. ಸಮಾಜದಲ್ಲಿ ಅತ್ತೆ ಮತ್ತು ಸೊಸೆಯ ನಡುವಿನ ಸಂಬಂಧ ಹೇಗಿದೆ ಎಂಬುದನ್ನು ಇದರಿಂದ ತಿಳಿಯಬಹುದು.

೫.೧.೭ ಗಂಡ ಕುಡಿದು ಬಂದ ಕಾರಣಕ್ಕಾಗಿ:-

ಹೆಂಡತಿ ಗಂಡ ಕುಡಿದು ಬಂದಾಗ ಯಾವ-ಯಾವ ಬೈಗುಳಗಳನ್ನು ಬಳಕೆ ಮಾಡತ್ತಾಳೆ ಎಂಬುದನ್ನು ನೋಡಬಹುದು.

ಪ್ರ: ಹೆಂಡತಿ:- ಲೋ ದರಿದ್ರ ಸೂಳೆಮಗ. ದಿನ ಹೀಂಗೆ ಕುಡಿದು ತೇಲಾಡುಕೊಂಡು ಬರತ್ತ ಇದ್ದರೆ ನಿನ್ನ ಜನ್ಮಕ್ಕೆ ನಾಚಿಕೆ ಆಗಲ್ವಾ ಎಂತನೋ ನನ್ ಜನ್ಮಕ್ಕೆ ಮೂಲ ಆಗಿಬಿಟ್ಟಿಯಾ.

ಗಂಡ:- ಲೇ ಬೋಸುಡಿ ಸೂಳೆ ನಿಮ್ಮಪ್ಪನ ಮನೆಯಿಂದ ತಂದು ಕೋಡುತ್ತಿಯಾ ಕುಡಿಯೋಕೆ. ನಾನು ದುಡಿದು ಸಂಪಾದಿಸಿದ್ದು ದುಡ್ಡನ ನಾನು ಹಾಳು ಮಾಡತ್ತಿನಿ ನನ್ನ ಇಷ್ಟ ನಿನಗೆ ಯಾಕೆ ಲೇ ಬೋಸುಡಿ.

ಹೆಂಡತಿ:- ಲೋ ಕಂತ್ರಿಸೂಳೆಮಗ ನನಗೆ ಯಾಕೆ ಅಂತಿಯಾ ಅಲ್ಲಾ ನಿನಗೆ ಏನು ಮೈಯಲ್ಲಿ ಸಣ್ಣಗಿ ಕಡಿತೈತಿ ಮಕ್ಕಳು ಮರಿ ಐದಾವ ಎನ್ನುವುದೇ ಅರಿವು ಇಲ್ಲ ಅರಿವುಗೇಡಿ. ಮನೆಯಲ್ಲಿ ಸರಿಯಾಗಿ ತಿನ್ನೋಕೆ ಕುಳ್ ಇಲ್ಲಾ ಕುಡಿದು ಇಲ್ಲದು ಧಿಮಾಕ ಮಾತಡತ್ತಿಯಾ. ಸುಮ್ಮನೆ ಬದುಕಿರೋ ಬದಲು ಎಲ್ಲಿ ಆದರೂ ಹೋಗಿ ಸಾಯಿ ಆಗಲಾದರೂ ನಾನು ಮಕ್ಕಳು ಸುಖವಾಗಿ ಇರತೀವಿ. ಎಲ್ಲಿ ತನಕ ಸುಧಾರಿಸಿಕೊಳ್ಳುಬೇಕು ನಿನ್ನ. ಈಗ ಕುಡಿತ ಬಿಡತ್ತಿಯಾ ಆಗ ಬಿಡತ್ತಿಯಾ ಅಂತಾ ಮದುವೆ ಆಗಿದ್ದಾಗಿನಿಂದ ಕಾಯ್ತಾನೇ ಇದ್ದನಿ ಇನ್ನೂ ಬಿಡಿತ್ತಿಯಲ್ಲಾ.

ಇಲ್ಲಿ ಗಂಡ-ಹೆಂಡತಿಗೆ ಬೈದರೂ ಹೆಂಡತಿ ಗಂಡನಿಗೆ ಬೈದರೂ ಅಲ್ಲಿ ಬೈಗುಳಕ್ಕೆ ಒಳಗಾಗುತ್ತಿರುವುದು ಹೆಣ್ಣು. ಕೆಳವರ್ಗದ ಹೆಣ್ಣು ಗಂಡನಿಗೆ ಸರಿ ಸಮಾನವಾಗಿ ನಿಂತು ಬೈಯುತ್ತಾಳೆ. ಕಾರಣ ಅವಳು ಹಗಲ್ಲೇಲ್ಲಾ ಕಷ್ಟಪಟ್ಟು ದುಡಿದು ಮನೆಗೆ ಬಂದರೆ ಗಂಡ ಕುಡಿದು ಬಂದಿದ್ದನ್ನು ನೋಡಿ ಅವಳಿಗೆ ಸಿಟ್ಟು ಅತಿರೇಕಕ್ಕೆ ಹೋಗುತ್ತದೆ ಕಾರಣ ಅವಳು ಸಹ ಕೂಲಿ ಕೆಲಸ ಮಾಡಿ ಹೊಟ್ಟೆಪಾಡಿಗಾಗಿ ಶ್ರಮ ಪಟ್ಟು ದುಡಿತಾ ಇದ್ದರೆ ಗಂಡ ಕುಡಿದು ಹಾಳು ಮಾಡುತ್ತಾನೆ. ನನಗೆ ಒಬ್ಬಳಿಗೆ ಮಾತ್ರ ಮನೆ ಜವಾಬ್ದಾರಿ ಅವನಿಗೆ ಸಹ ಮನೆ ಜವಬ್ದಾರಿ ಇದೆ. ಆದರೆ ಇವನು ದಿನ ಈ ರೀತಿಯಲ್ಲಿ ಮೈ ಮೇಲೆ ಎಚ್ಚರ ಇಲ್ಲದೆ ಕುಡಿದು ಬಿದ್ದರೆ ಹೆಂಗೆ ಎಂಬ ಕಾರಣಕ್ಕಾಗಿ ಅವಳು ಗಂಡನಿಗೆ ಅವಾಚ್ಯ ಶಬ್ದಗಳಿಂದ ಬೈಯುವುದನ್ನು ಕಾಣಬಹುದು. ಆದರೆ ಗಂಡನದೆ ತಪ್ಪು ಇದ್ದರೂ ಸಹ ಅವನು ನಿಮ್ಮಪ್ಪನದ ದುಡ್ಡು ಎಂದು ಪ್ರಶ್ನೆ ಮಾಡುತ್ತಾನೆ. ಹಾಗೆಯೇ ಹೆಂಡತಿಗೆ ಅವಾಚ್ಯ ಶಬ್ದಗಳಿಂದ ಬೈಯುವುದನ್ನು ಸಹ ಕಾಣಬಹುದು. ಇಲ್ಲಿ ಹೆಣ್ಣು ಶ್ರಮಜೀವಿ ಎಂದು ಹೇಳಬಹುದು.

ಹೀಗೆ ಬೈಗುಳಕ್ಕೆ ಕಾರಣವಾದ ಅಂಶಗಳನ್ನು ನೋಡಬಹುದು. ಬೈಯುವುದಕ್ಕೆ ಇದೇ ಕಾರಣ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಕಾರಣ ಅದು ಸಣ್ಣ-ಸಣ್ಣ ವಿಷಯಕ್ಕೂ ಬೈಗುಳ ಬಳಕೆಯಾಗುತ್ತ ಇರುತ್ತವೆ .ಯಾವುದೇ ಕಾರಣ ಇಲ್ಲದೇನೂ ತಮಾಷೆಗೂ ಬೈಗುಳಗಳು ಬಳಕೆಯಾಗುತ್ತ ಇರುತ್ತವೆ. ಆದರೆ ಕಾರಣ ಇರಲಿ, ಬಿಡಲಿ ತಮಾಷೆಗೂ ಸತೋಷವಾದಗಲೂ ಬೈಯಲಿ ಅಲ್ಲಿ ಹೆಣ್ಣು ಬೈಗುಳಕ್ಕೆ ಒಳಗಾಗುವುದನ್ನು ನೋಡಬಹುದು.

ಆ)ಬೈಗುಳ ಸಾಮಾಜಿಕ ಸಂದರ್ಭ:-

ಬೈಗುಳಗಳು ಸಾಮಾಜಿಕ ಸಂದರ್ಭಗಳಲ್ಲಿ ಹೇಗೆ ಬಳಕೆಯಾಗುತ್ತವೆ ಮತ್ತು ಬೈಗುಳ ಬಳಕೆಯಾಗುವ ಸಂದರ್ಭಗಳು ಯಾವುವು ಎಂಬುದನ್ನು ಚರ್ಚಿಸಬಹುದು. ಯಾವ-ಯಾವ ಸಂದರ್ಭದಲ್ಲಿ ಯಾವ-ಯಾವ-ರೀತಿಯ ಬೈಗುಳಗಳನ್ನು ಜನರು ಬಳಕೆ ಮಾಡುತ್ತಾರೆ ಅದರ ಉದ್ದೇಶ ಏನಾಗಿರುತ್ತದೆ ಎಂಬುವುದನ್ನು ಸಹ ಚರ್ಚಿಸಬಹುದು. ಹಾಗೆಯೇ ಸಂದರ್ಭ ಯಾವುದೇ ಇದ್ದರೂ ಬೈಗುಳ ಹೇಗೆ ಬಳಕೆಯಾಗುತ್ತವೆ ಅದರಲ್ಲೂ ಹೆಣ್ಣನ್ನು ಹೇಗೆ ಬೈಗುಳಕ್ಕೆ ಒಳಪಡಿಸುತ್ತಾರೆ. ಅದು ಯಾರಿಗೆ ಬೈದರೂ ಹೆಣ್ಣು ಬೈಗುಳಕ್ಕೆ ಹೇಗೆ ಒಳಗಾಗುತ್ತಾಳೆ ಎಂಬುದನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

ಪ್ರ: ಏನಲೇ ಸೂಳೆಮಗನೆ ಈಗ ಬರತ್ತಿದಿಯಾ ನಿನ್ ಮೈಯಾಗ ಹೆಂಗೆ ಐತಿ? ಎಂದು ಗಂಡು-ಗಂಡಸಿಗೆ ಬೈಯುತ್ತಾನೆ.

ಈ ಬೈಗುಳದ ಸಂದರ್ಭವನ್ನು ನೋಡುವುದಾದರೆ ಕೆಲಸಕ್ಕೆ ತಡವಾಗಿ ಬಂದ ಆಳನ್ನು ಕುರಿತು ಯಜಮಾನ ಬೈಯುವ ಮಾತಿದು. ಇದನ್ನು ನೋಡಿದಾಗ ಇಲ್ಲಿ

ತಡವಾಗಿ ಬರುವುದು ಗಂಡಾಳು ಯಜಮಾನ ಬೈಯುವುದು ಅವನ ತಾಯಿಯನ್ನು ಹಾಗಾಗಿ ಇಲ್ಲಿ ಲಿಂಗತಾರತಮ್ಯವನ್ನು ಗುರುತಿಸಬಹುದು. ಹೆಣ್ಣನ್ನು ಕುರಿತು ಬೈದಾಗ ಅವನಿಗೆ ಕೋಪ ಬಂದರೂ ಏನು ಮಾಡುವುದಿಲ್ಲ. ಕೋಪ ವಿಪರೀತಕ್ಕೆ ಹೋದಾಗ ಆಳು ಯಜಮಾನನಿಗೆ ಬೈದರೂ ಅವನು ಸಹ ಹೆಣ್ಣನ್ನು ಕೇಂದ್ರೀಕರಿಸಿಕೊಂಡು ಬೈಯುತ್ತಾನೆ. ಇದು ವಿಚಿತ್ರವಾಗಿ ಕಂಡರೂ ಇದು ಸತ್ಯಾಂಶವಾಗಿದೆ. ಹೆಣ್ಣನ್ನು ಬೈಯುವುದರ ಮೂಲಕ ಎದುರಾಳಿಯ ಮನಸ್ಸನ್ನು ಮತ್ತಷ್ಟು ಅಧೀನವಾಗಿಸುವುದು ಏಕೆಂದರೆ ಅವನು ಆಳಾಗಿರುವ ಕಾರಣ ಅವನು ಎದುರಾಡುವಂತಿಲ್ಲ. ಏಕೆಂದರೆ ಅವನು ಕೊಡುವ ಕೂಲಿಯ ಮೇಲೆ ಇವನ ಜೀವನ ನಿಂತಿರುತ್ತದೆ. ಹಾಗಾಗಿ ಅವನು ಸುಮ್ಮನಿರಬೇಕಾಗುತ್ತದೆ. ಇದು ಕೊನೆಇರದ ಕಾರಣ ಪರಂಪರೆಯಲ್ಲಿ ಹಾಗೇ ಮುಂದುವರೆದುಕೊಂಡು ಬಂದಿದೆ. ಒಂದು ರೀತಿಯಲ್ಲಿ ರೂಢಿಗತವಾದ ಸಿದ್ಧ ಮಾದರಿಯಾಗಿ ರೂಪಿತವಾಗಿದೆ ಎಂದು ಹೇಳಬಹುದು. ಇತ್ತೀಚಿನ ದಿನಮಾನಗಳಲ್ಲಿ ಇದು ಕಡಿಮೆಯಾಗಿದೆ ಎಂದು ಹೇಳಬಹುದು. ಈಗಿನ ಸಂದರ್ಭದಲ್ಲೂ ಹಳೆ ತಲೆಮಾರಿನವರು ಹೀಗೆ ಯಾಜಮಾನ ಬೈದರೂ ಅವನಿಗೆ ಎದುರಾಡದೆ ಬೈಯಿಸಿಕೊಳ್ಳುವುದನ್ನು ನೋಡಬಹುದು. ಆದರೆ ಈಗಿನ ತಲೆಮಾರಿನವರು ಈ ರೀತಿಯಾಗಿ ಯಾಜಮಾನನ ಹತ್ತಿರ ಬೈಯಿಸಿಕೊಳ್ಳುವುದು ಕಡಿಮೆ. ಒಂದು ವೇಳೆ ಬೈದರೂ ಅದಕ್ಕೆ ಅವನು ಎದುರಾಡಿ ನಿನ್ನ ಕೆಲಸ ಬೇಡ ನಿನ್ನ ಕೂಲಿಬೇಡ ಎಂದು ಅವನಿಗೆ ಸಮನಾಗಿ ನಿಂತು ಬೈದು ಬರುವ ಸಂದರ್ಭವನ್ನು ಇತ್ತೀಚಿನ ದಿನಮಾನಗಳಲ್ಲಿ ಕಾಣಬಹುದು.

ಆಳು ಯಾಜಮಾನನ ಹತ್ತಿರ ಕೂಲಿ ಕೇಳಲು ಬಂದಾಗ ಅವನು ದುಡಿದ ಕೂಲಿಗಿಂತ ಕಡಿಮೆ ಕೊಟ್ಟು ಯಾಜಮಾನ ಅಹಂಕಾರದಿಂದ ಧಿಮಾಕಿನ ಮಾತಾಡಿ ಅವನಿಗೆ ಇಲ್ಲ-ಸಲ್ಲದ ಬೈಗುಳಗಳನ್ನು ಬೈಯುತ್ತಾನೆ. ಇದನ್ನು ಕಂಡು ಆಳು ಯಾವುದೇ ಮೂಲಾಜು ಇಲ್ಲದೆ ನಾನು ಕಷ್ಟಪಟ್ಟು ದುಡಿದಿದ್ದ ಕೂಲಿ ಕೋಡೊಕೆ ಇಷ್ಟು ಬಡಿವಾರ ಮಾಡಿತ್ತಿಯಲ್ಲಾ ಹೆಂಗೆ ನೀನು ಯಾಜಮಾನ ಆಗಿರಬಹುದು ಆದರೆ ನೀನು ಕೊಡಬೇಕಾದ ದುಡ್ಡು ಕೋಡೊದು ಬಿಟ್ಟು ಬೈತಿಯಲ್ಲಾ. ಇಲ್ಲಾಪ್ಪ ಇವತ್ತು ಕಡಿಮೆ ದುಡ್ಡು ಐತಿ ನಾಳೆ ಕೊಡತ್ತಿನಿ ಅಂತಾ ಹೇಳಿದ್ದರೆ ಆಯ್ತು ಅದು ಬಿಟ್ಟು ನನಗೆ ಸೂಳೆಮಗನೆ ಕೊಡಲ್ಲಾ ಅಂತಿಯಾ. ಅಲ್ಲ ಎಷ್ಟು ಧಿಮಾಕ ಇರಬೇಡ ನಿನಗೆ ಎಂದು ಯಾಜಮಾನನಿಗೆ ಬೈಯುತ್ತಾನೆ. ನಿನ್ನ ಹತ್ತಿರ ಕೂಲಿ ಕೇಳಿದ್ದೇನೆ ಹೊರತು ನಿನ್ನ ಅಕ್ಕ, ತಂಗಿ, ಹೆಂಡತಿನಾ ಕೇಳಿಲ್ಲ ಎಂದು ಬೈಯುತ್ತಾನೆ. ಯಾಜಮಾನನ ಆಕ್ರೋಶವನ್ನು ಇನ್ನು ಹೆಚ್ಚು ಮಾಡುವ ಬೈಗುಳಗಳನ್ನು ಬಳಕೆ ಮಾಡುತ್ತಾನೆ. ಈ ಸಂದರ್ಭವನ್ನು ಗಮನಿಸಿದಾಗ ಒಬ್ಬ ಆಳು ತನ್ನ ಯಾಜಮಾನನಿಗೆ ಬೈಯುವಾಗ ಅದು ಹೆಣ್ಣಿನ ಮೂಲಕವೇ ಬೈಯುತ್ತಾನೆ ಯಾಜಮಾನ ಕೂಲಿಕಾರನಿಗೆ ಬೈಯುವಾಗಲೂ ಹೆಣ್ಣಿನ ಮೂಲಕವೇ ಬೈಯುತ್ತಾನೆ. ಆದರೆ ಇಲ್ಲಿ ಏನು ಗೊತ್ತಿಲ್ಲದ ಅಮಾಯಕ ಹೆಣ್ಣು ಬೈಗುಳಕ್ಕೆ ಪರೋಕ್ಷವಾಗಿ ಗುರಿಯಾಗುವುದನ್ನು ನೋಡಬಹುದು. ಇಲ್ಲಿ ಆಳು ಮತ್ತು

ಯಾಜಮಾನನ ಬೈಗುಳದ ಅಭಿವ್ಯಕ್ತಿ ವಿಧಾನವನ್ನು ನೋಡಬಹುದು. ಇಬ್ಬರೂ ಸಹ ಯಾವುದೇ ಮುಚ್ಚುಮರೆ ಇಲ್ಲದೆ ನೇರವಾಗಿ ಅವಾಚ್ಯ ರೂಪದ ಬೈಗುಳಗಳನ್ನು ಬಳಕೆ ಮಾಡುವುದನ್ನು ನೋಡಬಹುದು. ನೀನು ಯಾಜಮಾನ, ನೀನು ಆಳು ಇದೇ ಬೈಗುಳಗಳನ್ನು ಬಳಕೆ ಮಾಡಬೇಕು ಎಂಬ ಯಾವ ಸಂಕೋಚದ ಭಾವನೆ ಇಲ್ಲದೆ ನೇರವಾಗಿ ಯಾಜಮಾನನಿಗೆ ಕೂಲಿಕಾರ ಅವರ ಮನೆಯ ಹೆಣ್ಣು ಮಕ್ಕಳ ಬಗ್ಗೆ ಅವಾಚ್ಯ ಬೈಗುಳವನ್ನು ಬಳಸುತ್ತಾನೆ. ಇದೊಂದು ಸಾಮಾಜಿಕ ಅಭಿವ್ಯಕ್ತಿ ವಿಧಾನದ ಒಂದು ಮಾದರಿಯಾಗಿ ಕಂಡುಬರುತ್ತದೆ.

ಕೆಲವು ಸಂದರ್ಭದಲ್ಲಿ ವ್ಯಕ್ತಿಯು ತನ್ನ ದೋಷಗಳಿಂದ ಮತ್ತು ತನ್ನ ದುರ್ಗಣಗಳಿಂದ ಅತ್ಯಂತ ಹೀನ ಕಾರ್ಯಗಳನ್ನೆಸಗಿ ಕಷ್ಟ-ನಷ್ಟಗಳಿಗೆ ಗುರಿಯಾಗುತ್ತಾನೆ. ಇಂತಹ ತನ್ನ ಸ್ವಯಂಕೃತ ಅಪರಾಧಕ್ಕಾಗಿ ತನ್ನ ಬಗ್ಗೆ ತಾನೇ ಅಸಹ್ಯಗೊಂಡು ಮತ್ತು ಆಕ್ರೋಶಗೊಂಡು ತನ್ನನ್ನು ತಾನೇ ಬೈದುಕೊಳ್ಳಲು ತೊಡಗುತ್ತಾನೆ.

ಪ್ರ: ತು ದರಿದ್ರ ಸೂಳೆಮಗ ಇದಾಂಗೆ ನಾನು ಮಾಡುವ ಯಾವ ಕೆಲಸನೂ ಸರಿಯಾಗಿ ಆಗಲ್ಲ. ನಾನು ಮಾಡೋದು ಒಂದು ಅದರಿಂದ ಸಿಗೋದು ಒಂದು. ಎಂತ ಸೂಳೆಮಗ ಆದೆ ನಾನು ಎಂದು ತನ್ನಷ್ಟಕ್ಕೆ ತಾನೇ ಬೈದುಕೊಳ್ಳುತ್ತಾನೆ. ಇದೊಂದು ಸ್ವ ಬೈಗುಳದ ಮಾದರಿಯಾಗಿದೆ.

ಆದರೆ ತನಷ್ಟಕ್ಕೆ ತಾನೇ ಬೈದು ಕೊಂಡರೂ ನಾನು ಅಸಹಾಯಕತೆಯುವಳ್ಳವನು ಮತ್ತು ಅನೈತಿಕ ಸಂಬಂಧದಿಂದ ಹುಟ್ಟಿದ ಮಗ ಎಂದು ತನ್ನ ತಾಯಿಯು ಅನೈತಿಕ ಸಂಬಂಧವುಳ್ಳವಳು ಎಂದು ಬೈಗುಳದ ಮೂಲಕ ಹೆಣ್ಣಿನ ಅನೈತಿಕಯ ಬಗ್ಗೆ ಹೇಳುತ್ತಾನೆ. ಇಲ್ಲಿಯೂ ಹೆಣ್ಣು ಬೈಗುಳಕ್ಕೆ ಒಳಪಡುತ್ತಾಳೆ.

ಇನ್ನೊಂದು ಮಾದರಿಯನ್ನು ನೋಡುವುದಾದರೆ ಇದರ ಮುಂದಿನ ಹಂತವೇ ಅನ್ಯರಿಂದ ಬೈಯಿಸಿಕೊಂಡರೆ ತನಗೆ ಒಳ್ಳೆಯದಾಗುತ್ತದೆ ಎಂದು ತೃಪ್ತಿಯನ್ನು ಪಡೆಯುವುದು. ಅನ್ಯರು ಬೈದಾಗ ತಾನು ಇದೂವರೆಗೂ ಮಾಡಿರುವ ಪಾಪಗಳು ಅಥವಾ ಹೀನಕಾರ್ಯಗಳಿಗೆ ಸರಿಯಾದ ಶಿಕ್ಷೆ ದೊರಕುತ್ತದೆ ಎಂದು ತಿಳಿದು ಇನ್ನೂ ಮುಂದೆ ಎಲ್ಲ ಪಾಪಗಳು ಕಳೆದು ಹೋಗುತ್ತವೆ ಎಂಬ ನಂಬಿಕೆ ಸಮಾಜದಲ್ಲಿ ಇರುವುದರಿಂದ ಬೈಗುಳಗಳಿಗೆ ಇಂತಹ ಸಂದರ್ಭಗಳು ಬರುತ್ತವೆ. ಅಲ್ಲಿಯೂ ಹೆಣ್ಣಿನ ಮೂಲಕವೇ ಬೈಗುಳಗಳು ವ್ಯಕ್ತವಾಗುವುದನ್ನು ನೋಡಬಹುದು.

ಈ ಬಗೆಯ ಬೈಗುಳದ ಸಾಮಾಜಿಕ ಸಂದರ್ಭಗಳಿಗೆ ಇನ್ನೂ ಹಲವಾರು ಉದಾಹರಣೆಗಳನ್ನು ಕೊಡಬಹುದು. ಇವುಗಳಿಂದ ತಿಳಿದು ಬರುವ ಅಂಶವೆಂದರೆ ಬೈಗುಳಗಳು ಜನರ ಮಾತಿನ ಶೈಲಿಯ ಒಂದು ಭಾಗವೇ ಆಗಿರುತ್ತವೆ. ಚಿದಾನಂದಮೂರ್ತಿ ಅವರು

ಈ ಬಗ್ಗೆ ಮಾಡಿರುವ ವಿಶ್ಲೇಷಣೆಯನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಬೈಗುಳಕ್ಕೆ ಎರಡು ಮುಖಗಳಿವೆ ಒಂದು ದ್ವೇಷದ್ದು, ಇನ್ನೊಂದು ಸ್ನೇಹದ್ದು. ಇವೆರಡರಲ್ಲಿ ಮೊದಲನೆಯದೆ ಮುಖ್ಯವಾದದ್ದು. ಎರಡನೆಯದು ತೀರ ಅನುಷಂಗಿಕ ಎಂದು ಹೇಳಿದ್ದಾರೆ (ಜನ-ಜನಪದ-ಜಾನಪದ ಪು.೩೧೯). ಅಂದರೆ ದ್ವೇಷದ ಸಂದರ್ಭದಲ್ಲಿ ಯಾವ-ಯಾವ ಬೈಗುಳಗಳನ್ನು ಬಳಸುತ್ತಾರೆ ಅದರ ಹಿಂದಿನ ಮನೋಧರ್ಮ ಏನಾಗಿರುತ್ತದೆ ಮತ್ತು ಅದರ ಪ್ರಮುಖ ಉದ್ದೇಶವೇನಾಗಿರುತ್ತದೆ ಎಂಬ ಅಂಶ ಪ್ರಮುಖವಾಗುತ್ತದೆ. ಮತ್ತು ಸ್ನೇಹದ ಸಂದರ್ಭದಲ್ಲೂ ಸಹ ಬೈಗುಳಗಳು ಬಳಕೆಯಾಗುತ್ತವೆ. ಯಾವ ರೀತಿಯ ಬೈಗುಳಗಳು ಬಳಕೆಯಾಗುತ್ತವೆ, ಏಕೆ ಬಳಕೆಯಾಗುತ್ತವೆ, ಯಾರನ್ನು ಉದ್ದೇಶಿಸಿ ಬೈಯುತ್ತಾರೆ, ಸ್ನೇಹದ ಸಂದರ್ಭದಲ್ಲೂ ಬೈಗುಳ ಯಾರನ್ನು ಒಳಗೊಂಡು ರಚನೆಯಾಗಿದೆ ಎಂಬುವುದನ್ನು ಸಹ ಚರ್ಚಿಸಲು ಅವಕಾಶವಿದೆ.

ತಾಯಿ ಮಗನನ್ನು ಕುರಿತು ಮುದ್ದಾಡುವ ಸಂದರ್ಭದಲ್ಲೂ ಬೈಗುಳಗಳು ಬಳಕೆಯಾಗುತ್ತವೆ. ತಾಯಿ ಮಗನಿಗೆ ಬಾ ಇಲ್ಲಿ ಎಂದು ಕರೆದರು ಮಗ ಬರಲಿಲ್ಲಾ ಎಂಬ ಸಂದರ್ಭದಲ್ಲಿ ಬಳಕೆಯಾಗುವ ಬೈಗುಳಗಳನ್ನು ನೋಡುವುದಾದರೆ,

ಪ್ರ: 'ತಾಯಿ ಲೇ ಕಳ್ಳ ನನ್ ಮಗನೆ ಎಷ್ಟು ಧಿಮಾಕ ಮಾಡತ್ತಿಯಾ ನೀನು ಇಲ್ಲಿ ಬಾ ಅಂದರೆ ಇಲ್ಲದ ಬಡಿವಾರ ಮಾಡಿತ್ತಿಯಾ ಬಡಿವಾರ ಸೂಳೆಮಗ ನೀನು ಮೊದಲೇ' ಎಂದು ಮಾತಾನಾಡುವ ಸಂದರ್ಭದಲ್ಲಿ ಮಗನಿಗೆ ಈ ರೀತಿಯ ಬೈಗುಳಗಳನ್ನು ಬಳಕೆ ಮಾಡುತ್ತಾಳೆ.

ಇಲ್ಲಿ ಗಮನಿಸಬೇಕಾದ ಅಂಶ ತಾಯಿ ಮಗನಿಗೆ ಕೋಪದಲ್ಲಿ ಬೈಯುವ ಪದಗಳಲ್ಲಿ ಸಹಜವಾಗಿ ಸಂಭಾಷಣೆಯ ಸಂದರ್ಭದಲ್ಲಿ ಈ ಬೈಗುಳಗಳು ಬಳಕೆಯಾಗುತ್ತವೆ. ಆದರೆ ಹೆಣ್ಣು ತಾನು ಅನೈತಿಕತೆಯುಳ್ಳವಳು ಮತ್ತು ಅನೈತಿಕ ಚಟುವಟಿಕೆಯಿಂದ ಜನಿಸಿದ ಮಗ ಎಂಬ ಅರ್ಥದಲ್ಲಿ ಬೈಗುಳಗಳು ಸಮಾಜದಲ್ಲಿ ಪ್ರಯೋಗದಲ್ಲಿವೆ. ಬೈಗುಳಗಳು ಒಂದು ಅಸ್ತ್ರ ಎಂದು ಹೇಳಬಹುದು. ಬೇಕು ಅಂತಾ ಬೈಯುವ ಮಾತುಗಳು ಅಲ್ಲದೆ ಇದ್ದರೂ ಅವುಗಳು ಬಾಯಿಯ ಅಸ್ತ್ರಗಳಂತೆ ಪ್ರಯೋಗ ಆಗುತ್ತ ಇರುತ್ತವೆ. ಸಮಾಜದಲ್ಲಿ ಹೆಚ್ಚಾಗಿ ಹೆಣ್ಣೇ ಅನೈತಿಕಯುಳ್ಳವಳು ಎಂಬ ಅರ್ಥದಲ್ಲಿ ಬೈಗುಳಗಳು ಅಭಿವ್ಯಕ್ತವಾಗುತ್ತಾ ಇರುತ್ತವೆ. ಅದು ಹೆಣ್ಣು ಬೈಗುಳಗಳನ್ನು ವ್ಯಕ್ತಪಡಿಸಿದರೂ ಸರಿ ಗಂಡು ವ್ಯಕ್ತಪಡಿಸಿದರೂ ಸರಿ ಬೈಗುಳದ ಸುತ್ತ ಹೆಣ್ಣು ಆವರಿಸಿರುತ್ತಾಳೆ. ಈ ರೀತಿಯಲ್ಲಿ ಸಮಾಜದಲ್ಲಿ ಬೈಗುಳಗಳು ಬಳಕೆಯಲ್ಲಿವೆ.

ಸೋದರ-ಸೋದರಿಯರು ಪರಸ್ಪರ ತಮಾಷೆ ಮಾಡಿಕೊಳ್ಳುವ ಸಂದರ್ಭದಲ್ಲಿ ಬೈಗುಳದ ಬಳಕೆಯ ನೆಲೆ:-

ಸೋದರ-ಸೋದರಿಯರು ತಮಾಷೆ ಮಾಡಿಕೊಂಡು ಮಾತಾನಾಡುವ ಸಂದರ್ಭದಲ್ಲಿ ತಮಗೆ ಆಗದೆ ಇರುವ ವ್ಯಕ್ತಿಯನ್ನು ಅದೇ ಸಂದರ್ಭದಲ್ಲಿ ನೋಡಿದಾಗ ಹೇಗೆ ಬೈಗುಳಗಳು ವ್ಯಕ್ತವಾಗುತ್ತವೆ ಎಂಬುವುದನ್ನು ನೋಡುವುದಾದರೆ,

ಪ್ರ: ಅವನು ಇದನಲ್ಲಮ್ಮ ದರಿದ್ರಸೂಳೆಮಗ ದಾರಿಯಲ್ಲಿ ಬರತ್ತ ಇರಬೇಕಾದರೆ ನನ್ನ ನೋಡಿ ನಗತ್ತ ಇರತ್ತಾನೆ. ಯಾಕ ಏನು ಕಳ್ಳನನ್ನಮಗ ಹೆಂಗೆ ಇದನೆ ನೋಡು ಒಳ್ಳೆ ಕಸಬರಕಿಯಿಂದ ಒಡೆದ ಮುಖ ಇದಾಂಗ ಐತಿ. ಅವನು ಮುಖ ನನ್ ನೋಡಿ ನಗತ್ತಾನೆ ಸೂಳೆಮಗ ಎಂದು ಬೈಯುತ್ತಾರೆ.

ಅವನು ಯಾವುದೇ ವಿಚಾರಕ್ಕೆ ನಕ್ಕಿರಬಹುದು. ಆದರೆ ಇವನು ನನ್ನನ್ನೇ ನೋಡಿ ನಕ್ಕಿದ್ದಾನೆ ಎಂದು ನಕರಾತ್ಮಕವಾಗಿ ಯೋಚನೆ ಮಾಡುವುದರ ಮೂಲಕ ಅವಾಚ್ಯರೂಪದ ಬೈಗುಳಗಳನ್ನು ವ್ಯಕ್ತಪಡಿಸುತ್ತಾರೆ. ಅವನು ನಗಬೇಕಾದರೆ ಇವನು ಅದೇ ದಾರಿಯಲ್ಲಿ ಬಂದಿರಬಹುದು ಹೀಗೆ ಸಕರಾತ್ಮಕವಾಗಿ ಯೋಚನೆ ಮಾಡುವುದರ ಬದಲು ನನ್ನ ನೋಡಿಯೇ ಅವನು ನಕ್ಕ ಎಂದು ನಕರಾತ್ಮಕವಾಗಿ ಯೋಚನೆ ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ಬೈಗುಳಗಳು ಬಳಕೆ ಆಗುವುದು ಸಹಜ. ಅವನಿಗೆ ಬೈದರೂ ಅದರಲ್ಲೂ ಅವನ ತಾಯಿ ಬೈಗುಳಕ್ಕೆ ಒಳಪಡುತ್ತಾಳೆ. ಮತ್ತು ಆ ವ್ಯಕ್ತಿಯು ಅಸಹಾಯಕತೆಯುಳ್ಳವನು ಮತ್ತು ಬೇರೆಯ ಸಂಬಂಧದಿಂದ ಹುಟ್ಟಿದ ಮಗ ಎಂದು ಬೈಗುಳದ ಮೂಲಕ ಅವನ ತಾಯಿಯನ್ನು ದೂಷಿಸುತ್ತಾರೆ. ಏನು ತಿಳಿಯದ ಹೆಣ್ಣು ಹೇಗೆ ಬೈಗುಳಕ್ಕೆ ತುತ್ತಾಗುತ್ತಾಳೆ ಎಂಬುವುದನ್ನು ಸಹ ಇಂತಹ ಕೆಲವು ಸಂದರ್ಭಗಳಲ್ಲಿ ನೋಡಬಹುದು.

ಮದುವೆ ಸಂದರ್ಭದಲ್ಲಿ ಸಂಬಂಧಿಕರು ಬಳಕೆ ಮಾಡುವ ಬೈಗುಳದ ನೆಲೆ:-

ಸಂಬಂಧಿಕರು ಮದುವೆಯ ಸಂದರ್ಭದಲ್ಲಿ ಹೆಣ್ಣು-ಗಂಡಿನ ಮದುವೆಯ ಕಾರ್ಯದಲ್ಲಿ ದೋಷಗಳನ್ನು ಅಥವಾ ಬೀಗರ ಸಂಪತ್ತು ಕುರಿತು ಸದುದ್ದೇಶದಿಂದ ಸಂಭಾಷಣೆ ಮಾಡುವುದರ ಮೂಲಕ ಆನಂದ ಪಡುತ್ತ ಪರಸ್ಪರರು ರೇಗಿಸಿಕೊಳ್ಳುವಾಗ ಬೈಗುಳದ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ.

ಪ್ರ: ವ್ಯಕ್ತಿ-೧ ಲೇ ಅವರಿಗೆ ಏನು ಕಡಿಮೆ ಬೀಡು ಕಳ್ಳ ನನ್ ಮಕ್ಕಳು ಏನು ಹೇಳಲ್ಲ ಎಲ್ಲ ಮುಚಿಟ್ಟುಕೊಳ್ಳುತ್ತಾರೆ.

ವ್ಯಕ್ತಿ-೨ ಹೌದಪ್ಪ ನೀನು ಹೇಳಿದ್ದು ನೀಜನೇ ಬಾರಿ ಸುಳ್ಳು ನನ್ ಮಕ್ಕಳು ಇಲ್ಲದ ಧಿಮಾಕ ಜಾಸ್ತಿ ಅವರಿಗೆ.

ವ್ಯಕ್ತಿ-೧ ಹೆಂಗೊ ಮಗಳದು ಮದುವೆ ಮಾಡಿಬಿಟ್ಟ ಬೀಡು.

ಹೀಗೆ ಸಂಭಾಷಣೆ ಮಾಡುವುದರ ಮೂಲಕ ಬೈಗುಳಗಳನ್ನು ಬಳಕೆ ಮಾಡುತ್ತಾರೆ. ಕಳ್ಳ ನನ್ ಮಗ, ಸುಳ್ಳು ನನ್ ಮಗ ಎಂದು ಬೈಯುತ್ತಾರೆ. ಆದರೆ ನನ್ ಮಗ ಎಂಬ

ಪದ ಇಲ್ಲಿ ನಕಾರತ್ಮಕವಾಗಿ ಬಳಕೆ ಆಗುತ್ತ ಇದೆ. ಇಲ್ಲಿಯೂ ಹೆಣ್ಣು ಬೈಗುಳಕ್ಕೆ ಒಳಗಾಗುತ್ತಾಳೆ.

ಇದೇ ಮದುವೆ ಸಂದರ್ಭದಲ್ಲಿ ಇನ್ನೊಂದು ಅರ್ಥದಲ್ಲಿಯೂ ಸಂಬಂಧಿಕರು ಸಂಬಂಧಿಕರಿಗೆ ತಮಾಷೆ ಮಾಡುವಾಗ ಬೈಗುಳದ ನೆಲೆ:-

ಪ್ರ: ಏನಲೇ ಮಗನೆ ಒಂದು ಒಳ್ಳೆಯ ಊಟ ಕಳೆದುಕೊಂಡು ಬಿಟ್ಟಿಯಲ್ಲ. ಬೇಗ ಬರೋದಲ್ವಾ ಎಂದು ತಮಾಷೆಗೆ ಬೈಯುವುದನ್ನು ಕಾಣಬಹುದು.

ಈ ಬೈಗುಳ ಒಬ್ಬ ಜೀಪುಣ ವ್ಯಕ್ತಿಯನ್ನು ಬೈಯುವುದಕ್ಕೆ ಬಳಸುವ ಬೈಗುಳ ಪದವಾಗಿ ಇಲ್ಲಿ ಬಳಕೆಯಾಗುತ್ತ ಇದೆ. ಇವನು ಲೇಟಾಗಿ ಬಂದಿದಕ್ಕೆ ಸಂಬಂಧಿಕರು ರೇಗಿಸುತ್ತಾರೆ. ತಮಾಷೆಗೆ ಬೈದರೂ ನನ್ ಮಗ ಎಂಬ ಪದ ನಕರಾತ್ಮಕವಾದ ಅರ್ಥವನ್ನು ಕೊಡುತ್ತದೆ.

ಯಾವುದಾದರೂ ವಸ್ತುಗಳ ಬಗ್ಗೆ ಅಥವಾ ವ್ಯಕ್ತಿಗಳ ಬಗೆಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುವಂತ ಸಂದರ್ಭದಲ್ಲಿ ಬೈಗುಳಗಳ ಬಳಕೆಯ ನೆಲೆಯನ್ನು ಗಮನಿಸುವುದಾದರೆ, ಒಬ್ಬ ವ್ಯಕ್ತಿ ಅಥವಾ ಹೆಣ್ಣು ಒಂದು ವಸ್ತುವನ್ನು ಕರಿದಿಸಿದಾಗ ಅದರ ದೋಷವನ್ನು ಹುಡುಕಿ ಅವರಿಗೆ ಬೈಯುವುದನ್ನು ನೋಡುವುದಾದರೆ,

ಒಬ್ಬ ಹೆಣ್ಣು ಸೀರೆಯನ್ನು ಖರೀದಿಸಿದಾಗ ಅದರ ಬಣ್ಣ ಮತ್ತು ಬೆಲೆಯನ್ನು ಕುರಿತು ಹೇಳುವಾಗ ಬೈಗುಳದ ಬಳಕೆಯಾಗುವುದನ್ನು ನೋಡುವುದಾದರೆ, ಏ ಏನು ಚೆನ್ನಾಗಿ ಐತಿ ಅಂತಾ ಅನಕೊಂಡಿಯಾ ಕತ್ತೆ ಅಂತೋಳೆ ಅದರ ಕಲರ್ ನೋಡು ಹೆಂಗೆ ಐತಿ ಸ್ವಲ್ಪನಾದರೂ ಚೆನ್ನಾಗಿ ಐತಾ ಅದಕ್ಕೆ ಸಾವಿರ ರೂಪಾಯಿ ಕೊಟ್ಟಿಯಲ್ಲಾ ಹೆಂಗೆ ತಿಳಿತೈತಿ ನಿನಗೆ ದರಿದ್ರಸೂಳೆ ದುಡ್ಡು ಏನು ಸುಮ್ಮನೆ ಬರತ್ತಾವ ಬೋಸುಡಿಸೂಳೆ ಇನ್ನೂ ಒಂದು ಸಲ ನನ್ ಕೇಳದೆ ಏನಾದರೂ ತಗೋ ಆಗ ಮಾಡತ್ತಿನಿ ಏನೆಲ್ಲಾ ನಿನ್ ತವರ ಮನೆಗೆ ಒಡಿಸಿಬಿಡತ್ತಿನಿ ಅಷ್ಟೇ ಎಂದು ಗಂಡ-ಹೆಂಡತಿಗೆ ಬೈಯುತ್ತಾನೆ. ಸೀರೆ ಚೆನ್ನಾಗಿಲ್ಲ ಎಂಬ ಸಂದರ್ಭವನ್ನು ಇಟ್ಟುಕೊಂಡು ನಾನಾ ರೀತಿಯಲ್ಲಿ ಬೈಯುವುದನ್ನು ನೋಡಬಹುದು. ಹೆಂಡತಿಯನ್ನು 'ಸೂಳೆ' ಎಂದು ಬೈಯುತ್ತಾನೆ. ಅವನು ಬೈಗುಳದ ಅರ್ಥ ತಿಳಿಯದೆ ಸಿಟ್ಟಿನಲ್ಲಿ ಬೈಯುವಾಗ ಈ ಬೈಗುಳ ಬಳಕೆ ಮಾಡುತ್ತಾನೆ.

ವ್ಯಕ್ತಿಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಿಪಡಿಸುವ ಸಂದರ್ಭದಲ್ಲಿ ಬೈಗುಳಗಳ ಬಳಕೆಯ ನೆಲೆ:-

ನೀನು ಬೀಡಪ್ಪ ಒಳ್ಳೆ ಸಾಹುಕಾರ ಆಗಿಬಿಟ್ಟಿಯಾ. ನಿನಗೆ ಏನು ಕಡಿಮೆ ಬೀಡಲೇ ಕಂತ್ರಿಸೂಳೆಮಗನೆ ಮುಂಚೆ ಹೇಗಿದ್ದೆ ನೀನು ಹೀಗ ಹೆಂಗೆ ಆಗಿಯಲ್ಲಾ. ಲೇ ನಮಗೆ ಒಂದು ಸ್ವಲ್ಪ ಸಾಲ ಕೊಡಲೇ ನಾನು ನಿನಗೆ ಮುಂದಿನ ವರ್ಷ ವಾಪಸ್ಸು ಕೊಡತ್ತಿನಿ ಎಂದು ಸ್ನೇಹಿತ-ಸ್ನೇಹಿತನಿಗೆ ತಮಾಷೆ ಮಾಡುವುದರ ಮೂಲಕ ಮೆಚ್ಚುಗೆಯನ್ನು ಬೈಗುಳದ ಮೂಲಕ ವ್ಯಕ್ತಪಡಿಸುವುದನ್ನು ನೋಡಬಹುದು.

ಹೀಗೆ ಇನ್ನೂ ಅನೇಕ ಸಂದರ್ಭದಲ್ಲಿ ಬೈಗುಳಗಳನ್ನು ಬಳಕೆ ಮಾಡುವುದನ್ನು ನೋಡಬಹುದು. ಬೈಗುಳದ ಮಾತುಗಳನ್ನು ಸ್ನೇಹ, ಪ್ರೀತಿ, ಕೋಪ, ಮೆಚ್ಚುಗೆಯ ಸಂದರ್ಭದಲ್ಲಿ ಯಾರು-ಯಾರಿಗೆ ಹೇಗೆ ಬೈಯುತ್ತಾರೆ ಎಂಬುವುದನ್ನು ಇಲ್ಲಿ ನೋಡಲಾಗಿದೆ. ಬೈಗುಳದ ಅಭಿವ್ಯಕ್ತಿ ವಿಧಾನ ಹೇಗೆ ಇರುತ್ತದೆ ಎಂಬುದನ್ನು ಈ ಭಾಗದಲ್ಲಿ ನೋಡಲಾಗಿದೆ. ಬೈಗುಳಗಳನ್ನು ಹೆಚ್ಚಾಗಿ ಯಾರು ಬಳಸುತ್ತಾರೆ ಅದರ ಅಭಿವ್ಯಕ್ತಿ ವಿಧಾನ ಹೇಗೆ ಇರುತ್ತದೆ ಎಂಬುದನ್ನು ಸಹ ಇಲ್ಲಿ ಚರ್ಚಿಸಲಾಗಿದೆ. ಅನಕ್ಷರಸ್ಥರಾಗಲಿ, ಅಕ್ಷರಸ್ಥರಾಗಲಿ ಬೈಯುವಾಗ ಹೆಚ್ಚಾಗಿ ಹೆಣ್ಣನ್ನು ಕೇಂದ್ರವಾಗಿರಿಸಿಕೊಂಡು ತಮ್ಮ ಭಾವನೆಯನ್ನು ಬೈಗುಳದ ಮೂಲಕ ವ್ಯಕ್ತಪಡಿಸುವುದನ್ನು ಸಹ ಇಲ್ಲಿ ನೋಡಲಾಗಿದೆ. ಸಮಾಜದಲ್ಲಿ ಒಂದು ಸ್ಥಾನದಲ್ಲಿ ಇರುವ ವ್ಯಕ್ತಿಯ ಬಗ್ಗೆ ಮೆಚ್ಚುಗೆಯನ್ನು ಸೂಚಿಸುವ ಮೂಲಕ ಅನಕ್ಷರಸ್ಥರು ಬೈಗುಳಗಳನ್ನು ಬಳಸುವುದನ್ನು ಕಾಣಬಹುದು.

೫.೩. ಬೈಗುಳ ಪ್ರತ್ಯಕ್ಷ-ಪರೋಕ್ಷ ವಿಧಾನಗಳು

ಇಲ್ಲಿ ಬೈಗುಳಗಳು ಪ್ರತ್ಯಕ್ಷವಾಗಿ ಹೇಗೆ ಬಳಕೆಯಾಗುತ್ತವೆ ಮತ್ತು ಪರೋಕ್ಷವಾಗಿ ಹೇಗೆ ಬಳಕೆಯಾಗುತ್ತವೆ ಎಂಬುವುದನ್ನು ಕುರಿತು ವಿವರಿಸಲಾಗಿದೆ. ಪ್ರತ್ಯಕ್ಷವಾಗಿ ಹೆಣ್ಣು ಬೈಗುಳದಲ್ಲಿ ಹೇಗೆ ಬಳಕೆಯಾಗುತ್ತಾಳೆ ಮತ್ತು ಅದೇ ಹೆಣ್ಣು ಪರೋಕ್ಷವಾಗಿ ಬೈಗುಳಗಳಲ್ಲಿ ಹೇಗೆ ಬಳಕೆಯಾಗುತ್ತಾಳೆ ಎಂಬುವುದನ್ನು ಕುರಿತು ವಿವರಿಸಲಾಗಿದೆ. ಗಂಡಿಗೆ ಬೈದರೂ ಅಲ್ಲಿ ಹೇಗೆ ಹೆಣ್ಣು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬೈಗುಳಗಳಲ್ಲಿ ಬಳಕೆಯಾಗುತ್ತಾಳೆ, ಹೆಣ್ಣಿಗೆ ಬೈದರೂ ಅಲ್ಲಿ ಹೆಣ್ಣು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹೇಗೆ ಬಳಕೆಯಾಗುತ್ತಾಳೆ, ಹಾಗೆಯೇ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹೆಣ್ಣನ್ನು ಒಳಗೊಂಡು ಬೈಗುಳಗಳು ಹೇಗೆ ರಚನೆಯಾಗಿವೆ ಎಂಬುದುದನ್ನು ಕುರಿತು ಇಲ್ಲಿ ನಾಲ್ಕು ನೆಲೆಗಳಲ್ಲಿ ದಾಖಲಿಸಲಾಗಿದೆ. ಅವುಗಳೆಂದರೆ,

೫.೩.೧. ಹೆಣ್ಣು-ಗಂಡಿಗೆ

೫.೩.೨. ಗಂಡು-ಹೆಣ್ಣಿಗೆ

೫.೩.೩. ಸಮುದಾಯ ಹೆಣ್ಣಿಗೆ

೫.೩.೪. ಹೆಣ್ಣು ಸಮುದಾಯಕ್ಕೆ

೫.೩.೧. ಹೆಣ್ಣು-ಗಂಡಿಗೆ:-

ಹೆಣ್ಣು-ಗಂಡಿಗೆ ಬಳಸುವ ಬೈಗುಳಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬಳಕೆಯಾಗುವುದನ್ನು ನೋಡುವುದಾದರೆ, ಸಮಾಜದಲ್ಲಿ ಬಳಕೆಯಾಗುತ್ತಿರುವ ಬೈಗುಳಗಳು ಹೆಚ್ಚಾಗಿ ಪರೋಕ್ಷವಾಗಿ ಬಳಕೆಯಾಗುತ್ತವೆ ಪ್ರತ್ಯಕ್ಷವಾಗಿ ಬೈದರೂ ಅಲ್ಲಿ ಪರೋಕ್ಷವಾಗಿ ಹೆಣ್ಣು ಮತ್ತು ಗಂಡು ಅವುಗಳಲ್ಲಿ ಒಳಪಡುವುದನ್ನು ಕಾಣಬಹುದು. ಹಾಗೆಯೇ ಪರೋಕ್ಷವಾಗಿ

ಬೈದರೂ ಅಲ್ಲಿ ಹೆಣ್ಣು ಇದ್ದರೂ ಮತ್ತು ಅವಳಿಗೆ ನನ್ನನ್ನು ಉದ್ದೇಶಿಸಿಯೇ ಬೈಯುವುದು ಎಂದು ತಿಳಿದರೂ ಅವಳು ಏನು ಮಾಡದ ರೀತಿಯಲ್ಲಿ ಸಮಾಜ ಬೈಗುಳದ ಮೂಲಕ ಅವಳನ್ನು ಬಂಧಿಸಿರುವುದನ್ನು ಗಮನಿಸಬಹುದು.

ಕಂತ್ರಿಸೂಳೆಮಗ:–

ಈ ಬೈಗುಳವನ್ನು ಗಮನಿಸಿದಾಗ ಪರೋಕ್ಷವಾಗಿ ಗಂಡನ ತಾಯಿಯನ್ನು ಬೈಯುವುದನ್ನು ಕಾಣಬಹುದು. ಹಾಗೂ ನೀನು ಅನೈತಿಕ ಸಂಬಂಧದಿಂದ ಹುಟ್ಟಿದ ಮಗ ಎಂಬ ಅರ್ಥ ಇಲ್ಲಿ ಧ್ವನಿತವಾಗುತ್ತದೆ. ಹಾಗೆ ಸಮಾಜ ಬೈಗುಳಗಳನ್ನು ಸೃಷ್ಟಿಸಿವೆ.

ಇಲ್ಲಿ ಗಮನಿಸಬೇಕಾದ ಅಂಶ ಬೈಯಿಸಿಕೊಳ್ಳುವ ವ್ಯಕ್ತಿ ಕುಡುಕ ಆಗಿರಬಹುದು ಇಲ್ಲಾ ತನ್ನ ಕೈಯಿಂದ ಏನು ಆಗದ ಅಸಮರ್ಥ ವ್ಯಕ್ತಿಯಾಗಿರಬಹುದು. ಈ ರೀತಿ ಬೈಗುಳಗಳನ್ನು ಹೆಣ್ಣು ಗಂಡಿಗೆ ಬಳಸಲು ಸಾಧ್ಯವಾಗಿರುವುದು ಕೆಳವರ್ಗದ ಹೆಣ್ಣಿಗೆ ಮಾತ್ರ ಎಂದು ಹೇಳಬಹುದು. ಏಕೆಂದರೆ ಅವಳು ಗಂಡಿಗೆ ಸಮಾನವಾಗಿ ದುಡಿಯುತ್ತಾಳೆ ಮತ್ತು ಅವಳು ಗಂಡಿಗೆ ಸಮಾನವಾಗಿ ನಿಲ್ಲುವ ಧೈರ್ಯನೂ ಹೊಂದಿರುತ್ತಾಳೆ. ಆದರೆ ಮೇಲುವರ್ಗದ ಹೆಣ್ಣು ಮಕ್ಕಳ ಪರಿಸ್ಥಿತಿ ಬೇರೆಯಾಗಿರುತ್ತದೆ. ಅವರು ಎಷ್ಟೇ ಮುಂದುವರೆದರೂ ಕೆಳವರ್ಗದ ಹೆಣ್ಣಿಗೆ ಇರುವ ಧೈರ್ಯ ಅವರಿಗೆ ಇರುವುದಿಲ್ಲ ಎಂದು ಹೇಳಬಹುದು. ಗಂಡನೇ ದೇವರು ಎಂಬ ನಂಬಿಕೆ ಅವರಲ್ಲಿ ಇರುವುದರಿಂದ ಗಂಡನನ್ನು ಬೈಯುವುದು ಕಡಿಮೆ ಎಂದು ಹೇಳಬಹುದು. ಹಾಗೆ ಸಮಾಜ ಹೆಣ್ಣನ್ನು ನಂಬಿಸಿದೆ ಎಂದು ಹೇಳಬಹುದು.

ಇದೇ ಬೈಗುಳವನ್ನು ಇನ್ನೊಂದು ಸಂದರ್ಭದಲ್ಲಿ ಗಮನಿಸುವುದಾದರೆ, ಹೆಂಡತಿ ತನ್ನ ಗಂಡನನ್ನು ಪರೋಕ್ಷವಾಗಿ ಕಂತ್ರಿಸೂಳೆಮಗ ಎಂದು ಬೈಯುತ್ತಾಳೆ. ಅಂದರೆ ಗಂಡನಿಗೆ ನೇರವಾಗಿ ಬೈಯಲು ಆಗದ ಕಾರಣ ಪರೋಕ್ಷವಾಗಿ ಅಂದರೆ ತನ್ನ ಗಂಡ ಮನೆಯಲ್ಲಿ ಇಲ್ಲದ ಸಂದರ್ಭದಲ್ಲಿ ಮಕ್ಕಳ ಎದುರಿಗೆ ಗಂಡನನ್ನು ಉದ್ದೇಶಿಸಿ ಬೈಯುವುದನ್ನು ಸಹ ಕಾಣಬಹುದು. ಒಟ್ಟಿನಲ್ಲಿ ಪ್ರತ್ಯಕ್ಷವಾಗಿ ಇರಬಹುದು ಇಲ್ಲವೇ ಪರೋಕ್ಷವಾಗಿ ಇರಬಹುದು ಹೆಣ್ಣು ಮಾತ್ರ ಬೈಗುಳಕ್ಕೆ ಒಳಗಾಗುವುದನ್ನು ನಾವು ನೋಡಬಹುದು.

ಮಿಂಡ್ರಿಗುಟ್ಟಿದೋನು:–

ಒಂದು ಹೆಣ್ಣು ಪರಪುರುಷನನ್ನು ಬೈಯುವಾಗ ಸಾಮಾನ್ಯವಾಗಿ ಈ ಬೈಗುಳದ ಪದ ಬಳಕೆಯಾಗುವುದನ್ನು ನೋಡಬಹುದು. ಅವನಿಗೆ ನೇರವಾಗಿಯೇ ಮಿಂಡ್ರಿಗುಟ್ಟಿದೋನು ಸುಮ್ಮನೆ ಹೋಗೋ ಇಲ್ಲದ ಧಿಮಾಕ ಮಾಡಬೇಡ ನನ್ನ ಹತ್ತಿರ ಎಂದು ನೇರವಾಗಿ ಬೈಯುವುದನ್ನು ನೋಡಬಹುದು. ಮಿಂಡ್ರಿ ಪದದ ಅರ್ಥವನ್ನು ಗಮನಿಸುವುದಾದರೆ ಬೇರೆಯ ಹೆಣ್ಣಿನ ಸಹವಾಸಕ್ಕೆ ಒಳಗಾದವನು ಎಂಬರ್ಥವನ್ನು ನೀಡುತ್ತದೆ. 'ಮಿಂಡ್ರಿ' ಎಂಬುದಷ್ಟೇ ಬೇರೆ ಹೆಣ್ಣಿನ ಜೊತೆ ಅನೈತಿಕ ಚಟುವಟಿಕೆಯುಳ್ಳವನು ಎಂದರ್ಥ.

ಮಿಂಡ್ರಿಗುಟ್ಟಿದೋನು ಎಂದರೆ ತಾಯಿಯ ಅನೈತಿಕ ಚಟುವಟಿಕೆಯಿಂದ ಹುಟ್ಟಿದವನು ಎಂದಾಗುತ್ತದೆ. ಹೆಣ್ಣು ಹೇಗೆ ಪರೋಕ್ಷವಾಗಿ ಬೈಗುಳಕ್ಕೆ ಒಳಗಾಗುತ್ತಾಳೆಯೋ ಹಾಗೆಯೇ ಗಂಡು ಸಹ ಇಲ್ಲಿ ಪರೋಕ್ಷವಾಗಿ ಬೈಗುಳಕ್ಕೆ ಒಳಗಾಗುವುದನ್ನು ಗಮನಿಸಬಹುದು.

ಇದೇ ಬೈಗುಳವನ್ನು ತಾಯಿ ಮಗನಿಗೆ ಬೈಯುವಾಗ ಇನ್ನೊಂದು ಅರ್ಥವನ್ನು ನೀಡುತ್ತದೆ. ಹೇಗೆಂದರೆ ತಾಯಿಯ ಸಿಟ್ಟು ಅತಿರೇಕಕ್ಕೆ ಹೊದಾಗ ಈ ಬೈಗುಳವನ್ನು ಬಳಸುವ ಸಂದರ್ಭವನ್ನು ನೋಡಬಹುದು. ಆದರೆ ಇಲ್ಲಿ ಪುರುಷನಿಗೆ ಬೈದರೂ ಪರೋಕ್ಷವಾಗಿ ತನ್ನನ್ನೂ ತಾನೇ ಬೈದುಕೊಳ್ಳುವ ಅಂಶವನ್ನು ಗಮನಿಸಬಹುದು. ಗಂಡು ಬೈಯಿಸಿಕೊಳ್ಳುತ್ತಿದ್ದರೂ ಹೆಣ್ಣು ಪರೋಕ್ಷವಾಗಿ ಈ ಬೈಗುಳದಲ್ಲಿ ಬಳಕೆಯಾದರೂ ಪ್ರತ್ಯಕ್ಷವಾಗಿ ತನ್ನನ್ನು ತಾನೇ ಬೈದುಕೊಳ್ಳುತ್ತಾಳೆ. ಆದರೆ ಅವಳಿಗೆ ಆ ಬೈಗುಳದ ಅರ್ಥ ತಿಳಿಯದ ಹಾಗೆ ಸಮಾಜ ಬೈಗುಳಗಳನ್ನು ನಿರೂಪಿಸಿದೆ ಎಂದು ಹೇಳಬಹುದು. ಇಲ್ಲಿ ಮಗನಿಗೆ ಬೈಯುವದರಿಂದ ತಾನು ಅನೈತಿಕ ಸಂಬಂಧವುಳ್ಳವಳು ಎಂಬ ಅರ್ಥ ಪ್ರಚೋದಿಸುತ್ತದೆ. ಹಾಗೆ ನೀನು ಅನೈತಿಕ ಸಂಬಂಧದಿಂದ ಹುಟ್ಟಿದ ಮಗ ಎಂಬರ್ಥವನ್ನು ಈ ಬೈಗುಳ ಸೂಚಿಸುತ್ತದೆ ಎಂದು ಹೇಳಬಹುದು.

ಸಂಗ್ಯಾ:–

ಇದು ಹೆಂಗಸರು–ಗಂಡಸರಿಗೆ ಬೈಯುವ ಪದವಾಗಿದೆ. ಸಂಗ್ಯಾ ಮಾಡಿದ್ಯಾಂಗೆ ಮಾಡಿತ್ತಿಯಲ್ಲಾ ಎಂದು ಬೈಯುವುದನ್ನು ಗಮನಿಸಬಹುದು. ಗಂಡಸರು ಈ ಪದವನ್ನು ಬಳಕೆ ಮಾಡುತ್ತಾರೆ. ಇವನಾವನು ಸಂಗ್ಯಾ ಹೆಂಗಸು ಮಾಡಿದಾಂಗೆ ಮಾಡತ್ತಾನೆ ಎಂದು ಬೈಯುವಾಗ ಬಳಕೆ ಮಾಡುತ್ತಾರೆ. ಇಲ್ಲಿ ಬೈಯುವುದು ಪುರುಷನನ್ನು ಆದರೆ ಪರೋಕ್ಷವಾಗಿ ಹೆಣ್ಣಿನ ನಡವಳಿಕೆಯನ್ನು ಕುರಿತು ಬೈಯುತ್ತಾರೆ. ಅಂದರೆ ಸಮಾಜದಲ್ಲಿ ಹೆಣ್ಣು ಅಂದರೆ ಹೀಗೆ ಇರಬೇಕು ಅವರ ಹಾವಾಭಾವ ನಡವಳಿಕೆ ಹೀಗೆ ಇರಬೇಕು ಎಂದು ಮತ್ತು ಗಂಡು ಅಂದರೆ ಹೀಗೆ ದಷ್ಟಪುಷ್ಟವಾಗಿ, ಗಡುಸಾಗಿರಬೇಕು ಎಂಬುದು ಸಮಾಜದಲ್ಲಿ ತಲಾ ತಲಾಂತರದಿಂದ ಬಂದ ಪದ್ಧತಿಯಾಗಿದೆ. ಆದರೆ ಅದಕ್ಕೆ ವಿರುದ್ಧವಾದ ನಡವಳಿಕೆಯಲ್ಲಿದ್ದರೆ ಸಮಾಜದಲ್ಲಿ ಬಳಕೆಯಲ್ಲಿರುವ ಬೈಗುಳಕ್ಕೆ ಪಾತ್ರರಾಗುತ್ತಾರೆ. ಅಂದರೆ ಗಂಡಸಿನ ನಡವಳಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಅವನನ್ನು ಸಂಗ್ಯಾ ಹೆಂಗಸು ಮಾಡಿದಾಂಗೆ ಮಾಡತ್ತಿಯಲ್ಲಾ ಎಂದು ಪ್ರತ್ಯಕ್ಷವಾಗಿ ಹೀಯಾಳಿಸುವುದನ್ನು ಕಾಣಬಹುದು. ಹಾಗೆಯೇ ಹೆಣ್ಣಿನ ನಡವಳಿಕೆಯಲ್ಲಿ ವ್ಯತ್ಯಾಸವಾದರೂ ಅವಳು ಸಮಾಜದ ದೃಷ್ಟಿಯಲ್ಲಿ ಬೈಗುಳಕ್ಕೆ ಗುರಿಯಾಗುತ್ತಾಳೆ. ಹೀಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಈ ಬೈಗುಳ ಬಳಕೆಯಾಗುವುದನ್ನು ಕಾಣಬಹುದು. ಒಬ್ಬ ಗಂಡು ಹೆಣ್ಣಿನ ರೀತಿಯಲ್ಲಿ ವರ್ತನೆ ಮಾಡಿದರೆ ಅವನನ್ನು ಸಂಗ್ಯಾ ಎಂದು ಬೈಯುತ್ತಾರೆ. ಗಂಡು ಆ ರೀತಿಯಲ್ಲಿ ವರ್ತನೆ ಮಾಡದೆ ಇದ್ದರೂ ಕೆಲವು ಸಾರಿ ಬೈಯುವಾಗ ಸಹಜವಾಗಯೇ ಬಳಕೆಯಾಗುತ್ತದೆ. ಈ ರೀತಿಯ ಬೈಗುಳವನ್ನು ಗಂಡಿಗೆ

ಬಳಿಸಿದರೆ ಅವನಿಗೆ ಸಿಟ್ಟು ಬೇಗ ಬರುತ್ತದೆ ಮತ್ತು ಅವನ ಸಿಟ್ಟು ಮತ್ತಷ್ಟು ಜಾಸ್ತಿ ಆಗುತ್ತದೆ ಎಂಬ ಕಾರಣಕ್ಕೆ ಈ ಬೈಗುಳ ಬಳಕೆ ಮಾಡುತ್ತಾರೆ. ಸಾಮಾನ್ಯವಾಗಿ ಬಳಕೆ ಮಾಡುವ ಬೈಗುಳದ ಅರ್ಥಕ್ಕೂ ಜಗಳದ ಸಂದರ್ಭದಲ್ಲಿ ಬಳಕೆ ಮಾಡುವ ಬೈಗುಳಗಳ ಅರ್ಥದಲ್ಲಿ ವ್ಯತ್ಯಾಸವಿದೆ. ಒಂದು ಹೆಣ್ಣಿನ ಲಕ್ಷಣ ಹೇಗೆ ಬೈಗುಳವಾಗಿ ಗಂಡಿಗೆ ಬೈಯುವಾಗ ಬಳಕೆಯಾಗುತ್ತದೆ ಎಂಬುದು ಇಲ್ಲಿ ಗಮನಿಸಬೇಕಾದ ವಿಷಯವಾಗಿದೆ.

ಪಿಂಜರ ಸೂಳೆಮಗ:-

ಈ ಬೈಗುಳದಲ್ಲಿ ಗಮನಿಸಬೇಕಾದ ಅಂಶ ಜಾತಿಯನ್ನು ಉದ್ದೇಶಿಸಿ ಬೈಯುವುದರ ಮೂಲಕ ಹೆಣ್ಣನ್ನು ಬೈಯುವುದನ್ನು ಕಾಣಬಹುದು. ಈ ಪದವನ್ನು ಹೆಣ್ಣು ಮತ್ತು ಗಂಡು ಇಬ್ಬರೂ ಬಳಕೆ ಮಾಡುತ್ತಾರೆ. ಹೆಚ್ಚಾಗಿ ಹೆಂಗಸರು ಮಕ್ಕಳಿಗೆ ಮತ್ತು ಗಂಡಸರಿಗೆ ಬೈಯುವಾಗ ಬಳಕೆ ಮಾಡುವುದನ್ನು ನೋಡಬಹುದು. ಪಿಂಜರ ಎಂಬ ಪದ ಜಾತಿಸೂಚಕವಾದದ್ದು ಇದಕ್ಕೆ ಸೂಳೆ ಎಂಬ ಸ್ತ್ರೀವಾಚಕ ಬೈಗುಳ ಸೇರಿಸಿ ಗಂಡಿಗೆ ಬೈಯುವುದನ್ನು ನೋಡಬಹುದು. ಇಲ್ಲಿ ಒಂದು ಅಂಶವನ್ನು ಗಮನಿಸುವುದಾದರೆ ಗಂಡು ಅದೇ ಜಾತಿ ಆಗಿರಬೇಕು ಎಂದೇನಿಲ್ಲ. ಯಾವ ಜಾತಿಯ ಗಂಡಸು ಆದರೂ ಬೈಯುವಾಗ ಈ ಪದ ಬಳಕೆ ಮಾಡುತ್ತಾರೆ. ಗಂಡಸನ್ನು ಬೈಯುವುದರ ಜೊತೆಗೆ ಹೆಣ್ಣನ್ನು ಮತ್ತು ಜಾತಿಯನ್ನು ಪರೋಕ್ಷವಾಗಿ ಬೈಯುವುದನ್ನು ನಾವು ಇಲ್ಲಿ ನೋಡಬಹುದು. ಪಿಂಜಾರರು ಹತ್ತಿ ಹಿಂಜುವ ವೃತ್ತಿಯನ್ನು ಅವಲಂಬಿಸಿದ್ದಾರೆ. ಇವರು ಅತ್ಯಂತ್ಯ ಕನಿಷ್ಟ ಸ್ಥಿತಿಯಲ್ಲಿರುತ್ತಾರೆ. ಹಾಗಾಗಿ ಪಿಂಜಾರರಂಥವನು. ಕನಿಷ್ಟಿನ ಸೂಳೆಗೆ ಮಗ ಎನ್ನುವ ಅರ್ಥ ಈ ಬೈಗುಳಕ್ಕೆ ಇರುತ್ತದೆ. ಇದು ಮಕ್ಕಳಿಗಾಗಿ ಬಳಸುವಾಗ ಪಡೆದುಕೊಳ್ಳುವ ಅರ್ಥಕ್ಕೂ, ಜಗಳದ ಸಂದರ್ಭದಲ್ಲಿ ಬಳಸುವಾಗ ಪಡೆದುಕೊಳ್ಳುವ ಅರ್ಥಕ್ಕೂ ವ್ಯತ್ಯಾಸಗಳಿರುತ್ತವೆ. ಮಕ್ಕಳಿಗೆ ಅವರಂತೆ ಕೆಟ್ಟ ಸ್ಥಿತಿಯಲ್ಲಿರುವವನು ಎನ್ನುವ ಅರ್ಥದಲ್ಲಿ ಬಳಕೆಯಾದರೆ, ಜಗಳದ ಸಂದರ್ಭದಲ್ಲಿ ಪಿಂಜಾರರಿಗೆ ಹುಟ್ಟಿದವನು ಎನ್ನುವ ಅರ್ಥ ಬರುತ್ತದೆ.

ಮಾದಿಗ ಸೂಳೆಮಗ:-

ಮಾದಿಗ ಸೂಳೆಮಗ ಎಂಬ ಬೈಗುಳ ಎಲ್ಲರಿಗೂ ಬಳಕೆಯಾಗುತ್ತದೆ. ಅಂದರೆ ಇವರು ಸಾಮಾಜಿಕ ಸ್ಥಾನಮಾನದಿಂದ ದೂರ ಉಳಿದವರು, ಇವರು ಕೆಳವರ್ಗದವರು ಎಂಬ ಭಾವನೆ ಸಮಾಜದ ಜನರಲ್ಲಿ ಇದೆ. ಅವರು ಸೂಕ್ಷ್ಮತೆ ಇಲ್ಲದವರು ಎಲ್ಲ ವಿಷಯದಲ್ಲೂ ಒರಟಾಗಿ ನಡೆದುಕೊಳ್ಳುತ್ತಾರೆ ಎಂಬ ನೆಲೆಯಲ್ಲಿ ಈ ಬೈಗುಳ ಹುಟ್ಟಿಕೊಂಡಿದೆ ಎಂದು ಹೇಳಬಹುದು. ಇಲ್ಲಿ ಪ್ರತ್ಯಕ್ಷವಾಗಿ ಜಾತಿಯನ್ನು ಎತ್ತಿ ಬೈಯುತ್ತಾರೆ ಮತ್ತು ಪರೋಕ್ಷವಾಗಿ ಹೆಣ್ಣು ಬೈಗುಳಕ್ಕೆ ಒಳಗಾಗುತ್ತಾಳೆ. ಕೆಲವು ಸಂದರ್ಭದಲ್ಲಿ ಅದೇ ಜಾತಿಯವರಿಗೆ ಬೈಯುವಾಗಲೂ ಈ ಬೈಗುಳವನ್ನು ಬಳಕೆಮಾಡುವುದನ್ನು ನೋಡಬಹುದು. ಬೇರೆ ಜಾತಿಯ ವ್ಯಕ್ತಿಗೂ ಬೈಯುವಾಗ ಈ ಬೈಗುಳ ಬಳಕೆ ಮಾಡುತ್ತಾರೆ. ಕೆಳವರ್ಗದವರಿಗೆ ಹೋಲಿಸಿ

ಬೈಯುವುದರಿಂದ ಅವನ ಸಿಟ್ಟು ಅತೀರೇಕಕ್ಕೆ ಹೋಗುತ್ತದೆ ಎಂಬ ಕಾರಣಕ್ಕೆ ಕೆಳವರ್ಗದ ಜಾತಿಗೆ ಹೋಲಿಸಿ ಬೈಯುವುದನ್ನು ಕಾಣಬಹುದು. ಸೂಕ್ಷ್ಮವಾಗಿ ಈ ಬೈಗುಳದ ಅರ್ಥವನ್ನು ತಿಳಿಯುವುದಾದರೆ ನೀನು ಕೀಳು ಜಾತಿಯವನಿಗೆ ಹುಟ್ಟಿದ ಮಗ ಎಂಬರ್ಥವನ್ನು ನೀಡುತ್ತದೆ. ಮತ್ತೊಂದು ಅರ್ಥ ನಿನ್ನ ತಾಯಿ ಅಕ್ರಮ ಸಂಬಂಧವನ್ನು ಹೊಂದಿದವಳು ಎಂಬ ತಾಯಿ ಕೇಂದ್ರಿತ ಬೈಗುಳವಾಗಿ ಕಂಡುಬರುತ್ತದೆ. ಈ ಬೈಗುಳ ಗಂಡಿಗೆ ಬಳಕೆಯಾದರೂ ಸಹ ಅಲ್ಲಿ ಹೆಣ್ಣು ಬೈಗುಳದಲ್ಲಿ ಪರೋಕ್ಷವಾಗಿ ಒಳಗೊಳ್ಳುವುದನ್ನು ನಾವು ಗಮನಿಸಬಹುದು.

ಜೋಗಮ್ಮನಂತೋನು:–

ಈ ಬೈಗುಳದ ಪದ ಗಂಡು ಮತ್ತು ಹೆಣ್ಣು ಇಬ್ಬರಿಗೂ ಬಳಕೆ ಮಾಡುವಂತಹದಾಗಿದೆ. ಇದನ್ನು ಗಂಡಸರಿಗೆ, ಮಕ್ಕಳಿಗೆ ಬೈಯುವಾಗ ಬಳಕೆ ಮಾಡುತ್ತಾರೆ. ಜೋಗಮ್ಮ ಎಂಬ ಪದದ ಅರ್ಥ ದೇವರಿಗೆ ಸಂಬಂಧಿಸಿದ ಹೆಣ್ಣು ಮತ್ತು ಮುತ್ತು ಕಟ್ಟಿಕೊಂಡಿರುವ ಹೆಣ್ಣು ಎಂದರ್ಥ. ಮುತ್ತು ಕಟ್ಟಿಕೊಳ್ಳುವುದು ಎಂದರೆ ದೇವರಿಗೆ ತನ್ನನ್ನೂ ತಾನು ಅರ್ಪಿಸಿಕೊಳ್ಳುವುದು. ಇವಳು ಮನೆ ಮನೆಗೆ ಹೋಗಿ ಬೇಡಿಕೊಂಡು ಜೀವನ ನಿರ್ವಹಿಸುವವಳು (ಭಿಕ್ಷೆ ಕೇಳುವುದು) ಎಂದು ಇವರು ತಮ್ಮ ಸೇವೆ ದೇವರಿಗೆ ಎಂಬ ನಂಬಿಕೆ ಹೊಂದಿದವರು. ಇಂತಹ ಹೆಣ್ಣಿಗೆ ಹೋಲಿಕೆ ಮಾಡಿ ಬೈಯುತ್ತಾರೆ. ಗಂಡಸರು ಸಹ ಜೋಗಮ್ಮ ಆಗುವ ಒಂದು ಪದ್ಧತಿ ಇದೆ. ಸಮಾಜದ ದೃಷ್ಟಿಯಲ್ಲಿ ಹೆಣ್ಣಿಗೆ ಮಾತ್ರ ಅದು ಸೀಮಿತ ಎಂದು ತಿಳಿದಾಗ ಗಂಡಿಗೆ ಬೈಯುವಾಗ ಅಂದರೆ ಗಂಡಿನಲ್ಲಿ ಜೋಗಮ್ಮನ ನಡುವಳಿಕೆ ಕಂಡುಬಂದರೆ ಆಗ ಜೋಗಮ್ಮನಂತೋನೆ, ಜೋಗಮ್ಮನೇನು ನೀನು, ಜೋಗಮ್ಮ ಮಾಡಿದಾಂಗೆ ಮಾಡಿತ್ತಿಯಲ್ಲ ಎಂದು ಬೈಯುತ್ತಾರೆ. ಇಲ್ಲಿ ಹೆಣ್ಣು ಪರೋಕ್ಷವಾಗಿ ಬೈಯಿಸಿಕೊಳ್ಳುವುದು ಕಂಡುಬರುತ್ತದೆ. ಜೋಗಮ್ಮ ಅಲ್ಲದೆ ಇರುವವನಿಗೆ ಬೈಯುವುದನ್ನು ಕಾಣಬಹುದು. ಜೋಗಮ್ಮನಿಗೆ ಕೆಲವು ಲಕ್ಷಣಗಳಿವೆ. ಗಂಡಿನಲ್ಲಿ ಜೋಗಮ್ಮನ ಯಾವುದೇ ಒಂದು ಲಕ್ಷಣ ಕಾಣಿಸಿಕೊಂಡರೆ ಅವನಿಗೆ ಬೈಯುವಾಗ ಬಳಕೆ ಮಾಡುತ್ತಾರೆ.

೫.೩.೨. ಗಂಡು–ಹೆಣ್ಣಿಗೆ:–

ಇಲ್ಲಿ ಗಂಡು ಹೆಣ್ಣಿಗೆ ಬೈಯುವುದನ್ನು ನೋಡಬಹುದು. ಹಾಗೂ ಗಂಡು–ಗಂಡಿಗೆ ಬೈದರೂ ಅಲ್ಲಿ ಹೆಣ್ಣು ಪರೋಕ್ಷವಾಗಿ ಪ್ರತ್ಯಕ್ಷವಾಗಿ ಹೇಗೆ ಬೈಗುಳಕ್ಕೆ ಒಳಗಾಗುತ್ತಾಳೆ ಎಂಬುವುದನ್ನು ಇಲ್ಲಿ ಚರ್ಚಿಸಲಾಗಿದೆ.

ಕಂತ್ರಿಸೂಳೆ:–

ಗಂಡ–ಹೆಂಡತಿಯರ ನಡುವೆ ಜಗಳ ಉಂಟಾದಾಗ ಈ ಪದ ಸಾಮಾನ್ಯವಾಗಿ ಬಳಕೆಯಾಗುತ್ತದೆ. ಗಂಡ ಹೆಂಡತಿಗೆ ಬೈಯುವಾಗ ಕಂತ್ರಿಸೂಳೆ ಎಂದು ನೇರವಾಗಿ ಬೈಯುತ್ತಾನೆ. ನೀನು ಮೋಸಗಾರ ಸೂಳೆ ಎಂಬರ್ಥವನ್ನು ಈ ಬೈಗುಳ ನೀಡುತ್ತದೆ. ಇಲ್ಲಿ

ಹೆಣ್ಣು ನೇರವಾಗಿ ಬೈಯಿಸಿಕೊಳ್ಳುವುದರಿಂದ ಸೂಳೆ ಎಂದು ಪ್ರತ್ಯಕ್ಷವಾಗಿ ಅಪವಾದ ಮಾಡುವುದನ್ನು ನೋಡಬಹುದು. ಹೆಣ್ಣು ಬೈಯಿಸಿಕೊಂಡರೂ ನೇರವಾಗಿ ತಿರುಗಿ ಬೈಯಲು ಅವಳು ಅಸಮರ್ಥಳಾಗಿರುತ್ತಾಳೆ. ಹಾಗೆ ಹೆಣ್ಣಿನ ಪರಿಸ್ಥಿತಿ ಸಮಾಜದಲ್ಲಿ ರೂಢಿಗತವಾಗಿ ಬಂದಿದೆ. ಗಂಡನಿಗೆ ಅರಿವು ಇಲ್ಲದಂತೆ ಹೆಂಡತಿಗೆ ಸೂಳೆ ಎಂದು ಬೈಯುತ್ತಾನೆ ಅವಳ ಮೇಲೆ ಇಲ್ಲದ ಅಪವಾದ ಹೋರಿಸುವ ರೀತಿಯಲ್ಲಿ ಸಮಾಜದಲ್ಲಿ ಬೈಗುಳಗಳು ರಚನೆಯಾಗಿವೆ.

ನಿಮ್ಮಅಮ್ಮನ್:–

ಈ ಬೈಗುಳ ಗಂಡ ಹೆಂಡತಿಗೆ ಮತ್ತು ಮಗನಿಗೆ ಬೈಯುವ ಸಂದರ್ಭದಲ್ಲಿ ಬಳಕೆಯಾಗುತ್ತದೆ. ಒಂದೇ ಬೈಗುಳ ಎರಡು ಭಿನ್ನ ಅರ್ಥವನ್ನು ನೀಡುತ್ತದೆ.

ಗಂಡ ಹೆಂಡತಿಗೆ ಬೈಯುವಾಗ ನಿಮ್ಮ ಅಮ್ಮನ್ ಎಂದು ಬೈಯುವಾಗ ಇಲ್ಲಿ ಹೆಂಡತಿಯ ತಾಯಿ ಪ್ರರೋಕ್ಷವಾಗಿ ಒಳಗಾಗುತ್ತಾಳೆ.

ಪ್ರ: ನಿಮ್ಮ ಅಮ್ಮನ್ ನಿನಗೆ ಹೇಳಿದ್ದೆ ತಾನೇ ಅಲ್ಲಿಗೆ ಹೋಗಬೇಡ ಆದರೂ ಹೋಗಿಯಾ ಎಂದು ಬೈಯುವಾಗ ಈ ಪದ ಬಳಕೆಯಾಗುತ್ತದೆ.

ತಂದೆ ಮಗನಿಗೆ ಬೈಯುವಾಗ ನಿಮ್ಮ ಅಮ್ಮನ್ ಎಷ್ಟು ಎದರು ಐದಿಯಾ ಅಲ್ಲಾ ಹೇಳಿದ್ದು ಮಾತೇ ಕೇಳತ್ತಿಲ್ಲ ಎಂದಾಗ ಇಲ್ಲಿ ಮಗನ ತಾಯಿ ಅಂದರೆ ಹೆಂಡತಿ ಪ್ರತ್ಯಕ್ಷವಾಗಿ ಬೈಗುಳಕ್ಕೆ ಒಳಗಾಗುವುದನ್ನು ಕಾಣಬಹುದು. ಇಲ್ಲಿ ಈ ಬೈಗುಳ ನಕಾರಾತ್ಮಕವಾಗಿ ಬಳಕೆಯಾಗುತ್ತದೆ.

ಬಸವಿ:–

ಈ ಬೈಗುಳವು ಗಂಡು ಹೆಣ್ಣಿಗೆ ಬಳಸುವುದನ್ನು ನೋಡಬಹುದು. ಇಲ್ಲಿ ಬಸವಿ ಎಂದರೆ ದೇವರಿಗೆ ಬಿಟ್ಟ ಹೆಣ್ಣು ಎಂದರ್ಥ. ಬಸವಿ ಬೀಡುವುದು ಹೆಚ್ಚಾಗಿ ಕೆಳ ಸಮುದಾಯದಲ್ಲಿ ಮಾತ್ರ. ಇದು ಬೈಗುಳವಾಗಿ ಬಳಕೆಯಾಗುವುದು ಬಸವಿಯ ವರ್ತನೆಯನ್ನು ಆಧಾರಿಸಿದೆ. ಬಸವಿ ಅಂದರೆ ಹೆಚ್ಚು ಅಲಂಕಾರ ಭೂಷಿತಳಾಗಿರುತ್ತಾಳೆ ಮತ್ತು ತನ್ನ ಇಚ್ಛೆಯಂತೆ ಬದುಕುವ ಸ್ವತಂತ್ರವನ್ನು ಹೊಂದಿರುತ್ತಾಳೆ. ಹಾಗೆ ತಾನು ಯಾವ ಪುರುಷನ ಜೊತೆಗೆ ಸಂಬಂಧವನ್ನು ಇಟ್ಟುಕೊಳ್ಳಬಹುದು. ಇದು ಬಸವಿಯ ಲಕ್ಷಣವಾಗಿದೆ. ಹಾಗಾಗಿ ಹೆಚ್ಚು ಅಲಂಕಾರ ಮಾಡಿಕೊಂಡ ಹೆಣ್ಣನ್ನು ಲೇ ಬಸವಿ ಮಾಡಿದಾಂಗೆ ಮಾಡತ್ತಾಳೆ ಎಂದು ಬೈಯುವಾಗ ಈ ಪದ ಬಳಕೆಯಾಗುತ್ತದೆ. ಆ ರೀತಿಯ ವರ್ತನೆಯನ್ನು ಸಾಮಾನ್ಯ ಹೆಣ್ಣು ಮಾಡಿದಾಗಲೂ ಬಸವಿ ಎಂದು ಬೈಯುವುದನ್ನು ನೋಡಬಹುದು. ಇಲ್ಲಿ ಹೆಣ್ಣು ಪ್ರತ್ಯಕ್ಷವಾಗಿ ಬೈಗುಳಕ್ಕೆ ಒಳಪಡುತ್ತಾಳೆ.

ಮಿಂಡ್ರುಸೂಳೆ:-

ಗಂಡ ಹೆಂಡತಿಗೆ ಬೈಯುವಾಗಲೂ ಬಳಕೆಮಾಡುತ್ತಾನೆ ಮತ್ತು ಪರ ಹೆಂಗಸಿಗೆ ಬೈಯುವಾಗಲೂ ಈ ಬೈಗುಳವನ್ನು ಬಳಕೆ ಮಾಡುತ್ತಾನೆ. ತನ್ನ ಹೆಂಡತಿಯ ಬಗ್ಗೆ ತಾನೆ ಅನುಮಾನ ಪಡುವ ರೀತಿಯಲ್ಲಿ ಬೈಗುಳ ರಚನೆಯಾಗಿದೆ. ಇದು ಹೆಣ್ಣು ಹಲವಾರು ಗಂಡಸರ ಜೋತೆ ಸಂಬಂಧ ಹೊಂದಿದ್ದಾಳೆ ಎಂಬರ್ಥವನ್ನು ನೀಡುತ್ತದೆ. ಇಲ್ಲಿ ಹೆಂಡತಿಯ ಮತ್ತೊಂದು ಅನೈತಿಕ ಸಂಬಂಧವನ್ನು ಮಿಂಡ ಎಂಬ ಪದ ಹೇಳುತ್ತದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಬೈದರೂ ಆ ಬೈಗುಳದಲ್ಲಿ ಹೆಚ್ಚಾಗಿ ಹೆಣ್ಣು ಬಳಕೆಯಾಗುತ್ತಾಳೆ. ಅದು ಪ್ರೀತಿಯಿಂದ ಬೈದರೂ ಕೋಪದಲ್ಲಿ ಬೈದರೂ, ಗಂಡಿಗೆ ಆದರೂ ಸರಿ ಹೆಣ್ಣಿಗೆ ಆದರೂ ಸರಿ ಅಲ್ಲಿ ಹೆಣ್ಣಿನ ಮೂಲಕವೇ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಬೈಯುವುದು ಒಂದು ರೂಢಿಗತವಾಗಿ ಬಂದಿದೆ ಎಂದು ಹೇಳಬಹುದು.

೫.೩.೩. ಸಮುದಾಯ-ಹೆಣ್ಣಿಗೆ:-

ಸಮುದಾಯಗಳಲ್ಲಿ ಬೈಗುಳಗಳ ಸ್ವರೂಪ ಹೇಗಿದೆ ಅದರಲ್ಲೂ ಹೆಣ್ಣು ಸಮುದಾಯದ ಬೈಗುಳಗಳಿಗೆ ಹೇಗೆ ಒಳಪಡುತ್ತಾಳೆ, ಹೆಣ್ಣಿನಲ್ಲಿ ಸಮುದಾಯ ಏನನ್ನು ಬಯಸುತ್ತದೆ, ಅಂದರೆ ಹೆಣ್ಣಿನ ನಡವಳಿಕೆ ಹೀಗೆ ಇರಬೇಕು ಅದನ್ನು ಮೀರಿ ಅಥವಾ ಸಮುದಾಯಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಬೈಗುಳಕ್ಕೆ ಹೆಣ್ಣು ಹೇಗೆ ಒಳಗಾಗುತ್ತಾಳೆ ಎಂಬ ಅಂಶವನ್ನು ಹಾಗೂ ಜಾತಿ, ವರ್ಗ, ಅಧಿಕಾರ, ಗಂಡು-ಹೆಣ್ಣು ಇವುಗಳನ್ನು ಸಮುದಾಯ ಹೇಗೆ ಗ್ರಹಿಸಿಕೊಂಡಿದೆ ಎಂಬುದನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಸಮುದಾಯದ ದೃಷ್ಟಿಯಲ್ಲಿ ಹೆಣ್ಣು ಹೀಗೆ ಇರಬೇಕು ಇಲ್ಲದೆ ಇದ್ದರೆ ಅವಳು ಬೈಗುಳಕ್ಕೆ ಒಳಗಾಗುತ್ತಾಳೆ. ಅಂದರೆ ವಿವಾಹವಾದ ಹೆಣ್ಣು ಹೀಗೆ ಇರಬೇಕು, ವಿವಾಹ ಆಗದೇ ಇರುವ ಹೆಣ್ಣು ಹೀಗೆ ಇರಬೇಕು, ಅಕ್ಕ ತಂಗಿಯರು ಅಂದರೆ ಹೀಗೆ ಇರಬೇಕು ಮತ್ತು ತಾಯಿ ಅಂದರೆ ಹೀಗೆ ಇರಬೇಕು ಎಂದು ಸಮುದಾಯ ಹೇಳಿದೆ. ಒಂದು ವೇಳೆ ಸಮುದಾಯಕ್ಕೆ ತದ್‌ವಿರುದ್ಧವಾಗಿ ನಡೆದುಕೊಂಡರೆ ಅವರು ಸಮುದಾಯದ ಬೈಗುಳಕ್ಕೆ ಗುರಿಯಾಗುತ್ತಾರೆ.

ಕೆಲವು ಸಮುದಾಯದಲ್ಲಿ ಚಿಕ್ಕ ಮಕ್ಕಳಿಗೆ ಸಿಟ್ಟಿನಿಂದ ಮತ್ತು ಪ್ರೀತಿಯಿಂದ ಮುಂಡೇದೆ ಎಂದು ಬೈಯುತ್ತಾರೆ. ಇದು ವಿಧವೆ ಎಂಬ ಅರ್ಥದ ನೆಲೆಗೆ ಬರುವುದಿಲ್ಲ. ತಂದೆ ಮಗನಿಗೆ ಬೈಯುವ ನೆಲೆಯಲ್ಲಿ ಮಗಳಿಗೆ ಬೈಯುವುದು ಬಹಳ ಕಡಿಮೆ. ಲೈಂಗಿಕತೆಯ ಹಿನ್ನೆಲೆಯಲ್ಲಿ ರಚನೆಯಾಗಿರುವ ಬೈಗುಳಗಳನ್ನು ಬಳಸುವುದು ಬಹಳ ಕಡಿಮೆ ಎಂದು ಹೇಳಬಹುದು.

ಉದಾ:–

ಬಂಜೆ

ಹೆಣ್ಣಿಗ

ಹಾದರಗಿತ್ತಿ

ಬಜಾರಿ

ಗಯ್ಯಾಳಿ

ಕುಂಟಲಗಿತ್ತಿ

ತುಡುಗಿ

ಬಸವಿ

ನಡೆತೆಗೆಟ್ಟ ಹೆಣ್ಣು

ಊರಿಗೊಬ್ಬಳೇ ಪದ್ಮಾವತಿ

ಬಂಜೆ:–

ಬಂಜೆ ಎಂಬ ಪದವನ್ನು ಸಮುದಾಯ ಈಗಾಗಲೇ ಬೈಗುಳವೆಂದು ಪರಿಗಣಿಸಿದೆ. ಮಕ್ಕಳು ಆಗದೆ ಇರುವವಳನ್ನು ಬಂಜೆ ಎಂದು ಸಮಾಜ ಗುರುತಿಸಿದೆ. ಇದು ಬೈಗುಳ ಪದವಾಗಿ ಬಳಕೆಯಾಗುತ್ತಿದೆ. ಜನರು ಬಂಜೆ, ಗೊಡ್ಡು ಎಂದು ಹೀಯಾಳಿಸುವುದನ್ನು ನೋಡಬಹುದು. ಅದೇ ದೋಷ ಗಂಡಿಗೆ ಇದ್ದರೆ ಯಾರು ಕೇಳುವುದಿಲ್ಲ. ಮಕ್ಕಳಾಗದ ಸ್ಥಿತಿಗೆ ಹೆಣ್ಣು ಮಾತ್ರ ಕಾರಣ ಎಂದು ಸಮುದಾಯ ಹೀಯಾಳಿಸುತ್ತದೆ. ಅಂದರೆ ಹೆಣ್ಣು ಅಂದರೆನೆ ಅಸಮರ್ಥಳು, ಅಸಹಾಯಕಳು ಎಂದು ಸಮಾಜ ನಿರೂಪಿಸುವುದರಿಂದ ಈ ಪದ ಬೈಗುಳವಾಗಿ ಬಳಕೆಯಾಗುತ್ತದೆ. ಆದರೆ ಅದಕ್ಕೆ ಕಾರಣವಾದ ಗಂಡಿಗೆ ಹೀಯಾಳಿಸುವುದಿಲ್ಲ. ಕಾರಣ ಇಲ್ಲಿ ಗಂಡಿನ ಪ್ರತಿಷ್ಠೆ, ಗೌರವ ಮುಖ್ಯವಾಗುತ್ತದೆ. ಹಾಗಾಗಿ ಗಂಡಿನ ಮಕ್ಕಳಾಗದ ಸ್ಥಿತಿಯು ಅಂದರೆ ಅವನ ಗೌರವಕ್ಕೆ ದಕ್ಕೆ ಆಗುತ್ತದೆ ಎಂಬ ಉದ್ದೇಶದಿಂದ ಅವನನ್ನು ಹೀಯಾಳಿಸುವುದಿಲ್ಲ. ಅವಳದೇ ತಪ್ಪು ಅನ್ನುವ ಹಾಗೆ ಸಮಾಜ ಹೆಣ್ಣನ್ನು ನಿಕೃಷ್ಟವಾಗಿ ಕಾಣುವುದನ್ನು ನೋಡಬಹುದು.

ಹೆಣ್ಣಿಗ:–

ಸಮುದಾಯ ಗಂಡುಮಕ್ಕಳಿಗೆ ಬೈಯುವಾಗ ಹೆಣ್ಣಿಗೆ ಹೋಲಿಕೆ ಮಾಡಿ ಬೈಯುವುದು ಒಂದು ಮಾದರಿಯಾಗಿ ಕಂಡುಬರುತ್ತದೆ. ಗಂಡಿನ ನಡುವಳಿಕೆಯಲ್ಲಿ ಸ್ವಲ್ಪ ವ್ಯತ್ಯಾಸ ಆದರೂ ಅವನಿಗೆ 'ಏನಲೆ ಹೆಣ್ಣಿಗ ಹೆಂಗಸು ಮಾಡಿದ್ಯಾಂಗ ಮಾಡತ್ತಿಯಲ್ಲಾ' ಎಂದು

ಸಮುದಾಯ ದೂಷಿಸುವುದನ್ನು ಕಾಣಬಹುದು. ಅಂದರೆ ಸಮುದಾಯದಲ್ಲಿ ಗಂಡು ಅಂದರೆ ಹೀಗೆ ಇರಬೇಕು, ಹೆಣ್ಣು ಅಂದರೆ ಹೀಗೆ ಇರಬೇಕು ಎಂದು ಒಂದು ಪದ್ಧತಿಯಂತೆ ರೂಢಿಯಲ್ಲಿದೆ. ಆದರೆ ಗಂಡಿನಲ್ಲಿ ಸ್ವಲ್ಪ ವ್ಯತ್ಯಾಸವಾದರೆ 'ಹೆಣ್ಣಿಗ' ಎಂದು ಹೆಣ್ಣಿನಲ್ಲಿ ವ್ಯತ್ಯಾಸವಾದರೆ 'ಗಂಡುಬಿರಿ' ಎಂದು ಸಮುದಾಯ ಬೈಗುಳದ ಮೂಲಕ ಗುರುತಿಸುತ್ತದೆ.

ನಡತೆಗೆಟ್ಟವಳು:–

ಸಮುದಾಯದ ದೃಷ್ಟಿಯಲ್ಲಿ ಹೆಣ್ಣು ಅಂದರೆ ಅವಳು ಗಂಡನನ್ನು ಬಿಟ್ಟು ಮತ್ತು ಮನೆಯ ಪುರುಷರನ್ನು ಬಿಟ್ಟು ಪರಪುರುಷನ ಜೋತೆ ತುಂಬಾ ಸಲಿಗೆಯಿಂದ ಏನಾದರೂ ಮಾತಾಡಿದರೆ ಅವಳು ಸಮುದಾಯದ ಬೈಗುಳಕ್ಕೆ ಒಳಗಾಗುತ್ತಾಳೆ.

ಪ್ರ: ಆ ಹೆಣ್ಣು ನಡೆತೆಗೆಟ್ಟು ಬಿಟ್ಟಳಾ ಬೀಡು ಕಂಡ ಕಂಡ ಗಂಡಸರ ಜೋತೆ ಮಾತನಾಡತ್ತಾಳೆ ಸ್ವಲ್ಪನೂ ಹೆಂಗಸಿಗೆ ಭಯ ಭೀತಿ ಎಂಬುದೇ ಇಲ್ಲಾ ಆ ಹೆಣ್ಣಿಗೆ ಯಾರು ಏನು ತಿಳಿಯುತ್ತಾರೆ ಎಂಬ ಅರಿವು ತಪ್ಪಿ ಬಿಟ್ಟಳಾ ಹೆಂಗಸು ಎಂದು ಬೈಯುವುದನ್ನು ನೋಡಬಹುದು.

ಅಂದರೆ ಕೆಲವು ಸಮುದಾಯದಲ್ಲಿ ಈ ರೀತಿಯ ಪದ್ಧತಿ ಇರುವುದನ್ನು ನಾವು ಗಮನಿಸಬಹುದು. ಕೆಲವು ಸಮುದಾಯದಲ್ಲಿ ಮನೆಯ ಗಂಡಸನ್ನು ಬಿಟ್ಟು ಬೇರೆ ಗಂಡಸರನ್ನು ಮಾತಾನಾಡಿಸಿದರೆ ಅವಳು ಅವಾಚ್ಯ ಬೈಗುಳಕ್ಕೆ ಒಳಗಾಗುತ್ತಾಳೆ. ಅವಳು ಸರಿಯಿಲ್ಲ ನಡೆತೆಗೆಟ್ಟ ಹೆಣ್ಣು ಎಂಬ ಬಿರುದು ಸಮುದಾಯ ನೀಡುತ್ತದೆ ಎಂದು ಹೇಳಬಹುದು.

ಕೇವಲ ಬೈಗುಳ ಅಷ್ಟೆ ಅಲ್ಲ ಗಾದೆಗಲ್ಲಿ ಹೆಣ್ಣು ಗಂಡು ಅಂದರೆ ಹೇಗಿರಬೇಕು ಎಂದು ಸಮುದಾಯ ಹೇಳಿದೆ ಉದಾಹರಣೆಗೆ,

ಊರಿಗೊಬ್ಬಳೇ ಪದ್ಮವತಿ:–

ಸಮುದಾಯದಲ್ಲಿ ಒಬ್ಬ ವ್ಯಕ್ತಿ ಸಿರಿವಂತಿಕೆ, ತಿಳಿವಳಿಕೆ, ಪ್ರಭಾವ, ಪರಹಿತದೃಷ್ಟಿ, ತ್ಯಾಗಮನೋಭಾವ ಮುಂತಾದ ಗುಣಗಳಿಂದ ಎಲ್ಲರಿಗೂ ಬೇಕಾಗಿರುತ್ತಾರೆ. ಅಂಥ ಸಂದರ್ಭದಲ್ಲಿ ಸಾಮಾನ್ಯರೆಲ್ಲ ತಮ್ಮ ಸಹಾಯಕ್ಕೆ ಆ ವ್ಯಕ್ತಿಯ ಬಳಿಗೆ ಹೋಗುತ್ತಾರೆ. ಅಂಥ ವ್ಯಕ್ತಿಯನ್ನು ಕುರಿತು ಗೌರವವುಳ್ಳವರು ಈ ಗಾದೆಯನ್ನು ಗೌರವದ ಅರ್ಥದಲ್ಲಿ ಬಳಕೆಮಾಡುತ್ತಾರೆ. ಇದು ಈ ಗಾದೆಯ ಅರ್ಥವಾಗಿದೆ. ಆದರೆ ಇದು ಈಗ ವ್ಯಂಗ್ಯವಾಗಿ ಬೈಯುವಾಗ ಬಳಕೆಯಾಗುತ್ತದೆ. ಆದರೆ ಸಾಮಾನ್ಯವಾಗಿ ಈ ಗಾದೆ ವ್ಯಂಗ್ಯಾರ್ಥದಲ್ಲಿ, ಬೈಗುಳರೂಪದಲ್ಲಿ ಹೆಚ್ಚಾಗಿ ಬಳಕೆಯಾಗುತ್ತದೆ. ಸಮುದಾಯವು ಈ ಗಾದೆಯನ್ನು ಹೆಚ್ಚಾಗಿ ನೀತಿಗೆಟ್ಟ ಹೆಣ್ಣು ಮತ್ತು ತುಂಬಾ ವೈಯ್ಯಾರ ಮಾಡುವ ಹೆಣ್ಣನ್ನು ಬೈಯುವಾಗ ಬಳಕೆಮಾಡುತ್ತದೆ ಎಂದು ಹೇಳಬಹುದು.

ಬಜಾರಿ:-

ಹೆಣ್ಣು ಹೆಚ್ಚು ಮಾತಾನಾಡಬಾರದು ಅವಳು ಮೌನವಾಗಿರಬೇಕು ಎಂಬುದು ಸಮುದಾಯದ ಅಪೇಕ್ಷೆ. ಅವಶ್ಯಕತೆಗಿಂತ ಹೆಚ್ಚು ಮಾತಾನಾಡಿದರೆ ಅವಳನ್ನು ಬಜಾರಿ ಎಂದು ಕರೆಯುತ್ತಾರೆ.

ಪ್ರ: ಅವಳ ಹತ್ತಿರ ಏನೂ ಮಾತಾಡತ್ತಿಯಾ ಅವಳು ಮಹಾನ್ ಬಜಾರಿ. ಅವಳು ಒಂದು ಮಾತಿಗೆ ಹತ್ತು ಮಾತು ಸೇರಿಸಿ ಮಾತನಾಡುತ್ತಾಳೆ ಎಂದು ಅವಳನ್ನು ಬೈಯುವುದನ್ನು ನಾವು ನೋಡಬಹುದು.

ಸಮುದಾಯದ ದೃಷ್ಟಿಯಲ್ಲಿ ಹೆಣ್ಣು ಅಂದರೆ ಮೃದುವಾಗಿ ಸ್ವೌಮ್ಯವಾಗಿರಬೇಕು. ಅವಳು ಯಾರಿಗೂ ನೋವು ಆಗದಂತೆ ನಡೆದುಕೊಳ್ಳಬೇಕು. ಯಾರ ಹತ್ತಿರಾನೂ ಹೆಚ್ಚು ಮಾತಾನಾಡಬಾರದು ಎಂಬುದನ್ನು ಸಮುದಾಯ ಬಯಸುತ್ತದೆ. ಒಂದು ವೇಳೆ ಅವಳು ಅದಕ್ಕೆ ವಿರುದ್ಧವಾಗಿ ಇದ್ದರೆ ಅವಳನ್ನು ಬಜಾರಿ ಎಂದು ಸಮುದಾಯ ಗುರುತಿಸುತ್ತದೆ.

ಹೀಗೆ ಸಮುದಾಯ ಹೆಣ್ಣನ್ನು ಬೈಗುಳದ ಮೂಲಕ ಬಂಧಿಸಿದೆ. ಸಮುದಾಯದ ದೃಷ್ಟಿಯಲ್ಲಿ ಹೆಣ್ಣು ಎಂದರೆ ಹೀಗೆ ಇರಬೇಕು. ಅದು ಅವಳಿಗೆ ಒಳ್ಳೆಯದು. ಇಲ್ಲಾವಾದರೆ ಬೈಗುಳಗಳಲ್ಲಿ ಹೇಗೆ ಬಳಕೆಯಾಗುತ್ತಾಳೆ ಎಂದು ಸಮುದಾಯದಲ್ಲಿ ಬೈಗುಳ ರಚನೆಯಾಗಿರುವುದನ್ನು ಕಾಣಬಹುದು. ಹೆಣ್ಣಿನಲ್ಲಿ ಯಾವ ಗುಣ ಇರಬೇಕು ಯಾವ ಗುಣ ಇರಬಾರದು ಎಂಬುವುದನ್ನು ಸಮುದಾಯ ಬೈಗುಳದ ಮೂಲಕ ರಚನೆ ಮಾಡಿರುವುದನ್ನು ಇಲ್ಲಿ ದಾಖಲಿಸಲಾಗಿದೆ. ಈ ಬೈಗುಳಗಳು ಮತ್ತು ಈ ಪದ್ಧತಿ ಇಂದಿನ ದಿನಮಾನಗಳಲ್ಲಿ ಅಳವಡಿಸಿಕೊಳ್ಳುವುದು ತುಂಬಾ ಕಡಿಮೆ ಎಂದು ಹೇಳಬಹುದು,

೫.೩.೪. ಹೆಣ್ಣು ಸಮುದಾಯಕ್ಕೆ:-

ಹೆಣ್ಣಿಗೆ ಸಂಬಂಧಿಸಿದ ಬೈಗುಳಗಳು ಸಮುದಾಯದಲ್ಲಿ ಬಳಕೆಯಲ್ಲಿವೆ. ಹೆಣ್ಣಿಗೆ ಸಂಬಂಧಿಸಿದ ಕೆಲವು ಬೈಗುಳಗಳನ್ನು ಒಪ್ಪಲು ಆಗುವುದಿಲ್ಲ ಎಂಬುದನ್ನು ಇಲ್ಲಿ ವಿವರಿಸಲಾಗಿದೆ ಮತ್ತು ಅದು ಯಾವ ಅರ್ಥವನ್ನು ನೀಡುತ್ತದೆ ಹಾಗೂ ಆ ಪದಗಳು ಸಮುದಾಯದಲ್ಲಿರುವ ಬೈಗುಳಗಳು ಹೆಣ್ಣಿನ ದೃಷ್ಟಿಯಲ್ಲಿ ನಕಾರಾತ್ಮವವಾಗಿ ಬಳಕೆಯಾಗುತ್ತವೆಯೋ ಅಥವಾ ಸಕಾರಾತ್ಮಕವಾಗಿ ಬಳಕೆಯಾಗುತ್ತವೆಯೋ ಎಂಬುವುದನ್ನು ಇಲ್ಲಿ ವಿವರಿಸಲಾಗಿದೆ.

ಉದಾ:-

ಸವ್ತಿ

ಮುಂಡೆ

ಸೂಳೆ

ರಂಡೆ

ಬೋಳಿ

ಗೊಡ್ಡಿ

ಬಡ್ಡಿ

ತಾಟಗಿತ್ತಿ

ಬಂಜೆ

ಗೊಡ್ಡಿ

ಸವ್ತಿ:–

ಈ ಪದಕ್ಕೆ ಎರಡು ಭಿನ್ನ ಅರ್ಥಗಳಿವೆ. ಒಂದು ಸಂಬಂಧವಾಚಕದ ನೆಲೆಯಲ್ಲಿ, ಮತ್ತೊಂದು ಬೈಗುಳದ ನೆಲೆಯಲ್ಲಿ ಇರುವುದನ್ನು ನೋಡಬಹುದು. ಒಬ್ಬ ಗಂಡು ಇಬ್ಬರು ಹೆಂಡತಿಯರನ್ನೂ ಹೋದಿದ್ದರೆ ಅವರು ಒಬ್ಬರಿಗೆ ಒಬ್ಬರು ಸವ್ತಿಯರಾಗುತ್ತಾರೆ. ಆದರೆ ಈ ಪದ ಎಲ್ಲ ಹೆಣ್ಣು ಮಕ್ಕಳಿಗೂ ಬೈಯುವಾಗ ಬಳಕೆ ಮಾಡುತ್ತಾರೆ. ಅವರು ಸವ್ತಿಯರು ಆಗದೇ ಇದ್ದರೂ ಈ ಬೈಗುಳವನ್ನು ಅವರು ಸ್ವಿಕರಿಸಬೇಕು ಹಾಗೆ ಸಮುದಾಯ ಬೈಗುಳಗಳನ್ನು ರಚನೆ ಮಾಡಿವೆ. ಆದರೆ ಅದೇ ಸಮುದಾಯ ಒಬ್ಬ ಗಂಡು ಇಬ್ಬರು ಹೆಂಡತಿಯರನ್ನು ಹೊಂದಬಹುದು ಎಂದು ಹೇಳಿದೆ. ಹಾಗಾಗಿ ಆ ಇಬ್ಬರು ಹೆಂಡತಿಯರಿಗೆ ಸಂಬಂಧವನ್ನು ಗುರುತಿಸುವ ಸಲುವಾಗಿ ಸವತಿ ಎಂಬ ಪದವನ್ನು ಹುಟ್ಟಿ ಹಾಕಿದೆ. ಹಾಗಿರಬೇಕಾದರೆ ಇದನ್ನು ಬೈಗುಳ ಪದವಾಗಿ ಹೇಗೆ ಸ್ವೀಕರಿಸಬೇಕು. ಹಾಗೆ ಗಂಡಿಗೆ ಮಾತ್ರ ಈ ಇಬ್ಬರು ಹೆಂಡತಿಯನ್ನು ಹೊಂದಲು ಅವಕಾಶವಿದೆಯೇ ಹೊರತು ಹೆಣ್ಣಿಗೆ ಈ ಅವಕಾಶವನ್ನು ಮಾನ್ಯ ಮಾಡಿಲ್ಲ ಹಾಗಾಗಿ ಅಂತಹ ಸಂಬಂಧವನ್ನು ಗುರುತಿಸಲು ಯಾವ ಪದವೂ ಇಲ್ಲ ಎಂದು ಹೇಳಬಹುದು.

ಮುಂಡೆ:–

ಇದರ ಬಳಕೆ ಮತ್ತು ರಚನೆ ಹೇಗಿದೆ. ಎಂಬುವುದನ್ನು ನೋಡುವುದಾದರೆ, ಹೆಣ್ಣಿನ ಸಾಮಾಜಿಕ ಸ್ಥಿತಿಯನ್ನು ಹೀಯಾಳಿಸುವ ಹಿನ್ನೆಲೆಯಲ್ಲಿ ಸಮುದಾಯ ಈ ಬೈಗುಳಗಳನ್ನು ಸೃಷ್ಟಿಸಿವೆ. ಗಂಡನಿಲ್ಲದ ಹೆಣ್ಣಿಗೆ ಮುಂಡೆ ಎಂದು ಕರೆಯುತ್ತಾರೆ. ಮುಂಡೆ ಎಂಬ ಪದಕ್ಕೆ ಸಂವಾದಿಯಾಗಿ ವಿಧವೆ ಪದ ಇದೆ. ಇದು ಸಂಸ್ಕೃತ ಪದ. ಒಂದು ವೇಳೆ ಈ ಪದವನ್ನು ಕನ್ನಡ ಸಮುದಾಯ ಸ್ವೀಕರಿಸದೆ ಇದ್ದರೆ ಗಂಡನಿಲ್ಲದ ಹೆಣ್ಣಿಗೆ ಮುಂಡೆ ಎಂಬ ಪದವನ್ನೆ ಬಳಕೆಮಾಡಬೇಕಿತ್ತು. ಆಗ ಈ ಮುಂಡೆ ಎಂಬ ಪದ ಬೈಗುಳದ ನೆಲೆಯಲ್ಲಿ ತನ್ನ ಅರ್ಥವನ್ನು ಹೊಂದಿರುತ್ತಿರಲಿಲ್ಲ. ಹಾಗಾಗಿ ಮುಂಡೆ ಎಂಬ ಪದ ಕೇವಲ ಗಂಡ

ಸತ್ತ ಹೆಣ್ಣಿನ ಸ್ಥಿತಿಯನ್ನು ಹೇಳುತ್ತಿತ್ತೇ ಹೊರತು ಇದು ಬೈಗುಳ ಪದವಾಗಿ ಬಳಕೆಯಾಗುತ್ತಿರಲಿಲ್ಲ ಎಂದು ಊಹಿಸಬಹುದು.

ಬಡ್ಡಿ:–

ಸಮುದಾಯದ ಹಿನ್ನೆಲೆಯಲ್ಲಿ ಬಡ್ಡಿ ಎಂಬ ಪದದ ಅರ್ಥವನ್ನು ನೋಡುವುದಾದರೆ, ಇದು ಹೆಣ್ಣಿಗೆ ಬೈಯುವ ಬೈಗುಳ ಪದವಾಗಿದೆ, ಗಂಡಿಗೆ ಬೈಯುವಾಗಲೂ ಸ್ತ್ರೀವಾಚಕದ ಜೋತೆಗೆ ಪುರುಷವಾಚಕ ಸೇರಿಸಿ ಬೈಯುವುದನ್ನು ನೋಡಬಹುದು. ಬಡ್ಡಿ ಎಂಬ ಪದದ ಇನ್ನೊಂದು ಅರ್ಥ ಸಂಸ್ಕೃತದ 'ವೃದ್ಧಿ' ಎಂಬುದು. ಸಾಲ ಕೊಟ್ಟು ಪಡೆಯುವ ಅಂದರೆ ಕೊಟ್ಟ ಹಣಕ್ಕಿಂತ ಅಧಿಕ ಹಣವನ್ನು ಪಡೆಯುದಕ್ಕೆ ಬಡ್ಡಿ ಎಂದು ಕರೆಯುತ್ತಾರೆ. ಆದರೆ ಈಗ ಈ ಪದ ವೇಶ್ಯೆ, ಸೂಳೆ ಎಂಬರ್ಥವನ್ನು ಹೊಂದಿದೆ. ಮೊದಲನೆ ಅರ್ಥವನ್ನು ಅಳವಡಿಸಿದರೆ ಇದು ಈಗ ಹೆಣ್ಣಿಗೆ ಸಂಬಂಧಿಸಿದ ಬೈಗುಳವಾಗುವುದಿಲ್ಲ ಎಂದು ಹೇಳಬಹುದು. ಸಮುದಾಯ ಈ ಪದ ಉಪಯೋಗಿಸಿ ಹೀನಾರ್ಥವಾಗಿ ಗಾದೆಗಳನ್ನು ರಚನೆ ಮಾಡಿದೆ.

ಉದಾ:–

ಬಡ್ಡಿಯ ಹಾಗೆ ಕುಣಿಯುವವಳು ಹರೆಯ ಬಂದರೆ ಬಿಟ್ಟಾಳೆ?.

ಓಡಿ ಹೋಗುವ ಬಡ್ಡಿ ಹಾಲಿಗೆ ಹೆಪ್ಪು ಹಾಕ್ಯಾಳೆ.

ಹೀಗೆ ಸಮುದಾಯ ಹೆಣ್ಣಿಗೆ ಸಂಬಂಧಿಸಿದ ಬೈಗುಳಗಳನ್ನು ರಚನೆ ಮಾಡಿದೆ. ಸಮುದಾಯ ಹೆಣ್ಣಿಗಾಗಿ ಸೃಷ್ಟಿಸಿದ ಬೈಗಳಗಳನ್ನು ನೋಡಿದರೆ ಹೆಣ್ಣಿಗೆ ಸಂಬಂಧಿಸಿದ ಬೈಗುಳಗಳು ಹೀನಾರ್ಥವಾಗಿ ಗ್ರಹಿಸುವ ಬದಲು ಸಕಾರಾತ್ಮಕವಾಗಿ ಯೋಚನೆ ಮಾಡಿದರೆ ಈ ಬೈಗುಳಗಳ ಅರ್ಥಗ್ರಹಿಕೆ ಬೇರೆಯಾಗುತ್ತದೆ. ಈ ಬೈಗುಳಗಳ ಮೂಲ ಅರ್ಥವು ಪ್ರಸ್ತುತ ಅಥವಾ ಬೈಗುಳವಾಗಿ ಬಳಕೆಯಾಗುತ್ತಿರುವ ಅರ್ಥಕ್ಕಿಂತ ಬೇರೆಯಾಗಿವೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ. ನಕಾರಾತ್ಮಕವಾಗಿ ಯೋಚನೆ ಮಾಡುವಕ್ಕಿಂತ ಸಕಾರಾತ್ಮಕವಾಗಿ ಸಮುದಾಯ ಅಥವಾ ಸಮಾಜ ಯೋಚನೆ ಮಾಡಿದರೆ ಈ ರೀತಿಯ ಬೈಗುಳಗಳು ರಚನೆಯಾಗುವುದಿಲ್ಲ ಎಂದು ಹೇಳಬಹುದು.

* * *

ಅಧ್ಯಾಯ : ೬

ಬೈಗುಳ ಸಾಮಾಜಿಕ ಸಾಂಸ್ಕೃತಿಕ ವಿನ್ಯಾಸಗಳು–ಹೆಣ್ಣು ಸಂಕಥನಗಳ ಹಿನ್ನೆಲೆಯಲ್ಲಿ

ಅಧ್ಯಾಯ-೦೬

ಬೈಗುಳ ಸಾಮಾಜಿಕ ಸಾಂಸ್ಕೃತಿಕ ವಿನ್ಯಾಸಗಳು-ಹೆಣ್ಣು ಸಂಕಥನಗಳ ಹಿನ್ನೆಲೆಯಲ್ಲಿ

ಬೈಗುಳಗಳನ್ನು ಬಳಸುವ ಸಾಮಾನ್ಯ ಸಂದರ್ಭಗಳು ವ್ಯಕ್ತಿ-ವ್ಯಕ್ತಿ, ವ್ಯಕ್ತಿ-ಸಮುದಾಯ, ಸಮುದಾಯ-ಸಮುದಾಯಗಳ ನಡುವಿನ ಪ್ರತ್ಯಕ್ಷ-ಪರೋಕ್ಷ ಮಾತು, ಹೇಳಿಕೆ, ಉಲ್ಲೇಖಗಳು ಬಳಕೆಯಾಗುವುದು ಸಹಜ ಸಂಗತಿ ಆಗಿದೆ. ಬೈಗುಳಗಳು ಸಾಮಾಜಿಕ ಸಾಂಸ್ಕೃತಿಕವಾದ ಒಂದು ಭಾಷೆಯಲ್ಲಿ ಸಾಂಸ್ಕೃತಿಕ ಮುಕ್ತತೆಯಿಲ್ಲದ ನಿರ್ಬಂಧಿತ ವಿಷಯವೆಂದು ಶಿಷ್ಟ ಸಮುದಾಯ/ಸಮಾಜಗಳಿಂದ ಪರಿಗಣಿಸಲ್ಪಟ್ಟಿದ್ದರೂ ತಳ ಸಮುದಾಯಗಳು, ಅವಲಕ್ಷಿತ ಆದಿವಾಸಿ ಸಮುದಾಯಗಳಲ್ಲಿ ಈ ಬೈಗುಳ ಬಳಕೆ ಸಾಮಾಜಿಕವಾಗಿ ಮುಕ್ತವಾಗಿರುವುದೇ ಅಲ್ಲದೆ ತಮ್ಮ ಹಲವಾರು 'ಸಾಂಸ್ಕೃತಿಕ' ಆಚರಣೆಗಳಲ್ಲಿ ಬಳಸುವ ಮೂಲಕ ಸಾಂಸ್ಕೃತಿಕ ಮೌಲ್ಯವನ್ನು ಆಧರಿಸಲಾಗಿದೆ. ಭಾರತೀಯ ಸಾಮಾಜಿಕ ಸಂರಚನೆಯ ವಿನ್ಯಾಸಗಳಲ್ಲಿ ಅನೇಕ ಸಾಮಾಜಿಕ ನಡವಳಿಕೆಗಳು (ಮದುವೆ, ಆಹಾರ, ಉಡುಪು) ಸಾಂಸ್ಕೃತಿಕ ನಡೆವಳಿಕೆಗಳು ಸಾಮಾಜಿಕ ಸಂರಚನೆಯಲ್ಲಿ ಸಮುದಾಯಗಳು ವಿನ್ಯಾಸ ಪಡೆದು ನೆಲೆಯಾಗಿರುವ ಮಾದರಿಯ ಈ ಸಾಂಸ್ಕೃತಿಕ ಆಚರಣೆಗಳು ವಿನ್ಯಾಸ ಪಡೆದುಕೊಂಡಿವೆ. ಈ ಅಧ್ಯಾಯದಲ್ಲಿ ಲಿಂಗ, ವರ್ಗ, ಜಾತಿಯ ವಿನ್ಯಾಸಗಳಲ್ಲಿ ಬೈಗುಳ ವಿನ್ಯಾಸಗೊಂಡಿರುವುದನ್ನು ಪರಿಶೀಲಿಸಿದೆ.

ನಮ್ಮ ಪ್ರಾಚೀನ ಕಾಲದಿಂದಲೂ ಕೆಲವು ಆಚರಣೆಗಳಲ್ಲಿ ಬೈಗುಳಗಳನ್ನು ಬಳಕೆಮಾಡಲಾಗುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ಹೇಗೆ ಆಚರಣೆಗಳು ಕಡಿಮೆಯಾಗುತ್ತ ಇವೆಯೋ ಹಾಗೆಯೇ ಬೈಗುಳಗಳು ಕಡಿಮೆಯಾಗುತ್ತ ಇವೆ ಎಂಬುವುದನ್ನು ಈ ಭಾಗದಲ್ಲಿ ವಿವರಿಸಲಾಗುತ್ತದೆ. ಮತ್ತು ನಮ್ಮ ಸಮಾಜದ ಕೆಲವು ಆಚರಣೆಗಳು ಈಗಲೂ ನಡೆಯುತ್ತಿರುವುದ್ದರಿಂದ ಈಗಲೂ ಕೆಲವು ಬೈಗುಳದ ಪದಗಳನ್ನು ಕಾಣುತ್ತೇವೆ ಎಂಬುವುದನ್ನು ಸಹ ಇಲ್ಲಿ ವಿವರಿಸಲಾಗುತ್ತದೆ. ಅಂತಹ ಕೆಲವು ಆಚರಣೆಗಳು ಯಾವುವು ಮತ್ತು ಯಾವ ಯಾವ ಬೈಗುಳದ ಪದಗಳು ಆಚರಣೆಯ ಸಂದರ್ಭದಲ್ಲಿ ಬಳಕೆಯಾಗುತ್ತವೆ, ಒಂದು

ವೇಳೆ ಆಚರಣೆಯಲ್ಲಿ ಬೈಯಲು ಅವಕಾಶವಿದ್ದರೂ ಯಾಕೆ ಬೈಗುಳಗಳನ್ನು ಬಳಕೆ ಮಾಡುವುದಿಲ್ಲ ಮತ್ತು ಆಧುನಿಕ ಸಂದರ್ಭದಲ್ಲಿ ಯಾವ ರೀತಿಯ ಬೈಗುಳಗಳು ಬಳಕೆಯಲ್ಲಿವೆ ಅದಕ್ಕೆ ಕಾರಣವೇನು ಎಂಬ ಅಂಶಗಳನ್ನು ಇಟ್ಟುಕೊಂಡು ಈ ಭಾಗದಲ್ಲಿ ವಿವರಿಸಲಾಗಿದೆ.

೬.೧. ಬೈಗುಳ–ಜಾತಿ ವಿನ್ಯಾಸಗಳು, ಧಾರ್ಮಿಕ ನೆಲೆಯ ವಿನ್ಯಾಸಗಳನ್ನು ಎರಡು ನೆಲೆಯಲ್ಲಿ ಚರ್ಚಿಸಬಹುದು.

೬.೧.೧. ಪ್ರಾಚೀನ ಕಾಲದಿಂದಲೂ ಆಚರಣೆಯ ಸಂದರ್ಭದಲ್ಲಿ ದೇವರಿಗೆ ಸಂಬಂಧಿಸಿದ ಬೈಗುಳದ ಸ್ವರೂಪ

೬.೧.೨. ಪ್ರಸ್ತುತ ಸಂದರ್ಭದಲ್ಲಿ ನಡೆಯುತ್ತಿರುವ ಆಚರಣೆಯ ಸಂದರ್ಭದಲ್ಲಿ ಬೈಗುಳದ ಸ್ವರೂಪ

೬.೧.೧. ಪ್ರಾಚೀನ ಕಾಲದಿಂದಲೂ ಆಚರಣೆಯ ಸಂದರ್ಭದಲ್ಲಿ ದೇವರಿಗೆ ಸಂಬಂಧಿಸಿದ ಬೈಗುಳದ ಸ್ವರೂಪ

ಹೋಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಬೈಗುಳದ ಸ್ವರೂಪ:–

ಈ ಹಬ್ಬದ ವಿಶೇಷತೆಯ ಬಗ್ಗೆ ಎರಡು ರೀತಿಯ ಅಭಿಪ್ರಾಯಗಳು ಇವೆ. ಒಂದನೇ ಅಭಿಪ್ರಾಯದಲ್ಲಿ ಒಬ್ಬ ರಾಕ್ಷಿಸಿ ಇದ್ದಳು ಆ ರಾಕ್ಷಸಿಗೆ ದಿನ ಒಬ್ಬರಂತೆ ಆಹಾರವಾಗಿ ಹೋಗಬೇಕಿತ್ತು ಆಗಾಗಿ ಊರಿನ ಜನರ ಸಂಖ್ಯೆಯೇ ಕಡಿಮೆ ಆಗಲಾರಂಭಿರಿಸಿತು. ಇದಕ್ಕೆ ಪರಿಹಾರವಾಗಿ ಮಾಂತ್ರಿಕರೊಬ್ಬರು ಒಂದು ಸಲಹೆಯನ್ನು ಸೂಚಿಸಿದರೂ. ಆ ಸಲಹೆ ಏನೆಂದರೆ 'ಮಕ್ಕಳು ಆ ರಾಕ್ಷಸಿಯನ್ನ ಅಶ್ಲೀಲವಾಗಿ ಬೈದರೆ ಅವಳು ಸತ್ತು ಹೋಗುತ್ತಾಳೆ' ಎಂದು ಹೇಳಿದರು. ಹಾಗೆಯೇ ಯಾವ ಕಾಲದಲ್ಲಿ ಬೈಯಬೇಕು ಎಂಬುವುದನ್ನು ಸಹ ಅವರು ಸೂಚಿಸಿದರು. ಸಂಧಿಕಾಲದಲ್ಲಿ ಆ ರಾಕ್ಷಸಿಯನ್ನು ಬೈದರೆ ಅವಳು ಸತ್ತು ಹೋಗುತ್ತಾಳೆ ಎಂದು ಸೂಚನೆಯನ್ನು ನೀಡಿದರು. ಆಗಿನಿಂದ ಊರಿನ ಜನರೆಲ್ಲ ಒಟ್ಟಿಗೆ ಸೇರಿ ಫಾಲ್ಗುಣ ಶುದ್ಧ ಹುಣ್ಣಿಮೆಂದು ಬೇಸಿಗೆ ಕಾಲ ಶುರುವಾಗುತ್ತದೆ ಆಗ ಆ ರಾಕ್ಷಸಿಯನ್ನು ಕೊಲ್ಲಬೇಕು ಎಂದು ನಿರ್ಧರಿಸಿ ಊರ ಮಕ್ಕಳನ್ನೆಲ್ಲ ಒಂದು ಕಡೆ ಸೇರಿಸಿ ಒಣಗಿದ ಹುಲ್ಲು ಕಡ್ಡಿಗಳನ್ನು ಜೋಡಿಸಿ ಕೈಯಲ್ಲಿ ಖಡ್ಗ ಹಿಡಿದರು ಹುಲ್ಲು ಕಡ್ಡಿಗೆ ಬೆಂಕಿ ಹಚ್ಚಿದರು. ಅದರ ಸುತ್ತು ಮಕ್ಕಳು ನಿಂತುಕೊಂಡು ತಮ್ಮ ಊರ ಭಾಷೆಯಲ್ಲಿ ಆ ರಾಕ್ಷಸಿಗೆ ತೀರ ಅಶ್ಲೀಲವಾಗಿ ಬೈದರು. ಆ ಬೈಗುಳಗಳನ್ನು ರಾಕ್ಷಸಿ ಕೇಳಲಾರದೆ ಸತ್ತು ಹೋದಳು. ಆ ಖುಷಿಗೆ ಊರಿನ ಜನರು ಹೋಳಿ ಹಬ್ಬವನ್ನು ಇಂದಿಗೂ ಆಚರಣೆ ಮಾಡುತ್ತಾರೆ ಎಂಬ ಅಭಿಪ್ರಾಯವಿದೆ.

ಎರಡನೆ ಅಭಿಪ್ರಾಯದಲ್ಲಿ ರಾಕ್ಷಸಿಯ ಹೆಸರೇ 'ಹೋಲಿಕಾ' ಎಂದು. ಅವಳು ಮಕ್ಕಳನ್ನು ಮಾತ್ರ ತಿಂದು ಬದುಕುತ್ತಾಳೆ. ಜನರೆಲ್ಲ ಆ ರಾಕ್ಷಸಿಯ ವಿರುದ್ಧವಾಗಿ ಅರಸನಿಗೆ ದೂರು ಕೊಟ್ಟರು ಏನು ಪ್ರಯೋಜನವಾಗಲಿಲ್ಲ. ಊರಿನ ಜನರು ಸರದಿಯ ಪ್ರಕಾರ ಒಬ್ಬರೊಬ್ಬರೇ

ತಮ್ಮ ಮಕ್ಕಳನ್ನು ಬಲಿ ಕೊಟ್ಟರು. ಒಮ್ಮೆ ಒಬ್ಬ ಮುದುಕಿಯ ಸರದಿ ಬಂತು ಆ ಮುದುಕಿಗೆ ಒಬ್ಬನೇ ಮೊಮ್ಮಗ. ಅವನನ್ನು ಬಲಿ ಕೊಡಲು ಅವಳ ಮನಸ್ಸು ಒಪ್ಪಲಿಲ್ಲ. ಆಗ ಆ ಊರಿಗೆ ಒಬ್ಬ ಸಿದ್ಧ ಪುರುಷ ಬಂದ. ಅವನು ಹೋಲಿಕಾಳನ್ನು ಕೊಲ್ಲಲು ಒಂದು ಉಪಾಯ ಹೇಳಿದ. ನಾಳೆ ಮಕ್ಕಳು ಎಲ್ಲ ಸೇರಬೇಕು ಆ ರಾಕ್ಷಸಿಯನ್ನು ಅಸಭ್ಯ ಮಾತುಗಳಿಂದ ಬೈಯ್ಯಬೇಕು ಆಗ ಆಕೆ ಸಾಯುತ್ತಾಳೆ ಎಂದ. ಅವರು ಹಾಗೆ ಮಾಡಿದರು. ಮಕ್ಕಳೆಲ್ಲ ಒಟ್ಟು ಸೇರಿ ಅಶ್ಲೀಲವಾಗಿ ರಾಕ್ಷಸಿಗೆ ಬೈದರು ಅದನ್ನು ಕೇಳಲಾರದೆ ಆ ರಾಕ್ಷಸಿಯು ಸತ್ತು ಹೋದಳು. ಹುಡುಗರೆಲ್ಲ ಕಟ್ಟಿಗೆ ರಾಶಿ ಹಾಕಿ ಆಕೆಯನ್ನು ಸುಟ್ಟರು. ಹೀಗೆ ಆಕೆಯನ್ನು ಸುಟ್ಟ ದಿನವನ್ನು ಹೋಲಿ ಹಬ್ಬವೆಂದು ಜನರು ಆಚರಿಸುತ್ತಾರೆ.

ಇಂದಿಗೂ ಕಾಮನಹುಣ್ಣಿಮೆಯ ದಿನದಂದು ಮಕ್ಕಳೆಲ್ಲ ಒಟ್ಟು ಸೇರಿ ಹಲಗೆ ಬಾರಿಸುತ್ತ ಓಣಿ ಓಣಿ ಸುತ್ತುತ್ತಾರೆ. 'ಹೊಯ್ಕಂಡ ಬಾಯಿಗೆ ಹೋಳಿಗೆ ತುಪ್ಪ' ಎಂಬ ಮಾತನ್ನಾಡುತ್ತಾ 'ಕಾಮಣ್ಣನ ಮಕ್ಕಳು ಕಳ್ಳ ಸೂಳೆಮಕ್ಳು' ಎಂದು ಅಶ್ಲೀಲವಾಗಿ ಬೈದಾಡುತ್ತ ಇಡೀ ಊರನ್ನು ಸುತ್ತುತ್ತಾರೆ. ಮನೆ ಮನೆಯ ಮುಂದೆ ನಿಂತು ಬೈಯುತ್ತ ಬೇರೆ ಬೇರೆ ಜನಗಳ ಅನೈತಿಕ ಸಂಬಂಧದ ಬಗ್ಗೆ ಗಟ್ಟಿಯಾಗಿ ಕೂಗಿ ಹೇಳುತ್ತ ಬೈಯುತ್ತ ಹೋಗುತ್ತಾರೆ. ಆಗ ಅದಕ್ಕೆ ಯಾರು ಪ್ರತಿಕ್ರಿಯಿಸುವುದಿಲ್ಲ. ಕೊನೆಗೆ ಕಟ್ಟಿಗೆ ಸೇರಿಸಿ ಬೆಂಕಿ ಹಚ್ಚಿ ಕುಣಿಯುತ್ತ ಕಾಮಣ್ಣನ ಮಕ್ಕಳು ಕಳ್ಳಸೂಳೆಮಕ್ಕಳು ಎಂದು ಹಾಡುತ್ತ ಬಣ್ಣದ ನೀರನ್ನು ಎರಚುತ್ತ ಹಬ್ಬವನ್ನು ಆಚರಣೆ ಮಾಡುತ್ತಾರೆ.

ಜೋಕುಮಾರ ಹಬ್ಬದ ಆಚರಣೆಯ ಸಂದರ್ಭದಲ್ಲಿ ಬೈಗುಳದ ವಿನ್ಯಾಸ:–

ಭಾದ್ರಪದ ಶುದ್ಧ ಅಷ್ಟಮಿಯ ದಿನದಂದು ಮಾಡುವ ಜೋಕುಮಾರಸ್ವಾಮಿಯ ಆಚರಣೆಯಲ್ಲಿ ಬೈಗುಳಗಳನ್ನು ಬಳಸುತ್ತಾರೆ ಎಂದು ತಿಳಿದು ಬಂದಿದೆ. ಹಳ್ಳಿಗಳಲ್ಲಿ ಓಣಿ ಓಣಿಗಳಲ್ಲಿ ಈಗಲೂ ಜೋಕುಮಾರನನ್ನು ಹಸಿಮಣ್ಣಿನಿಂದ ತಯಾರಿಸುತ್ತಾರೆ. ಉದ್ದ ಮೂಗು, ಮುಖ ಎಲ್ಲ ಮಾಡಿ ಅದಕ್ಕೆ ಬೆಣ್ಣೆ ಹಚ್ಚಿ ಜೋಕುಮಾರನನ್ನು ಬೈಯುತ್ತ ಓಣಿಯಲ್ಲಿ ಭಿಕ್ಷೆ ಬೇಡುತ್ತ ಊರಿನ ಹೆಣ್ಣು ಮಕ್ಕಳು ತಿರುಗುವ ಒಂದು ಪರಿಪಾಠವಿದೆ. ಬಂಜೆಯರು ಈ ಆಚರಣೆಯ ಮೊರೆ ಹೋದರೆ ಮಕ್ಕಳು ಆಗುತ್ತವೆ ಎಂಬ ನಂಬಿಕೆ ಈಗಲೂ ಇದೆ.

ಜೋಕುಮಾರಸ್ವಾಮಿಯ ಹಾಡನ್ನು ನೋಡುವುದಾರೆ,

ಪುಂಡಿಯ ಸೊಪ್ಪಿಗೆ ಹೋದಾಳೆ ಹನುಮವ್ವ
ಕುಂಡಿಲ್ಲವಂತೆ ಆಳುತ್ತಾಳೆ ನಮಕೊಮರಾಮ
ಕುಂಡೆಮಾಡಿ ಮನೆಗೆ ಕಳುವ್ಯಾನೆ.

ಬಸಲಿಕ್ಕ ಸೊಪ್ಪಿಗೆ ಹೋದಾಳ ಹನುಮವ್ವ

ಬಸುರಿಲ್ಲವಂತೆ ಆಳುತ್ತಾಳೆ ನಮಕೊಮರಾಮ

ಬಸರುಮಾಡಿ ಮನೆಗೆ ಕಳುವ್ಯಾನೆ.

ಈ ಎರಡು ತ್ರಿಪದಿ ಹಾಡಿನಲ್ಲಿ ಜೋಕುಮಾರಸ್ವಾಮಿಯ ಲೈಗಿಂಕ ವರ್ತನೆಗೆ ಸಂಬಂಧಪಟ್ಟ ವರ್ಣನೆಯ ಅಂಶಗಳನ್ನು ಮಾತ್ರ ಕಾಣಬಹುದು. ಆದರೆ ಯಾವುದೇ ಬೈಗುಳದ ಪದಗಳನ್ನು ಈ ಹಾಡುಗಳಲ್ಲಿ ಕಾಣುವುದಿಲ್ಲ. ಆದರೆ ಜೋಕುಮಾರಸ್ವಾಮಿಯ ಹಬ್ಬದಲ್ಲಿ ಜೋಕುಮಾರನ ಬೈಯುವ ಪದ್ಧತಿ ಇದೆ ಎಂಬುವುದನ್ನು ನಾವು ತಿಳಿಯಬಹುದು. ಹೇಗೆ ಅಂದರೆ ಜೋಕುಮಾರನು ಹೆಚ್ಚು ಹೆಣ್ಣು ಮಕ್ಕಳ ಹತ್ತಿರ ಲೈಂಗಿಕ ಸಂಪರ್ಕವನ್ನು ಹೋದಿದ್ದಾನೆ ಎಂದು ಹೆಣ್ಣು ಮಕ್ಕಳು ಆಚರಣೆಯ ಸಂದರ್ಭದಲ್ಲಿ ಜೋಕುಮಾರನನ್ನು ಬೈಯುವುದನ್ನು ಕಾಣಬಹುದು.

ಹೀಗೆ ಆಚರಣೆಯ ಸಂದರ್ಭದಲ್ಲಿ ಬೈಗುಳಗಳನ್ನು ಕಾಣಬಹುದು. ಮೇಲುನೋಟಕ್ಕೆ ಬೈಗುಳಗಳು ಬಳಕೆಯಲ್ಲಿ ಇಲ್ಲ ಅನಿಸಿದರೂ ಆಚರಣೆಯಲ್ಲಿ ಮಾತ್ರ ಬೈಗುಳಗಳನ್ನು ಬಳಕೆ ಮಾಡಿ ದೇವರಿಗೆ ಬೈಯುವುದನ್ನು ಕಾಣಬಹುದು.

೬.೧.೨. ಪ್ರಸ್ತುತ ಸಂದರ್ಭದಲ್ಲಿ ನಡೆಯುತ್ತಿರುವ ಆಚರಣೆಯ ಸಂದರ್ಭದಲ್ಲಿ ಬೈಗುಳದ ವಿನ್ಯಾಸ:–

ಪ್ರಾಚೀನ ಕಾಲದಲ್ಲಿ ಆಚರಣೆ ಮಾಡುವ ಹಬ್ಬಗಳಲ್ಲಿ ದೇವರಿಗೆ ಬೈಯುವುದನ್ನು ಕಾಣಬಹುದು. ಹಾಗೇಯೆ ಪ್ರಸ್ತುತ ಆಚರಣೆಯ ಸಂದರ್ಭದಲ್ಲಿ ಹೆಣ್ಣಿಗೆ ಸಂಬಂಧಿಸಿದ ಬೈಗುಳಗಳು ಹೇಗೆ ಬಳಕೆ ಆಗುತ್ತವೆ, ಅದರ ಹಿನ್ನೆಲೆ ಏನಾಗಿತ್ತು ಎಂಬುವುದನ್ನು ಇಲ್ಲಿ ನೋಡಬಹುದು.

ಉದಾ:–

ಮುಂಡೆ:–

ಈ ಬೈಗುಳ ಪದದ ಹಿನ್ನಲೆಯನ್ನು ನೋಡುವುದಾದರೆ, ನಮ್ಮ ಸಮಾಜದಲ್ಲಿರುವ ಬ್ರಾಹ್ಮಣ ಜಾತಿಯ ಸಂಪ್ರದಾಯವನ್ನು ಇಲ್ಲಿ ಕಾಣಬಹುದು. ಬ್ರಾಹ್ಮಣರಲ್ಲಿ ಗಂಡ ಸತ್ತ ನಂತರ ಹೆಂಡತಿಗೆ ತಲೆ ಕೂದಲು ತೆಗಿಯುವ ಒಂದು ಪದ್ಧತಿ ಇತ್ತು. ಈ ರೀತಿಯಲ್ಲಿ ತಲೆ ಕೂದಲು ತೆಗೆಸಿಕೊಂಡ ವಿಧವೆಗೆ ಮುಂಡೆ ಎಂದು ಕರೆಯುತ್ತಿದ್ದರು. ಅಂದರೆ ಕೇಶ ಮುಂಡನಕ್ಕೆ ಒಳಗಾದವಳು ಮುಂಡೆ ಎಂದು ಅರ್ಥ. ಅವಳು ಯಾವುದೇ ಶುಭಕಾರ್ಯದಲ್ಲಿ ಭಾಗವಹಿಸಬಾರದು. ಅವಳು ಅವುಗಳಿಂದ ದೂರವಿರಬೇಕು ಎಂಬುವುದು ಅವರ ಸಂಪ್ರದಾಯವಾಗಿತ್ತು. ಇಂಥ ಸಂದರ್ಭಕೊಳಗಾದ ಸ್ತ್ರೀಯನ್ನು ಗುರುತಿಸುವ ಪದವೇ

ಮುಂಡೆ. ಈ ಪದವು ಗಂಡನ ಸಾವಿನ ನಂತರದ ಕ್ರಿಯೆಯಿಂದ ಬಂದಂತದ್ದು. ಇದು ತಲೆ ಬೋಳಿಸಿಕೊಂಡ ಸ್ತ್ರೀಯನ್ನು ಗುರುತಿಸುವುದರೊಂದಿಗೆ ಆ ಸ್ತ್ರೀ ಸಮಾಜಕ್ಕೆ ಅನಿಷ್ಟ ಎನ್ನುವ ಅರ್ಥದಲ್ಲಿ ಬಳಕೆಗೊಂಡು, ಈಗ ಸಾಮಾಜಿಕ ಸ್ಥಿತ್ಯಂತರಕ್ಕೊಳಗಾಗಿ ಯಾವ ಸಮುದಾಯದವರಾದರು ಬೈಗುಳವಾಗಿ ಬಳಸಬಹುದಾದ ಹಂತಕ್ಕೆ ಬಂದಿದೆ. ಇದು ತಲೆ ಬೋಳಿಸಿಕೊಂಡ ಪ್ರಕ್ರಿಯೆಗೊಳಗಾದವಳು ಎನ್ನುವ ಅರ್ಥವನ್ನು ಕಳೆದುಕೊಂಡು ಅನಿಷ್ಟ ಎನ್ನುವ ಸಿಮಿತಾರ್ಥಕ್ಕೆ ಬಂದು ನಿಂತಿದೆ. ಹಾಗಾಗಿ ಎಲ್ಲ ಸಮುದಾಯದಲ್ಲಿ ಈ ಪದ ಬೈಗುಳವಾಗಿ ಬಳಕೆಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಈ ಪದ್ಧತಿ ಬ್ರಾಹ್ಮಣ ಜಾತಿಯಲ್ಲಿ ತುಂಬಾ ಕಡಿಮೆಯಾಗಿದೆ.

ಬಸವಿ:–

ಬಳ್ಳಾರಿ ಜಿಲ್ಲೆಯ ಎಲ್ಲ ಹಳ್ಳಿಗಳಲ್ಲಿ ಹೆಣ್ಣನ್ನು ದೇವರಿಗೆ ಬೀಡುವ (ಅರ್ಪಿಸುವ) ಸಂಪ್ರದಾಯವನ್ನು ಕಾಣಬಹುದು. ದೇವರಿಗೆ ಹಲವು ಕಾರಣಗಳಿಗಾಗಿ ಕಟ್ಟಿಕೊಳ್ಳುತ್ತಿದ್ದ ಹರಕೆಯನ್ನು ತೀರಿಸುವ ಸಲುವಾಗಿ ತಮ್ಮ ಕುಂಟುಬದಲ್ಲಿರುವ ಒಂದು ಹೆಣ್ಣನ್ನು ದೇವರಿಗೆ ಅರ್ಪಿಸುತ್ತಿದ್ದರು. ಅಂದರೆ ಬಸವಿ ಬಿಡುತ್ತಿದ್ದರು.

ದೇವರಿಗೆ ಬಿಟ್ಟ ಹೆಣ್ಣಿನ ಜೀವನವೆಲ್ಲ ದೇವರ ಸೇವೆಗಾಗಿಯೇ ಮುಡಿಪಾಗಿರುತ್ತದೆ. ಗಂಡುಮಕ್ಕಳು ಇಲ್ಲದವರು ಕೇವಲ ಹೆಣ್ಣು ಮಕ್ಕಳುಳ್ಳವರು ತಮ್ಮ ಮುಂದಿನ ವಂಶೋದ್ಧಾರಕ್ಕಾಗಿ ಹೆಣ್ಣನ್ನು ದೇವರಿಗೆ ಬೀಡುತ್ತಿದ್ದರು. ಇವಳು ಸದಾ ಮುತ್ತೈದೆಯಾಗಿ ಇರುವಳು ಮತ್ತು ತಂದೆ ತಾಯಿಯ ಜೋತೆಯಲ್ಲಿ ಇರುತ್ತಾಳೆ. ಇವಳು ತಮ್ಮ ತಂದೆ ತಾಯಿಯ ಜವಬ್ದಾರಿಯನ್ನು ಹೊಂದಿರುತ್ತಾಳೆ. ಈ ಪದ್ಧತಿ ಕೇವಲ ಕೆಳವರ್ಗದಲ್ಲಿ ಅಂದರೆ ಬೋವಿ, ಮಾದಿಗ, ಬೇಡ ಜಾತಿಯಲ್ಲಿ ಮಾತ್ರ ಕಾಣಬಹುದು. ಬಸವಿಯಾದ ಹೆಣ್ಣು ಯಾವ ಪುರುಷನನ್ನಾದರೂ ಕೂಡುವ ಸ್ವಾತಂತ್ರ್ಯವನ್ನು ಪಡೆದಿರುತ್ತಾಳೆ. ಇವಳು ನಿತ್ಯಸುಮಂಗಲಿ ಆಗಿರುವುದ್ದರಿಂದ ಇವಳು ಎಲ್ಲ ಶುಭಕಾರ್ಯದಲ್ಲಿ ಪ್ರಮುಖ್ಯತೆಯನ್ನು ಹೊಂದಿರುತ್ತಾಳೆ. ಇದಕ್ಕೆ ಸಾಮಾಜಿಕ ಗೌರವ ಇದೆ. ಆದರೆ ಆಕೆಯ ಲೈಂಗಿಕ ಸಂಬಂಧಗಳ ಬಗ್ಗೆ ಜನರಲ್ಲಿ ತಿರಸ್ಕಾರ ಭಾವನೆ ಇರುವುದರಿಂದ ಈ ಪದ ಬೈಗುಳ ರೂಪವನ್ನು ಪಡೆದುಕೊಂಡಿದೆ. ಇತ್ತೀಚಿನ ದಿನಗಳಲ್ಲಿ ಈ ಪದ್ಧತಿ ಕಡಿಮೆಯಾಗಿದೆ.

ಸಾವಿನ ನಂತರ ನಡೆಯುವ ಆಚರಣೆಗಳಲ್ಲಿ ಬೈಗುಳಗಳ ರೂಪವನ್ನು ಕಾಣಬಹುದು. ಅವು ಕೇವಲ ಶಾಪರೂಪದಲ್ಲಿ ಇರುತ್ತವೆ.

ಉದಾ:–

ನಿನ್ ಚಾಪೆ ಸುತ್ತುಕೊಂಡು ಹೋಗ

ನಿನ್ ಬಕ್ಕ್‌ಬರಲು ಹೋಯ್

ಬಕ್ಕಬಾರ್ಲಬಡಿಯಾ

ಈ ಮೇಲಿನ ಶಾಪರೂಪದ ಬೈಗುಳಗಳು ಒಬ್ಬ ವ್ಯಕ್ತಿ ಪ್ರಾಪ್ತ ವಯಸ್ಸಿನಲ್ಲಿ ಮರಣ ಹೊಂದಿದಾಗ ಅಂದರೆ ಮದುವೆ ಮಾಡಿಕೊಳ್ಳದೆ ಸಾವನ್ನು ಅಪ್ಪಿದಾಗ ಅವನನ್ನು ಚಾಪೆಯಲ್ಲಿ ಸುತ್ತುಕೊಂಡು ಹೋಗುವುದು ಒಂದು ಸಂಪ್ರದಾಯವಿದೆ. ಹಾಗೂ ಸತ್ತ ವ್ಯಕ್ತಿಯನ್ನು ಉಲ್ಟ ಮಾಡಿ ಅಂದರೆ ಬಕ್ಕ್‌ಬಾರಲು ಮಲಿಸಿ ಸ್ಮಶಾನಕ್ಕೆ ತಗೊಂಡು ಹೋಗುವುದು ಒಂದು ಸಂಪ್ರದಾಯ ಕೆಲವು ಸಮುದಾಯಗಳಲ್ಲಿ ಈಗಲೂ ಇವೆ. ಹೀಗೆ ಆಚರಣೆಗಳಲ್ಲಿ ಇರುವ ಕೆಲವು ಪದ್ದತಿಗಳು ಬೈಗುಳಗಳಾಗಿ ಬಳಕೆಯಾಗುವುದನ್ನು ಕಾಣಬಹುದು. ಬೈಯುವಾಗ ನಿನಗೂ ಅಂತಹ ಸಾವು ಬರಲಿ ಎಂದು ಶಾಪಿಸುವುದನ್ನು ನೋಡಬಹುದು. ಹಿಂದೆ ಅದರ ಅರ್ಥ ಏನಾಗಿತ್ತು ಹೀಗ ಅವು ಪಡೆದುಕೊಂಡ ಅರ್ಥ ಏನು ಎಂಬುದನ್ನು ಇಲ್ಲಿ ಕಾಣಬಹುದು.

೬.೨. ಬೈಗುಳ ಸಾಮಾಜಿಕ, ಆರ್ಥಿಕ ಸ್ಥಾನಗಳ ಪಲ್ಲಟ ಚಲನೆ ಹಿನ್ನೆಲೆಯಲ್ಲಿ–ಆಧುನಿಕ ವಿನ್ಯಾಸಗಳು:–

ಸಾಮಾಜಿಕವಾಗಿ ಆರ್ಥಿಕ ಸ್ಥಾನ ಪಲ್ಲಟವಾದಾಗ ಬೈಗುಳಗಳ ರಚನೆ ಮತ್ತು ಬಳಕೆ ಹೇಗಿರುತ್ತದೆ ಎಂಬುದನ್ನು ಇಲ್ಲಿ ಚರ್ಚಿಸಲಾಗುತ್ತದೆ. ಒಬ್ಬ ವ್ಯಕ್ತಿ ತಾನು ಉನ್ನತ ಸ್ಥಾನಕ್ಕೆ ಮತ್ತು ಶಿಕ್ಷಣವನ್ನು ಪಡೆದಾಗ ಅವನ ಬೈಗುಳದ ಸ್ವರೂಪವೇನು ಎಂಬುವುದನ್ನು ಹಾಗೂ ಆಧುನಿಕ ಸಂದರ್ಭದಲ್ಲಿ ಬೈಗುಳಗಳ ಸ್ವರೂಪವೇನು ಎಂಬುವುದನ್ನು ಸಹ ಇಲ್ಲಿ ವಿವರಿಸಲಾಗಿದೆ.

ಮೂರು ನೆಲೆಯಲ್ಲಿ ಆಧುನಿಕ ವಿನ್ಯಾಸವನ್ನು ಚರ್ಚಿಸಬಹುದು.

೬.೨.೧. ಒಬ್ಬ ವ್ಯಕ್ತಿ ಶಿಕ್ಷಣವನ್ನು ಪಡೆದಾಗ ಬಳಕೆ ಮಾಡುವ ಬೈಗುಳದ ಸ್ವರೂಪ

೬.೨.೨. ಒಬ್ಬ ವ್ಯಕ್ತಿ ಉದ್ಯೋಗ (ಉನ್ನತ ಸ್ಥಾನ) ಪಡೆದಾಗ ಬಳಕೆ ಮಾಡುವ ಬೈಗುಳದ ಸ್ವರೂಪ

೬.೨.೩. ಆಧುನಿಕ ಸಂದರ್ಭದಲ್ಲಿ ಸಂಕ್ಷಿಪ್ತ ಬೈಗುಳದ ಸ್ವರೂಪ

೬.೨.೧. ಒಬ್ಬ ವ್ಯಕ್ತಿ ಶಿಕ್ಷಣವನ್ನು ಪಡೆದಾಗ ಬಳಕೆ ಮಾಡುವ ಬೈಗುಳದ ಸ್ವರೂಪ

ಒಬ್ಬ ಕೆಳವರ್ಗದ ಅಥವಾ ಮೇಲ್ವರ್ಗದ ವ್ಯಕ್ತಿ ತಾನು ಶಿಕ್ಷಣ ಪಡೆದಾಗ ಅವರ ಬೈಗುಳದ ಬಳಕೆ ಬೇರೆಯಾಗಿರುತ್ತದೆ. ಅವರು ಬೈಯುವಾಗ ಬೈಗುಳಗಳನ್ನು ಬಳಕೆ ಮಾಡಿದರೂ ತೀರ ಅಶ್ಲೀಲವಾದ ಬೈಗುಳಗಳನ್ನು ಬಳಕೆ ಮಾಡುವುದಿಲ್ಲ. ತಾನು ಶಿಕ್ಷಣವನ್ನು ಪಡೆದಿದ್ದೆನೆ ಈ ರೀತಿಯ ಅಶ್ಲೀಲ ಬೈಗುಳಗಳನ್ನು ಬಳಕೆ ಮಾಡಬಾರದು ಎಂಬ ಅರಿವು ಅವರಿಗೆ ಇರುವುದರಿಂದ ಅವರು ಆ ರೀತಿಯ ಬೈಗುಳಗಳನ್ನು ಬಳಕೆ ಮಾಡುವುದಿಲ್ಲ. ಒಂದು ವೇಳೆ ಬಳಕೆ ಮಾಡಿದರೆ ಆ ಬೈಗುಳ ಹೀಗೆ ಇವೆ.

ಉದಾ:-

ಮಗನೆ

ತಿಕ್ಕ

ಕತ್ತೆ

ಹಂದಿ

ನಾಯಿ

ಕೋತಿ

ಎಂದು ಪ್ರಾಣಿ ಸೂಚಕ ಬೈಗುಳಗಳನ್ನು ಬಳಕೆ ಮಾಡಲು ಶುರುಮಾಡುತ್ತಾರೆ. ಹೀಗೆ ಶಿಕ್ಷಣ ಹೊಂದಿದ ವ್ಯಕ್ತಿಗಳು ಅಶ್ಲೀಲ ಬೈಗುಳಗಳಿಂದ ಪ್ರಾಣಿ ಸೂಚಕ ಬೈಗುಳಗಳಿಗೆ ಪಲ್ಲಟವಾಗುತ್ತಾರೆ ಎಂದು ಹೇಳಬಹುದು.

೬.೨.೨. ಒಬ್ಬ ವ್ಯಕ್ತಿ ಉದ್ಯೋಗ (ಉನ್ನತ ಸ್ಥಾನ) ಪಡೆದಾಗ ಬಳಕೆ ಮಾಡುವ ಬೈಗುಳದ ಸ್ವರೂಪ:-

ಕೆಳವರ್ಗದ ಅಥವಾ ಮೇಲ್ವರ್ಗದ ಒಬ್ಬ ವ್ಯಕ್ತಿ ತಾನು ಉನ್ನತ ಉದ್ಯೋಗಕ್ಕೆ (ಸ್ಥಾನಕ್ಕೆ) ಬಂದಾಗ ಅವರು ಮಾತಾನಾಡುವ ಭಾಷೆ ಪಲ್ಲಟವಾಗುತ್ತದೆ. ಹಾಗೇಯೆ ಅವರ ಬೈಗುಳಗಳು ಸಹ ಪಲ್ಲಟವಾಗುತ್ತವೆ ಎಂದು ಹೇಳಬಹುದು. ಯಾಕೆಂದರೆ ಅವನು ಮುಂಚೆ ಸಾಮಾನ್ಯ ವ್ಯಕ್ತಿ ಆಗಿದ್ದಾಗ ಅವರ ಮೂಲ ಭಾಷೆಯನ್ನೆ ಮಾತಾನಾಡುತ್ತಿರುತ್ತಾರೆ. ಹಾಗೇಯೆ ಅವರು ಸಹ ಅಶ್ಲೀಲ ಬೈಗುಳಗಳನ್ನು ಬಳಕೆ ಮಾಡುತ್ತ ಇರುತ್ತಾರೆ. ಆದರೆ ಅದೇ ತಾನು ಉನ್ನತ ಸ್ಥಾನಕ್ಕೆ ಅಥವಾ ಉದ್ಯೋಗ ಪಡೆದಾಗ ಅವರ ಗೌರವಕ್ಕೆ ಧಕ್ಕೆ ಆಗುತ್ತೆ ಅವರು ಎಂದು ತಮ್ಮ ಮೂಲ ಭಾಷೆಯಿಂದ ಪಲ್ಲಟವಾಗುತ್ತಾರೆ. ಹಾಗೇಯೆ ಅವರು ಬೈಯುವ ಬೈಗುಳಗಳು ಸಹ ಬೇರೆಯಾಗಿರುತ್ತವೆ.

ಉದಾ:-

ಸ್ಟುಪಿಡ್

ಲೋಫರ್

ದನಕಾಯೋನೆ

ಕತ್ತೆಕಾಯೋನೆ

ಹಂದಿಕಾಯೋನೆ

ಸುವ್ವರ್

ಲೌಡಿ

ಬೇಕುಬ್/ ಬೇಕುಫ್

ಅವರು ತೀರ ಅಶ್ಲೀಲ ಬೈಗುಳಗಳನ್ನೆ ಬಳಕೆ ಮಾಡುತ್ತ ಇರುತ್ತಾರೆ. ಆದರೆ ಆ ಬೈಗುಳ ಪದದ ಮೂಲಾರ್ಥ ಅವರಿಗೂ ತಿಳಿದಿರುವುದಿಲ್ಲ ಮತ್ತು ಬೈಯಿಸಿಕೊಳ್ಳುವವರಿಗೂ ಗೊತ್ತಿರುವುದಿಲ್ಲ. ಆದರೆ ಕನ್ನಡ ಬೈಗುಳದ ಪದಗಳನ್ನು ಬಳಕೆ ಮಾಡುವುದಿಲ್ಲ ಅಷ್ಟೆ ಆದರೆ ಬೇರೆ ಭಾಷೆಯ ಬೈಗುಳಗಳಿಗೆ ಪಲ್ಲಟವಾಗುತ್ತಾರೆ ಎಂಬುವುದನ್ನು ನಾವು ನೋಡಬಹುದು.

೬.೧.೩.ಆಧುನಿಕ ಸಂದರ್ಭದಲ್ಲಿ ಸಂಕ್ಷಿಪ್ತ ಬೈಗುಳದ ಸ್ವರೂಪ:–

ಆಧುನಿಕ ಸಂದರ್ಭದಲ್ಲಿ ಬೈಗುಳಗಳು ಸಂಕ್ಷಿಪ್ತ ರೂಪ ಪಡೆದುಕೊಂಡಿರುವುದನ್ನು ನೋಡಬಹುದು.

ಉದಾ:–

ಸೂಮಗನೆ

ಬೋ ಮಗನೆ

ಕಮಗನೆ

ಕಸೂಮಗನೆ

ಕುಸುಮ

ನೀಮೌನವಾಗಿರು

ಮುಮಗನೆ

ಹೀಗೆ ಬೈಗುಳಗಳು ಸಂಕ್ಷಿಪ್ತವಾಗಿರುವುದನ್ನು ಕಾಣಬಹುದು.

ಸೂಮಗನೆ ಅಂದರೆ ಸೂಳೆಮಗ ಎಂದು ಅರ್ಥ. ಆಧುನಿಕ ಸಂದರ್ಭದಲ್ಲಿ ಈ ರೀತಿಯಲ್ಲಿ ಬೈಗುಳಗಳು ಸಂಕ್ಷಿಪ್ತತೆಯನ್ನು ಹೊಂದಿವೆ. ಇದರ ಅರ್ಥ ಇಷ್ಟೇ. ಬೈಯುವವರಿಗೆ ನಾನು ಏನು ಬೈಯುತ್ತೆನೆ ಎಂಬುವುದು ಅವರಿಗೆ ತಿಳಿದಿರುತ್ತದೆ. ಆದರೆ ಬೈಯಿಸಿಕೊಳ್ಳುವವರಿಗೆ ಅವರು ಏನೂ ಬೈದರು ಎಂಬುದು ತಿಳಿದಿರುವುದಿಲ್ಲ ಹೀಗೆ ಬೈಗುಳಗಳು ಸಂಕ್ಷಿಪ್ತತೆಯ ರಚನೆಯನ್ನು ಹೊಂದಿವೆ. ಈ ಬೈಗುಳಗಳು ಸ್ನೇಹಿತರು ಸ್ನೇಹಿತರಿಗೆ ಬೈಯುವಾಗ ಬಳಕೆ ಮಾಡುತ್ತಾರೆ ಮತ್ತು ಅಪರಿಚಿತ ವ್ಯಕ್ತಿಯನ್ನು ಬೈಯುವಾಗಲೂ ಈ ರೀತಿಯ ಬೈಗುಳಗಳನ್ನು ಬಳಕೆ ಮಾಡುವುದನ್ನು ನೋಡಬಹುದು. ಈ ಬೈಗುಳಗಳ ರಚನೆಯು ಹೆಣ್ಣನ್ನು ಒಳಗೊಂಡೇ ರಚನೆಯಾಗಿವೆ ಎಂಬುದುನ್ನು ತಿಳಿಯಬಹುದು. ಹೀಗೆ ಸಂಕ್ಷಿಪ್ತ ಬೈಗುಳಗಳ ಪೂರ್ಣ ಅರ್ಥವನ್ನು ನೋಡುವುದಾದರೆ,

ಬೋಮಗನೆ	–	ಬೋಳಿಮಗನೆ
ಕಮಗನೆ	–	ಕಂತ್ರಿಮಗನೆ
ಕಸೂಮಗನೆ	–	ಕಂತ್ರಿಸೂಳೆಮಗನೆ
ಕಮಗನೆ	–	ಕಳ್ಳನನ್ ಮಗನೆ
ಕುಸುಮ	–	ಕುಂಟುಸೂಳೆಮಗ
ಮುಮಗನೆ	–	ಮುಂಡೆಮಗನೆ
ನೀ ಮೌನವಾಗಿರು	–	ನಿಮ್ಮವ್ವನ

ಇವು ಈ ಸಂಕ್ಷಿಪ್ತ ಬೈಗುಳಗಳ ಪೂರ್ಣರಚನೆಯಾಗಿವೆ. ಪೂರ್ಣ ಅರ್ಥವನ್ನು ನೋಡಿದಾಗ ಅವು ಸಂಕ್ಷಿಪ್ತಗೊಂಡರೂ ಹೆಣ್ಣನ್ನು ಒಳಗೊಂಡೇ ರಚನೆ ಆಗಿರುವುದು ಒಂದು ವಿಶೇಷವಾಗಿದೆ ಎಂದು ಹೇಳಬಹುದು. ಸಂಕ್ಷಿಪ್ತ ಬೈಗುಳದ ಉದ್ದೇಶ ಬೈಯಿಸಿಕೊಳ್ಳುವವರಿಗೆ ಏನು ಬೈಯುತ್ತಾರೆ ಅಂತಾ ಅರ್ಥವಾಗಬಾರದು ಎಂಬುವುದು ಬೈಯುವವರ ಉದ್ದೇಶವಾಗಿರುತ್ತದೆ ಅಷ್ಟೇ ಎಂದು ಹೇಳಬಹುದು.

ಹೀಗೆ ಬೈಗುಳದ ಸಾಮಾಜಿಕ ಆರ್ಥಿಕ ಸ್ಥಾನಗಳಲ್ಲಿ ಬೈಗುಳ ಪಲ್ಲಟವಾಗಿರುವುನ್ನು ಕಾಣಬಹುದು ಮತ್ತು ಆಧುನಿಕ ಬೈಗುಳದ ವಿನ್ಯಾಸವನ್ನು ಕಾಣಬಹುದು ಇವುಗಳು ಎಲ್ಲವೂ ಹೆಣ್ಣನ್ನೆ ಕೇಂದ್ರೀಕರಿಸಿಕೊಂಡು ರಚನೆಯಾಗಿವೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

* * *

ಅಧ್ಯಾಯ : ೭

ಸಮಾರೋಪ

ಅಧ್ಯಾಯ-೭

ಸಮಾರೋಪ

ಬೈಗುಳದ ಬಗೆಗೆ ಈವರೆಗೆ ನಡೆದಿರುವ ಅಧ್ಯಯನಗಳನ್ನು ಗಮನಿಸಿ ಅವುಗಳ ನೆರವಿನಿಂದ ಪ್ರಸ್ತುತ ಪ್ರಬಂಧಕ್ಕೆ ಹೊಸ ಮಾದರಿಯೊಂದನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯ ಮೂಲಕ ಸಮಾಜದಲ್ಲಿ ಬಳಕೆಯಲ್ಲಿರುವ ಬೈಗುಳಗಳ ಸ್ವರೂಪದಲ್ಲಿ ಕಂಡುಬರುವ ಕೆಲವು ಪ್ರಮುಖ ಅಂಶಗಳನ್ನು ಗುರುತಿಸಿ ಅವುಗಳ ಮೂಲಕ ಹೆಣ್ಣು ಸಂಕಥನವನ್ನು ಗುರುತಿಸಲಾಗಿದೆ.

ಈ ಅಧ್ಯಯನದ ಮೊದಲ ಉದ್ದೇಶ ಬೈಗುಳಗಳ ಬಳಕೆಯ ಸಾಮಾಜಿಕ ವಿನ್ಯಾಸವನ್ನು ಗುರುತಿಸುವುದಾಗಿತ್ತು. ಬೈಗುಳಗಳ ರಚನೆ ಮತ್ತು ಬಳಕೆಯು ಕೂಡ ತುಂಬಾ ಸೂಕ್ಷ್ಮವಾದ ಅಂಶಗಳಲ್ಲೊಂದಾಗಿದೆ. ಸಮಾಜದಲ್ಲಿ ಬಳಕೆಯಲ್ಲಿರುವ ಬೈಗುಳಗಳು ಒಂದು ರೀತಿಯ ಸಿದ್ಧ ಮಾದರಿಯಾಗಳಾಗಿ ಕಾಣಿಸುತ್ತವೆ. ಅದರಲ್ಲೂ ಹೆಚ್ಚಾಗಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಬೈಗುಳಗಳ ರಚನೆಯೇ ಹೆಚ್ಚಾಗಿ ಕಂಡುಬರುತ್ತವೆ. ಗಂಡಿಗೆ ಸಂಬಂಧಿಸಿದ ಬೈಗುಳಗಳು ಇದ್ದರೂ ಅದಕ್ಕೆ ಸ್ತ್ರೀವಾಚಕವನ್ನು ಸೇರಿಸಿಯೇ ಗಂಡಸರಿಗೆ ಬೈಯುವುದನ್ನು ಇಲ್ಲಿ ಗುರುತಿಸಲಾಗಿದೆ. ಹಾಗೆಯೇ ಬೈಗುಳಗಳು ಸಿದ್ಧಮಾದರಿಯಾಗಿದ್ದರೂ ಸಹ ಕೆಲವೊಮ್ಮೆ ಅಧಿಕಾರ, ಶಿಕ್ಷಣ, ಅಂತಸ್ತು ಇವುಗಳು ಮುಖ್ಯವಾಗಿರುವುದರಿಂದ ಬೈಗುಳಗಳನ್ನು ಬಳಕೆ ಮಾಡುವುದು ಆಯಾಯ ವರ್ಗಕ್ಕೆ ಸಂಬಂಧಿಸಿರುತ್ತದೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ. ಸಂದರ್ಭಕ್ಕೆ ತಕ್ಕಂತೆ ಇಂಗ್ಲಿಷ್ ಮತ್ತು ಬೇರೆ ಭಾಷೆಯ ಬೈಗುಳಗಳನ್ನು ಬಳಸಿಕೊಂಡು ಬೈಯುವುದು ಸಹ ಆಯಾ ಸಾಮಾಜಿಕ ವರ್ಗ ಹಾಗೂ ತಲೆಮಾರುಗಳ ಹಿನ್ನೆಲೆಯಲ್ಲಿ ಬಳಕೆಯಾಗುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ.

ಬೈಗುಳಗಳಲ್ಲಿ ಹೆಣ್ಣಿನ ಪ್ರತಿನೀಧಿಕರಣವನ್ನು ಗುರುತಿಸುವುದು ಈ ಅಧ್ಯಯನದ ಮತ್ತೊಂದು ಉದ್ದೇಶವನ್ನು ಹೊಂದಿತ್ತು. ಸಮಾಜ ಬೈಗುಳಗಳ ಮೂಲಕ ಹೆಣ್ಣನ್ನು ನೋಡಿದ ದೃಷ್ಟಿಕೋನ ಮತ್ತು ಆದರ್ಶದ ಹೆಸರಿನಲ್ಲಿ ಹೆಣ್ಣಿನ ಮೇಲೆ ಹೇರಿರುವ ನಿರ್ಬಂಧಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಆದರ್ಶದ ಮಾತುಗಳನ್ನಾಡುತ್ತ ಹೆಣ್ಣನ್ನು ನಿಬಂಧಿಸಿವೆ ಮತ್ತು ಕೆಲವೊಮ್ಮೆ ಗಂಡಸು ಮಾಡುವ ತಪ್ಪುಗಳನ್ನು ಹೆಣ್ಣಿನ ನಡತೆ, ಚಾರಿತ್ರ್ಯಕ್ಕೆ ಸಂಬಂಧಿಸಿದ ಗಾದೆ, ಒಗಟುಗಳನ್ನು ಬಳಸುವುದನ್ನು ಗುರುತಿಸಲಾಗಿದೆ. ಸಮಾಜ ಹೆಣ್ಣಿನ ವಿಷಯದಲ್ಲಿ ನಿರೂಪಿಸಿರುವ ಕಟ್ಟುಪಾಡು, ಮೌಲ್ಯ ಆದರ್ಶಗಳ ಪರಿಕಲ್ಪನೆಯನ್ನು ಹೆಣ್ಣಿನ ವ್ಯಕ್ತಿತ್ವದಲ್ಲಿ ರೂಪುಗೊಂಡಿರುವುದನ್ನು ಬೈಗುಳದ ಮೂಲಕ ಗುರುತಿಸಲಾಗಿದೆ.

ಭಾಷಿಕ ಸಂಕಥನಗಳಲ್ಲಿ ಬೈಗುಳಗಳ ನಿರೂಪಣೆ ಹೇಗಿದೆ ಎಂಬುದುದನ್ನು ಪರಿಶೀಲಿಸುವುದು ಈ ಅಧ್ಯಯನದ ಮತ್ತೊಂದು ಉದ್ದೇಶವಾಗಿತ್ತು. ನಮ್ಮ ಸಾಮಾಜಿಕ ಸಂರಚನೆಯಲ್ಲಿ ಗಾದೆ, ಒಗಟು, ನುಡಿಗಟ್ಟು, ಬೈಗುಳ ಮುಂತಾದವುಗಳು ಹೆಣ್ಣಿನ ಜಾತಿ, ವರ್ಗ, ಶ್ರೇಣಿ, ಅಂತಸ್ತುಗಳಿಗೆ ಅನುಗುಣವಾಗಿ ಬಳಕೆಯಲ್ಲಿದೆ ಎಂಬುದನ್ನು ಗುರುತಿಸಲಾಗಿದೆ ಮತ್ತು ಗಾದೆ, ಬೈಗುಳ, ನುಡಿಗಟ್ಟು, ಒಡಪು ಇತ್ಯಾದಿ ಸಂಕಥನಗಳ ನಿರೂಪಣೆಗಳನ್ನು ಗಮನಿಸಿದರೆ ಹೆಣ್ಣಿನ ಮಾತಿಗೆ ಸ್ವತಂತ್ರ್ಯವು ನಿಷೇಧಾತ್ಮಕವಾಗಿಯೇ ಹೆಚ್ಚು ಬಳಕೆಯಲ್ಲಿವೆ ಎಂಬುದನ್ನು ಗುರುತಿಸಲಾಗಿದೆ.

ಬೈಗುಳಗಳ ಭಾಷೆಯಲ್ಲಿ ಲಿಂಗತಾರತಮ್ಯವನ್ನು ಗುರುತಿಸುವುದು ಈ ಅಧ್ಯಯನದ ಮತ್ತೊಂದು ಉದ್ದೇಶವನ್ನು ಹೊಂದಿತ್ತು. ಶಾಪರೂಪದ ಬೈಗುಳಗಳನ್ನು ಹೆಂಗಸರೇ ಹೆಚ್ಚು ಬಳಸುತ್ತಾರೆ. ಈ ಶಾಪರೂಪದ ಬೈಗುಳಗಳನ್ನು ಬಳಸಲು ಕಾರಣ ವ್ಯಕ್ತಿ ಅನುಭವಿಸಿರುವ ತೀವ್ರವಾದ ನೋವು ಕಾರಣವಾಗಿರುತ್ತದೆ. ಮತ್ತು ತಮ್ಮ ಎದುರಾಳಿಯನ್ನು ಸದೆ ಬಡಿಯಲು ದೈಹಿಕ ಶಕ್ತಿಗಿಂತ ಹೆಚ್ಚಾಗಿ ಮಾತಿನ ಶಕ್ತಿಯನ್ನು ಹೆಂಗಸರು ಅವಲಂಬಿಸಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ.

ಜಾತಿ ಆಧಾರಿತವಾಗಿ ಬೈಗುಳಗಳ ಬಳಕೆಯಲ್ಲಿ ಕೆಲವು ಸ್ವಯಂ ನಿರ್ಬಂಧಗಳಿವೆ. ಇವುಗಳು ಶಿಕ್ಷಿತ ಮತ್ತು ಅಶಿಕ್ಷಿತ ಹೆಣ್ಣು ಮತ್ತು ಗಂಡು ಬಳಸುವಾಗ ವ್ಯತ್ಯಾಸಗಳು ಕಂಡುಬಂದಿವೆ. ಹೆಚ್ಚು ಅಶ್ಲೀಲವಾದ ಬೈಗುಳ ಪದಗಳನ್ನು ಬಳಸುವಾಗ ಶಿಕ್ಷಿತ ಮತ್ತು ಹೆಣ್ಣು ಬಳಸುವಾಗ ಕೆಲವು ಸ್ವಯಂ ಅಥವ ಹೇರಲ್ಪಟ್ಟ ನಿರ್ಬಂಧಗಳಿರುವುದು ಕಂಡುಬಂದಿದೆ. ಅದೇ ಅಶಿಕ್ಷಿತ ಮತ್ತು ಗಂಡು ಬಳಸುವಲ್ಲಿ ಈ ನಿರ್ಬಂಧಗಳು ಇರವು. ಇದು ಗಾದೆ ಒಗಟು, ಒಡಪು, ನುಡಿಗಟ್ಟುಗಳಲ್ಲಿ ಬೈಗುಳ ಪದಗಳನ್ನು ಬಳಸುವಲ್ಲಿಯೂ ಕಂಡುಬಂದಿರುವುದು ಅಧ್ಯಯನ ಸಂದರ್ಭದಲ್ಲಿ ಗುರುತಿಸಲಾಗಿದೆ.

ಗಂಡಿಗೆ ಆರೋಪ ಮಾಡಿ ಬೈಯುವುದು ಸಹ ಹೆಣ್ಣಿನ ಮೂಲಕವೇ ಎಂಬ ಅಂಶವನ್ನು ತಿಳಿಯಬೇಕಾಗುತ್ತದೆ. ಹೆಣ್ಣು, ಗಂಡು, ಹಿರಿಯರು, ಕಿರಿಯರು ಎಲ್ಲರೂ ಈ ಆರೋಪ ರೂಪದ ಬೈಗುಳಗಳನ್ನು ಬಳಕೆ ಮಾಡುತ್ತಾರೆ. ಅವರ ಉದ್ದೇಶ ಮತ್ತು ಸಂದರ್ಭಗಳು ಬೇರೆಯಾಗಿರುತ್ತದೆ ಎಂಬುವುದನ್ನು ಇಲ್ಲಿ ಗುರುತಿಸಲಾಗಿದೆ.

ಸಾಮಾಜಿಕ ಸಂಗತಿಯ ಮೂಲಕ ಭಾಷಿಕ ರಚನೆಗಳು ಹೇಗೆ ಉಂಟಾಗುತ್ತವೆ ಎಂಬುದನ್ನು ಕುರಿತು ವಿಶ್ಲೇಷಿಸುವುದು ಈ ಅಧ್ಯಯನದ ಮತ್ತೊಂದು ಉದ್ದೇಶವಾಗಿತ್ತು. ಸಮುದಾಯ ಹೆಣ್ಣಿಗಾಗಿ ಸೃಷ್ಟಿಸಿದ ಬೈಗುಳಗಳನ್ನು ನೋಡಿದರೆ ಹೆಣ್ಣನ್ನು ಯಾವತ್ತು ಸಕಾರಾತ್ಮಕವಾಗಿ ಗ್ರಹಿಸಿಯೇ ಇಲ್ಲ ಎಂಬುದು ಕಂಡುಬರುತ್ತದೆ. ಆದರೆ ಹೆಣ್ಣಿಗೆ ಸಂಬಂಧಿಸಿದ ಬೈಗುಳಗಳು ಹೀನಾರ್ಥವಾಗಿ ಗ್ರಹಿಸುವ ಬದಲು ಸಕಾರಾತ್ಮಕವಾಗಿ ಯೋಚನೆ ಮಾಡಿದರೆ ಈ ಬೈಗುಳಗಳ ಅರ್ಥಗ್ರಹಿಕೆ ಬೇರೆಯಾಗುತ್ತದೆ. ಈ ಬೈಗುಳಗಳ ಮೂಲ ಅರ್ಥವು ಪ್ರಸ್ತುತ ಅಥವಾ ಬೈಗುಳವಾಗಿ ಬಳಕೆಯಾಗುತ್ತಿರುವ ಅರ್ಥಕ್ಕಿಂತ ಬೇರೆಯಾಗಿವೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ. ಸೂಳೆ, ಬೊಡ್ಡಿ, ಬಸವಿ ಇಂಥ ಬೈಗುಳ ಪದಗಳ ಚಾರಿತ್ರಿಕ ಬೆಳವಣಿಗೆ ನೋಡಿದರೆ ಅರ್ಥಮಾಡಿಕೊಳ್ಳಬಹುದು. ಹೆಣ್ಣು ಹೇಳಲು ಬಯಸಿರುವುದು ನಕಾರಾತ್ಮಕವಾಗಿ ಯೋಚನೆ ಮಾಡುವುದರಕ್ಕಿಂತ ಸಕಾರಾತ್ಮಕವಾಗಿ ಸಮುದಾಯ ಅಥವಾ ಸಮಾಜ ಯೋಚನೆ ಮಾಡಿದರೆ ಈ ರೀತಿಯ ಬೈಗುಳಗಳು ರಚನೆಯಾಗುವುದಿಲ್ಲ ಎಂಬುವುದನ್ನು ಇಲ್ಲಿ ಗುರುತಿಸಲಾಗಿದೆ.

ಬೈಗುಳದ ಮಾತುಗಳನ್ನು ಸ್ನೇಹ, ಪ್ರೀತಿ, ಕೋಪ, ಮೆಚ್ಚುಗೆಯ ಸಂದರ್ಭದಲ್ಲಿ ಯಾರು-ಯಾರಿಗೆ ಹೇಗೆ ಬೈಯುತ್ತಾರೆ ಎಂಬುವುದನ್ನು ಇಲ್ಲಿ ನೋಡಲಾಗಿದೆ. ಸಂದರ್ಭಕ್ಕೆ ಅನುಗುಣವಾಗಿ ಬೈಗುಳದ ಅಭಿವ್ಯಕ್ತಿ ವಿಧಾನ ಹೇಗೆ ಇರುತ್ತದೆ ಎಂಬುದನ್ನು ಮತ್ತು ಬೈಗುಳಗಳನ್ನು ಹೆಚ್ಚಾಗಿ ಯಾರು ಬಳಸುತ್ತಾರೆ. ಅದರ ಅಭಿವ್ಯಕ್ತಿ ವಿಧಾನ ಹೇಗೆ ಇರುತ್ತದೆ ಎಂಬುದನ್ನು ಹಾಗೂ ಅನಕ್ಷರಸ್ಥರಾಗಲಿ, ಅಕ್ಷರಸ್ಥರಾಗಲಿ ಬೈಯುವಾಗ ಹೆಚ್ಚಾಗಿ ಹೆಣ್ಣನ್ನು ಕೇಂದ್ರವಾಗಿರಿಸಿಕೊಂಡು ತಮ್ಮ ಭಾವನೆಯನ್ನು ಬೈಗುಳದ ಮೂಲಕ ವ್ಯಕ್ತಪಡಿಸುವುದನ್ನು ಸಹ ಇಲ್ಲಿ ಗುರುತಿಸಲಾಗಿದೆ.

ಸಾಮಾಜಿಕ ಸಂದರ್ಭದಲ್ಲಿ ಬಳಕೆಯಾಗುವ ಗಂಡಿಗೆ ಸಂಬಂಧಿಸಿದ ಬೈಗುಳ ಮತ್ತು ಹೆಣ್ಣಿಗೆ ಸಂಬಂಧಿಸಿದ ಬೈಗುಳಗಳಲ್ಲಿನ ಭಿನ್ನತೆಯನ್ನು ಗುರುತಿಸುವುದು ಒಂದು ಮಾದರಿಯಾದರೆ, ಗಂಡಿಗೆ ಸಂಬಂಧಿಸಿದ ಬೈಗುಳ ಮತ್ತು ಹೆಣ್ಣಿಗೆ ಸಂಬಂಧಿಸಿದ ಬೈಗುಳದ ಭಾಷಾ ಭಿನ್ನತೆಯನ್ನು ಗುರುತಿಸುವುದು ಮತ್ತೊಂದು ಮಾದರಿಯಾಗಿದೆ ಎಂಬುವುದನ್ನು ಗುರುತಿಸಲಾಗಿದೆ.

ಮೇಲ್ವರ್ಗದವರು ಕೆಳವರ್ಗದವರಿಗೆ ಹೇಗೆ ಬೈಯುತ್ತಾರೆ. ಕೆಳವರ್ಗದವರು ಮೇಲ್ವರ್ಗದವರಿಗೆ ಹೇಗೆ ಬೈಯುತ್ತಾರೆ ಎಂಬುವುದನ್ನು ಮತ್ತು ಅವರು ಯಾವ ಯಾವ ರೀತಿಯ ಬೈಗುಳಗಳನ್ನು ಬಳಕೆ ಮಾಡುತ್ತಾರೆ ಎಂಬುವುದನ್ನು ಬೈಗುಳಗಳ ಭಾಷಿಕ ಅಂಶಗಳ ಮೂಲಕ ಇಲ್ಲಿ ಗುರುತಿಸಲಾಗಿದೆ.

ಮುಂದಿನ ಅಧ್ಯಯನದ ಸಾಧ್ಯತೆಗಳು

- ಹೆಣ್ಣು ಬೈಗುಳಗಳ ಭಾಷೆ ಕುರಿತಂತೆ ಪ್ರಾದೇಶಿಕವಾಗಿ ಸೂಕ್ಷ್ಮ ವ್ಯತ್ಯಾಸ ಗುರುತಿಸುವುದು ಸಾಧ್ಯವಿದೆ. ಪ್ರತಿ ಭೌಗೋಳಿಕ ಅಡೆತಡೆಗಳ ಕಾರಣದಿಂದ ಬೈಗುಳಗಳನ್ನು ಭಾಷೆಯಲ್ಲಿ ವ್ಯತ್ಯಾಸವಿದೆ. ಇವುಗಳನ್ನು ಲಿಂಗಾಧಾರಿತವಾಗಿ ಅಧ್ಯಯನ ನಡೆಸಲು ಅವಕಾಶವಿದೆ.

- ಹೈದ್ರಾಬಾದ್ ಕರ್ನಾಟಕವನ್ನು ಅನುಲಕ್ಷಿಸಿ, ಬೈಗುಳಗಳನ್ನು ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮತ್ತು ಭಾಷಿಕವಾಗಿ ಅಧ್ಯಯನವನ್ನು ಮಾಡಬಹುದು.

- ಹೆಣ್ಣು ಭಾಷೆಯ ಹಿನ್ನೆಲೆಯಿಂದ ಸಮಾಜದಲ್ಲಿನ ಗಾದೆಗಳಲ್ಲಿ ಬಳಕೆಯಾಗುವ ಬೈಗುಳಗಳ ಕುರಿತಂತೆ ಮತ್ತು ನುಡಿಗಟ್ಟುಗಳಲ್ಲಿ ಬಳಕೆಯಾಗುವ ಬೈಗುಳ ಹಾಗೂ ಒಡಪುಗಳಲ್ಲಿ ಬಳಕೆಯಾಗುವ ಬೈಗುಳಕ್ಕೆ ಅನುಗುಣವಾಗಿ ಪೂರ್ಣಪ್ರಮಾಣದ ಅಧ್ಯಯನಗಳು ಇದುವರೆಗೂ ನಡೆದಿಲ್ಲ. ಇವುಗಳನ್ನು ಇಟ್ಟುಕೊಂಡು ಒಂದು ಸ್ಥೂಲ ಅಧ್ಯಯನ ನಡೆಸಬಹುದಾಗಿದೆ.

- ಸಾಹಿತ್ಯದ ಭಾಷೆಯ ಒಳಗಡೆ ಅಂದರೆ ಕಾದಂಬರಿ, ಕಥೆಗಳಲ್ಲಿ ಬಳಕೆಯಾಗುವ ಬೈಗುಳಗಳನ್ನು ಗುರುತಿಸಿಕೊಂಡು ಲಿಂಗಾಧಾರಿತವಾಗಿ ಅಧ್ಯಯನ ಮಾಡುವುದು ಸಾಧ್ಯವಿದೆ.

- ನಿಘಂಟು ಮತ್ತು ಪದಕೋಶಗಳಲ್ಲಿ ಹೆಣ್ಣಿಗೆ ಸಂಬಂಧಿಸಿ ಬೈಗುಳಗಳನ್ನು ವಿವರಿಸುವ ವಿಧಾನವನ್ನು ಕುರಿತಂತೆ ಅಧ್ಯಯನ ಮಾಡಲು ಅವಕಾಶವಿದೆ.

* * *

ಅನುಬಂಧಗಳು

ಪರಾಮರ್ಶನ ಗ್ರಂಥಗಳು
ಬೈಗುಳಗಳ ಪಟ್ಟಿ
ಪ್ರಶ್ನಾವಳಿ
ವಕ್ತೃಗಳ ಪಟ್ಟಿ

ಪರಾಮರ್ಶನ ಗ್ರಂಥಗಳು

೧. ಅಂಗಡಿ ಎಸ್. ಎಸ್. ೧೯೯೬., ***ಭಾಷಾ ಕ್ಷೇತ್ರಕಾರ್ಯ,*** ಸಮಾಜ ಪುಸ್ತಕಾಲಯ, ಧಾರವಾಡ.

೨. -----, ೨೦೦೫, ***ವ್ಯಾಕರಣ ಪರಿಭಾಷೆ,*** ವಿದ್ಯಾನಿಧಿ ಪ್ರಕಾಶನ, ಗದಗ.

೩. -----, ೨೦೦೮, ***ಜನಪದ ಸಾಹಿತ್ಯ ಭಾಷೆ,*** ವಿಕಾಸ ಪ್ರಕಾಶನ, ಹೊಸಪೇಟೆ.

೪. ಅಂಬಲಿಕೆ ಹಿರಿಯಣ್ಣ, ೨೦೧೪, ***ಕರ್ನಾಟಕ ಸಂಶೋಧನಾ ಜಾನಪದ,*** ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ.

೫. ಅನ್ನಪೂರ್ಣ ಗೂಡುದೂರು., ೨೦೧೨, ***ನಗೆ ಹನಿಗಳಲ್ಲಿ ಹೆಣ್ಣಿನ ಪ್ರತಿನಿಧೀಕರಣ,*** ಮಂಟಪಮಾಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಅಶೋಕ ಕುಮಾರ ರಂಜೆರೆ, ೨೦೦೦, ***ವಿವಿಧ ವೃತ್ತಿ ಪದಕೋಶ,*** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಕನ್ನಡ ವಿಷಯ ವಿಶ್ವಕೋಶ ಮೈಸೂರು, ೨೦೦೬, ಜಾನಪದ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೮. ಕೃಷ್ಣ ಪರಮೇಶ್ವರ ಭಟ್ಟ್, ನಾಗಭೂಷಣ ಸಿ., ೨೦೦೨, ***ಕನ್ನಡ ರಚನೆ ಮತ್ತು ಬಳಕೆ,*** ಪ್ರಸಾರಾಂಗ, ಬೆಂಗಳೂರು.

೯. ಕೃಷ್ಣ ಪರಮೇಶ್ವರ ಭಟ್ಟ್, ೨೦೧೩, ***ಭಾಷೆ ಮತ್ತು ಸಾಮಾಜಿಕ ಮತ್ತು ಸಂದರ್ಭ,*** ಅಭಿನವ ಪ್ರಕಾಶನ, ಬೆಂಗಳೂರು.

೧೦. ಕ್ಯಾತನಹಳ್ಳಿ ಬಸವರಾಜ, ೧೯೯೮, ***ಹದಿನಾಡಿನ ಒಗಟುಗಳು,*** ಅಕ್ಷರ ಪ್ರಕಾಶನ, ಹೆಗ್ಗೋಡು.

೧೧. -----, ೧೯೯೮, ***ಹದಿನಾಡಿನ ಗಾದೆಗಳು,*** ಅಕ್ಷರ ಪ್ರಕಾಶನ, ಹೆಗ್ಗೋಡು

೧೨. ಕೆಂಪಗೌಡ ಕೆ., ೧೯೯೬, ***ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,*** ಭಾರತೀ ಪ್ರಕಾಶನ, ಮೈಸೂರು.

೧೩. -----, ೧೯೯೭, ***ಕನ್ನಡ ಭಾಷಾ ಸ್ವರೂಪ,*** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೪. *ಕಲ್ಲಚ್ಚಿನ ಗಾದೆಗಳು, ಕ್ಯಾತನಹಳ್ಳಿ ರಾಮಣ್ಣ, ರಾಜಪ್ಪ ಟಿ.ಎಸ್,* ೨೦೧೧, ಸಾಗರ ಪ್ರಕಾಶನ, ಬೆಂಗಳೂರು.

೧೫. ಖಂಡೋಬ ಪಿ.ಕೆ., ೨೦೧೧, *ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ವಿಶ್ವಕೋಶ,* ಜಾನಪದ ಸಂಪುಟ-೨, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

೧೬. ಗಣಪತಿಭಟ್ಟ ಕೆ., ೧೯೯೬, *ಸಿರಿಗನ್ನಡ ಭಾಷಾ ಬೋಧಿನಿ,* ಗೌರಿಶಂಕರ್ ಬುಕ್ ಡಿಪೋ, ಬೆಂಗಳೂರು.

೧೭. ಗಾಯತ್ರಿ ನಾವಡ, ೧೯೯೭, *ವಿರಚನೆ,* ಎನ್.ಆರ್.ಎ.ಎಂ.ಎಚ್. ಪ್ರಕಾಶನ, ಕೋಟೇಶ್ವರ.

೧೮. ------, ೧೯೯೯, *ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು,* ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ.

೧೯. ------, ೨೦೦೩, *ಮಹಿಳೆ ಸಂಕಥನ,* ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೦. ಚಂದ್ರಶೇಕರ ಕಂಬಾರ (ಸಂ), ೧೯೮೫, *ಕನ್ನಡ ಜಾನಪದ ವಿಶ್ವಕೋಶ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೧. ಚಿದಾನಂದಮೂರ್ತಿ ಎಂ., ೧೯೬೬, *ಸಂಶೋಧನ ತರಂಗ,* ಸರಸ ಸಾಹಿತ್ಯ ಪ್ರಕಾಶನ, ಮೈಸೂರು.

೨೨. ------, ೧೯೭೭, *ಗ್ರಾಮೀಣ,* ಬಾಸ್ಕೊ ಪ್ರಕಾಶನ, ಬೆಂಗಳೂರು.

೨೩. ಧಾರವಾಡಕರ ರಾ.ಯ., ೧೯೯೮, *ಕನ್ನಡ ಭಾಷಾಶಾಸ್ತ್ರ,* ಗೀತಾ ಬುಕ್ ಹೌಸ್, ಮೈಸೂರು.

೨೪. ನಾಗಭೂಷಣಸ್ವಾಮಿ ಓ.ಎಲ್., ೧೯೯೮, *ವಿಮರ್ಶೆಯ ಪರಿಭಾಷೆ,* ಅಂಕಿತ ಪ್ರಕಾಶನ.

೨೫. ------, ೨೦೧೩, *ನುಡಿಯೊಳಗಾಗಿ,* ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.

೨೬. ನಾಗರಾಜಯ್ಯ ಹಂ.ಪ., ೧೯೬೬, *ದ್ರಾವಿಡ ಭಾಷಾ ವಿಜ್ಞಾನ,* ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.

೨೭. ನಾಗೇಗೌಡ ಎಚ್.ಎಲ್., ೧೯೯೮, *ಕನ್ನಡ ಜಾನಪದ ವಿಶ್ವಕೋಶ,* ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೨೮. ನಾರಾಯಣ ಕೆ.ವಿ.(ಸಂ), ೨೦೦೭, *ಭಾಷೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ನಾರಾಯಣ ಕೆ.ವಿ., ೨೦೦೯(ದ್ವಿಮು), ***ಕನ್ನಡ ಜಗತ್ತು ಅರ್ಧ ಶತಮಾನ,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ------, ೨೦೧೦, ***ತೊಂಡು ಮೇವು ಕಂತೆ–೫,*** ಬರಹ ಪಬ್ಲಿಷಿಂಗ ಹೌಸ, ಬೆಂಗಳೂರು.

೩೧. ನಾರಾಯಣ ಪಿ.ವಿ., ೨೦೧೧, ***ಚಂಪೂ ನುಡಿಗನ್ನಡಿ,*** ಸಪ್ನ ಬುಕ್ ಹೌಸ್, ಬೆಂಗಳೂರು.

೩೨. ನಾವಲಗಿ ಸಿ.ಕೆ., ೧೯೯೫, ***ಗಾದೆಗಳಲ್ಲಿ ಹಾಸ್ಯ,*** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೩. ------, ೨೦೦೦, ***ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು ಅಧ್ಯಯನ,*** ಜ್ಞಾನೋದಯ ಪ್ರಕಾಶನ, ಬೆಂಗಳೂರು.

೩೪. ನೂಲಗೇರಿ ಜೆ.ಎಂ., ೨೦೦೬, ***ಜನಪ್ರಿಯ ಕನ್ನಡ ಗಾದೆಗಳು ಹಾಗೂ ಒಗಟುಗಳು,*** ಬಸವ ಪ್ರಕಾಶನ, ಧಾರವಾಡ.

೩೫. ಪಂಡಿತ ಐರೋಡಿ ಯಜ್ಞನಾರಾಯಣ ಉಡುಪ, ೨೦೧೨, ***ಪುರಾಣ ಭಾರತ ಕೋಶ,*** ಸಪ್ನ ಬುಕ್ ಹೌಸ್, ಬೆಂಗಳೂರು.

೩೬. ಪಾಂಡುರಂಗಬಾಬು ಡಿ., ೨೦೦೫, ***ನುಡಿನೋಟ,*** ಆಕಾಶ್ ಪ್ರಕಾಶನ, ಹೊಸಪೇಟೆ.

೩೭. ಪಾಂಡುರಂಗಬಾಬು ಡಿ., ಅಶೋಕ ಕುಮಾರ ರಂಜೇರೆ, ಮಹಾದೇವಯ್ಯ ಪಿ., ಸಾಂಬಮೂರ್ತಿ, ೨೦೦೫, ***ಉಪಭಾಷೆಗಳ ಪದಕೋಶ,*** ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ಪ್ರೀತಿ ಶುಭಚಂದ್ರ, ೨೦೦೪, ***ಮಹಿಳಾ ಅಧ್ಯಯನ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೯. ಬಟ್ ಡಿ.ಎನ್.ಶಂಕರ, ೧೯೬೯, ***ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ,*** ಬಾಶಾ ಪ್ರಕಾಶನ, ಹೆಗ್ಗುಡು.

೪೦. ------, ೧೯೯೫, ***ಕನ್ನಡ ಭಾಷೆಯ ಕಲ್ಪಿತ ಚರಿತ್ರೆ,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧. ------,೨೦೦೯(ದ್ವಿಮು.), ***ಕನ್ನಡ ನುಡಿ ನಡೆದು ಬಂದ ದಾರಿ,*** ಬಾಶಾ ಪ್ರಕಾಶನ, ಹೆಗ್ಗುಡು.

೪೨. ------, ೨೦೧೦(ಮೂ.ಮು. ಪರಿಸ್ಕೃತ), ***ಕನ್ನಡ ಪದಗಳ ಒಳ ರಚನೆ,*** ಬಾಶಾ ಪ್ರಕಾಶನ, ಗಡಿಕಲ್ಲು, ಕೊಪ್ಪ.

೪೩. -----, ೨೦೧೦, ***ಕನ್ನಡ ಬರಹದ ಸೊಲ್ಲರಿಮೆ- ೧,*** ಬಾಶಾ ಪ್ರಕಾಶನ, ಹೆಗ್ಗೋಡು, ಸಾಗರ.

೪೪. -----, ೨೦೧೧, ***ಕನ್ನಡ ಬರಹದ ಸೊಲ್ಲರಿಮೆ- ೨,*** ಬಾಶಾ ಪ್ರಕಾಶನ, ಬಿಲ್ಲೇಶರ, ಹುಂಚ.

೪೫. -----, ೨೦೧೨, ***ಕನ್ನಡ ಬರಹದ ಸೊಲ್ಲರಿಮೆ- ೩,*** ಬಾಶಾ ಪ್ರಕಾಶನ, ಹೆಗ್ಗೋಡು, ಸಾಗರ.

೪೬. -----, ೨೦೧೩, ***ಕನ್ನಡ ಬರಹದ ಸೊಲ್ಲರಿಮೆ-೪,*** ಡಿ.ಎನ್.ಎಸ್. ಬಟ, ಬಿಮನ ಕೊಣೆ, ಹೆಗ್ಗೋಡು, ಸಾಗರ.

೪೭. -----, ೨೦೧೫, ***ಕನ್ನಡ ಬರಹದ ಸೊಲ್ಲರಿಮೆ-೫,*** ನವಕರ್ನಾಟಕ ಪ್ರಕಾಶನ, ಬೆಂಗಳೂರು

೪೮. ಬಸವರಾಜ ನೆಲ್ಲಿಸರ, ೧೯೭೯, ***ಜಾನಪದ ಜಿಜ್ಞಾಸೆ,*** ಯಕ್ಷ ಪ್ರಕಾಶನ, ಮೈಸೂರು.

೪೯. ಬಸವರಾಜ ಪೋಲಿಸ ಪಾಟೀಲ, ೨೦೦೧, ***ಹೈದರಾಬಾದ ಕರ್ನಾಟಕ ಜನಪದ ಸಾಹಿತ್ಯ,*** ಅಮರ ಪ್ರಕಾಶನ, ಕಲಬುರಗಿ.

೫೦. ಬಸವರಾಜ ಭೂಸರೆಡ್ಡಿ, ೨೦೦೫, ***ಕನ್ನಡ ಗಾದೆ ಮಾತುಗಳು,*** ಚಿಲಿಪಿಲಿ ಪ್ರಕಾಶನ, ಧಾರವಾಡ.

೫೧. ಬೆನಗಲ್ ರಾಮರಾವ್, ೨೦೦೩, ***ಪುರಾಣನಾಮ ಚೂಡಮಣಿ,*** ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು.

೫೨. ಮಂಗಳಾ ಪ್ರಿಯದರ್ಶಿನಿ ಡಿ., ೨೦೦೭, ***ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ,*** ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೩. ಮರುಳಯ್ಯ ಸಾ.ಶಿ., ೨೦೧೫, ***ಕನ್ನಡ ಭಾಷೆಯ ಚರಿತ್ರೆ,*** ಅರವಿಂದ ಇಂಡಿಯಾ ಪ್ರಕಾಶನ, ಬೆಂಗಳೂರು.

೫೪. ಮಲ್ಲಿಕಾರ್ಜುನ ಶಿ. ಲಠ್ಠೆ, ೧೯೮೨, ***ಜಾನಪದ ಸಂಪದ,*** ಎಂ.ಎಸ್. ಸುಂಕಾಪುರ, ಅಭಿನಂದನ ಗ್ರಂಥ, ಅಭಿನಂದನ ಸಮಿತಿ, ಕಲಬುರಗಿ.

೫೫. ಮಹದೇವಯ್ಯ ಪಿ., ೨೦೦೬, ***ಕನ್ನಡ ಬಳಕೆ ಸಮಾಜಿಕ ವಿನ್ಯಾಸ,*** ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು.

೫೬. ಮುರಿಗೆಪ್ಪ ಎ., ೨೦೧೧, ***ದಕ್ಷಿಣ ಭಾರತೀಯ ಕೋಶ,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೫೭. ಮೋಹನ್ ಗೋಪಾಲ ಕೃಷ್ಣಾಚಾರ್ಯ, *ಕನ್ನಡ ವ್ಯಾಕರಣ*, ಪಿ.ಸಿ.ಶಾಬಾದಿಮಠ ಬುಕ್ ಡಿಪೋ, ಗದಗ.

೫೮. ರಾಗೌ, ೨೦೧೦, *ಸಾವಿರಾರು ಗಾದೆಗಳು*, ಬಾಲಾಜಿ ಪ್ರಿಂಟರ್ಸ್, ಬೆಂಗಳೂರು.

೫೯. ರಾಮಕೃಷ್ಣಗುಂದಿ, ೧೯೯೩, *ಅಗೇರರ ಸಂಸ್ಕೃತಿ*, ಪ್ರಕಾಶಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೦. ವೀರಣ್ಣದಂಡೆ, ೨೦೧೫, *ಜಾನಪದ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೧. ವೀರೇಂದ್ರ ಸಿಂಪಿ (ಸಂ), ೨೦೦೭, *ಸಮಗ್ರ ಜನಪದ ಸಂಪುಟ-೨*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೨. ವೆಂಕಟಸುಬ್ಬಯ್ಯ ಜಿ., ೨೦೧೦, *ಎರವಲು ಪದಕೋಶ*, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೬೩. -----, ೨೦೧೩, *ಇಗೋ ಕನ್ನಡ ಸಾಮಾಜಿಕ ನಿಘಂಟು*(ಸಂಯುಕ್ತ ಸಂಪುಟ), ನವಕರ್ನಾಟಕ ಪ್ರಕಾಶನ, ಬೆಂಗಳೂರು.

೬೪. ಶಂಕರನಾರಾಯಣ ತೀನಂ. (ಸಂ), ೨೦೦೪, *ಜನಪದ ಸಾಹಿತ್ಯ ಪ್ರಕಾರಗಳು*, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.

೬೫. ಶಾಂತವೀರಯ್ಯ ಹೀ.ಚಿ., ೧೯೯೬, *ಗಾದೆಗಳ ಸಾಗರ*, ವಾಸನ್ ಬುಕ್ ಡಿಪೋ, ಬೆಂಗಳೂರು.

೬೬. ಶಿವಲಿಂಗಮ್ಮ ಕಟ್ಟಿ, ೨೦೦೪, *ವೀರಶೈವ ಬೈಗುಳಗಳು*, ಶ್ರೀ ಕುಮಾರ ಕೃಪಾ ಪ್ರಕಾಶನ, ಹುಬ್ಬಳ್ಳಿ.

೬೭. ಶ್ರೀಧರ್ ಎಸ್.ಎಸ್., ೧೯೯೫, *ಇಂದಿನ ಕನ್ನಡ: ರಚನೆ ಮತ್ತು ಬಳಕೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೮. ಶ್ರೀಮತಿ ಎಚ್.ಎಸ್., ೨೦೦೪, *ಹೆಣ್ಣು ಮತ್ತು ಭಾಷೆ*, ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೯. -----, ೨೦೦೪, *ಹೆಣ್ಣು-ಹೆಂಗಸು*, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು.

೭೦. -----, ೨೦೦೭, *ದಿ ಸೆಕೆಂಡ್ ಸೆಕ್ಸ್*, (ಮೂಲ: ಸಿಮೊನ್‌ದ ಬೋವಾ) ಕಾವ್ಯಮಂಡಲ, ಬೆಂಗಳೂರು.

೭೧. -----, ೨೦೦೯, *ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೨. -----, ೨೦೧೩, *ಸ್ತ್ರೀವಾದಿ ತಾತ್ವಿಕತೆ,* ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೭೩. ಶೈಲಜ ಹಿರೇಮಠ, ೧೯೯೯, *ಪಾತರದವರು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೪. -----, ೨೦೦೩, *ಸ್ತ್ರೀ ಕಥನ,* ಭುವನ ಪ್ರಕಾಶನ, ಹೊಸಪೇಟೆ.

೭೫. ಸಂಗಮೇಶ ಸವದತ್ತಿ ಮಠ, ೧೯೯೯, *ಭಾಷಾಲೇಖ,* ರೂಪರಶ್ಮಿ ಪ್ರಕಾಶನ, ಗುಲಬರ್ಗಾ.

೭೬. -----, ೨೦೧೦, *ತೌಲನಿಕ ದ್ರಾವಿಡ ಭಾಷಾವಿಜ್ಞಾನ,* ರೂಪರಶ್ಮಿ ಪ್ರಕಾಶನ, ಧಾರವಾಡ.

೭೭. -----, ೨೦೧೧, *ಕನ್ನಡ ಭಾಷಾ ವ್ಯಾಸಂಗ,* ರೂಪರಶ್ಮಿ ಪ್ರಕಾಶನ ಧಾರವಾಡ.

೭೮. ಸೋಮಶೇಖರ ಗೌಡ, ೨೦೦೦, *ಭಾಷಾ ರಚನೆ ಮತ್ತು ಬಳಕೆ,* ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೭೯. ಸುಧಾಕರ, ೨೦೦೬, *ಜನಪದ ನುಡಿಗಟ್ಟುಗಳ ಕೋಶ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೦. ಸುಮಿತ್ರಾ ಬಾಯಿ ಬಿ.ಎನ್., ೨೦೦೬, *ಸ್ತ್ರೀವಾದ,* ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ ಬೆಂಗಳೂರು.

೮೧. ಹಂದ್ರಾಳ ಗವಿಸಿದ್ದಪ್ಪ, ೨೦೧೦, *ಬೈಗುಳಗಳಲ್ಲಿ ಮಹಿಳೆ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೨. ಹಾಲತಿ ಸೋಮಶೇಕರ್, ೨೦೦೭, *ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ,* ವಿಸ್ಮಯ ಪ್ರಕಾಶನ, ಮೈಸೂರು.

ಅಪ್ರಕಟಿತ ಪಿ.ಎಚ್.ಡಿ ಮಹಾಪ್ರಬಂಧಗಳು ಹಾಗೂ ಎಂ.ಫಿಲ್, ಸಂಪ್ರಬಂಧಗಳು:

೦೧. ಅನ್ನಪೂರ್ಣ ಗೂಡದೂರು, *ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು,* ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೨. ಕಾಳಮ್ಮ, ೨೦೧೬, *ಕನ್ನಡ ನುಡಿ ಬಳಕೆಯಲ್ಲಿ ಮಹಿಳೆ,* ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೩. ಕುಮಾರ ಸಿ. ನಿರಂಜನಪ್ಪ ಸಿ., ೨೦೧೫, *ದೂರದರ್ಶನ ಧಾರವಾಹಿಗಳಲ್ಲಿ ಕನ್ನಡ (ಆಯ್ದ ಧಾರವಾಹಿಗಳನ್ನು ಅನುಲಕ್ಷಿಸಿ),* ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೪. ಗಂಗಪ್ಪ ಕೆ, ೨೦೦೮, *ಮಹಿಳಾ ಪುರವಣಿಗಳ ಭಾಷಿಕ ಅಧ್ಯಯನ,* ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೫. ಚಂದ್ರಕಲಾ ಜಿ, ೨೦೧೭, *ಕನ್ನಡ ಭಾಷೆ: ಲಿಂಗಸಂಬಂಧಿ ಆಯಾಮಗಳು,* ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೬. ನಾಗರಾಜ ಸಿ.ಪಿ., ೧೯೮೭, *ಕನ್ನಡ ಬಯ್ಗುಳಗಳ ಅಧ್ಯಯನ,* ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೦೭. ಶ್ರೀನಿವಾಸ ಬೇಂದ್ರೆ, ೨೦೦೨, *ಬೀದರ ಕನ್ನಡ ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರಭೇದಗಳು,* ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೮. ವಿಪ್ಲವಿ, ೨೦೧೧, *ತತ್ವಪದ ಸಾಹಿತ್ಯದ ಭಾಷೆ: ಒಂದು ಅಧ್ಯಯನ,* ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೯. ಶಶಿಕಲಾ ಎಂ, ಮೊರಬರ, ೨೦೦೯, *ಮಹಿಳಾ ಅಭಿವ್ಯಕ್ತಿಯಾಗಿ ಕನ್ನಡ ಜನಪ್ರಿಯ ಕಾದಂಬರಿಗಳು,* ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಶೇಕರಾಚಾರಿ, ೨೦೦೯, *ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ,* ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧. ಸುನಂದ ಎಂ., ೨೦೦೭, *ನಿಷೇಧಗಳು ಮತ್ತು ಲಿಂಗ ವ್ಯವಸ್ಥೆ,* ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಿಘಂಟುಗಳು:

೦೧. *ಇಂಗ್ಲೀಷ್-ಕನ್ನಡ ನಿಘಂಟು,* ೧೯೮೯, ಮೈಸೂರು ವಿಶ್ವವಿದ್ಯಾಲಯ, ಸಂ-೧,೨,೩,೪.

೦೨. ಕನ್ನಡ ಸಾಹಿತ್ಯ ಪರಿಷತ್ತಿನ *ಕನ್ನಡ ನಿಘಂಟು,* ೨೦೧೦, ಸಂಪುಟ ೧ ರಿಂದ ೮, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು

೦೩. *ಕನ್ನಡ ವ್ಯಾಕರಣ ದರ್ಪಣ,* ೨೦೧೦, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೦೪. *ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟು,* ಜಿ. ವೆಂಕಟಸುಬ್ಬಯ್ಯ ಶೇಷಗಿರಿರಾವ್.

೦೫. *ಸಂಕ್ಷಿಪ್ತ ಕನ್ನಡ ನಿಘಂಟು,* ೨೦೦೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ನಿಯತಕಾಲಿಕೆಗಳು:

೦೧. ಅಶೋಕ ಕುಮಾರ್ ರಂಜೇರೆ. (ಸಂ) ***ನಮ್ಮ ಕನ್ನಡ;*** ಸಂಚಿಕೆ-೬೭ ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೦೨. ಮಹಾದೇವಯ್ಯ.ಪಿ, (ಸಂ) ***ನಮ್ಮ ಕನ್ನಡ;*** ಸಂಚಿಕೆ-೬೮, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ

ಪತ್ರಿಕೆಗಳು:

೦೧. ಅಂಜಲಿ ರಾಮಣ್ಣ, ***ಹೆಸರೊಳಗೊ ಉಂಟು ಸ್ವಾತಂತ್ರ್ಯ (ಜೀನ್ಸ ಟಾಕ್),*** ವಿಜಯ ಕರ್ನಾಟಕ, ಭಾನುವಾರ ೧೮ ಆಗಸ್ಟ ೨೦೧೩.

೦೨. ಅಂಜಲಿ ರಾಮಣ್ಣ, ***ರೋಜಾ ರಾಂಗಾದಳು....ಬೈಗುಳ ಮಳೆ ಸುರಿಸಿದಳು,*** ವಿಜಯ ಕರ್ನಾಟಕ ಪತ್ರಿಕೆ, ಶುಕ್ರವಾರ, ೨೨. ಜನವರಿ, ೨೦೧೬.

೦೩. ಆಶಾದೇವಿ ಎಂ.ಎಸ್., ***ಅವಳ ಕಾವ್ಯ ಭಾಷೆ*** (ನಾರೀಕೆಳಾ), ಪ್ರಜಾವಾಣಿ, ಭಾನುವಾರ ಅಕ್ಟೋಬರ್ ೨೫-೨೦೧೫

೦೪. ದೇವರಿಗೆ ***ಬೈಗುಳದ ನೈವೇದ್ಯ,*** (ಪತ್ರಿಕಾ ವರದಿ, ಹೊಸಪೇಟೆ) ಪ್ರಜಾವಾಣಿ ಪತ್ರಿಕೆ. ಭಾನುವಾರ, ಆಗಸ್ಟ್ ೩೦-೨೦೧೫

೦೫. ನಟರಾಜ್ ಹುಳಿಯಾರ್, ***ಆಹಾ! ಬೈಗುಳಗಳ ಭವ್ಯ ಭಾರತವೇ!*** ಪ್ರಜಾವಾಣಿ, ಬುಧವಾರ ಅಕ್ಟೋಬರ್ ೨೮-೨೦೧೫

ಬೈಗುಳಗಳ ಪಟ್ಟಿ

ಅಡಕ

ಅಡಕ

ಲೋ ಅಡಕ

ಅಡ್ನಾಡಿ

ಅಡ್ನಾಡಿಗಳು

ಅಡ್ನಾಡಿ ಮಕ್ಳು

ಅಡ್ನಾಡಿ ನನ್ನಮಕ್ಳು

ಅಡ್ನಾಡಿ ನನ್ಮಗನೆ

ಅಡ್ನಾಡಿ ಮಿಂಡ್ರಿ

ಅಡ್ನಾಡಿ ಬೇವಾರ್ಸಿ

ಅಡ್ನಾಡಿ ಸೂಳೆ

ಅಡ್ನಾಡಿ ಸೂಳೆಮಗನೆ

ಅನಿಷ್ಟ

ಅನಿಷ್ಟದೋನೆ

ಅನಿಷ್ಟದವರು

ಅನಿಷ್ಟ ನನ್ಮಗ್ನೆ

ಅನಿಷ್ಟ ಮುಂಡೆ

ಅನಿಷ್ಟ ಸೂಳೆ

ಅವತಾರಗೇಡಿ

ಅವತಾರಗೇಡಿ

ಅವತಾರಗೇಡಿ ಸೂಳೆ

ಅಯೋಗ್ಯ

ಅಯೋಗ್ಯ

ಅಯೋಗ್ಯ ನನ್ನಮಕ್ಕಳು

ಎಡವಟ್ಟು

ಎಡವಟ್ಟು ನನ್ಮಗ್ನೆ

ಎಡವಟ್ಟು ಸೂಳೆ

ಎಡವಟ್ಟು ಸೂಳೆಮಗ

ಎಡ್ಬಿಡಂಗಿ

ಎಡ್ಬಿಡಂಗಿ ನನ್ಮಗ್ನೆ

ಎಡ್ಬಿಡಂಗಿ ಸೂಳೆಮಗ

ಒರಟು

ಒರಟ್ನನ್ಮಗ್ನೆ

ಒರಟು ಸೂಳೆ

ಕಂಜೂಸ್

ಕಂಜೂಸ್ ನನ್ಮಗ್ನೆ

ಕಂಜೂಸ್ ಮುಂಡೆ

ಕಂಜೂಸ್ ಸೂಳೆಮಗ

ಕಂಜೂಸ್ ಸೂಳೆಮಕ್ಳು

ಕಂತ್ರಿ

ಕಂತ್ರಿಗೆ ಹುಟ್ಟಿದೋನು

ಕಂತ್ರಿ ನನ್ನಮಕ್ಳು

ಕಂತ್ರಿ ನನ್ನಮಗನೆ

ಕಂತ್ರಿ ಬೇವರ್ಸಿ

ಕಂತ್ರಿ ಸೂಳೆ

ಕಚಡ

ಕಚಡ ನನ್ಮಗ್ನೆ

ಕಚಡ ನನ್ನಮಕ್ಳು

ಕಚಡಾ ಸೂಳೆಮಗ

ಕಳ್ಳ

ಕಳ್ ಬ್ಯಾಳೆ

ಕಳ್ಳ ಜಿಟ್ಟಿನಾಡ

ಕಳ್ಳ ನನ್ನಮಕ್ಳು

ಕಳ್ಳ ನನ್ನಮಗನೆ

ಕಳ್ಳ ಬಡ್ಡಿ

ಕಳ್ಳ ಬೆಕ್ಕು

ಕಳ್ಳ ಬೇವರ್ಸಿ

ಕಳ್ಳ ಮುಂಡೆ

ಕಳ್ಳ ಮುಂಡೇದು

ಕಳ್ಳ ಮಿಂಡ್ರಿ

ಕಳ್ಳರು

ಕಳ್ಳ ಸೂಳೆಮಗ

ಕಳ್ಳ ಸೂಳೆಮಗ್ನೆ

ಕಿತಾಪತಿ

ಕಿತಾಪತಿ ನನ್ಮಗ್ನೆ

ಕಿತಾಪತಿ ಸೂಳೆಮಗನೆ

ಕಿತ್ತೋದ

ಕಿತ್ತೋದ ನನ್ನಮಗ

ಕಿತ್ತೋದನು

ಕಿತ್ತೋದ್ ಸೂಳೆ

ಕಿತ್ತೋದ್ ಸೂಳೆಮಗ

ಕಿತ್ತೋದ್ ಮುಂಡೆ

ಗಾಂಡು

ಗಾಂಡು

ಗಾಂಡಿಗ

ಗಾಂಡು ಸೂಳೆಮಗ

ಚಾಂಡಾಲ

ಚಾಂಡಾಲ ನನ್ನಮಗ

ಚಾಂಡಾಲ ನನ್ನಮಕ್ಳು

ಚಾಂಡಾಲನಿಗೆ ಹುಟ್ಟಿದವನು

ಚಾಂಡಾಲನಿಗೆ ಹುಟ್ಟಿದೋನೊ

ಚಾಂಡಾಲ ಮುಂಡೆ

ಚಾಂಡಾಲ ಸೂಳೆ

ಚಾಂಡಾಲ ಸೂಳೆಮಗ

ಚಾಂಡಾಲಿ

ತಲೆಹಿಡುಕ

ತಲೆಹಿಡುಕ

ತಲೆಹಿಡುಕ ಮಗನೆ

ತಲೆಹಿಡುಕ ಸೂಳೆ

ತಲೆಹಿಡುಕ ಸೂಳೆಮಗ

ತಿಕ್ಕ

ತಿಕ್ಕ

ತಿಕ್ಕಮುಕ್ಕ

ತಿಕ್ಕ ಸೂಳೆಮಗನೆ

ತಿಳಿಗೇಡಿ

ತಿಳಿಗೇಡಿಗಳು

ತಿಳಿಗೇಡಿ ಮಕ್ಕು

ತಿಳಿಗೇಡಿ ಮುಂಡೆವು

ತಿಳಿಗೇಡಿ ಸೂಳೆ

ತಿಳಿಗೇಡಿ ಸೂಳೆಮಕ್ಕು

ತುಡುಗ(ತುಡ್ಗ)

ತುಡುಗ

ತುಡುಗಿ

ತುಡುಗು ಮುಂಡೆದು

ತುಡುಗ ನನ್ನಮಕ್ಕು

ತುಡುಗ ಸೂಳೆ

ತೆಪ್ರ

ತೆಪ್ರ ನನ್ನಮಗನೆ

ತೆಪ್ರ ನನ್ನಮಕ್ಕು

ತೆಪ್ರ ಮುಂಡೆವು

ತೆಪ್ರಸೂಳೆ

ತೆಪ್ರಸೂಳೆಮಕ್ಕು

ದರಿದ್ರ

ದರಿದ್ರದವಳು

ದರಿದ್ರ ನನ್ನಮಗ

ದರಿದ್ರ ನನ್ನಮಕ್ಕು

ದರಿದ್ರದವಳೇ

ದರಿದ್ರದೋನು

ದರಿದ್ರ ಮುಂಡೆರು

ದರಿದ್ರ ಮುಂಡೆವು

ದರಿದ್ರ ಮುಂಡೆಮಗ

ದರಿದ್ರ ಸೂಳೆ

ದರಿದ್ರ ಸೂಳೆಮಗ

ನಾಲಾಯಕ್

    ನಾಲಾಯಕ್ ನನ್ನಮಕ್ಳು

    ನಾಲಾಯಕ್ ಮುಂಡೆ

    ನಾಲಾಯಕ್ ಸೂಳೆ

    ನಾಲಾಯಕ್ ಸೂಳೆಮಗ

ನೀತಿ

    ನೀತಿ ಇಲ್ದವರು

ನೀತಿ ಗೆಟ್ಟವನು

    ನೀತಿ ಗೆಟ್ಟವರು

    ನೀತಿ ಗೆಟ್ಟವಳು

        ನೀಯತ್ತಿಲ್ದವರು

ಪುಕ್ಕಲ

    ಪುಕ್ಕಲ

ಪುಕ್ಕಲಿ

ಪುಕ್ಕಲಗಳು

ಪುಕ್ಕಲ ನನ್ನಮಕ್ಳು

ಪುಕ್ಕಲ ನನ್ನಮಗ

ಪುಕ್ಕಲ ಸೂಳೆ

ಪುಕ್ಕಲ ಸೂಳೆಮಗ

ಪಾಪಿ

    ಪಾಪಿ

    ಪಾಪಿಗಳು

    ಪಾಪಿಗೇಡಿ ಸೂಳೆಮಗ

ಪಾಪಿ ನನ್ನಮಗ

- ಪಾಪಿ ನನ್ನಮಕ್ಳು

ಪೆಕುರ(ಪೆಕ್ರ)

- ಪೆಕುರ ನನ್ಮಗ್ನೆ
- ಪೆಕುರ ಸೂಳೆಮಗ

ಬಂಡ

- ಬಂಡ
- ಬಂಡ ನನ್ನಮಕ್ಳು

ಬಂಡ ನನ್ನಮಗ

ಬಂಡ ಸೂಳೆ

- ಬಂಡ ಸೂಳೆಮಗ
- ಬಂಡ ಸೂಳೆಮಕ್ಳು

ಬಕ್ರ

- ಬಕ್ರ ನನ್ಮಗ್ನೆ
- ಬಕ್ರ ಸೂಳೆಮಗ

ಬಚ್ಚ

- ಬಚ್ಚ ನನ್ನಮಗನೆ
- ಬಚ್ಚ ಸೂಳೆಮಗ
- ಲೇ ಬಚ್ಚ

ಬಜಾರಿ

- ಮಹಾನ್ ಬಜಾರಿ

ಬಜಾರಿ ಮುಂಡೆದು

- ಬಜಾರಿ ಮುಂಡೆವು
- ಬಜಾರಿ ಸೂಳೆ

ಬಜಾರಿ ಹೆಂಗ್ಸು

ಬಡಿವಾರ

ಬಡಿವಾರದ ನನ್ನಮಗನೆ

ಬಡಿವಾರದ ಮಕ್ಳು

ಬಡಿವಾರದ ಮುಂಡೆದೆ

ಬಡಿವಾರದ ರಂಗ

ಬಡಿವಾರದ ಸೂಳೆ

ಬಡ್ಡಿ

ಎಂಜ್ಲು ತಿನ್ನೋ ಬಡ್ಡಿಮಗನೆ

ಬಡ್ಡಿ ನನ್ನಮಗ

ಬಡ್ಡಿ ನನ್ನಮಕ್ಳು

ಬಡ್ಡಿ ಬಂಗಾರಮ್ಮ

ಬಡ್ಡಿ ಸೂಳೆ

ಬಡ್ಡಿ ಸೂಳೆಮಗ

ಬಡ್ಡಿ ಹೆಂಗ್ಸು

ಬ(ಪ)ದ್ಮಾಸ್

ಬದ್ಮಾಸ್

ಬದ್ಮಾಸ್ ನನ್ನಮಕ್ಳು

ಬದ್ಮಾಸ್ ಮುಂಡೆ

ಬದ್ಮಾಸ್ ಸೂಳೆ

ಬದ್ಮಾಸ್ ಸೂಳೆಮಗ

ಬದ್ಮಾಸ್ ರಂಡೆ

ಬರ್ಗೆಟ

ಬರ್ಗೆಟ್ ನನ್ನಮಗ

ಬರ್ಗೆಟ್ ಮುಂಡೆ

ಬರ್ಗೆಟ್ ರಂಡೆ

ಬರ್‍ಗೆಟ್ ಸೂಳೆ

ಬರ್‍ಗೆಟ್ ಸೂಳೆಮಗ

ಬರ್‍ಗೆಟ್ಟವನು

ಬಸವ

ಊರಬಸವಿ

ಊರಬಸವಿ ಸೂಳೆ

ಬಸವಿ ಮುಂಡೆ

ಬಸವಿ ಸೂಳೆ

ಬೋಳೆ ಬಸ್ವ

ಲ್ವಾಲೆ ಬಸವ

ಬಾಯಿ

ಬಾಯಿ ಬಡಕ

ಬಾಯಿ ಬಡಕಿ

ಬಾಯಿ ಬಡಕಸೂಳೆ

ಬಾಯಿ ಬಡಕ ಮುಂಡೆ

ಬಾಯಿ ಬಡಕಮುಂಡೆರು

ಬಿಕನಾಸಿ(ಬಿಕ್ನಾಸಿ)

ಬಿಕನಾಸಿ ಗಂಡಸು

ಬಿಕನಾಸಿ ನನ್ನಮಗ

ಬಿಕನಾಸಿ ನನ್ನಮಕ್ಳು

ಬಿಕನಾಸಿ ಮುಂಡೆದು

ಬಿಕನಾಸಿ ಮುಂಡೆರು

ಬಿಕನಾಸಿ ಮುಂಡೆವು

ಬಿಕನಾಸಿ ಸೂಳೆ

ಬಿಕನಾಸಿ ಸೂಳೆಮಗ

ಬಿಕನಾಸಿ ಹೆಂಗ್ಸು

ಬೀದಿ

ಬೀದಿ ಗೂಳಿ

ಬೀದಿ ಬಸವ

ಬೀದಿ ಬಸವಿ

ಬೀದಿ ಸೂಳೆ

ಬೀದಿಗೆ ನಿಂತೀರೋ ಸೂಳೆ

ಬುದ್ದಿ

ಬುದ್ದಿಗೇಡಿ ನನ್ನಮಗನೆ

ಬುದ್ದಿಗೇಡಿ ಮಕ್ಳು

ಬುದ್ಧಿಗೇಡಿ ಸೂಳೆ

ಬುದ್ಧಿಗೇಡಿ ಸೂಳೆಮಗ

ಬುದ್ಧಿಗೇಡಿ ಸೂಳೆಮಕ್ಳು

ಬೇಕುಫ್(ಬೇಕುಬ್)

ಬೇಕುಫ್ ನನ್ನಮಗನೆ

ಬೇಕುಫ್ ಸೂಳೆಮಗ

ಬೇಕುಫ್ ಸೂಳೆಮಕ್ಳು

ಬೇವರ್ಸಿ

ಬೇವರ್ಸಿ ಮುಂಡೆ

ಬೇವರ್ಸಿ ರಂಡೆ

ಬೇವರ್ಸಿ ಸೂಳೆ

ಬೇವರ್ಸಿ ಸೂಳೆಮಗ

ಬೇವರ್ಸಿ ಮಗ

ಬೇವರ್ಸಿ ನನ್ನಮಕ್ಳು

ಹಲ್ಕ ಬೇವರ್ಸಿ

ಬೋಸುಡಿ

ಬಜಾರಿ ಬೋಸುಡಿ

ಬೋಸುಡಿಕೆ

ಬೋಸುಡಿ ಮಗನೆ

ಬೋಸುಡಿ ಮುಂಡೆ

ಬೋಸುಡಿ ರಂಡೆ

ಬೋಡುಡಿ ಸೂಳೆ

ಬೋಸುಡಿ ಸೂಳೆಮಗ

ಬೋಳಿ

ಬೋಳಿ

ಬೋಳಿ ಮಕ್ಳು

ಬೋಳಿ ಮಗನೆ

ಬೋಳಿ ಮುಂಡೆವು

ಮಂಗ

ಮಂಗ್ ನನ್ನಮಗ

ಮಂಗ್ ನನ್ನಮಕ್ಳು

ಮಂಗ್ ಸೂಳೆಮಗ

ಮಂಗ್ ಸೂಳೆಮಕ್ಳು

ಮನೆಮುರ್ಖ

ಮನೆಮುರ್ಖ ನನ್ನಮಕ್ಳು

ಮನೆಮುರ್ಖ ನನ್ನಮಗ

ಮನೆಮುರ್ಖ ಸೂಳೆ

ಮನೆಮುರ್ಖ ಸೂಳೆಮಗ

ಮನೆಮುರ್ಖಿ

ಮನೆಮುರ್ಖಿ ಸೂಳೆ

ಮನೆಹಾಳಮುಂಡೆ

ಮನೆಹಾಳ್

ಮನೆಹಾಳ ನನ್ನಮಗ

ಮನೆಹಾಳ ಭಿತ್ರಿ

ಮನೆಹಾಳ ಮಂಗ

ಮನೆಹಾಳ ಸೂಳೆ

ಮನೆಹಾಳಿ

ಮಹಾ

ಮಹಾಛತ್ರಿ

ಮಹಾನ್ ಕೋತಿ

ಮಹಾನ್ ಮಿಂಡ್ರಿ

ಮಹಾನ್ ಬಜಾರಿ

ಮಹಾನ್ ಪತಿವ್ರತೆ

ಮಹಾಭಿತ್ರಿ

ಮಾನಗೇಡಿ

ಮಾನಗೇಡಿ ನನ್ನಮಗ

ಮಾನಗೇಡಿ ನನ್ನಮಕ್ಳು

ಮಾನಗೇಡಿ ಮುಂಡೆದು

ಮಾನಗೇಡಿ ಮುಂಡೆವು(ರು)

ಮಾನಗೇಡಿ ಸೂಳೆ

ಮಾನಗೇಡರ ಸೂಳೆಮಗ

ಮಾನಗೇಡಿ ಸೂಳೆಮಕ್ಳು

ಮಾನಗೇಡಿ ಹೆಂಗಸು

ಮಿಂಡ್ರಿ(ಡ)

ಊರ್‌ಮಿಂಡ್ರಿ

ಏಳು ಮಿಂಡ್ರಿ

ಜಗತ್‌ಮಿಂಡ್ರಿ

ಲೋಫರ್‌ಮಿಂಡ್ರಿ

ಮಿಂಡ

ಮಿಂಡ್ರಿಗಳೆ

ಮಿಂಡಗಾರ

ಮಿಂಡಗಾತಿ

ಮಿಂಡ್ರಿಗುಟ್ಟಿದವನೆ

ಏಳು ಏಳು ಮಿಂಡ್ರಿಗುಟ್ಟಿದವನೆ

ಮಿಂಡ್ರಿಗುಟ್ಟಿದವಳೆ

ಮಿಂಡ್ರಿಗುಟ್ಟಿದವು

ಮಿಂಡ್ರಿ ಮಕ್ಳು

ಮಿಂಡ್ರಿ ಮಗ

ಮಿಂಡ್ರಿ ಸೂಳೆ

ಮುಂಡೆ

ಅನಿಷ್ಟ ಮುಂಡೆ

ಊರ್ ಮುಂಡೆದು

ಕತ್ತೆ ಮುಂಡೆದು

ಕತ್ತೆ ಮುಂಡೆರು

ದರಿದ್ರ ಮುಂಡೆರು

ದರಿದ್ರ ಮುಂಡೆವು

ನಾಯಿ ಮುಂಡೆದೆ

ಬಜಾರಿ ಮುಂಡೆದು

ಬಜಾರಿ ಮುಂಡೆವು

ಬೇವಾರ್ಸಿ ಮುಂಡೆರು

ಬೇವಾರ್ಸಿ ಮುಂಡೆವು

ಮಂಗ ಮುಂಡೆದು

ಮಂಗ ಮುಂಡೆವು

ಮುಂಡೆ ಮಕ್ಳು

ಮುಂಡೆ ಮಗನೆ

    ಲೋಫರ್ ಮುಂಡೆದು(ವು)

ಮುಂಡೆವು

ಸೂಳ್ಮುಂಡೆ

ಹುಚ್ಚು ಮುಂಡೆ

ಮುಠ್ಠಾಳ

    ಮುಠ್ಠಾಳ ನನ್ನಮಗ

ಮುಠ್ಠಾಳ ಸೂಳೆಮಗ

ಮೆಂಟಲ್

    ಮೆಂಟಲ್

ಮೆಂಟಲ್ ನನ್ನಮಕ್ಳು

ಮೆಂಟಲ್ ಸೂಳೆ

    ಮೆಂಟಲ್ ಸೂಳೆಮಗ

ರಂಡೆ

ಊರ್ ರಂಡೆ

ಕಳ್ಳ ರಂಡೆ

ಕತ್ತೆ ರಂಡೆ

ದರಿದ್ರ ರಂಡೆರು

    ಬೇವಾರ್ಸಿ ರಂಡೆರು

ಮಂಗ ರಂಡೆದು

ರಂಡೆ ಮಕ್ಳು

ರಂಡೆ ಮಗನೆ

ಲೋಫರ್ ರಂಡೆ(ವು)

ರಂಡೆವು

ರೊಳ್ಳಿ

ರೊಳ್ಳಿ

ರೊಳ್ಳಿ ಮುಖದವಳು

ರೊಳ್ಳಿ ಸೂಳೆ

ರೊಳ್ಳಿ ಸೂಳೆಮಗ

ಲಫಂಗ

ಲಫಂಗ ನನ್ನಮಗನೆ

ಲಫಂಗ ಸೂಳೆಮಗ

ಲ್ವಾಲ

ಲ್ವಾಟ್ಯ

ಲ್ವಾಲೆ ಬಸವ

ಲ್ವಾಲ್ಯ

ಲುಚ್ಚ

ಲುಚ್ಚ ಬೇವಾರ್ಸಿ

ಲುಚ್ಚ ನನ್ನಮಗನೆ

ಲುಚ್ಚ ಸೂಳೆ

ಲುಚ್ಚ ಸೂಳೆಮಕ್ಳು

ಲುಚ್ಚ ಸೂಳೆಮಗ

ಲೋಫರ್

ಲೋಫರ್ ನನ್ನಮಗನೆ

ಲೋಫರ್ ನನ್ನಮಕ್ಳು

ಲೋಫರ್ ಮುಂಡೆ

ಲೋಫರ್ ಸೂಳೆ

ಲೋಫರ್ ಸೂಳೆಮಗನೆ

ಲೋಫರ್ ಸೂಳೆಮಕ್ಳು

ಲೌಡಿ

ಕತ್ತೆ ಲೌಡಿ

ಲೌಡೆ ನನ್ನಮಕ್ಳು

ಲೌಡಿ ಮುಂಡೆಮಗನೇ

ಲೌಡೇಕೆ ಬಾಲ್

ಲೌಡಿಕೆಬಲ್

ಶಕುನಿ

ಶಕುನಿ

ಶಕುನಿ ನನ್ನಮಕ್ಳು

ಶನಿ

ದರಿದ್ರ ಶನಿ

ಶನಿ ನನ್ನಮಕ್ಳು

ಶನಿ ನನ್ನಮಗ

ಶನಿ ಮುಂಡೆದು

ಶನಿ ಮುಂಡೆವು

ಷಂಡ

ಷಂಡ

ಷಂಡ ನನ್ನಮಕ್ಳು

ಷಂಡ ಮುಂಡೆದು

ಷಂಡ ಸೂಳೆಮಗ

ಸುಬ್ಬ

ಸುಬ್ಬ

- ಸುಬ್ಬಿ
- ಸುಬ್ಬಕ್ಕ
- ಸುಬ್ಬಪ್ಪ
- ಸುಬ್ಬಮ್ಮ

ಸುವ್ವರ್

- ಸುವ್ವರ್ ನನ್ನಮಗ
- ಸುವ್ವರ್ ಮಕ್ಳು

ಸುವ್ವರ್ ಸುಳೆಮಗ

ಸೊಗಲಾಡಿ

- ಸೊಗಲಾಡಿ ನನ್ನಮಗ

ಸೊಗಲಾಡಿ ಮುಂಡೆದು

ಸೊಗಲಾಡಿ ಸುಬ್ಬಕ್ಕ

ಸೋಗಲಾಡಿ ಸುಬ್ಬಪ್ಪ

ಸೋಗಲಾಡಿ ಸುಬ್ಬಮ್ಮ

ಸೋಗಲಾಡಿ ಸುಬ್ಬ

ಸೋಗಲಾಡಿ ಸುಬ್ಬಿ

ಸೋಮಾರಿ

- ಸೋಮಾರಿ ನನ್ನಮಕ್ಳು
- ಸೋಮಾರಿ ಬಸವ
- ಸೋಮಾರಿ ಮುಂಡೆವು
- ಸೋಮಾರಿ ಸಿದ್ಧ
- ಸೋಮಾರಿ ಸೂಳೆ
- ಸೋಮಾರಿ ಸೂಳೆಮಗ

ಹಡ

ನಿನ್ನಕ್ಕನ್ ರಸನಾಡ

ನಿನ್ನಕ್ಕನ ತುಲ್ಲಾಡ

ನಿನ್ನಮ್ಮನ ತುಲ್ಲಾಡ

ನಿನ್ನ ಹೆಂಡ್ತಿ ತುಲ್ಲಾಡ

ನಿಮ್ಮ ಅಜ್ಜಿನಾಡ

ನಿಮ್ಮ ಅಮ್ಮನ್ ರಸನಾಡ

ನಿಮ್ಮ ಅಮ್ಮನಾಡ

ನಿಮ್ಮ ಅವ್ವನಾಡ

ಹಡಸಿ(ಹಡ್ಸಿ)

ಊರ ಹಡಿಸಿ

ಹಡಸ್ಲು

ಹಡಿಸಿ ನನ್ನಮಗನೆ

ಹಡಸ್ಲಮಾರಿ

ಹಡಸ್ಕೊ

ಹಡಿಬಿಟ್ಟಿ

ಹಡಿಬಿಟ್ಟಿ ಗಂಡಸು

ಹಡಿಬಿಟ್ಟಿ ದಾಸ

ಹಡಿಬಿಟ್ಟಿ ಬಿಟ್ಟಿರೋನೆ

ಹಡಿಬಿಟ್ಟಿ ಮಗನೆ

ಹಡಿಬಿಟ್ಟಿ ರಂಗ

ಹಡಿಬಿಟ್ಟಿ ಸೂಳೆ

ಹಡಲುಡಿ ಸೂಳೆ

ಹಡಲುಡಿ ಸೂಳೆಮಗ

ಹದ್ಗೆಟ್

ಹದ್ಗೆಟ್ ನನ್ನಮಗ

ಹದ್ಗೆಟ್ ಮುಂಡೆ

ಹದ್ಗೆಟ್ ರಂಡೆ

ಹದ್ಗೆಟ್ ಸೂಳೆ

ಹದ್ಗೆಟ್ ಸೂಳೆಮಗ

ಹಲ್ಕ

ಹಲ್ಕಾ ನನ್ಮಗ್ನೆ

ಹಲ್ಕಾ ಬೇವರ್ಸಿ

ಹಲ್ಕಾ ಮುಂಡೆ

ಹಲ್ಕಾ ರಂಡೆ

ಹಲ್ಕಾ ಸೂಳೆ

ಹಲ್ಕಾ ಸೂಳೆಮಗನೆ

ಹಲಕಟ್

ಹಲಕಟ್ ನನ್ನಮಗ

ಹಲಕಟ್ ಮುಂಡೆ(ದು)

ಹಲಕಟ್ ಬೇವರ್ಸಿ

ಹಲ್ಕ ಬೇವರ್ಸಿ

ಹಲಕಟ್ ಸೂಳೆ

ಹಾದರ

ಹಾದರಗಿತ್ತಿ

ಹಾದರದವನು

ಹಾದರದ ಮಕ್ಳು

ಹಾದರದವಳು

ಹಾದರದವಳೆ

ಹಾದರಗಿತ್ತಿ ಸೂಳೆ

ಹುಚ್ಚ

ಹುಚ್ಚ ನನ್ನಮಕ್ಳು

ಹುಚ್ಚ ಮುಂಡೆವು

ಹುಚ್ಚು ಮುಂಡೆದು

ಹುಚ್ಚರ ಸಂತೆ

ಹುಚ್ಚರ ಗುಂಪು

ಹುಚ್ಚುರು

ಹೇಲು

ಹೇಲು ತಿನ್ನೋ ನನ್ಮಗ್ನೆ

ಹೇಲು ತಿನ್ನೊ ಮುಂಡೆ

ಹೇಲು ತಿನ್ನೊ ರಂಡೆ

ಹೇಲು ತಿನ್ನೊ ಸೂಳೆ

ಹೇಲು ತಿನ್ನೋ ಸೂಳೆಮಗ

ಹೇಲು ತಿನ್ನೋ ಸೂಳೆಮಕ್ಳು

೧. ಶಾಪರೂಪದ ಬೈಗುಳಗಳು

ಅಂತ ಇಂತ ಸಾವು ಬರೋಲ್ಲ ನೋಡು ನಿನ್ಗೆ

ಅವ್ನ ಕೈಗೆ ಬಂದದ್ದು ಬಾಯ್ಗೆ ಬರ್ದೆ ಹೋಗ

ಆಕ್ಸಿಡೆಂಟ ಹಾಗ್ಲ

ಆಳಾಗಿ ಹೋಗ

ಇಡ್ಡೆ ಕೂಳ್ ಹಾಕ್ಲ

ಇವರ ಮನೆಗೆ ಬೆಂಕಿ ಬಿಲ್ಲಾ

ಇವರ ಮನೆಗೆ ಬೇಲಿ ಬಡಿಲಾ

ಇವರ ಮನೆತನ ಆಳಾಗಿ ಹೋಗ್ಲಿ

ಇವರ ಮನೆಯಲ್ಲಿ ದೀಪ ಹಚ್ಚೋಕು ಯಾರು ಇರಬಾರದು

ಉದ್ದಾರ ಆಗಲ್ಲ ಆಳಾಗಿ ಹೋಗತ್ತೀಯಾ

ಏನು ಉರಿದು ಮಣ್ಣು ಇಕ್ಕುತಾವ

ಕಾಲು ಸೇದು ಹೋಗ

ಕೈಕಾಲು ಸೆಟುಗಂಡೋಗ್ಲಿ

ಕೈಸೇದು ಹೋಗ

ನನ್ ಗಂಡ ಸತ್ತಂಗೆ ನಿನ್ನ ಗಂಡನೂ ಸಾಯಿಲಿ

ನನ್ ತಲೆಮ್ಯಾಲೆ ಅಕ್ಕಿಕಾಳು ಬೀಳ್ದೆ ಹೋಗ

ನನ್ ಮಕ್ಳು ಆದಾಂಗೆ ನಿನ್ಮಕ್ಳು ಆಗ

ನನ್ ಹೊಟ್ಟೆ ಉರಿಸಿಕೊಂಡ ಮನಗೆ ಹಾಳಾಗ

ನನ್ ಹೋಟ್ಟೆ ಉರಿ ನಿಂಗೂ ತಟ್ಲ

ನನ್ಮಕ್ಳು ಹೋದಾಂಗೆ ನಿನ್ಮಕ್ಳು ಹೋಗ

ನಿಂಗೆ ಬಂದದ್ದು ಬಯಲಾಗ್ದೆ ಹೋಗ

ನಿಂಗೆ ಸಿಡ್ಬುರೋಗ ಬರ್ಲ

ನಿಂಗೆ ಸಿಡ್ಲು ಬಡಿಯ

ನಿಂಗೆ ಹುಚ್ಚುನಾಯಿ ಕಡಿಯ

ನಿನ್ ಕಾಲಗ ಊಳಬಿಲ್ಲಾ

ನಿನ್ ಜನ್ಮಕಿಷ್ಟು ಬೆಂಕಿ ಆಕ್ಲ

ನಿನ್ ತಗೊಂಡೋಗಿ ಒಳಗೆ ಹಾಕ

ನಿನ್ ನಾಯಿ ತಿನ್ಲ

ನಿನ್ ಪಿಂಡ ನಾಯ್ತಿನು

ನಿನ್ ಬಾಯಾಕ ಅಕ್ಕಿ ಆಕ್ಲ

ನಿನ್ ಬಾಯಾಕ ಕಸ ಆಕ್ಲ

ನಿನ್ ಬಾಯಾಕ ಮಣ್ಣು ಹಾಕ್ಲ

ನಿನ್ ಬಾಯಾಗ ನನ್ ಹೇಲ್ತುಂಬ

ನಿನ್ ಬಾಯಾಗ ಹುಳಬಿಲ್ಲಾ

ನಿನ್ ಬಾಯಿ ಬಿದ್ದ ಹೋಗ

ನಿನ್ ಬಾಯ್ಗ ನನ್ ಎಡ್ಡೆಹಾಕ

ನಿನ್ ಬಾಯ್ಗಿ ನನ್ ಗೂದೆ ಹಾಕ

ನಿನ್ ಮಕ್ಕಳಿಗೆ ಬರಬಾರದ ಬರ

ನಿನ್ ಮಕ್ಕು ತಗೊಂಡೋಗಿ ಬೆಕ್ಕೆ ಹಂಚಾ

ನಿನ್ ಮುಖ ಮುಚ್ಚ

ನಿನ್ ಮುಖಕ್ಕೆ ಇಷ್ಟು ದಲ್ಲಾಳ ಬಡಿಯಾ

ನಿನ್ ಮುಖಕ್ಕೆ ಬೆಂಕಿ ಹಚ್ಚಲಾ

ನಿನ್ ಮೊಕಕ್ಕೆ ಮಂಗಳಾರ್ತಿ ಎತ್ತ

ನಿನ್ ವಂಶ ನಿರ್ವಂಶಾಗ

ನಿನ್ ವಂಶನಿರ್ವಶಾಂಗ

ನಿನ್ ಹೆಂಡತಿ ಮುಂಡೆ ಆಗಲಾ

ನಿನ್ ಹೆಂಡ್ತಿ ರಂಡ್ಯಾಗ

ನಿನ್ ಹೆಂಡ್ತಿಗೆ ಬರಬಾರದು ಬರ

ನಿನ್ ಹೆಣ ಸಿಂಗಾರ ಆಗ್ಲ

ನಿನ್ ಹೆಸರು ಹೇಳದಾಂಗೆ ಆಗ

ನಿನ ಬಾಯಾಗ ಉಳಬಿಲಾ

ನಿನ ಮನೆ ಕಾಯೋಗ

ನಿನಗೆ ಆಪತ್ತು ಬರ್ಲ

ನಿನಗೆ ಏನಾದರೂ ಹೋತ್ಕೊಂಡು ಹೋಗದು ಬರ್ಲ

ನಿನಗೆ ಕರಿನಾಗರಹಾವು ಕಡಿಲಾ

ನಿನಗೆ ಬಂದ್ಯೆತಿ ಹೊತ್ಕೊಂಡು ಹೋಗದು

ನಿನಗೆ ಸಾವು ಬರ್ಲ

ನಿನಗೆ ಸಾವು ಬರ್ಲ

ನಿನು ನಾಶ ಎದ್ದು ಹೋಗ

ನಿನು ನಾಶವಾಗೋಗ

ನಿನ್ನಂತಿ ಸೆರುಗರಿಯ

ನೀನು ನೆಗೆದುಬಿದ್ದು ನೆಲ್ಲಿಕಾಯಾಗ

ನೀನು ಸತ್ರು ನಿನ್ ಹೆಣ ನಿನ್ ಹೆಂಡ್ತಿಗೆ ಸಿಗದಂಗೆ ಆಗ್ಲ

ನೀನು ಹೋದ ದಾರಿಯಲ್ಲಿ ಹಾವು ಕಡಿಯಾ

ನೀನು ಹೋದ ದಾರಿಯಿಂದ ವಾಪಸ್ಸು ಬರದಾಂಗೆ ಆಗ

ಬಕ್ಕಬಾರ್ಲಬಡಿಯಾ

ಬರಬಾರದು ಬರ್ಲ

ಬಾಯಾಗ ಸಗಣಿಯಾಕ

ಮಟ ಮಟ ಮಧ್ಯಾಹ್ನನ್ಯಾಂಗ ಸಾಯತನ

ಮಿಂಡಿಗುಟ್ಟಿದ್ದು ಹೋಗಿ ಬರಲಿಕ್ಕಿ

ಸುಡುಗಾಡಿಗೆ ಸುಣ್ಣ ಬಳಿಲಾ

ಹೋತ್ತುಕ್ಕೊಂಡು ಹೋಗುವುದು ಬರ್ಲ

೨. ಜಾತಿ ಸೂಚಕ ಬೈಗುಳಗಳು

ಅಗಸರ ಸೂಳೆ

ಅಗಸಲಾರು ಜೀಪುಕರು

ಏ ಅಗಸ

ಕೋಂಗ

ತುಪ್ಪದಂಗ ಇದ್ರೂ ತುರುಕ್ರನ್ನು ನಂಬಾಬರ್ದು.

ತುರುಕರ್ ಮಿಂಡೆಮಗ

ತೋಟರ ಸೂಳೆಮಗ

ತೋಟರಸೂಳೆ

ದಕ್ಲರಿಗುಟ್ಟಿದವನೆ

ಪಿಂಜರ ಸೂಳೆಮಗ

ಪಿಂಜರಸೂಳೆ

ಬೆಲ್ಲದಂಗ ಇದ್ರೂ ಬ್ಯಾಡರ್ ನಂಬಾರ್ದು.

ಬ್ಯಾಗರ ಹುಟ್ಟಿದ ಸೂಳೆಮಗನೆ

ಮಾದನೀಗ್ ಹುಟ್ಟಿದ ಸೂಳೆಮಗನೆ

ಮಾದರಸೂಳೆ

ಮಾದಿಗನ್‌ಸೂಳೆ

ಮೀನಗಾರ ಸೂಳೆಮಕ್ಳು

ಮುಸ್ಲಮರ್ ಸೂಳೆ

ಮುಸ್ಲಿಂ ಸೂಳೆಮಕ್ಳು

ಲಿಂಗಾಯಿತರ ಸೂಳೆಮಕ್ಳೂ ಮೋಸಗಾರರು

ಲೇ ಕುರುಬ

ವಡ್ಡ ಇದ್ದಂಗ ಇದಿಯಲ್ಲಾ

೩. ಪ್ರಾಣಿ ಪಕ್ಷಿಗಳಿಗೆ ಬಳಸುವ ಬೈಗುಳಗಳು

ಅಮ್ಮನಾಡ

ಆಳಾಗಿ ಹೋಗ

ಆಳಾದದ್ದು

ಇದಕ್ಕೆ ಏನಾದರೂ ರೋಗ ಬಾರಬರದ.

ಇದಕ್ಕೆ ಏನು ಬಂದೈತಿ ಹೋತ್ಕೊಂಡು ಹೋಗೊದು

ಇದರ ಅವ್ವನ್

ಇದು ಯಾದು ಕಂತ್ರಿ ನಾಯಿ

ಇದು ಯಾದು ಹುಚ್ಚದು ಮಾಡಿದ್ಯಾಂಗ ಮಾಡತೈತಿ.

ಇವನ್ ಅವ್ವನ್ ಹೆಂಡ್ತಿ

ಇವ್ನ್ವನ್ ನಾಲ್ಗೆ ಸೇದು ಹೋಗ

ಏನು ಇರುವೆ ಎದ್ದು ಬಿಟ್ಟವ ಸುಮ್ಮನೆ ಬಾರಲಿಕ್ಕಿ.

ಕಂರ್ತಿ

ಕಂರ್ತಿ ರಸನಾಡ

ಕಳ್‌ದನ

ಕಳ್ನಾಯಿ

ಕೋಳಿ ಕಾಲು ಮುರಿಬೇಕು

ತುಡ್ಗದನ ಸೂಳೆಮಗನದು

ತುಡ್ಗುದನ

ದರಿದ್ರದು

ನಾಲ್ಗೆ ಸೇಟ್ಕೊಂಡು ಹೋಗ

ಬಕ್ಕಾಬಾರ್ಲ ಬಡಿಯಾ

ಬಾಯಾಗ ಊಳಬಿಲ್ಲಾ

ಬಾಯಾಗ ಮಾಣ್ಣಾಕ್ಲಿ

ಬಾರ್ಲಬಡಿಯಾ

ಬೆಕ್ಕಿನ ತೋಲ್ಡು

ಲಂಗ ಸೂಳೆಮಗನದು ಇದು ಮೂಲ ಆಗಿಬಿಟ್ಟೈತಿ

ಸಾಯಿನಾ ಸಾಯಿತ್ತಿಲ್ಲ ವಿಷ ಹಾಕಿ ಸಾಯಿಸಬೇಕು.

ಸುಮ್ಮನೆ ವೈಕುತ್ತದೆ ದರಿದ್ರದು

ಸುವ್ವರ್

ಸೆಂಟಗಂಡೋಗ

ಹುಚ್ಚನಾಯಿ

೪. ಗಾದೆಗಳು

ಅಕ್ಕ ನೆಟ್ಟಗಿದ್ದರೆ ತಂಗಿ ನೆಟ್ಟಗಿರುತ್ತಾಳೆ.

ಅಕ್ಕನ ಚಾಳಿ ಮನಿಮಂದಿಗೆಲ್ಲ.

ಆಟ ಆಡೋ ಅಂದರೆ ಇಲ್ಲ ಅಲ್ಲಮುಲ್ಲಾ ಸೇರಿ ಆಡಿತ್ತಿವೆ ಅಂದರಂತೆ.

ಇದ್ದದ್ದು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದನಂತೆ.

ಇಬ್ಬರ ಜಗಳ ಮೂರನೆಯವನಿಗೆ ಲಾಭ.

ಇರದ ಕೂಲ್ಗೆ ಉರದಾಡೊಕೆ ಹೋಗುತ್ತಾವ.

ಉಂಡ ಗಂಗಾಳದಾಗ ಹೇಲಾಂವ.

ಉಂಡ ಮನಿ ಜಂತಿ ಏಣ್ಸಾಂವ.

ಉಚ್ಚೆ ಕೂಡುದ್ರು ತನ್ನಿಚ್ಚೆಯಂಗಿರಬೇಕು.

ಉಚ್ಚೆಯಲ್ಲಿ ಮೀನು ಹಿಡಿಯುವವನು.

ಉಪ್ಪಿಲ್ಲದ ಕೂಳ್ಗೆ ಬಾರ್ಲಾಕಿಕೊಂಡೊಕ್ಕಿಯಾ ನಿನ್ ಬಕ್ ಬಾರಲ್ಲಾಕ.

ಉಪ್ಪುಂಡ ಮನೆಗೆ ಎರಡು ಬಗೆಯಬಾರದು.

ಎಷ್ಟಿದ್ದರೂ ಹೆಣ್ಣಮಕ್ಳು ಬುದ್ದಿ ಮೊಣಕಾಲು ಕೆಳಗೆ.

ಎಷ್ಟು ಜೀವಕ್ಕೆ ಜೀವ ಇದ್ದರೂ ಮೀನಿನ ಪುಟ್ಟಿಗೆ ಕೈ ಇಡಬೇಡ ಅನ್ನೋಳು.

ಏನ್ ಸಿಡಿಡು ಹಸಿಕೊಂಡು ಹೋಗುತ್ತಿಯಾ ಉಪ್ಪು ಇಲ್ಲದ ಕೂಳ್ಗೆ.

ಒಂದು ಮನೆಯನ್ನು ಮೂರು ಮನೆ ಮಾಡೋನು.

ಕಂಡದ್ದು ಮಿಂಡ್ರು ದೇವ್ವ ಅನ್ನೋದು.

ಕಚ್ಚೊ ನಾಯಿ ಬೊಗಳಲ್ಲ, ಬೊಗಳೋ ನಾಯಿ ಕಚ್ಚಲ್ಲ.

ಕಳವು ಮಾಡಿ ಗಂಡಸು ಕೆಟ್ಟ, ಸೂಳಿಗಿರಿತನ ಮಾಡಿ ಹೆಂಗಸು ಕೆಟ್ಟಳು.

ಕಳ್ಳ ಅಂದರೆ ಹೆಗಲು ಮುಟ್ಟಿಕೊಂಡು ನೋಡತ್ತಾನೆ.

ಕುಣಿಲಾರದ ಸೂಳೆ ನೆಲ ಡೊಂಕು ಅಂದಳಂತೆ.

ಕೈಲೆ ಆಗದವನು ಮೈ ಎಲ್ಲ ಪೋರಚಕೊಂಡನಂತೆ.

ಗಂಡ ಹೆಂಡ್ತಿ ಜಗಳ ಉಂಡು ಮಲಗೋವರೆಗೆ

ಗಂಡ ಹೆಂಡ್ತಿ ಜಗಳದಲ್ಲಿ ಕೂಸು ಬಡವಾಯಿತು.

ಗಂಡನ ಹೆಸರು ಮಿಂಡನ ಪಿಸುರು.

ಗಂಡನನ್ನು ಬಿಟ್ಟು ಮಿಂಡನ ಚಾಕರಿ ಮಾಡುತ್ತಾಳೆ.

ಗಂಡಸು ಕೂತೂ ಕೆಟ್ಟ, ಹೆಂಗಸು ತಿರಿಗಿ ಕೆಟ್ಟಳು.

ತಿಂದ ಮನೆಗೆ ಎಂಡೆ ಹೋಗಿಯೋನು.

ನೀರಲ್ದ ಕೂಳ್ಗೆ ಏನಂದು ಬಾರ್ಲಕಿಸಿಕೊಂಡು ಹೊಕ್ತಿಯಾ ನಿನ್ ಬಕ್ ಬಾರಲ್ಲಾಕ.

ಬಾಯಿಗೆ ಬಂದಂಗೆ ಬೊಗಳೋದು, ಕಾಲಿಗೆ ಬಂದಂಗೆ ಕುಣಿದಾಡೋದು.

ಬೈದು ಹೇಳಿದವನು ಬುದ್ದಿ ಹೇಳಿದ.

ಬೋಳಿಗೆ ಸೆರಗನ ಚಿಂತೆ ಸೂಳೆಗೆ ಸಿಗಾರ್ದ ಚಿಂತೆ

ಮೊಲೆ ಬಂದ ಮ್ಯಾಲೆ ನೆಲ ಕಾಣದು.

ಸುಮ್ಮನೆ ಇರಲಾರದೆ ಇರುವೆ ಬಿಟ್ಟುಕೊಂಡರಂತೆ.

ಹಗಣಗಿತ್ತಿ ಹಬ್ಬ ಮಾಡಿದರೆ ಮನೆ ಗಂಡ ಉಪಾಸ.

ಹಾದ್ರಗಿತ್ತಿಗೆ ಹಸ್ನಾದ ಸಾವು ಪತಿವ್ರತೆಗೆ ಪಡಿಪಾಟ್ಲ ಸಾವು

ಹಿರಿಯಕ್ಕನ ಚಾಳಿ ಮನಿಮಂದಿಗೆಲ್ಲ.

ಒಡಪುಗಳು

ಅಕ್ಕಿನುಚ್ಚು

ಮಲ್ಲಿಗೆ ಹೂವಿನ ಕುಚ್ಚ

ನಿನ್ನ ಗಂಡ್ಗೆ ಹಿಡಿದ್ಯೆತಿ

ಸೂಳೇರ ಹುಚ್ಚು

ಅರಕಟ್ಟು ಮರಕಟ್ಟು

ಮರಕ್ಕೆ ಮೂವತ್ತೂ ಕಟ್ಟು

ಹೆಸರು ಹೇಳ್ದನ ಹೆಣ್ತಿಗೆ ಎಡಮುರಿಗೆ ಕಟ್ಟು

ಆನೆ ಹಿಡುತದೆ ಆರುಕೋಡ ಹಾಲು

ಮಹಾರಾಯರು ಮಾಡ್ತಾರೆ ಸೂಳೇಯ ಪಾಲು

ಉತ್ತುತ್ತಿ ಊಟ ತಂಬಾಕು ಬಲು ಗಾಟ

ನನ್ನ ಗಂಡ ಹೆಸರು ಕೇಳಿದರೆ

ಮುಕ್ಲಗಾ ಮೂರು ಗೂಟ.

ಹೆಂಚಿನ ಮನೆಬಿಟ್ಟು

ಕಂಚಿನ ಕದಬಿಟ್ಟು

ಉಣ್ಣೋ ಊಟಬಿಟ್ಟು

ಮಲಗೋ ಮಂಚಬಿಟ್ಟು

ಮುತ್ತಿನಂಥ ಮೂರು ಮಕ್ಕಳ ಬಿಟ್ಟು

ಗತಿಗೆಟ್ಟಳ ಮನೆಗೆ ಮತಿಗೆಟ್ಟು ಹೋಗ್ತರೆ.

೫. ನುಡಿಗಟ್ಟುಗಳು

ಅಂತರಪಿಶಾಚಿಯಾಗು

ಅಂದಗೆಟ್ಟುಹೋಗು

ಅಗಣಿಗೂಟ ಜಡಿ

ಅಗ್ಗ ಕೊಟ್ಟು ಕೈ ಕಟ್ಟಿಸಿಕೊಳ್ಳೋನು

ಅಡ್ಡನಾಡಿ ಬುದ್ಧಿ ತೋರಿಸು

ಅದರಾಟವಾಡು

ಅಪ್ಪನಿಗೆ ಹುಟ್ಟಿದ ಮಾತಾಡು

ಉಂಡ ಮನೆ ಜಂತೆ ಎಣಿಸೋನು

ಉಚ್ಚೇಲಿ ಮೀನು ಹಿಡಿಯೋನು

ಊಸರವಳ್ಳಿ

ಎತ್ತಿನ್ನಿ ತಿನ್ನೋನು

ಎರಡು ತಲೆ ಹಾವಿನಂತಿರು

ಎರಡು ತಲೆ ಹಾವು

ಕಂತ್ರಿ ಬುದ್ಧಿ ತೋರಿಸು

ಕತ್ತೆ ಬಡವ ಎನ್ನು

ಕುಂಡಿ ತಿರುವಿಕೊಂಡು ಹೋಗು

ಕುತ್ತು ಬಂದು ಹೊತ್ಕೊಂಡು ಹೋಗ

ಕುಲಗೆಟ್ಟು ಹೋಗು

ಕೋಗನಂತಾಡು

ಕೋರಚನಂತಾಡು

ಕೋರವನಂತಾಡು

ಗಂಡನ್ನ ತಿಂದುಕೊಳ್ಳು

ಗಾಚಾರ ಬಿಡಿಸು

ಗೂಳಿಯಂತೆ ತಿರುಗು

ಜಂತೆ ಎಣಿಸು

ಜನ್ಮ ಜಾಲಾಡು

ಜೋಳಿಗೆ ಹಿಡ್ಕೊಂಡು ಹೋಗು

ತಾರಾತಿಗಡಿ ಮಾಡು

ದೆವ್ವ ಬಿಡಿಸು

ಹಾಲು ಕುಡಿದಾಗ ಹದಿನಾರು ಬುದ್ಧಿ

ಪ್ರಶ್ನಾವಳಿ

ಹೆಸರು: ವಯಸ್ಸು:

ಊರು: ಲಿಂಗ:

ಜಾತಿ: ವಿದ್ಯಾಭ್ಯಾಸ:

ವೃತ್ತಿ: ಜಿಲ್ಲೆ:

೧. ಸಂಬಂಧಿಕರಿಗೆ ಸಂಬಂಧಿತ ಬೈಗುಳ

೧. ಗಂಡ ಹೆಂಡತಿಗೆ ಬೈಯುವಾಗ ಬಳಸುವ ಬೈಗುಳ

೨. ಹೆಂಡತಿ ಗಂಡನಿಗೆ ಬೈಯುವಾಗ ಬಳಸುವ ಬೈಗುಳ

೩. ತಂದೆ ಮಗನಿಗೆ ಬೈಯುವಾಗ ಬಳಸುವ ಬೈಗುಳ

೪. ತಂದೆ ಮಗಳಿಗೆ ಬೈಯುವಾಗ ಬಳಸುವ ಬೈಗುಳ

೫. ತಾಯಿ ಮಗನಿಗೆ ಬೈಯುವಾಗ ಬಳಸುವ ಬೈಗುಳ

೬. ತಾಯಿ ಮಗಳಿಗೆ ಬೈಯುವಾಗ ಬಳಸುವ ಬೈಗುಳ

೭. ಅಣ್ಣ ತಮ್ಮನಿಗೆ ಬೈಯುವಾಗ ಬಳಸುವ ಬೈಗುಳ

೮. ತಮ್ಮ ಅಣ್ಣನಿಗೆ ಬೈಯುವಾಗ ಬಳಸುವ ಬೈಗುಳ

೯. ಅಕ್ಕ ತಂಗಿಗೆ ಬೈಯುವಾಗ ಬಳಸುವ ಬೈಗುಳ

೧೦. ತಂಗಿ ಅಕ್ಕನಿಗೆ ಬೈಯುವಾಗ ಬಳಸುವ ಬೈಗುಳ

೧೧. ಅತ್ತೆ ಸೊಸೆಗೆ ಬೈಯುವಾಗ ಬಳಸುವ ಬೈಗುಳ

೧೨. ಸೊಸೆ ಅತ್ತೆಗೆ ಬೈಯುವಾಗ ಬಳಸುವ ಬೈಗುಳ

೨. ಪರಿಚಿತರಿಗೆ ಸಂಬಂಧಿತ ಬೈಗುಳ

೧. ಗಂಡಸರು ಗಂಡಸರಿಗೆ ಬೈಯುವಾಗ ಬಳಸುವ ಬೈಗುಳ

೨. ಗಂಡಸರು ಹೆಂಗಸರಿಗೆ ಬೈಯುವಾಗ ಬಳಸುವ ಬೈಗುಳ

೩. ಗಂಡಸರು ಮಕ್ಕಳಿಗೆ ಬೈಯುವಾಗ ಬಳಸುವ ಬೈಗುಳ

೪. ಹೆಂಗಸರು ಗಂಡಸರಿಗೆ ಬೈಯುವಾಗ ಬಳಸುವ ಬೈಗುಳ

೫. ಹೆಂಗಸರು ಹೆಂಗಸರಿಗೆ ಬೈಯುವಾಗ ಬಳಸುವ ಬೈಗುಳ

೬. ಹೆಂಗಸರು ಮಕ್ಕಳಿಗೆ ಬೈಯುವಾಗ ಬಳಸುವ ಬೈಗುಳ

೭. ಮಕ್ಕಳು ಮಕ್ಕಳಿಗೆ ಬೈಯುವಾಗ ಬಳಸುವ ಬೈಗುಳ

೮. ಮಕ್ಕಳು ಹಿರಿಯರಿಗೆ ಬೈಯುವಾಗ ಬಳಸುವ ಬೈಗುಳ

೩. ಸಂಕಥನಗಳಲ್ಲಿ ಬಳಕೆಯಾಗಿರುವ ಬೈಗುಳ

೧. ಗಾದೆಗಳಲ್ಲಿ ಬಳಸುವ ಬೈಗುಳ

೨. ಒಡಮಗಳಲ್ಲಿ ಬಳಸುವ ಬೈಗುಳ

೩. ನುಡಿಗಟ್ಟುಗಳಲ್ಲಿ ಬಳಸುವ ಬೈಗುಳ

೪. ಶಾಪರೂಪದ ಬೈಗುಳ.

೪. ಆಚರಣಾತ್ಮಕ ನೆಲೆಯಲ್ಲಿರುವ ಬೈಗುಳ

೧. ದೇವರಿಗೆ ಬೈಯುವಾಗ ಬಳಸುವ ಬೈಗುಳ

೨. ಹಾಡುಗಳಲ್ಲಿ ಬೈಯುವಾಗ ಬಳಸುವ ಬೈಗುಳ

೫. ವರ್ಗ ಸಂಬಂಧಿತ ಬೈಗುಳ

೧. ಮೇಲ್ವರ್ಗದವರು ಕೆಳವರ್ಗದವರಿಗೆ ಬೈಯುವಾಗ ಬಳಸುವ ಬೈಗುಳ

೨. ಕೆಳವರ್ಗದವರು ಮೇಲ್ವರ್ಗದವರಿಗೆ ಬೈಯುವಾಗ ಬಳಸುವ ಬೈಗುಳ

೩. ಶಿಕ್ಷಿತರು ಅಕ್ಷಿತರಿಗೆ ಬೈಯುವಾಗ ಬಳಸುವ ಬೈಗುಳ

೪. ಅಕ್ಷಿತರು ಶಿಕ್ಷತರಿಗೆ ಬೈಯುವಾಗ ಬಳಸುವ ಬೈಗುಳ

೫. ಅಧಿಕಾರಿಗಳು ಬೈಯುವಾಗ ಬಳಸುವ ಬೈಗುಳ

೬. ಯಜಮಾನ ಕೂಲಿಗರಿಗೆ ಬೈಯುವಾಗ ಬಳಸುವ ಬೈಗುಳ

೭. ಕೂಲಿಕಾರ ಯಜಮಾನನಿಗೆ ಬೈಯುವಾಗ ಬಳಸುವ ಬೈಗುಳ

೬. ಇತರೆ ಬೈಗುಳಗಳು

೧. ಪ್ರಾಣಿ ಪಕ್ಷಿಗಳಿಗೆ ಬೈಯುವಾಗ ಬಳಸುವ ಬೈಗುಳ

೨. ಆರೋಪಿಸಿ ಬೈಯುವಾಗ ಬಳಸುವ ಬೈಗುಳ

೩. ಹೋಲಿಕೆ ಮಾಡಿ ಬೈಯುವಾಗ ಬಳಸುವ ಬೈಗುಳ

೪. ವೃತ್ತಿಯನ್ನು ಆಧಾರಿಸಿ ಬೈಯುವಾಗ ಬಳಸುವ ಬೈಗುಳ


೫. ವಸ್ತುವನ್ನು ಆಧಾರಿಸಿ ಬೈಯುವಾಗ ಬಳಸುವ ಬೈಗುಳ

೬. ಹೇಳಿಕೆಗೆ ಸಂಬಂಧಿಸಿದ ಬೈಗುಳ

ವಕ್ತೃಗಳ ಪಟ್ಟಿ

ಕ್ರಸಂ	ಹೆಸರು	ವಯಸ್ಸು	ವಿದ್ಯಾಭ್ಯಾಸ	ವೃತ್ತಿ	ಊರು
೦೧	ಹುಲಿಗೆಮ್ಮ	೫೫	ಇಲ್ಲ	ಕೂಲಿ	ಹೊಸಮಲಪನಗುಡಿ
೦೨	ಗುರುಲಿಂಗಮ್ಮ	೬೦	ಇಲ್ಲ	ಕೂಲಿ	ಕಮಲಾಪುರ
೦೩.	ತಿಮಣ್ಣ	೪೫	ಇಲ್ಲ	ಕೂಲಿ	ಕಮಲಾಪುರ
೦೪.	ಪಂಪಾಪತಿ	೩೮	೭ನೇತರಗತಿ	ಕೂಲಿ	ಗಾದಿಗನೂರು
೦೫.	ರೆಡ್ಡಿ	೩೦	೫ನೇತರಗತಿ	ಡ್ರೈವರ್	ಪಾಪಿನಾಯಕನಹಳ್ಳಿ
೦೬.	ನಾಗಮ್ಮ	೬೫	ಇಲ್ಲ	ಗೃಹಿಣಿ	ಪಾಪಿನಾಯಕನಹಳ್ಳಿ
೦೭	ಶಾಂತಮ್ಮ	೪೫	ಇಲ್ಲ	ಕೂಲಿ	ಕಡ್ಡಿರಾಂಪುರ
೦೮.	ಸಂಜನ	೧೨	ವಿದ್ಯಾರ್ಥಿ	೪ನೇತರಗತಿ	ಕಮಲಾಪುರ
೦೯.	ಮಾರೇಶ	೧೦	ವಿದ್ಯಾರ್ಥಿ	೫ನೇತರಗತಿ	ಹೊಸಪೇಟೆ
೧೦.	ಶಾರದಮ್ಮ	೫೨	ಇಲ್ಲ	ಗೃಹಿಣಿ	ನಾಗೇನಹಳ್ಳಿ
೧೧.	ಹುಲುಗಪ್ಪ	೪೦	ಇಲ್ಲ	ವ್ಯವಸಾಯ	ಕಾರಿಗನೂರು
೧೨.	ರಾಮಾಂಜನೇಯ	೩೧	ಪ್ರಥಮ ಪಿಯು	ವ್ಯವಸಾಯ	ಸುಗ್ಗೇನಹಳ್ಳಿ
೧೩.	ಹನುಮಯ್ಯ	೨೯	ಇಲ್ಲ	ವ್ಯವಸಾಯ	ಸುಗ್ಗೇನಹಳ್ಳಿ
೧೪.	ರತ್ನಮ್ಮ	೬೫	ಇಲ್ಲ	ಕೂಲಿ	ಸುಗ್ಗೇನಹಳ್ಳಿ
೧೫.	ಹುಲಿಗೆಮ್ಮ	೭೦	ಇಲ್ಲ	ಒಕ್ಕಲುತನ	ಸುಗ್ಗೇನಹಳ್ಳಿ
೧೬.	ಮಹಾದೇವಮ್ಮ	೬೦	೭ನೇತರಗತಿ	ಗೃಹಿಣಿ	ಸುಗ್ಗೇನಹಳ್ಳಿ
೧೭.	ರಾಮಣ್ಣ	೪೫	ದಇಲ್ಲ	ವ್ಯವಸಾಯ	ಗೋನಾಳ
೧೮.	ಈರಪ್ಪ	೭೫	ಇಲ್ಲ	ವ್ಯವಸಾಯ	ಗೋನಾಳ
೧೯.	ಉದಯ್	೧೫	೯ನೇತರಗತಿ	ವಿದ್ಯಾರ್ಥಿ	ಗೋನಾಳ
೨೦.	ದೊಡ್ಡಮಲ್ಲೇಶಪ್ಪ	೭೮	ಇಲ್ಲ	ವ್ಯವಸಾಯ	ಗೋನಾಳ
೨೧.	ಲೀಲಾವತಿ	೧೭	೧೦ನೇತರಗತಿ	ಕೂಲಿ	ಗೋನಾಳ
೨೨.	ಪೂರ್ಣಿಮ	೧೯	ಪಿಯುಸಿ	ವಿದ್ಯಾರ್ಥಿ	ಜವುಕು
೨೩.	ಏಕಾಕ್ಷಮ್ಮ	೬೫	ಇಲ್ಲ	ಗ್ರಾಮ ಪಂ.ಅಧ್ಯಕ್ಷರು	ಜವುಕು
೨೪.	ಗೌರಮ್ಮ	೨೫	ಇಲ್ಲ	ಗೃಹಿಣಿ	ಜವುಕು
೨೫.	ಯಲ್ಲಮ್ಮ	೪೫	ಇಲ್ಲ	ಕೂಲಿ	ಜವುಕು

* * *



ಪ್ರಸಾರಾಂಗ ವಿಭಾಗ